
ಬೆಂಗಳೂರು
ಗುರುವಾರ, 19 ಫೆಬ್ರವರಿ 2026
ಸಂಪುಟ 33, ಸಂಚಿಕೆ 111, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital
ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಹೆದ್ದಾರಿಗಳಲ್ಲಿ ಜೇನುಸ್ನೇಹಿ 'ಬೀ ಕಾರಿಡಾರ್' | ೧೦ | ಕತ್ರಾ: ಆದಿಶಂಕರರಿಗೆ ದೇಗುಲ | ೧೦ | 3 ಮರಿಗಳಿಗೆ ಜನ್ಮ ನೀಡಿದ ಗಾಮಿನಿ | ೧೦

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪೂರ್ವಭಾದ್ರ

ದಿನದ ಮಾತು

ಜ್ಞಾನವಂತನಿಂದ ಮೂರ್ಖರು ಕಲಿಯುವುದಕ್ಕಿಂತ, ಮೂರ್ಖರಿಂದ ಜ್ಞಾನಿಗಳು ಕಲಿಯುವುದು ಹೆಚ್ಚು
▲ ರಾಮಕೃಷ್ಣ ಪರಮಹಂಸ

ತಮಿಳುನಾಡಿನ ಆಲೋಚನೆ ಏಕೆ ಹೀಗೆ?

ಗುರುತರ
• ಸೋಮಶೇಖರ ಸಿ.ಜೆ.
• ಪುಟ ೬

ಕಿರುಸುದ್ದಿ

ತಲಕಾಡಲ್ಲಿ ಕಾಡಾನೆ ದಾಳಿಗೆ ರೈತ ಸಾವು

• **ಮೈಸೂರು:** ಒಂಟಿ ಸಲಗ ದಾಳಿಗೆ ರೈತರೊಬ್ಬರು ಬಲಿಯಾಗಿರುವ ಘಟನೆ ಜಿಲ್ಲೆಯ ತಿ.ನರಸೀಪುರ ತಾಲೂಕಿನ ತಲಕಾಡು ಹೋಬಳಿಯ ಪರಿಣಾಮಿಪುರ ಗ್ರಾಮದಲ್ಲಿ ನಡೆದಿದೆ. ಪರಿಣಾಮಿಪುರದ ನಿವಾಸಿ ಗುರುಮಲ್ಲಪ್ಪ (70) ಮೃತಪಟ್ಟವರು. ಇವರು ಕಬ್ಬಿನ ಗದ್ದೆಗೆ ನೀರು ಹಾಯಿಸುವ ವೇಳೆ ಹಿಂದಿನಿಂದ ಬಂದ ಕಾಡಾನೆ ದಾಳಿ ಮಾಡಿ ತುಳಿದು ಸಾಯಿಸಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ತಹಸೀಲ್ದಾರ್ ಸುರೇಶಾಚಾರ್, ತಿ. ನರಸೀಪುರ ಪೊಲೀಸ್ ವೃತ್ತನಿರೀಕ್ಷಕ ಧನಂಜಯ್ ಹಾಗೂ ತಾಲೂಕು ವಲಯ ಅರಣ್ಯ ಅಧಿಕಾರಿ ಉಮೇಶ್ ಪರಿಶೀಲನೆ ನಡೆಸಿದರು. ➡ಪುಟ 9

ಮಹಾರಾಷ್ಟ್ರ ಮುಸ್ಲಿಮರ ಶೇ.5 ಮೀಸಲಾತಿ ರದ್ದು

• **ಮುಂಬೈ:** ಮಹಾರಾಷ್ಟ್ರದಲ್ಲಿ ಶಿಕ್ಷಣ, ಸರ್ಕಾರಿ ಉದ್ಯೋಗಗಳಲ್ಲಿ ಮುಸ್ಲಿಮರಿಗೆ ನೀಡಲಾಗಿದ್ದ ಶೇ.5 ಮೀಸಲಾತಿಯನ್ನು ಫಡ್ನವೀಸ್ ಸರ್ಕಾರ ಹೊರಡಿಸಿದ ಅಧಿಸೂಚನೆ ಮೂಲಕ ಔಪಚಾರಿಕವಾಗಿ ರದ್ದುಪಡಿಸಲಾಗಿದೆ.
• ಪುಟ ೧೦

ಕೊನೆ ಹಂತದಲ್ಲಿ ನಕ್ಸಲ್ ಮುಕ್ತ ಭಾರತ ಧ್ಯೇಯ

• ಪುಟ ೧೦

ದೇಶದ ಪ್ರತಿಷ್ಠೆ ಹಾಳು ಮಾಡಲು ರಾಗಾ ಯತ್ನ

• ಪುಟ ೧೦

ನಂದಿನಿ ಉತ್ಪನ್ನ ತಪ್ಪು ಸಂದೇಶ: ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ

• ಪುಟ ೩




ಪಾರ್ಕ್‌ಗೆ 2ನೇ ಜಲ ಪೆಟ್ಟು!
• ಪುಟ ೧೦
ಸುದ್ದಿ ಸಮಗ್ರ

ಮೈಕ್ರೋಸಾಫ್ಟ್, ಗೂಗಲ್ ಸಂಸ್ಥೆಗಳಿಂದ ಹೂಡಿಕೆ ಘೋಷಣೆ

ಎಐಗೆ ಭಾರತ ಕೇಂದ್ರ





• **ಹೊಸದಿಲ್ಲಿ:** ಇಲ್ಲಿ ನಡೆಯುತ್ತಿರುವ ಐದು-ದಿನಗಳ ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಬುಧವಾರ ಹಲವಾರು ಪ್ರಮುಖ ಒಪ್ಪಂದಗಳು ನಡೆದಿದ್ದು, ಇದರಲ್ಲಿ ಪ್ರಮುಖವಾಗಿ ಮೈಕ್ರೋಸಾಫ್ಟ್ ಮತ್ತು ಗೂಗಲ್ ಸಂಸ್ಥೆಗಳು ಜಾಗತಿಕ ದಕ್ಷಿಣ ದೇಶಗಳಲ್ಲಿ ಕೃತಕ ಬುದ್ಧಿಮತ್ತೆ(ಎಐ) ವಿಸ್ತರಣೆಗೆ ಮಹತ್ವಾಕಾಂಕ್ಷಿ ಹೂಡಿಕೆ ಮತ್ತು ಯೋಜನೆಗಳನ್ನು ಘೋಷಿಸಿವೆ. ಈ ಘೋಷಣೆಗಳು ಭಾರತವನ್ನು ಜಾಗತಿಕ ಎಐ ಕೇಂದ್ರವಾಗಿ ರೂಪಿಸುವ ದಿಸೆಯಲ್ಲಿ ಮಹತ್ವದ ಹೆಜ್ಜೆಯಾಗಿ ಕಾಣಿಸಿಕೊಂಡಿವೆ.

ಮೈಕ್ರೋಸಾಫ್ಟ್ ಸಂಸ್ಥೆ ದಶಕಾಂತ್ಯದೊಳಗೆ ಜಾಗತಿಕ ದಕ್ಷಿಣ ಪ್ರದೇಶಗಳಲ್ಲಿ ಎಐ ಪ್ರವೇಶವನ್ನು ವಿಸ್ತರಿಸಲು 50 ಬಿಲಿಯನ್ ಡಾಲರ್ ಹೂಡಿಕೆ ಮಾಡುವುದಾಗಿ ಘೋಷಿಸಿದೆ. ಜಾಗತಿಕ ಉತ್ತರ ದೇಶಗಳಿಗಿಂತ ಜಾಗತಿಕ ದಕ್ಷಿಣದಲ್ಲಿ ಎಐ ಅಳವಡಿಕೆ ಪ್ರಮಾಣ ಕಡಿಮೆಯಿದ್ದು, ಈ ಅಂತರ ಹೆಚ್ಚುತ್ತಿದೆ ಎಂದು ಕಂಪನಿ ಎಚ್ಚರಿಸಿದೆ. ಮೂಲಸೌಕರ್ಯ ಅಭಿವೃದ್ಧಿ, ಕೌಶಲ ವೃದ್ಧಿ, ಬಹುಭಾಷಾ ಎಐ ಅಭಿವೃದ್ಧಿ, ಸ್ಥಳೀಯ ನವೀನತೆ ಹಾಗೂ ಎಐ ಬಳಕೆಯ ಮೌಲ್ಯಮಾಪನ ಎಂಬ ಐದು ಪ್ರಮುಖ ಕ್ಷೇತ್ರಗಳಲ್ಲಿ ಹೂಡಿಕೆ ಕೇಂದ್ರೀಕರಿಸಲಾಗುತ್ತದೆ. ಕಳೆದ ಆರ್ಥಿಕ ವರ್ಷದಲ್ಲಿ ಭಾರತ ಸೇರಿದಂತೆ ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ದಕ್ಷಿಣ ಪೂರ್ವ ಏಷ್ಯಾದಲ್ಲಿ ಡೇಟಾಸೆಂಟರ್ ಮೂಲಸೌಕರ್ಯಕ್ಕೆ 8 ಬಿಲಿಯನ್ ಡಾಲರ್ ಹೂಡಿಕೆ ಮಾಡಿರುವುದಾಗಿ ತಿಳಿಸಿದೆ.

ಮೈಕ್ರೋಸಾಫ್ಟ್ ಎಲಿವೇಟ್ ಉಪಕ್ರಮದಲ್ಲಿ 2028ರೊಳಗೆ 20 ಮಿಲಿಯನ್ ಜನರಿಗೆ ಎಐ ಪ್ರಮಾಣಪತ್ರ ನೀಡುವ ಗುರಿ ಹೊಂದಿದ್ದು, ಭಾರತದಲ್ಲಿ 2030ರೊಳಗೆ 20 ದಶಲಕ್ಷ ಮಂದಿಗೆ ಎಐ ಕೌಶಲ ನೀಡಲು ಯೋಜಿಸಿದೆ.

ಸಮುದ್ರದಾಳದ ಕೇಬಲ್ ಘೋಷಿಸಿದ ಗೂಗಲ್

ಇದೇ ವೇಳೆ, ಗೂಗಲ್ ಸಿಇಒ ಸುಂದರ್ ಪಿಚೈ, ಭಾರತ-ಅಮೆರಿಕ ನಡುವೆ ಎಐ ಸಂಪರ್ಕವನ್ನು ಬಲಪಡಿಸಲು ಹೊಸ ಸಮುದ್ರಾಳದ ಕೇಬಲ್ ಮಾರ್ಗಗಳನ್ನು ಘೋಷಿಸಿದರು. ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿ 15 ಬಿಲಿಯನ್ ಡಾಲರ್ ಮೌಲ್ಯದ ಎಐ ಹಬ್ ಸ್ಥಾಪನೆಯಾಗಲಿದ್ದು, ಅದರಲ್ಲಿ ಗಿಗಾವಾಟ್ ಮಟ್ಟದ ಗಣಕ ಮೂಲಸೌಕರ್ಯ ಹಾಗೂ ಅಂತಾರಾಷ್ಟ್ರೀಯ ಕೇಬಲ್ ಗೇಟ್‌ವೇ ಇರಲಿದೆ. 20 ಮಿಲಿಯನ್ ಸಾರ್ವಜನಿಕ ಸೇವಕರಿಗೆ ತರಬೇತಿ, 11 ಮಿಲಿಯನ್ ವಿದ್ಯಾರ್ಥಿಗಳಿಗೆ ಬೆಂಬಲ, ಹಾಗೂ 10,000 ಅಟಲ್ ಟಿಂಕರಿಂಗ್ ಲ್ಯಾಬ್‌ಗಳಿಗೆ ಜನರೇಟಿವ್ ಎಐ ನೆರವು ನೀಡುವ ಯೋಜನೆಗಳನ್ನು ಪ್ರಕಟಿಸಲಾಗಿದೆ. ಜತೆಗೆ 30 ಮಿಲಿಯನ್ ಡಾಲರ್ ಮೌಲ್ಯದ 'ಎಐ ಫಾರ್ ಸೈನ್ಸ್ ಇಂಪ್ಯಾಕ್ಟ್ ಚಾಲೆಂಜ್' ಆರಂಭಿಸಿ ವಿಜ್ಞಾನ ಸಂಶೋಧನೆಗೆ ಉತ್ತೇಜನ ನೀಡಲಾಗುತ್ತಿದೆ.

ಎಸ್ಟೋನಿಯಾನ-ಕಝಕಿಸ್ತಾನ ನಾಯಕರ ಜತೆ ಪ್ರಧಾನಿ ಚರ್ಚೆ

ಮೋದಿ ಅವರು ಬುಧವಾರ ಎಸ್ಟೋನಿಯಾ ಅಧ್ಯಕ್ಷ ಅಲರ್ ಕರಿಸ್ ಅವರೊಂದಿಗೆ ಮಹತ್ವದ ದ್ವಿಪಕ್ಷೀಯ ಮಾತುಕತೆ ನಡೆಸಿ, ಭಾರತ-ಯುರೋಪಿಯನ್ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದ ಹಿನ್ನೆಲೆಯಲ್ಲಿ ಆರ್ಥಿಕ ಸಹಕಾರವನ್ನು ಇನ್ನಷ್ಟು ಬಲಪಡಿಸುವ ಬಗ್ಗೆ ಚರ್ಚಿಸಿದರು. ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಎಸ್ಟೋನಿಯಾದ ಸಾಧನೆಗಳನ್ನು ಮೆಚ್ಚಿದ ಮೋದಿ, ಭವಿಷ್ಯದ ತಂತ್ರಜ್ಞಾನ, ಇಂಧನ ನಿರ್ವಹಣೆ, ಕೌಶಲ್ಯಾಭಿವೃದ್ಧಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಹಯೋಗ ವಿಸ್ತರಿಸಲು ಒತ್ತು ನೀಡಿದರು. ➡ಪುಟ 9

ಗಿನ್ನಿಸ್ ದಾಖಲೆ ಬರೆದ ಭಾರತ

• **ಹೊಸದಿಲ್ಲಿ:** ಕೇವಲ 24 ತಾಸುಗಳೊಳಗೆ ಬರೋಬ್ಬರಿ 2.5 ಲಕ್ಷ ಮೀರಿ ಪ್ರತಿಜ್ಞಾ ಘೋಷಣೆ! ತನ್ಮೂಲಕ ಭಾರತ ಬರೆದಿದೆ ಹೊಸ ಗಿನ್ನಿಸ್ ದಾಖಲೆ. ➡ಪುಟ 9

ಗಲ್ಲೋಟಿಯಾಸ್ ಮಳಿಗೆ ತೆರವು
• ಪುಟ ೧೦

---

26 ತಿಂಗಳ ಹಿಂಬಾಕಿ ಪಾವತಿಗೆ ಸರ್ಕಾರ ಆದೇಶ

ಇಂದು ಸಾರಿಗೆ ಮುಷ್ಕರ ಇರಲಿದೆ ಬಸ್ ಸಂಚಾರ



• **ಬೆಂಗಳೂರು:** ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರಿಗೆ ರಾಜ್ಯ ಸರ್ಕಾರ ಸಿಹಿ ಸುದ್ದಿ ನೀಡಿದೆ. ಕಳೆದ 38 ತಿಂಗಳಿಂದ ಬಾಕಿ ಉಳಿಸಿಕೊಂಡಿದ್ದ ವೇತನ ಹಿಂಬಾಕಿ (ಅರಿಯರ್ಸ್) ಹಾಗೂ ವೇತನ ಪರಿಷ್ಕರಣೆಗಾಗಿ ಆಗ್ರಹಿಸಿ ಸಾರಿಗೆ ಸಿಬ್ಬಂದಿ ನಡೆಸಲುದ್ದೇಶಿಸಿದ್ದ ಪ್ರತಿಭಟನೆಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ. ನೌಕರರ ಪ್ರಮುಖ ಹಕ್ಕೊತ್ತಾಯಗಳಲ್ಲಿ ಒಂದಾದ 26 ತಿಂಗಳ ಹಿಂಬಾಕಿ ಪಾವತಿಸಲು ಸರ್ಕಾರ ಆದೇಶ ಹೊರಡಿಸಿದೆ. ಈ ನಡುವೆ ಎಲ್ಲ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲು ಸಾರಿಗೆ ಜಂಟಿ ಕ್ರಿಯಾಸಮಿತಿ ನಿರ್ಧರಿಸಿದೆ.

ಬೆಂಗಳೂರು ಚಲೋಗೆ ಕರೆ


ನೌಕರರ ವೇತನ ಪರಿಷ್ಕರಣೆ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ ಸಾರಿಗೆ ಇಲಾಖೆ ಸರ್ಕಾರದ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ಆದರೂ ಸಾರಿಗೆ ನೌಕರರ ಜಂಟಿ ಕ್ರಿಯಾಸಮಿತಿ ಪದಾಧಿಕಾರಿಗಳು ತಮ್ಮ ಬೇಡಿಕೆಗಳಿಗೆ ಈಡೇರಿಕೆಗೆ ಗುರುವಾರ (ಫೆ.19) ಬೆಂಗಳೂರು ಚಲೋ ಹಮ್ಮಿಕೊಂಡಿದ್ದಾರೆ. ನಾಲ್ಕು ಸಾರಿಗೆ ನಿಗಮಗಳ ನೌಕರರಿಗೆ 2020 ಜ.1ರಿಂದ 2023 ಫೆ.28 ರವರೆಗಿನ 38 ತಿಂಗಳ ಬಾಕಿ ಪಾವತಿ ಹಾಗೂ 2024 ಜ.1ರಿಂದ ನಾಲ್ಕು ವರ್ಷಗಳ ವೇತನ ಒಪ್ಪಂದ ಈಡೇರಿಸುವಂತೆ ಒತ್ತಾಯಿಸಿ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಆಶ್ರಯದಲ್ಲಿ ಫೆ.19ರಂದು ಫ್ರೀಡಂ ಪಾರ್ಕ್‌ನಲ್ಲಿ ಬೆಂಗಳೂರು ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲು ತೀರ್ಮಾನ ಕೈಗೊಂಡಿತ್ತು. ➡ಪುಟ 9

ಬಸ್ ಸೇವೆ ಸ್ಥಗಿತ ಇಲ್ಲ: ಸಚಿವ ರಾಮಲಿಂಗಾರೆಡ್ಡಿ

ಸುದ್ದಿಗಾರರೊಂದಿಗೆ ಮಾತನಾಡಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಷ್ಕರಕ್ಕೆ ಕರೆ ನೀಡಿರುವ ನಾಲ್ಕು ಸಾರಿಗೆ ನಿಗಮಗಳ ಸಂಘಟನೆಗಳ ಮುಖಂಡರ ಜತೆ ಮಾತುಕತೆ ನಡೆಸುವಂತೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಅವರಿಗೆ ಸೂಚಿಸಲಾಗಿದೆ. ಬಸ್ ಸೇವೆ ಸ್ಥಗಿತಗೊಳಿಸುವುದಿಲ್ಲ. ➡ಪುಟ 9

ಶಕ್ತಿ ಯೋಜನೆಯಿಂದ ಎಷ್ಟು ಹಣ ಬಾಕಿ: ಹೈಕೋರ್ಟ್ ಪ್ರಶ್ನೆ

• **ಬೆಂಗಳೂರು:** ಮಹಿಳೆಯರಿಗೆ ಉಚಿತ ಬಸ್ ಸೇವೆ ಕಲ್ಪಿಸುತ್ತಿರುವ ಮಹತ್ವಾಕಾಂಕ್ಷಿ ಶಕ್ತಿ ಯೋಜನೆಯ ಭಾಗವಾಗಿ ಸಾರಿಗೆ ನಿಗಮಗಳಿಗೆ ಎಷ್ಟು ಹಣವನ್ನು ರಾಜ್ಯ ಸರ್ಕಾರ ಬಾಕಿ ಉಳಿಸಿಕೊಂಡಿದೆ ಎಂಬುದನ್ನು ತಿಳಿಸುವಂತೆ ಸಾರಿಗೆ ನಿಗಮಗಳಿಗೆ ಹೈಕೋರ್ಟ್ ಬುಧವಾರ ನಿರ್ದೇಶಿಸಿದೆ.



ಸಾರಿಗೆ ನಿಗಮಗಳ ಮೃತ ಸಿಬ್ಬಂದಿಗೆ ತಲಾ 30 ಲಕ್ಷ ಪರಿಹಾರ ಬಿಡುಗಡೆ ಮಾಡಲು ನಿರ್ದೇಶಿಸುವಂತೆ ಕೋರಿ ದಾವಣಗೆರೆ ತಾಹೀರ್ ಹುಸೇನ್, ರಾಯಚೂರಿನ ಅಜೀಜ್ ಪಾಷಾ ಜಾಗೀರದಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ಅವರ ವಿಭಾಗೀಯ ಪೀಠ ನಡೆಸಿತು. ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಅಪಾರ ಪ್ರಮಾಣದಲ್ಲಿ ಉಚಿತ ಬಸ್ ಸೇವೆ ನೀಡಲಾಗುತ್ತಿದೆ. ➡ಪುಟ 9

ಪಾಶ್ಚಾತ್ಯ ರಾಷ್ಟ್ರಗಳಿಂದ ಮೂಲಭೂತವಾದ: ಡಾ.ಭಾಗ್ವತ್

ಸವಾಲುಗಳಿಗೆ ಭಾರತ ಪರಿಹಾರ

• **ಲಕ್ನೋ:** ಪಾಶ್ಚಾತ್ಯ ರಾಷ್ಟ್ರಗಳು ಮೂಲಭೂತವಾದ ಪ್ರಚುರಪಡಿಸುತ್ತಿವೆ. ತಾವು ಮಾತ್ರ ಪ್ರಬಲರಾಗಬೇಕು. ತಮಗೆ ಬೇಕಾದ ರೀತಿ ಸ್ವೇಚ್ಛೆಯಿಂದ ಬದುಕಬೇಕು. ಉಳಿದವರ ಗೊಡವೆ ಬೇಡ ಎಂಬ ಸ್ವಾರ್ಥ ಚಿಂತನೆಯವರು. ಇಷ್ಟೇ ಅಲ್ಲ, ತಮ್ಮ ಹಾದಿಗೆ ಅಡೆತಡೆಯಾಗಿ ಕಾಣುವವರನ್ನು ಮುಗಿಸಿಯೇ ಬಿಡುವವರು. ಅಮೆರಿಕ, ಚೀನಾಗಳಿಂದು



ಇದೇ ಹಾದಿ ಅನುಸರಿಸಿವೆ ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗ್ವತ್ ಹೇಳಿದ್ದಾರೆ. ಅಂತೆಯೇ ಜಗತ್ತು ಇಂದು ಎದುರಿಸುತ್ತಿರುವ ನಾನಾ ರೀತಿಯ ಸವಾಲುಗಳಿಗೆ ಭಾರತದ ಬಳಿ ಪರಿಹಾರಗಳಿವೆ ಎಂದು ಗಮನ ಸೆಳೆದಿದ್ದಾರೆ.

ಲಕ್ನೋ ವಿವಿಯ ಮಾಳವೀಯ ಆಡಿಟೋರಿಯಂನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜಗತ್ತು ಇಂದು ಎದುರಿಸುತ್ತಿರುವ ವಿವಿಧ ಸಮಸ್ಯೆಗಳಿಗೆ ಭಾರತದ ಬಳಿ ಪರಿಹಾರಗಳಿವೆ. ➡ಪುಟ 9

ಹಿಂದು ಸಮಾಜದ ಒಗ್ಗಟ್ಟು ಸಂಘದ ಗುರಿ

ರಾಷ್ಟ್ರ ಸಂಪನ್ನವಾಗಬೇಕೆಂಬುದು ಆರೆಸ್ಸೆಸ್ ಗುರಿ. ನಾನು ಮತ್ತು ನನ್ನ ಕುಟುಂಬ ಮಾತ್ರ ಖುಷಿಯಾಗಿದ್ದರೆ ಸಾಕು, ಇದೇ ಎಲ್ಲ ಎಂಬ ಚಿಂತನೆ ಬಿಟ್ಟು, ಇಡೀ ರಾಷ್ಟ್ರದ ಬಗ್ಗೆ ಚಿಂತನೆ ಹೊಂದಬೇಕು. ಆರೆಸ್ಸೆಸ್ ಸಮಾಜದ ಏಕತೆ ಮತ್ತು ಗುಣಾತ್ಮಕತೆಗೆ ಮಹತ್ವ ನೀಡುತ್ತದೆ. ಕೇವಲ ಬರಹಗಳ ಓದುವುದರಿಂದ ಆರೆಸ್ಸೆಸ್ ನಿಮಗೆ ಅರ್ಥವಾಗದು. ಈ ಸಂಘಟನೆಯೊಳಗೆ ಬನ್ನಿ ಮತ್ತು ಆರೆಸ್ಸೆಸ್ ಏನೆಂಬುದನ್ನು ಕಣ್ಣಾರೆ ಕಂಡುಕೊಳ್ಳಿ. ಇಡೀ ಹಿಂದು ಸಮಾಜದ ಒಗ್ಗಟ್ಟು ಆರೆಸ್ಸೆಸ್ ಹೊಣೆಗಾರಿಕೆ. ➡ಪುಟ 9

ಕಸ ವಿಲೇವಾರಿಗೆ ಬೆಳ್ಳಹಳ್ಳಿ-ಮಿಟ್ಟಗಾನಹಳ್ಳಿ ಗ್ರಾಮಸ್ಥರ ಆಕ್ರೋಶ

ಬೆಂಗಳೂರು ಕಸದ ಲಾರಿಗಳಿಗೆ ತಡೆ

• **ಬೆಂಗಳೂರು:** ನಗರದಲ್ಲಿ ಕಸ ಸಮಸ್ಯೆ ಇನ್ನಷ್ಟು ಗಂಭೀರವಾಗುವ ಸಾಧ್ಯತೆ ದಟ್ಟವಾಗಿದೆ. ಗ್ರಾಮಾಭಿವೃದ್ಧಿ ನಿಧಿ ಬಿಡುಗಡೆ ಮಾಡದ ಹಿನ್ನೆಲೆಯಲ್ಲಿ ಬೆಳ್ಳಹಳ್ಳಿ-ಮಿಟ್ಟಗಾನಹಳ್ಳಿ ಕಸ ಡಂಪಿಂಗ್ ಯಾರ್ಡ್ (ಲ್ಯಾಂಡ್‌ಫಿಲ್-ಭೂ ಭರ್ತಿ)ಗೆ ಕಸ ವಿಲೇವಾರಿ ಮಾಡಲು ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿ, ಮಂಗಳವಾರದಿಂದ ಕಸದ ಲಾರಿಗಳನ್ನು ತಡೆಹಿಡಿದಿದ್ದಾರೆ. ಸ್ಥಳೀಯ ಜನಪ್ರತಿನಿಧಿಗಳ ನೇತೃತ್ವದಲ್ಲಿ ಕಸ ವಿಲೇವಾರಿಯನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ.

ಬೆಳ್ಳಹಳ್ಳಿ-ಮಿಟ್ಟಗಾನಹಳ್ಳಿ ಭೂ ಭರ್ತಿಗೆ ವಿರೋಧ ವ್ಯಕ್ತವಾದ ಹಿನ್ನೆಲೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ದೊಡ್ಡಬಳ್ಳಾಪುರದ ಚಿಗರೇನಹಳ್ಳಿ ಬಳಿ ಇರುವ ಎಂಎಸ್‌ಜಿಪಿ ಕಸದ ಘಟಕಕ್ಕೆ ಲಾರಿಗಳನ್ನು ಕಳುಹಿಸಿದೆ. ಆದರೆ ವಿಷಯ ತಿಳಿದ ಅಲ್ಲಿಯ ಗ್ರಾಮಸ್ಥರೊಂದಿಗೆ ಶಾಸಕ ಧೀರಜ್ ಮುನಿರಾಜು ನೇತೃತ್ವದಲ್ಲಿ ಹೋರಾಟ ಮಾಡಿದ್ದು, ನಿತ್ಯ ಬರುವ 72 ಲಾರಿ ಹೊರತುಪಡಿಸಿ, ಹೆಚ್ಚುವರಿಯಾಗಿ ಬಂದ ಲಾರಿಯನ್ನು ತಡೆದಿದ್ದಾರೆ. ➡ಪುಟ 9



ಬಿಜೆಪಿ ಶಾಸಕರ ಬ್ಲ್ಯಾಕ್‌ಮೇಲ್‌ಗೆ ಬಗ್ಗುವುದಿಲ್ಲ: ಡಿಸಿಎಂ ಡಿಕೆಶಿ

ಕಸದ ವಿಚಾರವಾಗಿ ಮಾತನಾಡಿದ ಡಿ.ಕೆ.ಶಿವಕುಮಾರ್, ಬಿಜೆಪಿ ಶಾಸಕರು ಕಸ ಹಾಕಬಾರದು ಹಾಗೂ ನಮಗೆ ಅನುದಾನ ಬೇಕು ಎಂದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಆರವಿಂದ ಲಿಂಬಾವಳಿ, ದೊಡ್ಡಬಳ್ಳಾಪುರ ಶಾಸಕರು ಬ್ಲ್ಯಾಕ್‌ಮೇಲ್ ಮಾಡಿದ್ದಾರೆ. ➡ಪುಟ 9

ಮಾರ್ಚ್ 16ಕ್ಕೆ ರಾಜ್ಯಸಭೆಯ 37 ಸ್ಥಾನಗಳಿಗೆ ಚುನಾವಣೆ

ಬಿಜೆಪಿ ಮೇಲುಗೈ ಸಾಧಿಸುವ ಸಾಧ್ಯತೆ

• **ಹೊಸದಿಲ್ಲಿ:** ಮಾರ್ಚ್ 16ರಂದು ನಡೆಯಲಿರುವ ರಾಜ್ಯಸಭೆಯ ದ್ವೈವಾರ್ಷಿಕ ಚುನಾವಣೆಯಲ್ಲಿ ಒಟ್ಟು 37 ಸ್ಥಾನಗಳಿಗೆ ಮತದಾನ ನಡೆಯಲಿದ್ದು, ಈ ಬಾರಿ ಬಿಜೆಪಿ ಮೇಲುಗೈ ಸಾಧಿಸುವ ಸಾಧ್ಯತೆಗಳು ನಿಚ್ಚಳವಾಗಿವೆ. ಈ ಸ್ಥಾನಗಳು ಏ.2, 9ರಂದು ಖಾಲಿಯಾಗಲಿವೆ. ಚುನಾವಣಾ ಆಯೋಗದ ಪ್ರಕಟಣೆ ಪ್ರಕಾರ ಮಹಾರಾಷ್ಟ್ರ (7), ಒಡಿಶಾ (4), ತೆಲಂಗಾಣ (2), ತಮಿಳುನಾಡು (6), ಛತ್ತೀಸ್‌ಗಢ (2), ಪಶ್ಚಿಮ ಬಂಗಾಳ (5), ಅಸ್ಸಾಂ (3), ಹರ್ಯಾಣ (2), ಹಿಮಾಚಲ ಪ್ರದೇಶ (1), ಬಿಹಾರ (5) ರಾಜ್ಯಗಳಲ್ಲಿ ರಾಜ್ಯಸಭೆ ಸ್ಥಾನಗಳು ಖಾಲಿಯಾಗುತ್ತಿವೆ.

ಫೆ.26ಕ್ಕೆ ಅಧಿಸೂಚನೆ ಪ್ರಕಟ: ಖಾಲಿಯಾಗುವ ರಾಜ್ಯಸಭೆ 37 ಸ್ಥಾನಗಳಿಗೆ ಫೆ.26ರಂದು ಅಧಿಸೂಚನೆ ಹೊರಡಿಸಲಾಗುತ್ತದೆ. ಮಾ.16ರ ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದ್ದು, ಅದೇ ದಿನ ಸಂಜೆ 5ರಿಂದ ಮತ ಎಣಿಕೆ ನಡೆಯಲಿದೆ. ಮಹಾರಾಷ್ಟ್ರ, ಒಡಿಶಾ, ಬಿಹಾರ, ಛತ್ತೀಸ್‌ಗಢ, ಹರ್ಯಾಣ, ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿ ಆಡಳಿತವಿದೆ ಅಥವಾ ಅಥವಾ ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರವಿದೆ. ➡ಪುಟ 9

ಸತೀಶ ಜಾರಕಿಹೊಳಿ ಮನವಿಗೆ ಸ್ಪಂದಿಸಿದ ಗಡ್ಕರಿ

ರಾಜ್ಯದ 6 ರಸ್ತೆ ಮೇಲ್ದರ್ಜೆಗೆ



• **ಬೆಳಗಾವಿ:** ರಾಜ್ಯದ ಆರು ಪ್ರಮುಖ ರಸ್ತೆಗಳನ್ನು ಮೇಲ್ದರ್ಜೆಗೇರಿಸುವಂತೆ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳನ್ನು ಚತುಷ್ಪಥ, ಷಟ್ಪಥ ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸಬೇಕು ಎಂದು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಗಡ್ಕರಿ ಅವರಿಗೆ ಮನವಿ ಸಲ್ಲಿಸಲಾಗಿತ್ತು ಎಂದರು. ಬಿಜೆಪಿಯಿಂದ ಆಯ್ಕೆಯಾದ ಸಂಸದರು, ಲೋಕಸಭಾ ಸದಸ್ಯರೂ ರಾಜ್ಯದ ಹಲವು ರಸ್ತೆಗಳನ್ನು ಅಭಿವೃದ್ಧಿಪಡಿಸುವಂತೆ ಒತ್ತಾಯಿಸಿದ್ದರು. ಈ ಬೇಡಿಕೆಗೆ ಸ್ಪಂದಿಸಿದ ಸಚಿವ ಗಡ್ಕರಿ ಅವರು, ರಾಜ್ಯ ಲೋಕೋಪಯೋಗಿ ಇಲಾಖೆ ಅಧೀನದಲ್ಲಿದ್ದ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವಹಿಸಿಕೊಂಡು ರಸ್ತೆಗಳನ್ನು ವಿಸ್ತರಣೆ ಮಾಡಬೇಕು ಎಂದು ಸೂಚನೆ ನೀಡಿದ್ದಾರೆ.

ಜೇವರ್ಗಿ-ಬಳ್ಳಾರಿ ಮಧ್ಯದ 265 ಕಿ.ಮೀ. ಉದ್ದದ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ತನ್ನ ಅಧೀನಕ್ಕೆ ತೆಗೆದುಕೊಂಡು ಅಭಿವೃದ್ಧಿ ಕೆಲಸ ಶುರು ಮಾಡುವಂತೆ ಸೂಚನೆ ನೀಡಿದ್ದಾರೆ. ಜೇವರ್ಗಿ, ಶಹಾಪುರ, ಸುರಪುರದಿಂದ ಲಿಂಗಸುಗೂರುವರೆಗಿನ ರಸ್ತೆಯು ಹೆಸರಿಗಷ್ಟೇ ರಾಷ್ಟ್ರೀಯ ಹೆದ್ದಾರಿಯಾಗಿತ್ತು. ಜೇವರ್ಗಿ, ಶಹಾಪುರ, ಹೊಸಪೇಟೆ ಮಾರ್ಗದ ಮೂಲಕ ಬೆಂಗಳೂರಿಗೆ ಹೊರಡುವ ಬಸ್‌ಗಳು ಕೆಟ್ಟ ರಸ್ತೆಯಿಂದಾಗಿ ನಿಗದಿತ ಅವಧಿಗಿಂತ ತಡವಾಗಿ ತಲುಪುತ್ತಿವೆ. ಅದಕ್ಕಾಗಿಯೇ ತುರ್ತು ಕೆಲಸ ಇದ್ದವರು ರಾಯಚೂರು, ಮಂತ್ರಾಲಯ ಮಾರ್ಗವಾಗಿ ಬೆಂಗಳೂರಿಗೆ ಸಂಚರಿಸುತ್ತಿದ್ದಾರೆ.

ಖಂಡ್ರೆ ಸಮ್ಮತಿ | ವಾಹನ, ಟ್ರಿಪ್, ಸಮಯ ಕಡಿತ

ಬಂಡೀಪುರದಲ್ಲಿ ಸಫಾರಿ ಶುರು

• **ಬೆಂಗಳೂರು:** ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಟ್ರಿಪ್, ಸಮಯ ಮತ್ತು ವಾಹನ ಸಂಖ್ಯೆಯಲ್ಲಿ ಕಡಿತ ಮಾಡಿ ಗುರುವಾರದಿಂದ (ಫೆ.19) ಸಫಾರಿ ಪುನರಾರಂಭಕ್ಕೆ ಸಮ್ಮತಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.



ಹುಲಿ ದಾಳಿಯಿಂದ ಸರಣಿ ಸಾವು ಸಂಭವಿಸಿದ ಹಿನ್ನೆಲೆಯಲ್ಲಿ ಕಳೆದ ನ.7ರಿಂದ ಸ್ಥಗಿತಗೊಳಿಸಲಾಗಿದ್ದ ಸಫಾರಿ ಪುನರಾರಂಭದ ಬಗ್ಗೆ ಬುಧವಾರ ವಿಕಾಸಸೌಧದಲ್ಲಿ ಉನ್ನತಾಧಿಕಾರಿಗಳೊಂದಿಗೆ ಸಚಿವರು ಸಭೆ ನಡೆಸಿ ಬಳಿಕ ಈ ಮಾಹಿತಿ ನೀಡಿದರು. ಈ ಹಿಂದೆ ಬಂಡೀಪುರದಲ್ಲಿ 8 ಗಂಟೆ ಕಾಲ ಸಫಾರಿ ನಡೆಯುತ್ತಿತ್ತು. ಈಗ ಅದನ್ನು 5 ಗಂಟೆಗೆ ತಗ್ಗಿಸಲಾಗಿದೆ. ಅದೇ ರೀತಿ ಸುಂಕದಕಟ್ಟೆಯಲ್ಲಿ 6 ಗಂಟೆ ಹಾಗೂ ನಾಗರಹೊಳೆಯಲ್ಲಿ 4 ಗಂಟೆ ಕಾಲ ಮಾತ್ರ ಸಫಾರಿಗೆ ಪ್ರಥಮ ಹಂತದಲ್ಲಿ ಅನುಮತಿಸಲಾಗಿದೆ ಎಂದರು. ಬಂಡೀಪುರ, ನಾಗರ ಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮದ ಧಾರಣಾ ಸಾಮರ್ಥ್ಯವನ್ನು ವೈಜ್ಞಾನಿಕವಾಗಿ ನಿಗದಿಪಡಿಸಲು ರಚಿಸಲಾಗಿರುವ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದ ತಾಂತ್ರಿಕ ಸಮಿತಿ ನೀಡಿರುವ ಪ್ರಾಥಮಿಕ ವರದಿ ಪರಾಮರ್ಶೆ ನಡೆಸಿದರು. ➡ಪುಟ 9



ಸಫಾರಿ ವಾಹನಗಳಿಗೆ ಜಿಪಿಎಸ್

ಸಫಾರಿ ವಾಹನಗಳನ್ನು ಕತ್ತಲಾದ ಬಳಿಕ ಓಡಿಸುವುದು, ಹೆಚ್ಚುವರಿ ಅವಧಿಗೆ ಓಡಿಸುವುದೇ ಮೊದಲಾದ ದುರ್ಬಳಕೆ ತಡೆಗಟ್ಟಲು ಕಡ್ಡಾಯವಾಗಿ ಮುಂದಿನ 2 ತಿಂಗಳೊಳಗಾಗಿ ಎಲ್ಲ ಸಫಾರಿ ವಾಹನಗಳಿಗೆ ಎಂಜಿನ್ ಸಂಪರ್ಕಿತ ಜಿಪಿಎಸ್ ಮತ್ತು ಡ್ಯಾಷ್ ಕ್ಯಾಮೆರಾ ಅಳವಡಿಸಬೇಕು ಎಂದು ಸೂಚಿಸಲಾಗಿದೆ.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,55,000(2,60,000) ಅಪರಂಜಿ ಚಿನ್ನ: 1,54,210(1,54,200) ಆಭರಣ ಚಿನ್ನ: 1,41,350(1,41,350) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 83,734 (283↑) ಎನ್‌ಎಸ್‌ಇ 25,819 (93↑)

$1 = ₹90.68

ಕಾಂಗ್ರೆಸ್‌ನಿಂದ ಸಾರ್ವಜನಿಕ ಆಸ್ತಿ ಕಬಳಿಕೆ: ಸಚಿವ ಜೋಶಿ




• **ಹೊಸದಿಲ್ಲಿ:** ನಾಗರಿಕರಿಗೆ ಮೂಲಸೌಕರ್ಯ ಒದಗಿಸಬೇಕಾದ 24ಕ್ಕೂ ಹೆಚ್ಚು ನಿವೇಶನಗಳನ್ನು ಕಾಂಗ್ರೆಸ್ ಕಚೇರಿಗಳಿಗೆ ಬಳಸಲು ಅದೇನು ಕಾಂಗ್ರೆಸ್ ಪಿತ್ರಾರ್ಜಿತ ಆಸ್ತಿಯೇ? ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಕಿಡಿಕಾರಿದ್ದಾರೆ.

ರಾಜ್ಯದಲ್ಲಿ ನಾಗರಿಕ ಸೌಲಭ್ಯದ ನಿವೇಶನಗಳನ್ನು ಕಡಿಮೆ ಬೆಲೆಗೆ, ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕೆ ಹಂಚಿಕೆ ಮಾಡಿರುವುದು ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ಪರಮಾವಧಿ ಎಂದರು. ಸಾರ್ವಜನಿಕ ಉದ್ಯಾನವನ, ಗ್ರಂಥಾಲಯ, ಆಸ್ಪತ್ರೆಗಳಿಗೆ ಬಳಕೆಯಾಗಬೇಕಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಭೂಮಿಯನ್ನು 'ಕಾಂಗ್ರೆಸ್ ಭವನ'ಗಳಿಗೆ ಮೀಸಲಿಟ್ಟಿರುವುದು ರಾಜ್ಯದ ಜನತೆಗೆ ಮಾಡಿದ ದ್ರೋಹ ಎಂದು ಖಂಡಿಸಿದ್ದಾರೆ.

ಒಂದೆಡೆ ಬಡವರಿಗೆ ನಿವೇಶನ ನೀಡಲು ಜಾಗವಿಲ್ಲ ಎನ್ನುವ ಈ ಕಾಂಗ್ರೆಸ್ ಸರ್ಕಾರ, ಇನ್ನೊಂದೆಡೆ ತನ್ನ ಪಕ್ಷದ ಕಚೇರಿಗಳಿಗೆ ಬಳಸಿಕೊಳ್ಳುತ್ತಿದೆ. ಈ ಮೂಲಕ ಸಾರ್ವಜನಿಕ ಆಸ್ತಿಯನ್ನು ಕಬಳಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜ್ಯದ ಸಾರ್ವಜನಿಕ ಆಸ್ತಿಯನ್ನು ಕಾಂಗ್ರೆಸ್ ಪಕ್ಷ ತನ್ನ ಪಿತ್ರಾರ್ಜಿತ ಆಸ್ತಿ ಎಂಬಂತೆ ಬಳಸಿಕೊಳ್ಳುತ್ತಿದೆ. ಬಡವರ ಹಿತ ಕಾಯುವ ಬದಲು ಕಾಂಗ್ರೆಸ್ ತನ್ನ ಪಕ್ಷದ ಹಿತಕ್ಕೆ ಸಾರ್ವಜನಿಕ ಆಸ್ತಿಯನ್ನು ಲೂಟಿ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ಲೂಟಿ ಹೊಡೆಯುವುದೇ ಕಾಂಗ್ರೆಸ್‌ನ ಮೂಲ ಸಿದ್ಧಾಂತ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಪಕ್ಷದ ಕಚೇರಿಗಳಿಗೆ ಮಾಡಿರುವ ಈ ಅಕ್ರಮ ಹಂಚಿಕೆಯನ್ನು ಕೂಡಲೇ ಹಿಂಪಡೆಯಬೇಕೆಂದು ಆಗ್ರಹಿಸಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ಇದನ್ನು ವಾಪಸ್ ಪಡೆಯದಿದ್ದರೆ ಬಿಜೆಪಿ ಹೋರಾಟ ಹಮ್ಮಿಕೊಳ್ಳಲಿದೆ ಎಂದು ಎಚ್ಚರಿಸಿದ್ದಾರೆ.

ರಾಮ ಬಾಣ



ಸಚಿವ ಜಾರ್ಜ್‌ರಿಂದ ಮೃತರ ಕುಟುಂಬಕ್ಕೆ ಪರಿಹಾರ ವಿತರಣೆ

• **ಬೆಂಗಳೂರು:** ಕರ್ತವ್ಯದ ವೇಳೆ ಮಡಿದ ಬೆಸ್ಕಾಂನ ಮೂವರು ಸಿಬ್ಬಂದಿಯ ಕುಟುಂಬಸ್ಥರಿಗೆ ಇಂಧನ ಸಚಿವ ಕೆ.ಜೆ ಜಾರ್ಜ್ ತಲಾ ಒಂದು ಕೋಟಿ ರೂ. ಪರಿಹಾರದ ಚೆಕ್ ವಿತರಿಸಿದರು.

ಬೆಸ್ಕಾಂ ಕಾರ್ಪೋರೇಟ್ ಕಚೇರಿಯಲ್ಲಿ ಸಂತ್ರಸ್ತರ ಕುಟುಂಬದವರನ್ನು ಭೇಟಿಯಾಗಿ ಅವರಿಗೆ ವಿಮಾ ಸಹಾಯವಾಗಿ ಚೆಕ್ ವಿತರಿಸಿದರು. ವಿದ್ಯುದಾಘಾತದಲ್ಲಿ ಮೃತಪಟ್ಟ ಗೌರಿಬಿದನೂರು ಉಪವಿಭಾಗದ ಸಹಾಯಕ ಪವರ್‌ಮ್ಯಾನ್ ಉದಯ್ ಕುಮಾರ್ ಅವರ ಪತ್ನಿ ವಿ. ಕೀರ್ತನಾ, ರಸ್ತೆ ಅಪಘಾತಗಳಲ್ಲಿ ಮೃತರಾದ ಗುಡಿಬಂಡೆ ಉಪವಿಭಾಗದ ಪವರ್‌ಮ್ಯಾನ್ ಬಿ.ವಿ. ಮಂಜಪ್ಪ ಅವರ ಪತ್ನಿ ದಾಕ್ಷಾಯಿಣಿ ಹಾಗೂ ಚಿಂತಾಮಣಿ ಉಪವಿಭಾಗದ ಪವರ್‌ಮ್ಯಾನ್ ಅಮರನಾಥ್ ಅವರ ಪತ್ನಿ ಮುನಿರತ್ನಮ್ಮ ಅವರಿಗೆ ಪರಿಹಾರದ ಚೆಕ್ ನೀಡಲಾಯಿತು.

ಇಲಾಖೆಯ ಸಿಬ್ಬಂದಿ, ವಿಶೇಷವಾಗಿ ಲೈನ್‌ಮ್ಯಾನ್‌ಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಅವರಿಗೆ ಅಗತ್ಯ ವೈಯಕ್ತಿಕ ರಕ್ಷಣಾ ಸಾಧನಗಳನ್ನು ಒದಗಿಸಲಾಗುತ್ತದೆ. ಆದರೂ, ಅನಿರೀಕ್ಷಿತ ಘಟನೆಗಳಲ್ಲಿ ಮೃತಪಟ್ಟ ಸಿಬ್ಬಂದಿಯ ಕುಟುಂಬದವರಿಗೆ ನೆರವಿನ ಹಸ್ತ ಚಾಚಲಾಗುತ್ತದೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಸೂಪರ್ ಸ್ಯಾಲರಿ ಅಕೌಂಟ್ ವಿಮಾ ಪ್ರಯೋಜನದಡಿ ಸಂತ್ರಸ್ತರ ಕುಟುಂಬದವರಿಗೆ ಈ ಚೆಕ್ ಹಸ್ತಾಂತರಿಸಲಾಗಿದೆ ಎಂದು ಜಾರ್ಜ್ ತಿಳಿಸಿದರು. ಈ ಸಂದರ್ಭದಲ್ಲಿ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ರಾಮ್ ಪ್ರಸಾತ್ ಮನೋಹರ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಎನ್. ಶಿವಶಂಕರ ಹಾಗೂ ಹಿರಿಯ ಅಧಿಕಾರಿಗಳು ಇದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕನೇಜಿ

ಆರೆಸ್ಸೆಸ್ ಒಂದು ದೆವ್ವ – ಪ್ರಿಯಾಂಕಾ ಖರ್ಗೆ
– ಕೃಷ್ಣ ದೇವತೆಗಳಿಗೆ ದೇವನಾಗಿ ಕಂಡ, ದಾನವರಿಗೆ ದುಷ್ಟನಾಗಿ ಕಾಣಿಸಿದ, ದೃಷ್ಟಿಯಂತೆ ಸೃಷ್ಟಿ!

ದಿನ ಭವಿಷ್ಯ

ಮೇಷ ಸವಾಲಿನ ದಿನ. ವೃತ್ತಿಯಲ್ಲೂ, ವೈಯಕ್ತಿಕವಾಗಿಯೂ ಹೆಚ್ಚು ಹೊಣೆ. ಸಂಬಂಧಕ್ಕೆ ಧಕ್ಕೆ. ಆರ್ಥಿಕ ಹಿಂಜರಿಕೆ. ಖರ್ಚು ಹೆಚ್ಚಳ.

ವೃಷಭ ಪೂರೈಸಲಾಗದ ಆಶ್ವಾಸನೆ ನೀಡಿ ಇಕ್ಕಟ್ಟಿಗೆ ಸಿಲುಕುವಿರಿ. ವರ್ಚಸ್ಸಿಗೆ ಧಕ್ಕೆ ತರುವ ಕಾರ್ಯ ಎಸಗದಿರಿ. ಟೀಕೆಗಳಿಗೆ ಎರವಾಗದಂತೆ ವರ್ತಿಸಿ.

ಮಿಥುನ ವೃತ್ತಿಯಲ್ಲಿ ಸಫಲತೆ. ಪರಿಶ್ರಮಕ್ಕೆ ಅಧಿಕ ಫಲ ಪಡೆಯುವಿರಿ. ಹೊಟ್ಟೆ ಕೆಡಿಸುವ ಆಹಾರ ತಿನ್ನದಿರಿ. ಪ್ರೀತಿಯ ಸಂಬಂಧ ಇನ್ನಷ್ಟು ಗಟ್ಟಿಗೊಳ್ಳಲಿದೆ.

ಕಟಕ ಎಂದಿನಂತಲ್ಲದ ಹೊಸತನಕ್ಕೆ ಯತ್ನಿಸುವಿರಿ. ಮನಸ್ಸು ಉಲ್ಲಸಿತಗೊಳಿಸುವ ಪ್ರಸಂಗ ಉಂಟಾದೀತು. ಪ್ರೀತಿಯ ಕ್ಷೇತ್ರದಲ್ಲಿ ಸಫಲತೆ.

ಸಿಂಹ ಪ್ರಗತಿಯ ದಿನ. ಉದ್ಯೋಗದಲ್ಲಿ ಹೊಸ ಅವಕಾಶ. ಏಕಾಂಗಿಗಳಿಗೆ ವೈವಾಹಿಕ ಬಂಧ ಏರ್ಪಡಬಹುದು. ತೃಪ್ತಿಕರ ಆರ್ಥಿಕ ಪ್ರಗತಿ.

ಕನ್ಯಾ ದಂಪತಿಗಳು ತಮ್ಮ ಸಂಬಂಧ ಬಲಪಡಿಸುವ ಕ್ರಮ ತೆಗೆದುಕೊಳ್ಳಬೇಕು. ಸಣ್ಣ ಭೇದವು ಸಂಬಂಧ ಕೆಡಿಸದಿರಲಿ. ಮುಖ್ಯ ಕಾರ್ಯ ಅಪೂರ್ಣ.

ತುಲಾ ವೃತ್ತಿಯಲ್ಲಿ ನಿಮ್ಮ ಕಠಿಣ ದುಡಿಮೆಗೆ ತೃಪ್ತಿಕರ ಫಲಿತಾಂಶ. ಆದರೆ ಕೆಲವು ವಿಷಯಗಳು ಮನಸ್ಸು ಕದಡುತ್ತವೆ. ನಿಮ್ಮ ಮಾತು ತಪ್ಪರ್ಥ ಬಿಂಬಿಸಬಹುದು.

ವೃಶ್ಚಿಕ ವೃತ್ತಿಯಲ್ಲಿ ಸೃಷ್ಟಿಯಾಗಿದ್ದ ಸಮಸ್ಯೆ ಪರಿಹಾರವಾಗಲಿದೆ. ಪ್ರೀತಿಯಲ್ಲಿ ಒಡಕು. ಕ್ಷುಲ್ಲಕ ವಿಷಯವೂ ಮನಸ್ಸು ಕೆಡಿಸಬಹುದು.

ಧನು ಹೊಣೆಗಾರಿಕೆ, ಒತ್ತಡ ಕಡಿಮೆ. ಯಾವುದೋ ವಿಷಯದಲ್ಲಿ ಭಾವುಕರಾಗಿ ನಿರ್ಧಾರ ತಾಳದಿರಿ. ಅದರ ಪ್ರಾಕ್ಟಿಕಲ್ ಆಯಾಮ ಪರಿಶೀಲಿಸಿ.

ಮಕರ ದುಗುಡಕ್ಕೆ ಕಾರಣವಾಗಿದ್ದ ವಿಷಯ ಇಂದು ಇತ್ಯರ್ಥ ಕಾಣಬಹುದು. ಆದರೆ ಸ್ವಲ್ಪ ಮಟ್ಟಿನ ಹಿನ್ನಡೆಯೂ ಉಂಟಾದೀತು.

ಕುಂಭ ಆಪ್ತರ ಸಂಬಂಧಕ್ಕೆ ಹುಳಿ ಹಿಂಡಲು ಕೆಲವರ ಯತ್ನ ನಡೆದೀತು. ನೀವು ಎಚ್ಚರದಿಂದಿರಿ. ವೃತ್ತಿಯಲ್ಲಿ ಪ್ರತಿಕೂಲ ಪರಿಣಾಮ ಎದುರಿಸುವಿರಿ.

ಮೀನ ಒಳಿತು, ಕೆಡುಕು ಎರಡನ್ನು ಎದುರಿಸುವಿರಿ. ಉದ್ವಿಗ್ನ ಸ್ಥಿತಿ ಕಾಣುವಿರಿ. ಅದರ ಜತೆಗೇ ಪರಿಹಾರದ ನಿರಾಳತೆಯೂ. ಆರೋಗ್ಯ ಕಾಳಜಿ ವಹಿಸಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ: 2,9,4,7

ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಕಾರ್ಯಕಾರಿಣಿಯ ಉದ್ಘಾಟನೆ
ಬಿಜೆಪಿ ಕಾರ್ಯಕಾರಿಣಿ ಸಭೆ ಇಂದು

• **ಬೆಂಗಳೂರು:** ಅರಮನೆ ಮೈದಾನದಲ್ಲಿ ಇಂದು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ ನಡೆಯಲಿದ್ದು, ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಕಾರ್ಯಕಾರಿಣಿಯ ಉದ್ಘಾಟನೆ ಮಾಡಲಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್ ಯಡಿಯೂರಪ್ಪ, ಡಿ.ವಿ.ಸದಾನಂದ ಗೌಡ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಸೋಮಣ್ಣ, ಶೋಭಾ ಕರಂದ್ಲಾಜೆ ಸೇರಿದಂತೆ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿ 1,250ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಸಭೆಯಲ್ಲಿ, ರಾಜ್ಯದಲ್ಲಿ ಸರ್ಕಾರದ ವಿರುದ್ಧ ಹೋರಾಟ ಮುಂಬರುವ ವಿಧಾನಸಭೆಗಳ ಉಪಚುನಾವಣೆ, ವಿಧಾನಪರಿಷತ್, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಸೇರಿದಂತೆ ಜಿಬಿಎ ಚುನಾವಣೆಗಳ ತಯಾರಿ ಬಗ್ಗೆ ಚರ್ಚೆ ನಡೆಯಲಿವೆ. ಅರಮನೆ ಮೈದಾನದ ಗೇಟ್ ನಂ.4ರಲ್ಲಿ ಬುಧವಾರ ಪೂರ್ವಸಿದ್ಧತೆ ಬಗ್ಗೆ ಪರಿಶೀಲಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ರಾಘವೇಂದ್ರ ಅವರು, ಬೆಳಿಗ್ಗೆ 8.30ರಿಂದ ರಾಜ್ಯದ ಮೂಲೆಮೂಲೆಗಳಿಂದ ನಮ್ಮ ಪ್ರತಿನಿಧಿಗಳು ಆಗಮಿಸುತ್ತಾರೆ. ಬೆಳಿಗ್ಗೆ 9.45ಕ್ಕೆ ಧ್ವಜಾರೋಹಣ ನೆರವೇರಲಿದೆ ಎಂದು ವಿವರಿಸಿದರು.

ಬಡವರ ವಿರೋಧಿ, ರೈತ ವಿರೋಧಿ, ಯುವ ಜನತೆಯ ವಿರೋಧಿ ಸರಕಾರವನ್ನು ಬುಡಸಮೇತ ಕಿತ್ತು ಹಾಕುವ ನಿಟ್ಟಿನಲ್ಲಿ ಬಹಳ ಗಂಭೀರ ಚರ್ಚೆಗಳು ನಡೆಯಲಿವೆ ಎಂದು ಹೇಳಿದರು. ನಿರ್ಣಯಗಳನ್ನೂ ನಾವು ಅಂಗೀಕರಿಸಲಿದ್ದೇವೆ ಎಂದು ಪ್ರಕಟಿಸಿದರು.



ಬಿ.ಎಸ್.ಯಡಿಯೂರಪ್ಪಗೆ ಅಭಿನಂದನೆ
ಮಾಜಿ ಸಿಎಂ ಬಿ.ಎಸ್ ಯಡಿಯೂರಪ್ಪ ಅವರು ಸಾರ್ವಜನಿಕ ಜೀವನದಲ್ಲಿ 50 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಪಕ್ಷದ ಎಲ್ಲಾ ಎಲ್ಲ ಹಿರಿಯರ ಸಮ್ಮುಖದಲ್ಲಿ ಅಭಿನಂದನಾ ಕಾರ್ಯಕ್ರಮ ನೆರವೇರಲಿದೆ.

₹1,194 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

• **ಬೆಂಗಳೂರು:** ಆನ್‌ಲೈನ್ ಗೇಮಿಂಗ್ ವೇದಿಕೆಯಾದ ವಿನ್ಜೋ ಕಂಪನಿಯು ಬಳಕೆದಾರರಿಗೆ ವಂಚಿಸಿರುವ ಆರೋಪದ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಕಾರ್ಯಾಚರಣೆ ನಡೆಸಿ, ಕಂಪನಿಗೆ ಸೇರಿದ ಒಟ್ಟು 1,194 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಈ ಪೈಕಿ ಅಮೆರಿಕ ಮತ್ತು ಸಿಂಗಾಪುರದಲ್ಲಿರುವ ವಿದೇಶಿ ಬ್ಯಾಂಕ್ ಖಾತೆಗಳಲ್ಲಿದ್ದ ಸುಮಾರು 505 ಕೋಟಿ ರೂ. (55.69 ಮಿಲಿಯನ್ ಯುಎಸ್‌ಡಿ) ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಈ ವಂಚನೆಯು ಜಾಲವು ಅತ್ಯಂತ ವ್ಯವಸ್ಥಿತವಾಗಿ ನಡೆದಿದ್ದು, ಕಂಪನಿಯ ನಿರ್ದೇಶಕರುಗಳಾದ ಪಾವನ್ ನಂದಾ ಮತ್ತು ಸೌಮ್ಯ ಸಿಂಗ್ ರಾಥೋಡ್ ಅವರು ಅಮೆರಿಕ ಹಾಗೂ ಸಿಂಗಾಪುರದಲ್ಲಿ ಶೆಲ್ ಕಂಪನಿಗಳನ್ನು ಸ್ಥಾಪಿಸಿ, ಭಾರತದಿಂದ ಅಕ್ರಮವಾಗಿ ಹಣ ವರ್ಗಾವಣೆ ಮಾಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. 2025ರ ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಕಂಪನಿಯ ಕಚೇರಿ ಹಾಗೂ ನಿರ್ದೇಶಕರ ನಿವಾಸಗಳ ಮೇಲೆ ನಡೆದ ದಾಳಿಯ ವೇಳೆ ಇದಕ್ಕೆ ಸಂಬಂಧಿಸಿದ ಸಾಕ್ಷ್ಯಗಳು ಲಭ್ಯವಾಗಿತ್ತು.

ವಿನ್ಜೋ ಕಂಪನಿಯು ಹಣದ ಆಮಿಷವೊಡ್ಡಿ ಆಟಗಾರರನ್ನು ವಂಚಿಸುತ್ತಿತ್ತು. ನೈಜ ಹಣದ ಗೇಮಿಂಗ್ ಅಪ್ಲಿಕೇಶನ್‌ನಲ್ಲಿ ಬಳಕೆದಾರರು ಇತರ ಮನುಷ್ಯರೊಂದಿಗೆ ಆಟವಾಡುತ್ತಿದ್ದಾರೆ ಎಂದು ನಂಬಿಸಿ, ವಾಸ್ತವದಲ್ಲಿ ಅವರ ವಿರುದ್ಧ ಬಾಟ್‌ಗಳು, ಕೃತಕ ಬುದ್ಧಿಮತ್ತೆ ಮತ್ತು ಅಲ್ಗಾರಿದಮ್‌ಗಳನ್ನು ಬಳಸಿ ಆಟ ಆಡಿಸಲಾಗುತ್ತಿತ್ತು.

ಈ ತಂತ್ರದ ಮೂಲಕ ಬಳಕೆದಾರರು ಹಣ ಕಳೆದುಕೊಳ್ಳುವಂತೆ ಮಾಡಿ, ಆ ಹಣವನ್ನು ರೇಕ್ ಕಮಿಷನ್ ರೂಪದಲ್ಲಿ ಕಂಪನಿಯು ತನ್ನ ಆದಾಯವನ್ನಾಗಿ ಪರಿವರ್ತಿಸಿಕೊಳ್ಳುತ್ತಿತ್ತು.

ಬೆಂಗಳೂರು ಕಸದ ಲಾರಿಗಳಿಗೆ ತಡೆ

ಪುಟ 1 ➡ ಈ ಎಲ್ಲ ಘಟನೆಯಿಂದ ಕಸ ತುಂಬಿದ ಲಾರಿಗಳು ಭೂ ಭರ್ತಿ ಪ್ರದೇಶದ ಬಳಿ ನಿಂತಿದ್ದು, ಬೆಂಗಳೂರಿನ ನಿತ್ಯದ ಕಸ ವಿಲೇವಾರಿಗೆ ತೊಡಕುಂಟಾಗಿದೆ. ಇದರಿಂದ ಸಿಲಿಕಾನ್ ಸಿಟಿಯಲ್ಲಿ ಕಸದ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ.

ಬಿಜೆಪಿ- ಕಾಂಗ್ರೆಸ್ ವಾಗ್ಯುದ್ಧ: ಬೆಂಗಳೂರಿನ ಕಸದ ಸಮಸ್ಯೆ ರಾಜಕೀಯ ತಿರುವು ಪಡೆದುಕೊಂಡಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಮಾತಿನ ಫೈಟ್ ಜೋರಾಗಿದೆ. ಕಸ ವಿಲೇವಾರಿಗೆ ಅಡ್ಡಿಪಡಿಸುವವರ ಮನೆ, ಕಚೇರಿ ಮುಂದೆ ಕಸ ಸುರಿಯುತ್ತೇವೆ ಎಂದು ಬಿಜೆಪಿ ಶಾಸಕರು, ಮುಖಂಡರಿಗೆ ಉಪ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ. ಇನ್ನೊಂದೆಡೆ ಇಂತಹ ಸವಾಲು, ಬೆದರಿಕೆಗಳಿಗೆ ಬಗ್ಗುವುದಿಲ್ಲ ಎಂದು ಬಿಜೆಪಿ ನಾಯಕರು ತಿರಗೇಟು ನೀಡಿದ್ದಾರೆ.

ಬಿಜೆಪಿ ಶಾಸಕರ ಬ್ಲ್ಯಾಕ್‌ಮೇಲ್‌ಗೆ ಬಗ್ಗುವುದಿಲ್ಲ: ಡಿಸಿಎಂ ಡಿಕೆಶಿ

ಪುಟ 1 ➡ ಹೀಗೆ ಮಾಡಿದರೆ ಕಸ ಎಲ್ಲಿಗೆ ಹೋಗಬೇಕು? ಕಸವು ಆರ್.ಅಶೋಕ್, ವಿಜಯೇಂದ್ರ ಅಥವಾ ಬಿಜೆಪಿ ಕಚೇರಿಗೆ ಹೋಗಬೇಕಾಗುತ್ತದೆ. ಇವರುಗಳು ಯಾರಿಗೆ ಎಂದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ತಿರುಗೇಟು: ಡಿ.ಕೆ.ಶಿವಕುಮಾರ್ ಮಾತಿಗೆ ಬಿಜೆಪಿ ನಾಯಕರು ತಿರುಗೇಟು ನೀಡಿದ್ದು, ಸವಾಲು, ಬೆದರಿಕೆಗಳಿಗೆ ಬಗ್ಗುವುದಿಲ್ಲ. ಮೊದಲು ಬೆಂಗಳೂರಿನ ರಸ್ತೆ ಗುಂಡಿ, ಕಸದ ಸಮಸ್ಯೆ ಸೇರಿದಂತೆ ನಗರದ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ನೀಡಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದ್ದಾರೆ. ಪ್ರತಿಪಕ್ಷ ನಾಯಕ ಆರ್. ಅಶೋಕ್ ಸರ್ಕಾರದ ವಿರುದ್ಧ ಕಿಡಿಕಾರಿ, ಸರ್ಕಾರವೇ ಒಂದು ಮಾಫಿಯಾ. ಕಸದ ಟೆಂಡರ್‌ನಿಂದ ಎಲ್ಲದಕ್ಕೂ ಕಮಿಷನ್ ಪಡೆಯುತ್ತಿರುವುದರಿಂದ ಸಮಸ್ಯೆ ಎದುರಾಗಿದೆ ಎಂದು ಆರೋಪಿಸಿದ್ದಾರೆ. ಶಾಸಕರಾದ ಎಸ್.ಆರ್.ವಿಶ್ವನಾಥ್, ಧೀರಜ್ ಮುನಿರಾಜು ಸಹ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಗೌರವದಿಂದ ಇದ್ದರೆ ಸರಿ. ಕಸ ವಿಲೇವಾರಿಗೆ ಅಡ್ಡಿಪಡಿಸುವವರು ಶಾಸಕರಾದರೂ ಸರಿ, ಬೇರೆ ಯಾರೇ ಆಗಿದ್ದರೂ ಸಹ ಎಸ್ಮಾ ಕಾಯ್ದೆಯಲ್ಲಿ ಯಾವುದೇ ಕರುಣೆ ಇಲ್ಲದೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಶಾಸಕರ ಮನೆ ಮುಂದೆ ಅಥವಾ ಬಿಜೆಪಿ ಕಚೇರಿ ಎದುರು ಕಸವನ್ನು ತೆಗೆದುಕೊಂಡು ಹೋಗಿ ಹಾಕಬೇಕಾಗುತ್ತದೆ.
■ **ಡಿ.ಕೆ. ಶಿವಕುಮಾರ್**, ಉಪ ಮುಖ್ಯಮಂತ್ರಿ

ಬಿಜೆಪಿ ಮೇಲುಗೈ ಸಾಧಿಸುವ ಸಾಧ್ಯತೆ

ಪುಟ 1 ➡ ಈ ಹಿನ್ನೆಲೆ ಬಿಜೆಪಿ ಸಂಸತ್‌ನ ಮೇಲ್ಮನೆಯಲ್ಲಿ ತನ್ನ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳುವ ನಿರೀಕ್ಷೆಯಲ್ಲಿದೆ. ಇನ್ನು ಹಿಮಾಚಲ ಪ್ರದೇಶ, ತಮಿಳುನಾಡು, ತೆಲಂಗಾಣ ಹಾಗೂ ಪಶ್ಚಿಮ ಬಂಗಾಳದಲ್ಲಿ ವಿರೋಧ ಪಕ್ಷಗಳ ಸರ್ಕಾರವಿದೆ. ಮಹಾರಾಷ್ಟ್ರದಲ್ಲಿ ಏಳು ಸ್ಥಾನಗಳು ಖಾಲಿಯಾಗುತ್ತಿದ್ದು, ವಿರೋಧ ಪಕ್ಷಗಳ ಮಹಾ ಅಭಿವೃದ್ಧಿ ಅಘಾಡಿ (ಎಂವಿಎ) ಒಗ್ಗಟ್ಟಿನಿಂದ ಸ್ಪರ್ಧಿಸಿದರೆ ಒಂದು ಸ್ಥಾನ ಗೆಲ್ಲುವ ಸಾಧ್ಯತೆ ಇದೆ ಎಂದು ರಾಜಕೀಯ ವಲಯಗಳಲ್ಲಿ ಚರ್ಚೆ ನಡೆಯುತ್ತಿದೆ.

ನಿವೃತ್ತಿಯಾಗುತ್ತಿರುವ ಪ್ರಮುಖರು: ಈ ಬಾರಿ ನಿವೃತ್ತಿಯಾಗುತ್ತಿರುವ ಪ್ರಮುಖ ಸಂಸದರಲ್ಲಿ ಶರದ್ ಪವಾರ್ (ಎನ್‌ಸಿಪಿ–ಎಸ್‌ಪಿ), ಅಭಿಷೇಕ್ ಮನು ಸಿಂಘ್ವಿ (ಕಾಂಗ್ರೆಸ್), ಸಾಕೇತ್ ಗೋಖಲೆ (ಟಿಎಂಸಿ), ರಾಮದಾಸ್ ಅಠಾವಳೆ (ಆರ್‌ಪಿಐ–ಎ), ಎಂ.ತಂಬಿದುರೈ (ಎಐಎಡಿಎಂಕೆ) ಹಾಗೂ ತಿರುಚ್ಚಿ ಶಿವ (ಡಿಎಂಕೆ) ಸೇರಿದ್ದಾರೆ. ರಾಜ್ಯಸಭೆಯ ಈ ಚುನಾವಣೆಯು ಮುಂದಿನ ರಾಜಕೀಯ ಸಮೀಕರಣಗಳ ಮೇಲೆ ಮಹತ್ವದ ಪರಿಣಾಮ ಬೀರುವ ನಿರೀಕ್ಷೆಯಿದೆ. ಬಿಜೆಪಿ ತನ್ನ ಸಂಘಟನೆ ಮತ್ತು ಮೈತ್ರಿ ಬಲದ ಆಧಾರದ ಮೇಲೆ ಮೇಲ್ಮನೆಯಲ್ಲಿ ಮತ್ತಷ್ಟು ಬಲಿಷ್ಠವಾಗುವತ್ತ ಹೆಜ್ಜೆ ಇಟ್ಟಿದೆ.

ಸವಾಲುಗಳಿಗೆ ಭಾರತ ಪರಿಹಾರ

ಪುಟ 1 ➡ ನಾವು ವಿಶ್ವನಾಯಕರಾಗಬೇಕೋ ನಾವೆಲ್ಲಾ ರಂಗಗಳಲ್ಲೂ ಪ್ರಬಲರಾಗಬೇಕು. ಸತ್ಯಕ್ಕೆ ಶಕ್ತಿಯ ಬೆಂಬಲವಿದ್ದಾಗಲೇ ಜಗತ್ತು ಇದನ್ನು ನಂಬುತ್ತೆ ಎಂದು ಪ್ರತಿಪಾದಿಸಿದರು.

ಸಂಶೋಧಕರಿಗೆ ಕರೆ: ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಂಶೋಧಕರ ಪಾತ್ರ ನಿರ್ಣಾಯಕ. ಭಾರತದ ದಿಕ್ಕು, ಸ್ಥಿತಿಗತಿಗಳ ಬದಲಿಸುವಲ್ಲಿ ಸಂಶೋಧನೆಗಳು ಮಹತ್ವದ ಪಾತ್ರ ವಹಿಸುತ್ತವೆ. ಸತ್ಯನಿಷ್ಠ ಮಾಹಿತಿಗಳನ್ನು ಬೆಳಕಿಗೆ ತರಲೇಬೇಕು. ಅಜ್ಞಾನದಿಂದ ಭಾರತವನ್ನು ಅರ್ಥೈಸಲಾಗದು ಎಂದ ಭಾಗ್ವತ್, ದೇಶಕ್ಕಾಗಿ ನಿಸ್ವಾರ್ಥದಿಂದ ಪ್ರಯತ್ನಶೀಲರಾಗಲು ಸಂಶೋಧಕರಿಗೆ ಮನವಿ ಮಾಡಿದರು.

ನೀವು ಏನೇ ಸಂಶೋಧನೆ ಮಾಡುವುದಿದ್ದರೂ ತಜ್ಞತೆ, ನಿಖರತೆ, ಶರೀರ, ಮನಸ್ಸು, ಹಣ ಎಲ್ಲವನ್ನೂ ಬಳಸಿ ರಾಷ್ಟ್ರಕ್ಕಾಗಿ ನಿಸ್ವಾರ್ಥದಿಂದ ಮಾಡಿ. ಸಂಘ ಪರಿವಾರದ ಬಗ್ಗೆ ತುಂಬು ಋಣಾತ್ಮಕ ಅಪಪ್ರಚಾರ ನಡೆದಿದೆ. ಈ ಅಪಪ್ರಚಾರಕ್ಕೆ ತೆರೆಹಾಕಬಲ್ಲ ನೈಜ ಸತ್ಯವನ್ನು ನೀವು ಬೆಳಕಿಗೆ ತರಬೇಕೆಂದು ಸಂಶೋಧಕರನ್ನು ಕೋರಿದರು.

ಬ್ರಿಟಿಷರ ಪ್ರಮಾದ ಅಳಿಸಿ ಹಾಕೋಣ: ಶಿಕ್ಷಣ, ಆರೋಗ್ಯ ಮೂಲಭೂತ ಅವಶ್ಯಕತೆಗಳು. ಇವು ವ್ಯಾಪಾರವಾಗಕೂಡದು. ಇವೆರಡೂ ಎಲ್ಲರಿಗೂ ಎಟುಕುವಂತಿರಬೇಕು. ಪಾಶ್ಚಾತ್ಯ ರಾಷ್ಟ್ರಗಳು ಭಾರತದ ಶಿಕ್ಷಣ ವ್ಯವಸ್ಥೆಯನ್ನು ವಿರೂಪಗೊಳಿಸಿದರು. ಶಿಕ್ಷಣ ವ್ಯವಸ್ಥೆಯನ್ನು ಪಾಶ್ಚಾತ್ಯರು ಹಾಳುಗೆಡವಿದರು. ನಮ್ಮ ಶಿಕ್ಷಣ ವ್ಯವಸ್ಥೆ ರದ್ದುಗೊಳಿಸಿ ಅವರದೇ ಸ್ವಂತ ವ್ಯವಸ್ಥೆ ಜಾರಿಗೊಳಿಸಿದರು. ಈ ಮೂಲಕ ಕರಿ ಆಂಗ್ಲರನ್ನು ದುಡಿಮೆಗೆ ತಯಾರುಗೊಳಿಸುವುದು ಅವರ ದುರುದ್ದೇಶವಾಗಿತ್ತು. ಬ್ರಿಟಿಷರು ಮಾಡಿಟ್ಟು ಹೋಗಿರುವ ಈ ತಪ್ಪನ್ನು, ಈ ಪ್ರಮಾದವನ್ನು ಶಾಶ್ವತ ಅಳಿಸಿಹಾಕಬೇಕಿದೆ ಎಂದು ಭಾಗ್ವತ್ ಕರೆ ನೀಡಿದರು.


ಸಹನೆ, ಸಂಯಮಗಳ ಬದುಕು ನಮ್ಮದಾಗಿರಲಿ: ಇಂದು ಜಾಗತೀಕರಣವೆಂದರೆ ಮಾರುಕಟ್ಟೆ ಪೈಪೋಟಿ ಎಂದು ಅರ್ಥೈಸಲಾಗಿದೆ. ಇದು ತೀರಾ ಅಪಾಯಕಾರಿ. ನಾವು ವಸುಧೈವ ಕುಟುಂಬಕಮ್ ಚಿಂತನೆಯವರು. ಇಡೀ ಜಗತ್ತೇ ನಮ್ಮ ಕುಟುಂಬ. ಪ್ರತಿಯೊಬ್ಬರೂ ನೆಮ್ಮದಿಯಿಂದಿರಬೇಕು.

ಯಾರಿಗಾದರೂ ನೆಮ್ಮದಿ ಇಲ್ಲವೆಂದಾದರೆ ಇತರರೂ ನೆಮ್ಮದಿಯಿಂದ ಇರಲಾರರು. ಹಾಗಾಗಿ ನಮ್ಮ ಬದುಕು ವ್ಯಾಪಾರ ಮನೋಭಾವದ್ದಾಗಕೂಡದು. ಬದಲಾಗಿ ಸಹನೆ ಸಂಯಮಗಳ ಬದುಕಾಗಬೇಕು. ತಾಳ್ಮೆ ಮತ್ತು ತ್ಯಾಗಗಳ ಬದುಕು ನಮ್ಮ ಸಾಂಸ್ಕೃತಿಕ ಅಸ್ಮಿತೆ ಮತ್ತು ಆತ್ಮಜ್ಞಾನವಾಗಿದೆ ಎಂದರು.

ಗಿನ್ನಿಸ್ ದಾಖಲೆ ಬರೆದ ಭಾರತ

ಪುಟ 1 ➡ ಇನ್ನಾವ ವೇದಿಕೆಯಲ್ಲ, ದಿಲ್ಲಿಯ ಭಾರತ್ ಮಂಟಪದಲ್ಲಿ ನಡೆಯುತ್ತಿರುವ ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆ 2026ರಲ್ಲಿ ಘಟಿಸಿರುವ ವಿಷಯವಿದು ಎಂದು ಕೇಂದ್ರ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಬುಧವಾರ ಈ ಮಾಹಿತಿ ನೀಡಿದ್ದಾರೆ. ಭಾರತ ಎಐ ಮಿಷನ್, ಇಂಟೆಲ್ ಇಂಡಿಯಾ ಸಹಭಾಗಿತ್ವದಲ್ಲಿ ರಾಷ್ಟ್ರವ್ಯಾಪಿ ಎಐ ಹೊಣೆಗಾರಿಕೆ ಪ್ರತಿಜ್ಞಾ ಅಭಿಯಾನಕ್ಕೆ ಫೆ.16ರಂದು ಚಾಲನೆ ನೀಡಿತ್ತು.

ಎಸ್ಟೋನಿಯಾನ-ಕಝಕಿಸ್ತಾನ ನಾಯಕರ ಜತೆ ಪ್ರಧಾನಿ ಚರ್ಚೆ



ಪುಟ 1 ➡ ಅಧ್ಯಕ್ಷ ಕರಿಸ್ ಜಾಗತಿಕ ವ್ಯವಸ್ಥೆಯ ಬದಲಾವಣೆಗಳು ಮತ್ತು ಪ್ರಜಾಪ್ರಭುತ್ವದ ಮೇಲೆ ಹೊಸ ತಂತ್ರಜ್ಞಾನಗಳ ಪರಿಣಾಮಗಳ ಬಗ್ಗೆ ಚರ್ಚೆ ನಡೆದಿದ್ದು, ರಷ್ಯಾದ ಇಂಧನ ಆಮದು ಕಡಿತಗೊಳಿಸಿರುವ ಭಾರತದ ಕ್ರಮವನ್ನು ಸ್ವಾಗತಿಸಿದರು.

ಕಝಕಿಸ್ತಾನ ಪ್ರಧಾನಿ ಜತೆ ಮಾತುಕತೆ: ಇನ್ನೊಂದೆಡೆ, ಮೋದಿ ಅವರು ಕಝಕಿಸ್ತಾನದ ಪ್ರಧಾನಿ ಓಲ್ಜಾಸ್ ಬೆಕ್ಟೆನೋವ್ ಅವರನ್ನು ಭೇಟಿಯಾಗಿ ಭಾರತ-ಕಝಕಿಸ್ತಾನ ಪಾಲುದಾರಿಕೆಯನ್ನು ಮತ್ತಷ್ಟು ವಿಸ್ತರಿಸುವ ಬಗ್ಗೆ ಚರ್ಚಿಸಿದರು. ವ್ಯಾಪಾರ, ಇಂಧನ, ಮಹತ್ವದ ಖನಿಜಗಳು, ಅಪರೂಪದ ಭೂಮಿಧಾತುಗಳು, ರಕ್ಷಣಾ, ಸಂಪರ್ಕ ಹಾಗೂ ಬಾಹ್ಯಾಕಾಶ ಕ್ಷೇತ್ರಗಳಲ್ಲಿ ಅಪಾರ ಸಹಕಾರ ಸಾಧ್ಯತೆಗಳಿವೆ ಎಂದು ಮೋದಿ ಹೇಳಿದರು.

ಹಿಂದು ಸಮಾಜದ ಒಗ್ಗಟ್ಟು ಸಂಘದ ಗುರಿ

ಪುಟ 1 ➡ ಆರೆಸ್ಸೆಸ್ ಯಾರ ವಿರೋಧಿಯೂ ಅಲ್ಲ, ಆರೆಸ್ಸೆಸ್‌ಗೆ ಜನಪ್ರಿಯತೆ, ಅಧಿಕಾರ, ಪ್ರಭಾವ ಯಾವುದೂ ಬೇಡ, ಇವ್ಯಾವುದರ ಹಂಗಿಲ್ಲ ಎಂದು ಭಾಗ್ವತ್ ಸ್ಪಷ್ಟಪಡಿಸಿದರು.

ಹಿಂದು ಸಮಾಜದ ಏಕತೆ ಅವಶ್ಯ: ಭಾಗ್ವತ್

• **ಲಕ್ನೋ:** ಹಿಂದು ಸಮಾಜದ ಏಕತೆ, ಸಬಲೀಕರಣ ತೀರಾ ಅಗತ್ಯವೆಂದು ಪ್ರತಿಪಾದಿಸಿರುವ ಆರೆಸ್ಸೆಸ್ ಸರಸಂಘಚಾಲಕ್ ಮೋಹನ್ ಭಾಗ್ವತ್, ಹಿಂದು ಸಮಾಜಕ್ಕೆ ಯಾವುದೇ ಬೆದರಿಕೆಗಳಿಲ್ಲದಿದ್ದರೂ ಸದಾ ಜಾಗೃತಾವಸ್ಥೆಯಲ್ಲಿರೋದು ತೀರಾ ಮುಖ್ಯ ಎಂದು ಎಚ್ಚರಿಸಿದ್ದಾರೆ. ಪ್ರತಿ ಹಿಂದು ಕುಟುಂಬಗಳು ಕನಿಷ್ಠ ಮೂವರು ಮಕ್ಕಳನ್ನು ಹೊಂದುವುದು ಕೂಡ ಅವಶ್ಯವೆಂದು ಭಾಗ್ವತ್ ಸಲಹೆಯಿತ್ತಿದ್ದಾರೆ. ಮೂರಕ್ಕಿಂತಲೂ ಕಡಿಮೆ ಸರಾಸರಿ ಸಂತಾನೋತ್ಪತ್ತಿ ದರ ಹೊಂದಿರುವ ಯಾವುದೇ ಸಮಾಜಗಳು ಭವಿಷ್ಯದಲ್ಲಿ ಮಾಯವಾಗುತ್ತವೆ ಎಂದಿದ್ದಾರೆ.

ತಲಕಾಡಲ್ಲಿ ಕಾಡಾನೆ ದಾಳಿಗೆ ರೈತ ಸಾವು

ಪುಟ 1 ➡ ಈ ಒಂಟಿ ಸಲಗ ಶಿವನಸಮುದ್ರ, ಸತ್ಯ ಮಂಗಲ ಭಾಗದ ಅರಣ್ಯ ಪ್ರದೇಶದಿಂದ ತಪ್ಪಿಸಿಕೊಂಡು ಬಂದಿರುವ ಸಾಧ್ಯತೆ ಇದೆ ಎಂದು ಅರಣ್ಯಾಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ. ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿನೀಡಿದರೂ ಅವರು ಸಕಾಲಕ್ಕೆ ಬಾರದಿದ್ದರಿಂದಲೇ ಈ ದುರ್ಘಟನೆ ನಡೆದಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾರ್ಯಾಚರಣೆ: ಗ್ರಾಮಸ್ಥರ ಒತ್ತಾಯದ ಬಳಿಕ ಅರಣ್ಯ ಇಲಾಖೆ ಸಿಬ್ಬಂದಿ ಡ್ರೋನ್ ಕ್ಯಾಮರಾ ಬಳಸಿ ಕಾಡಾನೆಯನ್ನು ಪತ್ತೆ ಹಚ್ಚಿ, ಅರಣ್ಯ ಪ್ರದೇಶಕ್ಕೆ ವಾಪಸ್ ಕಳುಹಿಸಲು ಕಾರ್ಯಾಚರಣೆ ಆರಂಭಿಸಿದ್ದಾರೆ.

20 ಲಕ್ಷ ರೂ. ಪರಿಹಾರ: ಕಾಡಾನೆ ದಾಳಿಯಿಂದ ಮೃತಪಟ್ಟ ರೈತನ ಕುಟುಂಬಕ್ಕೆ ಅರಣ್ಯ ಇಲಾಖೆ ವತಿಯಿಂದ 20 ಲಕ್ಷ ರೂ. ಪರಿಹಾರ ನೀಡಲಾಗುವುದು. ಮೊದಲ ಹಂತದಲ್ಲಿ ಈಗಾಗಲೇ 5 ಲಕ್ಷ ರೂ. ಚೆಕ್ ವಿತರಿಸಲಾಗಿದ್ದು, ಉಳಿದ ಹಣವನ್ನು ಮರಣೋತ್ತರ ಪರೀಕ್ಷೆಯ ನಂತರ ನೀಡಲಾಗುವುದು ಎಂದು ಡಿಸಿಎಫ್ ಪರಮೇಶ್ ತಿಳಿಸಿದ್ದಾರೆ.

ಶಾಸಕರ ಪ್ರವಾಸ ಅನುಮಾನ

• **ಹುಬ್ಬಳ್ಳಿ:** ಶಾಸಕರು, ಸಚಿವರು ಸ್ವಂತ ಖರ್ಚಿನಲ್ಲೇ ವಿದೇಶ ಪ್ರವಾಸಕ್ಕೆ ಹೋಗಿರಬಹುದು. ಆದರೆ, ಏಕಾಏಕಿ ಇಷ್ಟೊಂದು ಜನ ವಿದೇಶ ಪ್ರವಾಸಕ್ಕೆ ಹೋಗಿರುವುದು ಆಶ್ಚರ್ಯ. ಇದರಿಂದ ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿ ಇಲ್ಲ ಎಂಬುದು ಸ್ಪಷ್ಟ ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು. ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ವಂತ ಖರ್ಚಿನಲ್ಲೇ ವಿದೇಶ ಪ್ರವಾಸಕ್ಕೆ ತೆರಳಿದ್ದರೂ ಪ್ರವಾಸದ ಉದ್ದೇಶ ಮಾತ್ರ ಅನುಮಾನ ಮೂಡಿಸುವಂತಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ನಡುವೆ ಸಿಎಂ ಕುರ್ಚಿಗಾಗಿ ಗುದ್ದಾಟ ನಡೆದಿದೆ ಎಂದರು.

ಬಂಡೀಪುರದಲ್ಲಿ ಸಫಾರಿ ಶುರು

ಪುಟ 1 ➡ ಹಿಂದಿನ ಮುಖ್ಯ ವನ್ಯಜೀವಿ ಪರಿಪಾಲಕರು ಕಳೆದ ಡಿ.28ರಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ, ಸರಗೂರು ಗಡಿ ಪ್ರದೇಶಗಳಲ್ಲಿ ಸ್ಥಾಪಿಸಿರುವ ಮಾನವ-ವನ್ಯಜೀವಿ ನಿರ್ವಹಣಾ ಶಿಬಿರಗಳಿಗೂ ಭೇಟಿ ನೀಡಿ ಪರಿಶೀಲಿಸಿದ್ದು, ಸಫಾರಿ ಸ್ಥಗಿತಗೊಳಿಸಿದ ಬಳಿಕ ಹೆಚ್ಚುವರಿ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಳೆದ 2 ತಿಂಗಳಲ್ಲಿ ಯಾವುದೇ ಪ್ರಮುಖ ಅಹಿತಕರ ಘಟನೆಗಳು ನಡೆಯದಿರುವ ಹಿನ್ನೆಲೆಯಲ್ಲಿ ಹಂತಹಂತವಾಗಿ ಸಫಾರಿ ಪುನರಾರಂಭಿಸಬಹುದು ಎಂದು ಶಿಫಾರಸು ಮಾಡಿದ್ದರು ಎಂದು ಸಚಿವರು ಮಾಹಿತಿ ನೀಡಿದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಒಟ್ಟು ವಿಸ್ತೀರ್ಣ 1036 ಚದರ ಕಿ.ಮೀ. ಆಗಿದ್ದು, ಇದರಲ್ಲಿ ಪ್ರವಾಸೋದ್ಯಮ ವಲಯ ಕ್ಷೇತ್ರ, ಶೇ.8 ಅಂದರೆ ಕೇವಲ 80 ಚದರ ಕಿ.ಮೀ. ಆಗಿದೆ. ಅದೇ ರೀತಿ ನಾಗರಹೊಳೆಯ ಒಟ್ಟು ವಿಸ್ತೀರ್ಣ 844 ಚದರ ಕಿ.ಮೀ. ಆಗಿದ್ದು, ಪರಿಸರ ಪ್ರವಾಸೋದ್ಯಮ ವಲಯ ಕೇವಲ 63 ಚದರ ಕಿ.ಮೀ. ಅಂದರೆ ಶೇ.7.5 ಮಾತ್ರ. ಹೀಗಾಗಿ ಹುಲಿಗಳು ಕಾಡಿನಿಂದ ನಾಡಿಗೆ ಬರುತ್ತಿರುವುದಕ್ಕೆ ಸಫಾರಿಯೇ ಕಾರಣ ಎಂದು ಹೇಳಲು ಯಾವುದೇ ವೈಜ್ಞಾನಿಕ ಆಧಾರ ಇಲ್ಲ ಎಂದು ಹಿರಿಯ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ ಎಂದರು.

ಸ್ಥಳೀಯ ಅಭಿವೃದ್ಧಿಗೆ ಸಫಾರಿ ಆದಾಯದ 3ನೇ 1 ಭಾಗ

ಪ್ರಸ್ತುತ ಪರಿಸರ ಪ್ರವಾಸೋದ್ಯಮ ಅಂದರೆ ಸಫಾರಿಯಿಂದ ಬರುವ ಒಟ್ಟು ಆದಾಯದ ಮೂರನೇ ಒಂದು ಭಾಗದಷ್ಟು ಹಣವನ್ನು ಅರಣ್ಯದಂಚಿನ ಗ್ರಾಮಗಳ ಸ್ಥಳೀಯ ಸಮುದಾಯದವರಿಗೆ ಕೌಶಲ್ಯ ಅಭಿವೃದ್ಧಿಗಾಗಿ, ಜಾನುವಾರುಗಳಿಗೆ ಮೇವು ಬೆಳೆಸಲು ಮತ್ತು ಪರಿಸರ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸುವ ಷರತ್ತಿನೊಂದಿಗೆ ಆರಂಭಿಸಲು ಮತ್ತು ವನ್ಯಜೀವಿ ಮಾನವ ಸಂಘರ್ಷ ತಡೆಯಲು ಸೂಕ್ತ ಸಿಬ್ಬಂದಿಯನ್ನು ಸೂಕ್ಷ್ಮ ಪ್ರದೇಶಗಳಲ್ಲಿ ನಿಯೋಜಿಸುವ ಷರತ್ತಿನೊಂದಿಗೆ ಸಫಾರಿ ಆರಂಭಿಸಲು ಸಮ್ಮತಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಶೇ.50ರಷ್ಟು ಸಫಾರಿ ವಾಹನ ಬಳಕೆ

ಬಂಡೀಪುರ, ಬಿಆರ್‌ಟಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಮತ್ತು ಮಲೆ ಮಹದೇಶ್ವರ ವನ್ಯಜೀವಿ ಧಾಮದಲ್ಲಿ ಮುಂಚೂಣಿ ಸಿಬ್ಬಂದಿ ಕೊರತೆ ಮತ್ತು ವಾಹನಗಳ ಅಗತ್ಯದ ಬಗ್ಗೆ ಚರ್ಚಿಸಲಾಗಿದ್ದು, ನವೆಂಬರ್ 7ಕ್ಕೆ ಮುನ್ನ ಸಫಾರಿಯಲ್ಲಿ ಬಳಕೆ ಆಗುತ್ತಿದ್ದ ವಾಹನಗಳ ಪೈಕಿ ಪ್ರಥಮ ಹಂತದಲ್ಲಿ ಶೇ.50ರಷ್ಟು ವಾಹನಗಳನ್ನು ಮಾತ್ರವೇ ಬಳಕೆ ಮಾಡಲು ನಿರ್ಧರಿಸಲಾಗಿದೆ. ಉಳಿದ ಶೇ.50ರಷ್ಟು ವಾಹನ ಮತ್ತು ಸಿಬ್ಬಂದಿಯನ್ನು ಅರಣ್ಯದಂಚಿನ ಗ್ರಾಮಗಳ ಬಳಿ ಗಸ್ತು ಹೆಚ್ಚಿಸಲು ಬಳಸುವ ಮೂಲಕ ವನ್ಯಮೃಗಗಳು ನಾಡಿಗೆ ಬಾರದಂತೆ ತಡೆಯಲು ಸೂಚಿಸಲಾಗಿದೆ.

ಇಂದು ಸಾರಿಗೆ ಮುಷ್ಕರ, ಇರಲಿದೆ ಬಸ್ ಸಂಚಾರ

ಪುಟ 1 ➡ 38 ತಿಂಗಳ ಹಿಂಬಾಕಿ ವೇತನ ಪಾವತಿ ಬೇಡಿಕೆ ಸಂಬಂಧ 2020 ಜ.1ರಿಂದ 2023 ಫೆ.28 ಅವಧಿಗೆ 14 ತಿಂಗಳವರೆಗಿನ ಹಿಂಬಾಕಿವೇತನ ನೀಡಲು ಒಪ್ಪಿಗೆ ನೀಡಿ, ಇದಕ್ಕೆ ತಗಲುವ ವೆಚ್ಚ 718.93 ಕೋಟಿ ರೂ. ವಿಶೇಷ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಲಿದೆ. 38 ತಿಂಗಳ ಹಿಂಬಾಕಿ ಪೈಕಿ ಉಳಿದ 24 ತಿಂಗಳಲ್ಲಿ 2020 ಜ.1ರಿಂದ 2020 ಡಿ.30ರವರೆಗೆ 12 ತಿಂಗಳ ವೇತನ ಹಿಂಬಾಕಿ ಮೊತ್ತ 520.54 ಕೋಟಿ ರೂ. ವಿಶೇಷ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಲಿದೆ.

ಸಂಧಾನ ಪ್ರಕ್ರಿಯೆ: ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳ ನೌಕರರು ಮತ್ತು ಅಧಿಕಾರಿಗಳಿಗೆ 01.04.2025ರಿಂದ ಜಾರಿಗೆ ಬರುವಂತೆ ಶೇಕಡಾವಾರು ಎಷ್ಟು ಪ್ರಮಾಣದಲ್ಲಿ ವೇತನ ಹೆಚ್ಚಳ ಪರಿಷ್ಕರಿಸಬೇಕು ಎನ್ನುವ ಸಂಬಂಧ ಕಾರ್ಮಿಕ ಸಂಘಟನೆಗಳೊಡನೆ ಮಾತುಕತೆ ಮತ್ತು ಸಂಧಾನ ಪ್ರಕ್ರಿಯೆ ಪ್ರಾರಂಭಿಸಲು ಆದೇಶಿಸಲಾಗಿದೆ. ನಮ್ಮ ಬೇಡಿಕೆಯನ್ನು ಸಂಪೂರ್ಣವಾಗಿ ಈಡೇರಿಸಲಿಲ್ಲ, ಹಾಗಾಗಿ ಸಮಿತಿಯಿಂದ ಹಮ್ಮಿಕೊಂಡಿರುವ ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗುತ್ತದೆ. ಈ ವೇಳೆ ಬಸ್‌ಗಳಲ್ಲಿ ವ್ಯತ್ಯಯವಾಗುವುದಿಲ್ಲ ಎಂದು ಸಮಿತಿ ಪದಾಧಿಕಾರಿಗಳು ತಿಳಿಸಿದ್ದಾರೆ.

ಶಕ್ತಿ ಯೋಜನೆಯಿಂದ ಎಷ್ಟು ಹಣ ಬಾಕಿ: ಹೈಕೋರ್ಟ್ ಪ್ರಶ್ನೆ

ಪುಟ 1 ➡ ಉಚಿತ ಟಿಕೆಟ್ ನೀಡುತ್ತಿದ್ದಾರಲ್ಲಾ ಅದು ಹೇಗೆ ಕೆಲಸ ಮಾಡುತ್ತಿದೆ? ಇದುವರೆಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ? ಈ ಹಣ ಪಡೆದು ಕೋವಿಡ್ ಸಂದರ್ಭದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ಪಾವತಿಸಬಹುದಲ್ಲ? ಪರಿಹಾರ ಪಾವತಿಸಲು ಸಂಪನ್ಮೂಲ ಇಲ್ಲ ಎನ್ನುತ್ತಿದ್ದೀರಿ. ರಾಜ್ಯ ಸರ್ಕಾರವು ನಿಗಮಗಳಿಗೆ ಎಷ್ಟು ಉಚಿತ ಟಿಕೆಟ್ ಹಣ ಕೊಡಬೇಕು? ಶಕ್ತಿ ಯೋಜನೆಯಲ್ಲಿ ಸರ್ಕಾರ ಎಷ್ಟು ಬಾಕಿ ಉಳಿಸಿಕೊಂಡಿದೆ? ಅದು ನಿಮ್ಮ ಸಂಪನ್ಮೂಲವೇ ಅಲ್ಲವೇ ಎಂದು ಪೀಠ ಪ್ರಶ್ನಿಸಿತು. ಅಲ್ಲದೇ ವಾದ-ಪ್ರತಿವಾದ ಆಲಿಸಿದ ಪೀಠವು ವಿಚಾರಣೆಯನ್ನು ಮಾ.23ಕ್ಕೆ ಮುಂದೂಡಿದೆ.

ಬಸ್ ಸೇವೆ ಸ್ಥಗಿತ ಇಲ್ಲ: ಸಚಿವ ರಾಮಲಿಂಗಾರೆಡ್ಡಿ



ಪುಟ 1 ➡ ಮುಷ್ಕರದ ಸಂದರ್ಭದಲ್ಲಿ ಪರ್ಯಾಯ ಸಾರಿಗೆ ವ್ಯವಸ್ಥೆ ಕಲ್ಪಿಸುವ ಅಗತ್ಯ ಕಂಡುಬರುವುದಿಲ್ಲ. ಸಾರಿಗೆ ಸಂಸ್ಥೆಗಳ ಸಂಘಟನೆಗಳ ಮುಖಂಡರು ಬಸ್ ಸೇವೆ ಸ್ಥಗಿತಗೊಳಿಸುತ್ತೇವೆಂದು ಹೇಳಿಲ್ಲ. ಸರ್ಕಾರದ ಗಮನ ಸೆಳೆಯಲು ಬೆಂಗಳೂರು ಚಲೋ ನಡೆಸುತ್ತಿದ್ದಾರೆ ಎಂದರು.

ನಾಳೆಯಿಂದ ರಾಷ್ಟ್ರೀಯ ಹಿಂದು ಆರ್ಥಿಕ ಮಹಾಸಂಗಮ

• **ಹುಬ್ಬಳ್ಳಿ:** ಇಲ್ಲಿಯ ಗೋಕುಲ ರಸ್ತೆಯ ಹೋಟೆಲ್ ಡೆನಿಸನ್ಸ್‌ನ ಮಥುರಾ ಸಭಾಂಗಣದಲ್ಲಿ ಹಿಂದು ಆರ್ಥಿಕ ಒಕ್ಕೂಟ ಹು-ಧಾ ಚಾಪ್ಟರ್‌ನಿಂದ ರಾಷ್ಟ್ರೀಯ ಮಟ್ಟದ ಹಿಂದೂ ಆರ್ಥಿಕ ಮಹಾಸಂಗಮವನ್ನು ಫೆ.20 ಮತ್ತು 21ರಂದು ಏರ್ಪಡಿಸಲಾಗಿದೆ ಎಂದು ಒಕ್ಕೂಟದ ಸಂಘಟನಾ ಕಾರ್ಯದರ್ಶಿ ಟಿ.ಆರ್.ಶಿವಪ್ರಸಾದ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕೂಟದ ಮುಖ್ಯಸ್ಥ ಶ್ರೀ ಸ್ವಾಮಿ ವಿಗ್ಯಾನಂದಜೀ, ಧರ್ಮಸ್ಥಳದ ಧರ್ಮಾಧಿಕಾರಿ, ಡಾ.ಡಿ.ವೀರೇಂದ್ರ ಹೆಗ್ಗಡೆ ಸಾನ್ನಿಧ್ಯ ವಹಿಸುವರು. ಶಾಸಕರಾದ ಪ್ರಸಾದ ಅಬ್ಬಯ್ಯ, ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ, ಶ್ರೀನಿವಾಸ ಮಾನೆ, ತಜ್ಞರಾದ ಡಾ.ಆರ್.ವೈದ್ಯನಾಥನ್, ಹನುಮಂತರಾವ್ ಗಾಯಕ್ವಾಡ್ ಅತಿಥಿಗಳಾಗಿ ಆಗಮಿಸುವರು. ಫೆ.20ರಂದು ಬೆಳಗ್ಗೆ 9.30ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ ಎಂದರು. ಫೆ.21ರಂದು ನಡೆಯಲಿರುವ ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಬಸವರಾಜ ಬೊಮ್ಮಾಯಿ ಅವರು ಆಗಮಿಸುವರು. ರಾಷ್ಟ್ರದ ವಿವಿಧ ಭಾಗಗಳಿಂದ ತಜ್ಞರು, ಆರ್ಥಿಕ ಚಿಂತಕರು ಈ ಮಹಾಸಂಗಮದಲ್ಲಿ ಭಾಗವಹಿಸುವರು. ಹಿಂದೂಗಳ ಆರ್ಥಿಕ ಸದೃಢತೆಗೆ ಈ ಮಹಾಸಂಗಮ ವೇದಿಕೆಯಾಗಲಿದೆ ಎಂದರು.

ಸಾವಿರ ಚಾಪ್ಟರ್ ಆರಂಭಿಸುವ ಗುರಿ: ಭಾರತದಾದ್ಯಂತ 100ಕ್ಕೂ ಹೆಚ್ಚು ಚಾಪ್ಟರ್‌ಗಳು ಸಕ್ರಿಯವಾಗಿವೆ. ಬೆಂಗಳೂರಿನಲ್ಲಿಯೇ 37ಕ್ಕೂ ಹೆಚ್ಚು ಚಾಪ್ಟರ್‌ಗಳಿವೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಐದು ಸಹಕಾರಿ ಸಂಸ್ಥೆಗಳಿವೆ. ಫೆ.20ರಂದು ಹುಬ್ಬಳ್ಳಿಯಲ್ಲಿ ಸುವರ್ಣಶಕ್ತಿ ಸೌಹಾರ್ದ ಸಹಕಾರಿಯನ್ನು ಉದ್ಘಾಟಿಸಲಾಗುವುದು. 2027ರ ಡಿಸೆಂಬರ್‌ನೊಳಗೆ ಜಾಗತಿಕ ಸಂಪರ್ಕ ಯೋಜನೆಗಳೊಂದಿಗೆ ಸಾವಿರ ಚಾಪ್ಟರ್ ಆರಂಭಿಸುವ ಗುರಿ ಇದೆ ಎಂದು ಹು-ಧಾ ಚಾಪ್ಟರ್ ಅಧ್ಯಕ್ಷ ವಿಜೇಶ ಸೈಗಲ್ ತಿಳಿಸಿದರು. ಹು-ಧಾ ಚಾಪ್ಟರ್ ಸಂಚಾಲಕ ಅರ್ಜನ ಮಹಾಜನ್, ಕಾರ್ಯದರ್ಶಿ ಗಿರೀಶ ಮಾನೆ, ಉಪಾಧ್ಯಕ್ಷ ಗೌತಮ ಬಾಫಣಾ, ಖಜಾಂಚಿ ಮುಕೇಶ ಪಾಂಚಾಲ ಸುದ್ದಿಗೋಷ್ಠಿಯಲ್ಲಿದ್ದರು.

ಚೆಕ್ ವಿತರಣೆ



ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ ವತಿಯಿಂದ 30 ಕೋಟಿ ರೂ. ಮೊತ್ತದ ಡಿವಿಡೆಂಡ್ ಅನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಸಲ್ಲಿಸಲಾಯಿತು. ಸಚಿವರಾದ ಕೆ. ವೆಂಕಟೇಶ್, ಚಲುವರಾಯಸ್ವಾಮಿ, ಕೃಷ್ಣ ಬೈರೇಗೌಡ, ನಿಗಮದ ಅಧ್ಯಕ್ಷರು ಸೇರಿ ಹಲವರಿದ್ದರು.

ಆರು ಮುಸ್ಲಿಂ ಯುವಕರ ಬಂಧನ

• **ಚಿಕ್ಕಮಗಳೂರು:** ನಗರದ ವಿಜಯಪುರ ಬಡಾವಣೆಯಲ್ಲಿ ದಲಿತ ಮಹಿಳೆ ಮನೆ ಮೇಲೆ ಕಲ್ಲು ತೂರಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಸವನಹಳ್ಳಿ ಪೊಲೀಸರು 6 ಮಂದಿ ಮುಸ್ಲಿಂ ಯುವಕರನ್ನು ಬಂಧಿಸಿದ್ದಾರೆ. ಈ ಪೈಕಿ ನಾಲ್ವರು ಅಪ್ರಾಪ್ತರಾಗಿದ್ದಾರೆ.

ಎಲ್ಲಾ ಆರು ಮಂದಿಯನ್ನು ನ್ಯಾಯಾಧೀಶರೆದುರು ಹಾಜರುಪಡಿಸಲಾಗಿದೆ. ಈ ಪೈಕಿ ನಾಲ್ವರು ಅಪ್ರಾಪ್ತರನ್ನು ಹಾಸನದ ಬಾಲ ಮಂದಿರಕ್ಕೆ ಕರೆದೊಯ್ಯಲಾಗಿದೆ. ಉಳಿದಿಬ್ಬರು ನಗರದ ಮಲ್ಲೇಗೌಡ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದು ಇದರಲ್ಲಿ ಒಬ್ಬ ವಯಸ್ಕನಾಗಿದ್ದು, ಮತ್ತೊಬ್ಬ ಅಪ್ರಾಪ್ತನಾಗಿದ್ದಾನೆ. ಈ ನಡುವೆ ಕಲ್ಲು ತೂರಾಟ ಪ್ರಕರಣದ ಪ್ರಮುಖ ಆರೋಪಿ ಯಾಸೀನ್ ಎಂಬಾತ ತಲೆ ಮರೆಸಿಕೊಂಡಿದ್ದು, ಆತನ ಬಂಧನಕ್ಕೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಕಠಿಣ ಕ್ರಮಕ್ಕೆ ಆಗ್ರಹ

ನಗರದಲ್ಲಿ ಪದೇ ಪದೇ ನಡೆಯುತ್ತಿರುವ ಕಿಡಿಗೇಡಿ ಕೃತ್ಯಗಳಿಂದಾಗಿ ಸಾರ್ವಜನಿಕರ ನೆಮ್ಮದಿ ಹಾಳಾಗುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರು ಒತ್ತಡಗಳಿಗೆ ಮಣಿಯದೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎನ್ನುವ ಒತ್ತಾಯಗಳು ಕೇಳಿಬರುತ್ತಿವೆ.

4 ಎಫ್‌ಐಆರ್ ದಾಖಲು: ಕಲ್ಲುತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಒಟ್ಟು 4 ಎಫ್‌ಐಆರ್ ದಾಖಲಿಸಿದ್ದಾರೆ. ಈ ಪೈಕಿ ಎರಡು ಸ್ವಯಂ ಪ್ರೇರಿತ ಎಫ್‌ಐಆರ್‌ಗಳಾಗಿದ್ದು, ಇನ್ನೆರಡು ಕಲ್ಲು ತೂರಿದವರ ವಿರುದ್ಧ ಮಹಿಳೆ ಸುಧಾ ನೀಡಿರುವ ದೂರು, ಕಲ್ಲು ತೂರಿದ ಆರೋಪದಲ್ಲಿ ಆಸ್ಪತ್ರೆಗೆ ದಾಖಲಾಗಿರುವ ಅಕ್ಷದ್ ನೀಡಿರುವ ದೂರಿನ ಆಧಾರದಲ್ಲಿ ದಾಖಲಾದ ಎಫ್‌ಐಆರ್‌ಗಳಾಗಿವೆ.

18 ಮಂದಿ ವಿರುದ್ಧ ಪ್ರಕರಣ: ಪೊಲೀಸರು ದಾಖಲಿಸಿರುವ ಎರಡು ಸ್ವಯಂ ಪ್ರೇರಿತ ಎಫ್‌ಐಆರ್‌ನಲ್ಲಿ ಪೊಲೀಸ್ ಠಾಣೆ ಎದುರು ಪರ-ವಿರೋಧ ಪ್ರತಿಭಟನೆ ನಡೆಸಿದ 11 ಮಂದಿ ಹಿಂದೂ ಸಂಘಟನೆ ಮುಖಂಡರು ಮತ್ತು 8 ಮಂದಿ ಮುಸ್ಲಿಮರಿದ್ದಾರೆ. ಜಿಲ್ಲಾ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂತೋಷ್ ಕೋಟ್ಯಾನ್, ಬಜರಂಗದಳ ಮುಖಂಡ ಶ್ಯಾಂ ವಿ.ಗೌಡ ಸೇರಿದಂತೆ ಕೋಟೆ ಶ್ಯಾಂ, ಅಮಿತ್, ಕಿರಣ್, ಪ್ರದೀಪ್, ಅಕ್ಷತ್, ಶಶಿ ಆಲ್ದೂರು, ಆಟೋ ಶಿವಣ್ಣ, ಬೆಣ್ಣೆ ಕೃಷ್ಣ, ಪುನೀತ್ ಆಂಬುಲೆನ್ಸ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕಿರುಸುದ್ದಿ

ಚಿಕಿತ್ಸಾ ವಿಧಾನಗಳಿಗೆ ಮಂಜೂರಾತಿ

• **ಬೆಂಗಳೂರು:** ಸರ್ಕಾರಿ ವಲಯದಲ್ಲಿ ಒಂದು ವರ್ಷದವರೆಗೆ ಪ್ರಾಯೋಗಿಕ ಆಧಾರದ ಮೇಲೆ ದ್ವಿತೀಯ ಹಂತದ ಸರಳ (2ಎ) ಚಿಕಿತ್ಸಾ ವಿಧಾನಗಳಿಗೆ ಮಂಜೂರಾತಿ ಹಾಗೂ ಇತರ ಚಿಕಿತ್ಸಾ ವಿಧಾನಗಳಿಗೆ ರೆಫರಲ್ ವಿನಾಯಿತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ. ಸೆಂಟ್ ಜಾನ್ ಮೆಡಿಕಲ್ ಕಾಲೇಜು, ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜು, ಕಿದ್ವಾಯಿಸ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಮತ್ತು ಬಿ.ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜು ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ (ಎಬಿ-ಎಆರ್‌ಕೆ) ಯೋಜನೆ ಅಡಿಯಲ್ಲಿ ಚಿಕಿತ್ಸಾ ವಿಧಾನಗಳಿಗೆ ರೆಫರಲ್ ವಿನಾಯಿತಿ ನೀಡಲು ತೀರ್ಮಾನಿಸಿದ್ದು, ಈ ಚಿಕಿತ್ಸೆಗಳಿಗೆ ತಗಲುವ ವೆಚ್ಚವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಹಂಚಿಕೆಯಾದ ಆಯವ್ಯಯ ಅನುದಾನದ ಅಡಿಯಲ್ಲಿ ಭರಿಸಬೇಕು ಎಂದು ಸೂಚಿಸಿದೆ.

ಅಪಘಾತ: ಒಂದೇ ಕುಟುಂಬದ ಮೂವರ ಸಾವು

• **ಕುಡಚಿ:** ರಾಯಬಾಗ ತಾಲೂಕಿನ ಅಲಖನೂರ ಕರಿಸಿದ್ದೇಶ್ವರ ಅಗಸಿ ಬಾಗಿಲ ಹತ್ತಿರ ಬೆಳಗ್ಗೆ 9.30ರ ಸುಮಾರಿಗೆ ಬೈಕ್ ಹಾಗೂ ಟ್ರಕ್ ಮಧ್ಯೆ ಮುಖಾಮುಖಿ ಅಪಘಾತ ಸಂಭವಿಸಿದ ಪರಿಣಾಮ ಮೂರು ಮಂದಿ ಮೃತಪಟ್ಟ ಘಟನೆ ವರದಿಯಾಗಿದೆ. ಗಿರೇಪ್ಪಾ ಕುದ್ರಾಳಿ (38), ಪತ್ನಿ ಮಂಜುಳಾ (28) ಹಾಗೂ ಮಗಳು ಆರಾಧ್ಯ (7) ಮೃತ ದುರ್ದೈವಿಗಳಾಗಿದ್ದಾರೆ. ಮೃತರು ಜಮಖಂಡಿ ಮೂಲದವರು ಎನ್ನಲಾಗಿದೆ. ಗಿರೇಪ್ಪಾ ಕುದ್ರಾಳಿ ಅವರು ಬೈಕ್ ನಲ್ಲಿಯೇ ಮಿರಜ್ ನಿಂದ ಕುಟುಂಬ ಸಮೇತ ಜಮಖಂಡಿಗೆ ಹೋಗುತ್ತಿದ್ದರು ಎಂದು ತಿಳಿದು ಬಂದಿದೆ. ಹಾರೂಗೇರಿ ಕ್ರಾಸ್ ಕಡೆಯಿಂದ ಕುಡಚಿ ಕಡೆಗೆ ಟ್ರಕ್ ಚಾಲಕನು ಟ್ರಕ್‌ನ್ನು ಅತೀ ವೇಗವಾಗಿ ಹಾಗೂ ನಿಷ್ಕಾಳಜಿತನದಿಂದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಮಂಜುಳಾ ಹಾಗೂ ಆರಾಧ್ಯ ಅವರ ತಲೆಗೆ ಭಾರೀ ಪೆಟ್ಟು ಬಿದ್ದ ಪರಿಣಾಮ ಸ್ಥಳದಲ್ಲಿಯೇ ಮೃತರಾಗಿದ್ದಾರೆ. ಗಿರೀಶ ಗಾಯಗೊಂಡ ಪರಿಣಾಮ ಸಮೀಪದ ಹಾರೂಗೇರಿ ಪಟ್ಟಣದ ನಾರಗೊಂಡ ಆಸ್ಪತ್ರೆಗೆ ದಾಖಲಿಸಿದ್ದಾರೆ. ಬೆಳಗ್ಗೆ 10.30 ಗಂಟೆ ಸುಮಾರಿಗೆ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ. ಈ ಕುರಿತು ಹಾರೂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತ್ನಿ ಹತ್ಯೆ ಮಾಡಿ ಮನೆಯಲ್ಲೇ ಶವ ಹೂತು ಹಾಕಿದ್ದ ಭೂಪ

• **ವಿಜಯಪುರ:** ಪತಿಯೇ ಪತ್ನಿಯನ್ನು ಬರ್ಬರವಾಗಿ ಹತ್ಯೆ ಮಾಡಿ ಕಳೆದ 24 ದಿನ ಶವವನ್ನು ಮನೆಯಲ್ಲೇ ಹೂತು ಹಾಕಿದ ಘಟನೆ ಜಿಲ್ಲೆಯ ದೇವರಹಿಪ್ಪರಗಿ ಪಟ್ಟಣದಲ್ಲಿ ತಡವಾಗಿ ಬೆಳಕಿಗೆ ಬಂದಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಇಲ್ಲಿನ ಪ್ರಭು ಕಾಳಪ್ಪ ರತ್ನಾಕರ (46) ಬಂಧಿತ ಆರೋಪಿ. ಪ್ರಭು ರತ್ನಾಕರ ಈತ ತನ್ನ ಪತ್ನಿ ಸರೋಜಿನಿ ರತ್ನಾಕರ ಹೆಸರಲ್ಲಿ ಸಿಕ್ಕಾಪಟ್ಟೆ ಸಾಲ ಮಾಡಿದ್ದ, ಈ ಸಾಲದ ವಿಷಯಕ್ಕೆ ಪತಿ-ಪತ್ನಿ ಮಧ್ಯೆ ಆಗಾಗ ಗಲಾಟೆ ನಡೆಯುತ್ತಿತ್ತು. ಕಳೆದ ಜ.24, 2026ರಂದು ರಾತ್ರಿ ಇಬ್ಬರ ಮಧ್ಯೆ ಜಗಳ ನಡೆದು, ಇದು ವಿಕೋಪಕ್ಕೆ ತೆರಳಿದೆ. ಆಗ ಕುಪಿತಗೊಂಡ ಆರೋಪಿ ಪ್ರಭು ರತ್ನಾಕರ, ತನ್ನ ಪತ್ನಿ ಸರೋಜಿನಿ ತಲೆಗೆ ಹಾರಿಯಿಂದ ಹೊಡೆದು ಹತ್ಯೆ ಮಾಡಿ, ಶವವನ್ನು ಮನೆಯಲ್ಲಿಯೇ ಹೂತು ಹಾಕಿದ್ದಾನೆ. ಬಳಿಕ ತನ್ನ ಪತ್ನಿ ಕಾಣೆಯಾಗಿದ್ದಾಳೆ ಎಂದು ಪೊಲೀಸ್ ಠಾಣೆಗೆ ದೂರು ನೀಡಿದ್ದಾನೆ. ಈಗ ವಿಷಯ ಬಯಲಿಗೆ ಬರುತ್ತಿದ್ದಂತೆಯೇ ಪೊಲೀಸರು, ಆರೋಪಿಯನ್ನು ಬಂಧಿಸಿ, ಶವ ಹೊರ ತೆಗೆದು ಪರಿಶೀಲನೆ ನಡೆಸಿದರು.



ಸಾರಿಗೆ ನಿಗಮಗಳ ನೌಕರರು 38 ತಿಂಗಳ ಹಿಂಬಾಕಿ: ವಿಪಕ್ಷ ನಾಯಕ ಅಶೋಕ್

ಮೀಸಲು ಯೋಜನೆಗಿಲ್ಲ ಹಣ



• **ಬೆಂಗಳೂರು:** ಕಳೆದ ಬಜೆಟ್‌ನಲ್ಲಿ ಮೀಸಲಾದ ಹಣವನ್ನೇ ಯೋಜನೆಗಳಿಗೆ ನೀಡುತ್ತಿಲ್ಲ, ಈಗ ಹೊಸ ಬಜೆಟ್ ಮಾಡಲು ತಯಾರಿ ನಡೆಸಿದ್ದಾರೆ. ನಾಲ್ಕು ಸಾರಿಗೆ ನಿಗಮಗಳ ನೌಕರರು 38 ತಿಂಗಳ ಹಿಂಬಾಕಿ ನೀಡಬೇಕೆಂದು ಹೋರಾಟ ಮಾಡುತ್ತಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಕಿಡಿಕಾರಿದ್ದಾರೆ.

ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಸಾರಿಗೆ ಸಚಿವನಾಗಿದ್ದಾಗ ನಷ್ಟವಿತ್ತೋ, ಲಾಭವಿತ್ತೋ ಎಂಬ ಮಾಹಿತಿ ಬಹಿರಂಗ ಮಾಡಲಿ. ಶಾಲಾ ಮಕ್ಕಳಿಗೆ ಬಸ್ ಸಿಗದೆ ಟ್ರ್ಯಾಕ್ಟರ್‌ನಲ್ಲಿ ಹೋಗುತ್ತಿದ್ದಾರೆ. ಈ ಸರ್ಕಾರದಲ್ಲಿ ದುಡ್ಡಿಲ್ಲ. ಆದರೂ ಶಾಸಕರು ಫಾರಿನ್ ಟೂರ್ ಮಾಡುತ್ತಿದ್ದಾರೆ ಎಂದು ಆಕ್ರೋಶ ಹೊರಹಾಕಿದರು.

ಬೆಂಗಳೂರಿನಲ್ಲಿ ಕಳೆದ ಮೂರು ತಿಂಗಳಿಂದ ಕಸ ವಿಲೇವಾರಿಯಾಗುತ್ತಿಲ್ಲ, ಲಾರಿಗಳಲ್ಲಿ ಕಸ ತುಂಬಿಹೋಗಿದೆ. ಬೆಂಗಳೂರನ್ನು ಸರ್ಕಾರ ಗಾರ್ಬೇಜ್ ಸಿಟಿ ಮಾಡಿದೆ. ಗುತ್ತಿಗೆದಾರರ ಸಂಘ ಎಲ್ಲ ಕಾಮಗಾರಿ ಸ್ಥಗಿತಗೊಳಿಸಲು ನಿರ್ಧರಿಸಿದೆ. ಆದ್ದರಿಂದ ಕೂಡಲೇ ಹಣ ಬಿಡುಗಡೆ ಮಾಡಿ ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲಿ. ಇಲ್ಲವಾದರೆ ಜನರ ಶಾಪ ತಟ್ಟುತ್ತದೆ ಎಂದರು.

ನಾಯಿಗಳ ಕಿತ್ತಾಟ: ಸಿಎಂ ಡಿಸಿಎಂ ಕಚ್ಚಾಟವನ್ನು ನಾಯಿಗಳ ಕಿತ್ತಾಟ ಎಂದು ಸಚಿವ ಮಹದೇವಪ್ಪ ಹೇಳಿದ್ದಾರೆ. ಡಿ.ಕೆ.ಸುರೇಶ್ ಅವರು ನಿಯತ್ತಿನ ನಾಯಿಗಳು ಎಂದಿದ್ದಾರೆ. ಅಂದಮೇಲೆ ಬೀದಿ ನಾಯಿಗಳು ಯಾರು ಎಂದು ಉತ್ತರ ಕೊಡಬೇಕಿದೆ. ಕಾಂಗ್ರೆಸ್‌ನಲ್ಲಿ ಬೀದಿ ನಾಯಿ ಮತ್ತು ನಿಯತ್ತಿನ ನಾಯಿಗಳ ನಡುವೆ ಕಿತ್ತಾಟ ನಡೆಯುತ್ತಿದೆ. ಡಿ.ಕೆ.ಶಿವಕುಮಾರ್ ತಮಗೆ ಗೊತ್ತಿಲ್ಲ ಎನ್ನುತ್ತಾರೆ. ವಿದೇಶ ಪ್ರವಾಸ ಹೋಗಿರುವವರು ಸಿಎಂ ಬೆಂಬಲಿಗರೇ ಆಗಿದ್ದಾರೆ ಎಂದರು.

ನಾಯಕತ್ವ ಬದಲಾವಣೆ ಒಪ್ಪಂದ ಆಗಿದ್ದರೆ ತಿಳಿಸಲಿ

ರಾಜ್ಯದ ಮುಖ್ಯಮಂತ್ರಿ, ಪಕ್ಷದ ಅಧ್ಯಕ್ಷರ ವಿರುದ್ಧ ಹೀಗೆ ನಡೆದುಕೊಳ್ಳುತ್ತಾರೆ. ಒಪ್ಪಂದ ಆಗಿದ್ದರೆ ಎಷ್ಟು ವರ್ಷ ಒಪ್ಪಂದ ಆಗಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಬೇಕು. ಇದು ಬೆದರಿಕೆಯ ರಾಜಕೀಯವೇ ಎಂದು ತಿಳಿಸಬೇಕು. ಕಾಂಗ್ರೆಸ್ ಒಳಜಗಳದಿಂದಾಗಿ ಆಡಳಿತ ಕುಸಿದಿರುವಾಗ ಯಾವ ಕಾರಣಕ್ಕಾಗಿ ಬಜೆಟ್ ಮಂಡನೆ ಮಾಡುತ್ತಾರೆ ಎಂದು ಪ್ರಶ್ನೆ ಮಾಡಿದರು.

ಮಾಧ್ಯಮಗಳಿಗೆ ಸ್ಥಳ ನಿಗದಿ: ವಿಪಕ್ಷಗಳ ಟೀಕೆ



• **ಬೆಂಗಳೂರು:** ವಿಧಾನಸೌಧದ ಪಶ್ಚಿಮ ದ್ವಾರದ ಬಳಿ ನಿಗದಿಪಡಿಸಲಾಗಿರುವ ಸ್ಥಳದಲ್ಲಿ ಮಾತ್ರ ಮಾಧ್ಯಮ ಪ್ರತಿನಿಧಿಗಳು ರಾಜಕೀಯ ನಾಯಕರ ಹೇಳಿಕೆಯನ್ನು ಪಡೆಯಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸುತ್ತೋಲೆ ಹೊರಡಿಸಿದೆ. ವಿಧಾನಸಭೆ ಒಳ ಪ್ರವೇಶಿಸುವ ಸಂದರ್ಭದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು ಹಾಗೂ ಗಣ್ಯ ವ್ಯಕ್ತಿಗಳ ಹೇಳಿಕೆಗಳನ್ನು ಪಡೆಯಲು ಹಿಂಬಾಲಿಸುವುದನ್ನು ಆದೇಶದಲ್ಲಿ ನಿಷೇಧಿಸಲಾಗಿದೆ. ಈ ಸುತ್ತೋಲೆಗೆ ವಿಪಕ್ಷಗಳು ಅಸಮಾಧಾನಗೊಂಡಿದ್ದು, ಸರ್ಕಾರವನ್ನು ಟೀಕಿಸಿವೆ. ತನ್ನ ವೈಫಲ್ಯಗಳನ್ನು ಮುಚ್ಚಿಡುವ ಯತ್ನದಲ್ಲಿ, ಪ್ರಜಾಪ್ರಭುತ್ವದ ಮುಖ್ಯಸ್ತಂಭವಾಗಿರುವ ಮಾಧ್ಯಮಗಳ ಮೇಲೆ ನಿಯಂತ್ರಣ ಹೇರಲು ಹೊರಟಿರುವ ಕಾಂಗ್ರೆಸ್ ಸರ್ಕಾರ ತನ್ನ ಪ್ರಜಾಪ್ರಭುತ್ವ ವಿರೋಧಿ, ಸರ್ವಾಧಿಕಾರಿ ಧೋರಣೆಯನ್ನು ಮತ್ತೊಮ್ಮೆ ಪ್ರದರ್ಶನ ಮಾಡಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಹೇಳಿದ್ದಾರೆ. ಮಾಧ್ಯಮದವರು ವಿಧಾನಸೌಧದ ನಿಗದಿತ ಸ್ಥಳದಲ್ಲಿ ಮಾತ್ರ ಸಂದರ್ಶನ ಮಾಡಬೇಕು ಎನ್ನುವ ಈ ಅಸಂವಿಧಾನಿಕ ಆದೇಶವನ್ನು ಈ ಕೂಡಲೇ ವಾಪಸ್ಸು ಪಡೆಯಬೇಕು ಮತ್ತು ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾದ ಮಾಧ್ಯಮಗಳು ಸ್ವತಂತ್ರವಾಗಿ ತಮ್ಮ ಕರ್ತವ್ಯ ನಿರ್ವಹಣೆ ಮಾಡಲು ಮುಕ್ತ ಅವಕಾಶ ಮಾಡಿಕೊಡಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತೇನೆ ಎಂದಿದ್ದಾರೆ. ವಿಧಾನಸೌಧ ನಿಮ್ಮ ಕಾಂಗ್ರೆಸ್ ಪಕ್ಷದ ಕಚೇರಿ ಅಲ್ಲ ಸ್ವಾಮಿ, ಅದು ಪ್ರಜಾಸೌಧ, ಏಳು ಕೋಟಿ ಕನ್ನಡಿಗರಿಗೆ ಸೇರಿದ ಶಕ್ತಿಸೌಧ. ಅಲ್ಲಿಗೆ ಮಾಧ್ಯಮದವರನ್ನು ಬರಬೇಡಿ ಎಂದು ನಿಯಂತ್ರಣ ಮಾಡಲು ಯಾರಿಗೂ ಅಧಿಕಾರವಿಲ್ಲ. ರೂಪಾಯಿ ಚಿನ್ನ, ನಗದು ಕಳ್ಳತನದಂತಹ ಪ್ರಕರಣಗಳು, ಅಕ್ರಮ ವ್ಯವಹಾರಗಳು ಇನ್ನಷ್ಟು ಬಯಲಾಗುತ್ತವೆ ಎನ್ನುವ ಭಯವೋ ಎಂದು ಕಿಡಿಕಾರಿದ್ದಾರೆ.

ನಂದಿನಿ ಉತ್ಪನ್ನ ತಪ್ಪು ಸಂದೇಶ: ಕಿಡಿಗೇಡಿಗಳ ವಿರುದ್ಧ ಕ್ರಮ

• **ಬೆಂಗಳೂರು:** ನಂದಿನಿ ಉತ್ಪನ್ನಗಳನ್ನು ಬಳಸಿದರೆ ಕ್ಯಾನ್ಸರ್ ಬರುತ್ತದೆ ಎಂಬ ಸುದ್ದಿ, ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಮಾಹಿತಿ ಹರಡಲಾಗುತ್ತಿರುವ ಕೆಲ ಕಿಡಿಗೇಡಿಗಳಿಗೆ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾ ಮಂಡಳಿ (ಕೆಎಂಎಫ್) ಕಾನೂನು ಕ್ರಮಕ್ಕೆ ಮುಂದಾಗಿದೆ.

ನಂದಿನಿ ಉತ್ಪನ್ನಗಳು ಭಾರತೀಯ ಆಹಾರ ಸುರಕ್ಷೆ, ಗುಣಮಟ್ಟ ಪ್ರಾಧಿಕಾರ ನಿಗದಿಪಡಿಸಿದ ಎಲ್ಲ ಗುಣಮಟ್ಟ ಮತ್ತು ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದೇವೆ. ನಂದಿನಿ ಹಾಲು ಹಾಗೂ ಹಾಲು ಉತ್ಪನ್ನಗಳು ಸಂಪೂರ್ಣ ಸುರಕ್ಷಿತವಾಗಿದೆ. ಸ್ವಚ್ಛ ಮತ್ತು ಉತ್ತಮ ಗುಣಮಟ್ಟದ ಬಗ್ಗೆ ನಮ್ಮ ಗ್ರಾಹಕರಿಗೆ ಭರವಸೆ ನೀಡುತ್ತೇವೆ ಎಂದು ಮಾಹಿತಿ ನೀಡಿದೆ. ಕರ್ನಾಟಕ ಹಾಲು ಮಂಡಳಿಯು ಆಧಾರರಹಿತ, ತಪ್ಪು ದಾರಿಗೆಳೆಯುವ ಮತ್ತು ಬ್ರ್ಯಾಂಡ್‌ನ ಮಾನಹಾನಿಕರ ಹೇಳಿಕೆಗಳನ್ನು ತೀವ್ರವಾಗಿ ಖಂಡಿಸುತ್ತಿದ್ದು, ಇಂತಹ ದುರುದ್ದೇಶಪೂರಿತ ಕೃತ್ಯಗಳಲ್ಲಿ ತೊಡಗಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಕೆಎಂಎಫ್ ಎಚ್ಚರಿಕೆ ನೀಡಿದೆ.

ಈ ಕುರಿತು ಪ್ರತಿಕ್ರಿಯಿಸಿದ ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್, ನಂದಿನಿ ಗುಣಮಟ್ಟಕ್ಕೆ ಹೆಸರುವಾಸಿಯಾಗಿದೆ. ನಂದಿನಿ ಉತ್ಪನ್ನಗಳನ್ನು ಮಾಡುವಾಗ ಯಾವುದೇ ರೀತಿಯ ಕಲಬೆರಕೆ ಮಾಡುವುದಿಲ್ಲ, ಕೆಲ ಕಿಡಿಗೇಡಿಗಳು ಸಾಮಾಜಿಕ ಜಾಲತಾಣಗಳಲ್ಲಿ ಸುರಕ್ಷತೆ ಮತ್ತು ಗುಣಮಟ್ಟದ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಈ ಬಗ್ಗೆ ಒಕ್ಕೂಟದ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ನಂದಿನಿ ಯಾವತ್ತೂ ಗುಣಮಟ್ಟದ ಜತೆ ರಾಜಿಯಾಗಿಲ್ಲ, ನಂದಿನಿಗೆ ಎಷ್ಟೇ ನಷ್ಟವಾದರೂ ಎಂದಿಗೂ ಗ್ರಾಹಕರಿಗೆ ಹಾಗೂ ರೈತರಿಗೆ ಅನ್ಯಾಯ ಮಾಡಿಲ್ಲ, ಗುಣಮಟ್ಟದ ಉತ್ಪನ್ನಗಳನ್ನು ಎಂದಿನಂತೆ ಮುಂದುವರೆಯಲಿದೆ ಎಂದು ತಿಳಿಸಿದರು.

ನಂದಿನಿ ಉತ್ಪನ್ನಗಳಲ್ಲಿ ಕಲಬೆರಕೆ ಮಾಡಿದರೆ ಕ್ರಮ

ನಂದಿನಿ ಉತ್ಪನ್ನಗಳಲ್ಲಿ ಕಲಬೆರಕೆ ಎಲ್ಲಿಲ್ಲಿ ಆಗುತ್ತಿದೆ ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮಲ್ಲೂ ಇದರ ಬಗ್ಗೆ ತಂಡ ರಚಿಸಲಾಗಿದ್ದು, ವಿವಿಧ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ. ಜನರಿಗೆ ಅಪಪ್ರಚಾರ ಆಗಬಾರದು ಎಂದು ಎಚ್ಚರಿಕೆ ವಹಿಸಲಾಗಿದೆ. ಬೇರೆ-ಬೇರೆ ಬ್ರ್ಯಾಂಡ್‌ಗಳ ಕಂಪನಿಯವರು ನಮ್ಮ ನಂದಿನಿ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಪಶುಸಂಗೋಪನಾ ಇಲಾಖೆಯ ಸಚಿವ ಕೆ. ವೆಂಕಟೇಶ್ ಆರೋಪಿಸಿದರು.

ರಾಜ್ಯಾದ್ಯಂತ ಕೈದಿಗಳ ಎನ್‌ಡಿಪಿಎಸ್ ಪರೀಕ್ಷೆ

• **ಹುಬ್ಬಳ್ಳಿ:** ಜೈಲಿನಲ್ಲಿರುವ ಬಹುತೇಕ ಕೈದಿಗಳು ಗಾಂಜಾ ವ್ಯಸನಿಗಳಿರುತ್ತಾರೆ. ಇದನ್ನು ಸಂಪೂರ್ಣ ಕಡಿವಾಣ ಹಾಕಲಾಗುವುದು. ಜೈಲಿಗೆ ಬರುವ ಹಾಗೂ ಹೋಗುವ ಕೈದಿಗಳ ಎನ್‌ಡಿಪಿಎಸ್ ಪರೀಕ್ಷೆ ನಡೆಸಲಾಗುತ್ತಿದ್ದು, ರಾಜ್ಯಾದ್ಯಂತ ಒಂದು ವಾರದಲ್ಲಿ ಆರಂಭಿಸಲಾಗುವುದು ಎಂದು ಕಾರಾಗೃಹದ ಡಿಜಿಪಿ ಅಲೋಕ ಕುಮಾರ್ ತಿಳಿಸಿದರು.

ಇಲ್ಲಿಯ ವಿಶ್ವೇಶ್ವರನಗರದ ಉಪಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಜೈಲಿನಲ್ಲಿ ಗಾಂಜಾ ಸೇವನೆ ಹಾಗೂ ಮೊಬೈಲ್ ಬಳಕೆ ಮಾಡುವವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಜೈಲಿನಲ್ಲಿರುವ ಕೈದಿಗಳನ್ನು ಸಹ ಪರೀಕ್ಷೆಗೆ ಒಳಪಡಿಸಲಾಗುವುದು. ಶಿಸ್ತು ಹಾಗೂ ನಿಯಮಗಳನ್ನು ಕೈದಿಗಳು ಕಡ್ಡಾಯವಾಗಿ ಪಾಲಿಸಬೇಕು. ಜೈಲಿನಿಂದ ಹೊರ ಹೋಗುವಾಗ ಉತ್ತಮ ನಾಗರಿಕರಾಗಬೇಕು. ಈ ನಿಟ್ಟಿನಲ್ಲಿ ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದರು.



ಹುಬ್ಬಳ್ಳಿ ಕಾರಾಗೃಹದಲ್ಲಿ 132 ಕೈದಿಗಳು ನಗರದ ಕಾರಾಗೃಹದಲ್ಲಿ ಕೊಲೆ, ಅತ್ಯಾಚಾರ, ದರೋಡೆ, ಕಳವು ಸೇರಿದಂತೆ ಹಲವು ಪ್ರಕರಣದಲ್ಲಿ ಭಾಗಿಯಾದ 132 ಕೈದಿಗಳಿದ್ದಾರೆ. ಅವರಿಗೆ ಜೈಲಿನಲ್ಲಿ ಯೋಗ, ಧ್ಯಾನ ಕಲಿಸಲಾಗುತ್ತಿದೆ. ಜೈಲಿನಿಂದ ಹೊರಗೆ ಬಂದ ಬಳಿಕ ಅಪರಾಧ ಕೃತ್ಯದಲ್ಲಿ ತೊಡಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಮೈತ್ರಿ ಧರ್ಮ ಪಾಲನೆ: ನಿಖಿಲ್

• **ಬೆಂಗಳೂರು:** ನಾವು ಮೈತ್ರಿ ಧರ್ಮವನ್ನು ಅತ್ಯಂತ ಗೌರವದಿಂದ ಪಾಲಿಸುತ್ತಿದ್ದೇವೆ. ನಮ್ಮ ಮೈತ್ರಿಗೆ ಬಿಜೆಪಿ ಹೈಕಮಾಂಡ್ ನಾಯಕರ ಮಾರ್ಗದರ್ಶನ ಇದೆ. ಬಿಜೆಪಿಯಾಗಿರಲಿ, ಜೆಡಿಎಸ್ ಆಗಿರಲಿ ಯಾರು ಕೂಡ ಬಹಿರಂಗವಾಗಿ ಮಾತನಾಡಬಾರದು ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು.



ಬುಧವಾರ ಜೆ.ಪಿ. ನಗರ ನಿವಾಸದ ಬಳಿ ಮಾಧ್ಯಮಗಳ ಜತೆ ಮಾತನಾಡಿ, ಈ ವಿಚಾರಗಳು ನಾಲ್ಕು ಗೋಡೆಗಳ ಒಳಗೆ ಚರ್ಚೆ ಆಗಬೇಕು. ಹಾದಿ ಬೀದಿಯಲ್ಲಿ ಚರ್ಚಿಸಿ ಇತ್ಯರ್ಥವಾಗುವ ವಿಚಾರ ಅಲ್ಲ, ಲೋಕಸಭೆ ಚುನಾವಣೆಯಲಿಂದಲೂ ಎರಡೂ ಪಕ್ಷಗಳ ಮೈತ್ರಿ ಇದೆ. ಅಂದಿನಿಂದಲೂ ನಮ್ಮನ್ನ ಅತ್ಯಂತ ಗೌರವದಿಂದ ನೋಡಿಕೊಂಡಿದ್ದಾರೆ ಎಂದರು.

ಮುಂದಿನ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ, ಜೆಡಿಎಸ್ ಅಲ್ಲ ಎನ್‌ಡಿಎ 140 ರಿಂದ 150 ಸ್ಥಾನ ಗೆಲ್ಲುತ್ತೆ. ನಾವು ಮೈತ್ರಿ ಧರ್ಮವನ್ನ ಪಾಲಿಸುತ್ತೇವೆ ಲೋಕಸಭೆ ಗೆದ್ದಂತೆ ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲುತ್ತೇವೆ. ಗೆದ್ದು ದಾಖಲೆಯನ್ನು ಸೃಷ್ಟಿ ಮಾಡುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನನ್ನ ಹೇಳಿಕೆ ತಿರುಚಿದ್ದಾರೆ: ಸಮಸ್ಯೆ ಉದ್ಭವ ಆಗಿರೋದು ಯಾವುದೋ ಎರಡು ಜಿಲ್ಲೆಯಲ್ಲಿ. ಅಲ್ಲಿನ ಮೂರ್ನಾಲ್ಕು ಜನ ಪ್ರಚಾರಕ್ಕಾಗಿ ಮಾತನಾಡಿದ್ದಾರೆ. ನಾವೆಲ್ಲಿಯೂ ಕೂಡ ಅಭ್ಯರ್ಥಿಗಳನ್ನು ಘೋಷಣೆ ಮಾಡಿಯೇ ಇಲ್ಲ. ಕೆ.ಆರ್. ಪೇಟೆಯಲ್ಲಿ ಮಂಜು ನೀವು ಈಗಾಗಲೇ ಶಾಸಕರಾಗಿದ್ದೀರಿ ಮತ್ತೆ ಆರಿಸಿ ಬರುವುದಕ್ಕೆ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿ ಮಂಜಣ್ಣ ಅಂತ ಹೇಳಿದ್ದೆ. ಆದ್ರೆ, ನನ್ನ ಹೇಳಿಕೆಯನ್ನ ತಿರುಚಿದ್ದಾರೆ. ಅಭ್ಯರ್ಥಿಗಳನ್ನ ಘೋಷಣೆ ಮಾಡೋದಕ್ಕೆ ನಾನು ಯಾರು? ನಾನು ಜನರ ವಿಶ್ವಾಸವನ್ನು ಉಳಿಸಿಕೊಂಡು ಹೋಗಿ ಅಂತ ಹೇಳುವುದರಲ್ಲಿ ತಪ್ಪೇನಿದೆ? ಎಂದು ಹೇಳಿದರು.

ರಕ್ತ ಕೇಂದ್ರಗಳು ಎನ್‌ಕ್ಯುಎಎಸ್ ಮಾನ್ಯತೆ ಕಡ್ಡಾಯ

• **ಬೆಂಗಳೂರು:** ರಾಜ್ಯದ ಎಲ್ಲ ರಕ್ತ ಕೇಂದ್ರಗಳು ನ್ಯಾಷನಲ್ ಅಕ್ರಿಡೇಶನ್ ಬೋರ್ಡ್ ಫಾರ್ ಹಾಸ್ಪಿಟಲ್ಸ್ ಆ್ಯಂಡ್ ಹೆಲ್ತ್‌ಕೇರ್ ಪ್ರೊವೈಡರ್ಸ್ (ಎನ್‌ಎಬಿಎಚ್) ಮತ್ತು ನ್ಯಾಷನಲ್ ಕ್ವಾಲಿಟಿ ಅಶ್ಯೂರೆನ್ಸ್ ಸ್ಟ್ಯಾಂಡರ್ಡ್ಸ್ (ಎನ್‌ಕ್ಯುಎಎಸ್) ಮಾನ್ಯತೆಯನ್ನು ಪಡೆಯಲು ಸರ್ಕಾರ ಆದೇಶ ಹೊರಡಿಸಿದೆ.

ಸರ್ಕಾರದ ಅಡಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಗಳ ರಕ್ತ ಕೇಂದ್ರಗಳು ಎನ್‌ಕ್ಯುಎಎಸ್ ಅಥವಾ ಎನ್‌ಎಬಿಎಚ್ ಮಾನ್ಯತೆ, ಸರ್ಕಾರಿ ರಕ್ತ ಕೇಂದ್ರಗಳು ಎನ್‌ಕ್ಯುಎಎಸ್ ಮಾನ್ಯತೆಯನ್ನು ಪಡೆಯಬೇಕು. ಎಲ್ಲ ರಕ್ತ ಕೇಂದ್ರಗಳು, ಒಂದು ವರ್ಷದೊಳಗೆ ಮತ್ತು ಹೊಸದಾಗಿ ಪರವಾನಗಿ ಪಡೆಯುವ ರಕ್ತ ಕೇಂದ್ರಗಳು, ಪರವಾನಗಿ ಪಡೆದ ಎರಡು ವರ್ಷದೊಳಗಾಗಿ ಎನ್‌ಎಬಿಎಚ್ ಅಥವಾ ಎನ್‌ಕ್ಯುಎಎಸ್ ಮಾನ್ಯತೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಮಾನ್ಯತೆಗೆ ತಗಲುವ ವೆಚ್ಚವನ್ನು ರಕ್ತ ಕೇಂದ್ರಗಳೇ ಭರಿಸಬೇಕು. ಒಂದು ವೇಳೆ ಮಾನ್ಯತೆ ಪಡೆಯದಿದ್ದಲ್ಲಿ, ರಕ್ತ ಕೇಂದ್ರದ ಪರವಾನಗಿಯನ್ನು ತಡೆಹಿಡಿಯಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ತಿಳಿಸಿದ್ದಾರೆ.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಶ್ರಮಕ್ಕೆ ಶ್ಲಾಘನೆ

• **ಬೆಂಗಳೂರು:** ಶಾಲಾ ಶಿಕ್ಷಣ ಇಲಾಖೆ ಕಳೆದ ಎರಡೂವರೆ ವರ್ಷಗಳ ಅವಧಿಯಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ದುರ್ಬಲವಾದ ಮಕ್ಕಳನ್ನು ಪೋಷಿಸುವ ಸರ್ಕಾರಿ ಶಾಲೆಗಳ ನಿರ್ವಹಣೆ ಮತ್ತು ಗುಣಮಟ್ಟದ ಶಿಕ್ಷಣ ನೀಡಲು ಶಾಲಾ ಶಿಕ್ಷಣ ಸಚಿವ ಮಧುಬಂಗಾರಪ್ಪ ಶ್ರಮವನ್ನು ಕನ್ನಡ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಶ್ಲಾಘಿಸಿದ್ದಾರೆ.



ಈ ಕುರಿತು ಸಿಎಂ ಅವರಿಗೆ ಪತ್ರ ಬರೆದಿರುವ ಅವರು, 15 ಖಾಲಿಯಿರುವ 15 ಸಾವಿರ ಶಿಕ್ಷಕರ ನೇಮಕಾತಿಗೆ ಪ್ರಕ್ರಿಯೆ ಆರಂಭಿಸಿರುವುದು, ಕೆಪಿಎಸ್ ಶಾಲೆಗಳನ್ನು ಪ್ರಾರಂಭಿಸುವಲ್ಲಿ ಆಸಕ್ತಿ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷಾ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆ ತರುವಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಶ್ರಮಿಸಿದ್ದಾರೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಈ ನಡುವೆ ಶಿಕ್ಷಣ ಇಲಾಖೆ ಬಗ್ಗೆ ಅಧ್ಯಯನ ನಡೆಸಿ, 1995 ರಿಂದ 2000 ಅವಧಿಯಲ್ಲಿ ಆರಂಭವಾದ 1468 ಶಾಲೆಗಳನ್ನು ಹಂತ-ಹಂತವಾಗಿ ಅನುದಾನಕ್ಕೊಳಪಡಿಸಬೇಕು. ಇದು ಶಿಕ್ಷಣ ಇಲಾಖೆಯ ಹಾಗೂ ಮಕ್ಕಳ ಶ್ರೇಯೋಭಿವೃದ್ಧಿಗೆ ಹೊಸ ದಿಶೆಯನ್ನು ಕಲ್ಪಿಸಿದಂತಾಗುತ್ತದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.



ಅರ್ಧ, ಒಂದು ಕೆ.ಜಿ. ಪ್ಯಾಕ್‌ಗಳಲ್ಲಿ ಲಭ್ಯ

ಮಲ್ಪೆ ಮತ್ತಿತರ ಭಾಗಗಳಿಂದ ನೇರವಾಗಿ ಮೀನನ್ನು ಬೆಂಗಳೂರಿಗೆ ತರಿಸಿ, ಸ್ವಚ್ಛ ಮತ್ತು ಶೂನ್ಯ ಡಿಗ್ರಿ ಉಷ್ಣಾಂಶದಲ್ಲಿಟ್ಟು ವ್ಯಾಕ್ಯೂಮ್ ಪ್ಯಾಕ್ ಮಾಡಿ ನಿಗಮದ ಮಳಿಗೆಗಳ ಮೂಲಕ ತಕ್ಷಣ ಗ್ರಾಹಕರಿಗೆ ವಿತರಿಸಲಾಗುವುದು. ಅರ್ಧ ಕೆ.ಜಿ., ಒಂದು ಕೆ.ಜಿ. ತೂಕದ ಪ್ಯಾಕ್‌ಗಳಲ್ಲಿ ಲಭ್ಯವಿರಲಿವೆ. ಪ್ಯಾಕ್‌ಗಳ ಮೇಲೆ ಭಾರತೀಯ ಆಹಾರ ಸುರಕ್ಷೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ)ದಿಂದ ಅನುಮೋದನೆಗೊಂಡ ಲೇಬಲ್ ಅಂಟಿಸಲಾಗುವುದು. ಗ್ರಾಹಕರಿಗೆ ಸಂಶಯ ಬಂದರೆ ದೂರು ಸಲ್ಲಿಸಬಹುದು.

ಆನ್‌ಲೈನ್‌ನಲ್ಲೂ ಇಂತಹ ಸಂಸ್ಕರಿತ ಮೀನುಗಳನ್ನು ವ್ಯಾಕ್ಯೂಮ್ ಪ್ಯಾಕ್‌ಗಳಲ್ಲಿ ತಲುಪಿಸಲೂ ನಿಗಮ ಚಿಂತನೆ ನಡೆಸಿದ್ದು, ಆನ್‌ಲೈನ್ ಮಾರಾಟಕ್ಕಾಗಿ ತನ್ನದೇ ವೆಬ್‌ಸೈಟ್ ರೂಪಿಸಲು ನಿಗಮ ಮುಂದಾಗಿದೆ. ಇಂದು ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದರೆ ಮಾರನೇ ದಿನ ಬೆಳಗ್ಗೆ ಗ್ರಾಹಕರಿಗೆ ತಲುಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಹೇಶ್‌ಕುಮಾರ್ ತಿಳಿಸಿದರು.

• **ಬೆಂಗಳೂರು:** ಕಡಿಮೆ ಅವಧಿಯಲ್ಲಿ ಮೀನು ಆಹಾರ ಸಿದ್ಧಪಡಿಸಲು ಅನುಕೂಲವಾಗುವಂತೆ ರೆಡಿ ಟು ಕುಕ್ ಮಾದರಿಯಲ್ಲಿ ತಾಜಾ ಮೀನುಗಳನ್ನು ವ್ಯಾಕ್ಯೂಮ್ ಪ್ಯಾಕ್‌ಗಳಲ್ಲಿ ಒದಗಿಸಲು ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ಮುಂದಾಗಿದೆ.

ಹಸಿ ಮೀನಿನ ಮೇಲೆ ಮುದ್ರಿತ ಚಿಹ್ನೆ ಬಳಸಲು ಅವಕಾಶವಿಲ್ಲವಾದ್ದರಿಂದ ಪ್ಯಾಕ್ ಮೇಲೆ ಗುಣಮಟ್ಟ ಕಾಯ್ದುಕೊಂಡಿರುವ ಚಿಹ್ನೆ ಮುದ್ರಿಸಿ ಮಾರಾಟ ಮಾಡಲು ನಿಗಮ ನಿರ್ಧರಿಸಿದೆ. ತಮ್ಮದೇ ಆದ ಬ್ರ್ಯಾಂಡಿಂಗ್ ಮಾಡಲು ಚಿಹ್ನೆಯನ್ನು ಕೂಡ ವಿನ್ಯಾಸ ಮಾಡಲು ನಿಗಮ ಮುಂದಾಗಿದ್ದು, ಮಾರ್ಚ್ ಅಥವಾ ಏಪ್ರಿಲ್ ಒಳಗಾಗಿ ರೆಡಿ ಟು ಕುಕ್ ಮೀನುಗಳನ್ನು ಮಾರುಕಟ್ಟೆಗೆ ಸರಬರಾಜು ಮಾಡಲಾಗುವುದು ಎಂದು ಎಂದು ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕ ಯು. ಮಹೇಶ್ ಕುಮಾರ್ ತಿಳಿಸಿದ್ದಾರೆ.

ಹೊಸ ದಿಗಂತದೊಂದಿಗೆ ಮಾತನಾಡಿದ ಅವರು, ಬೆಂಗಳೂರಿನಲ್ಲಿ 28 ಮೀನು ಮಾರಾಟ ಏಜೆನ್ಸಿಗಳಿವೆ. ಕೆಲವೆಡೆ ಕಡಿಮೆ ದರಕ್ಕೆ ಕಳಪೆ ಗುಣಮಟ್ಟದ ಮೀನುಗಳನ್ನು ಖರೀದಿಸಿ ನಿಗಮದ ಮೀನೆಂದು ಮಾರಾಟ ಮಾಡುತ್ತಿರುವ ಆರೋಪಗಳು ಕೇಳಿಬಂದಿವೆ. ಅಲ್ಲದೆ, ತಾಜಾ ಮೀನನ್ನು ಸಂಸ್ಕರಿಸದೆ ಮೂಲ ಸ್ವರೂಪದಲ್ಲೇ ನೀಡಿದರೆ ಅದನ್ನು ಸ್ವಚ್ಛಗೊಳಿಸಿ ಬಳಸಲು ಹೆಚ್ಚು ಸಮಯ ಬೇಕಾಗುತ್ತದೆ.

ಅಲ್ಲದೆ ಸಂಸ್ಕರಣೆ ಕಷ್ಟದ ಕೆಲಸ. ಹೀಗಾಗಿ, ನಾವೇ ಸ್ವಚ್ಛಗೊಳಿಸಿ ಸಂಸ್ಕರಣೆ ಮಾಡಿ ವ್ಯಾಕ್ಯೂಮ್ ಪ್ಯಾಕ್ ಮಾಡಿದ ಮೀನನ್ನು ತನ್ನದೇ ಬ್ರ್ಯಾಂಡ್‌ನಲ್ಲಿ ಮಾರಾಟ ಮಾಡಲು ನಿಗಮ ಉದ್ದೇಶಿಸಿದೆ ಎಂದು ಮಾಹಿತಿ ನೀಡಿದರು. ಮಾರುಕಟ್ಟೆ ಬೆಲೆಗಿಂತ 20-30 ರೂ. ಕಡಿಮೆ ಬೆಲೆಗೆ ತಾಜಾ ಸಂಸ್ಕರಿತ ಮೀನು ಒದಗಿಸಲಾಗುವುದು ಎಂದು ಮಹೇಶ್‌ಕುಮಾರ್ ತಿಳಿಸಿದರು.

ಹೊರಗುತ್ತಿಗೆ ಆಧಾರದಲ್ಲಿ ಯೋಜನೆ

ಸಂಸ್ಕರಿತ ಮೀನಿಗೆ ಬ್ರ್ಯಾಂಡ್ ಸಿಗುವವರೆಗೆ ಯಂತ್ರೋಪಕರಣಗಳಿಗಾಗಿ ಹಣ ಹೂಡಿಕೆ ಮಾಡುವುದಿಲ್ಲ, ಬದಲಿಗೆ ಬೆಂಗಳೂರಿನಲ್ಲಿ ಸಾಕಷ್ಟು ವ್ಯಾಕ್ಯೂಮ್ ಪ್ಯಾಕಿಂಗ್ ಸೆಂಟರ್‌ಗಳಿದ್ದು, ಅವುಗಳೊಂದಿಗೆ ಹೊರಗುತ್ತಿಗೆ ಆಧಾರದಲ್ಲಿ ನಾವು ಯೋಜನೆ ಆರಂಭಿಸುತ್ತೇವೆ. ಇನ್ನು ಎರಡು ತಿಂಗಳಲ್ಲಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು. ಇದಕ್ಕೆ ಅಗತ್ಯ ಸಿದ್ಧತೆಗಳನ್ನು ಇಲಾಖೆಯ ವತಿಯಿಂದ ಮಾಡಲಾಗುತ್ತಿದೆ ಎಂದು ಮಹೇಶ್‌ಕುಮಾರ್ ಹೇಳಿದರು.

> ರೆಡಿ ಟು ಕುಕ್ ಸಂಸ್ಕರಿಸಿದ ತಾಜಾ ಮೀನನ್ನು ವ್ಯಾಕ್ಯೂಮ್ ಪ್ಯಾಕ್‌ಗಳಲ್ಲಿ ವಿತರಿಸುವುದರಿಂದ ನಿಗಮದ ಕುರಿತು ಸಾರ್ವಜನಿಕರಲ್ಲಿ ವಿಶ್ವಾಸಾರ್ಹತೆ ಹೆಚ್ಚುತ್ತದೆ. ಗುಣಮಟ್ಟದ ಮೀನಿಗೆ ಉತ್ತಮ ಬ್ರ್ಯಾಂಡ್ ಕೂಡ ದೊರೆಯುತ್ತದೆ. ಜತೆಗೆ ಮೀನು ಕೃಷಿಕರಿಗೂ ಇದು ನೆರವಾಗಲಿದೆ.
>
> ■ **ಯು. ಮಹೇಶ್ ಕುಮಾರ್**, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕ

ಲಕ್ಷ ರೂಪಾಯಿ ದಾಟಿದ ಮಾದರಿ ಸರಕು ಅಡಕೆ ಬೆಲೆ

• **ಶಿವಮೊಗ್ಗ:** ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಸರಕು ಮಾದರಿಯ ಪ್ರತಿ ಕ್ವಿಂಟಾಲ್ ಅಡಕೆ ಧಾರಣೆ ಲಕ್ಷ ದಾಟಿದ್ದು, ಅಡಕೆ ಇತಿಹಾಸದಲ್ಲಿಯೇ ದಾಖಲೆ ಬೆಲೆಗೆ ಟೆಂಡರ್ ಆಗಿದೆ. ಕಳೆದ ಒಂದೆರಡು ವರ್ಷಗಳಿಂದ ಸರಕಿನ ಬೆಲೆ ಲಕ್ಷಕ್ಕೆ ಸಮೀಪ ಬಂದು ಹೋಗುತ್ತಿತ್ತಾದರೂ ಲಕ್ಷ ದಾಟಿರಲಿಲ್ಲ, ಆದರೆ ಬುಧವಾರ ಒಂದು ಕ್ವಿಂಟಾಲ್‌ಗೆ ಗರಿಷ್ಠ 1,00, 340 ರೂ. ಆಗಿದ್ದು, ಇದು ದಾಖಲೆಯ ಬೆಲೆಯಾಗಿದೆ.

ಉಳಿದೆಲ್ಲಾ ಮಾದರಿಯ ಅಡಿಕೆಯ ಬೆಲೆ ಯಥಾಸ್ಥಿತಿಯಲ್ಲಿದ್ದು, ಸರಕಿಗೆ ಮಾತ್ರ ಹೆಚ್ಚಾಗಿದೆ. ಸರಕು ಮಾದರಿ ಅಡಕೆ ಸಂಸ್ಕರಣೆ ಮಾಡುವುದನ್ನೇ ಬೆಳೆಗಾರರು ಮರೆತಿದ್ದಾರೆ. ಚಿಗುರು ಇರುತ್ತಿದ್ದಂತೆ ಕಟಾವು ಮಾಡಿ ಕೈಯಲ್ಲಿಯೇ ಸುಲಿದು ಕತ್ತರಿಸಿ ಬೇಯಿಸಬೇಕಿದೆ. ಈ ರೀತಿಯ ಸಂಸ್ಕರಣೆಗೆ ಕೆಲಸವೂ ಹೆಚ್ಚು, ಹೀಗಾಗಿ ಬೆಳೆಗಾರರ ಸರಕು ಸಂಸ್ಕರಣೆ ಮಾಡುತ್ತಿಲ್ಲ, ಮಾರುಕಟ್ಟೆಗೆ ಬರುವ ಈ ಮಾದರಿಯ ಪ್ರಮಾಣ ಕೂಡ ಕಡಿಮೆ. ಬಹುತೇಕರು ಚೇಣಿ ಕೊಡುತ್ತಿರುವುದರಿಂದ ಚಿಗುರು (ಬಲಿಯದ) ಅಡಕೆ ತೂಕ ಬರುವುದಿಲ್ಲ, ಹೀಗಾಗಿ ಬೆಳೆಗಾರರು ಬಲಿಯದ ಅಡಕೆ ಮಾರಾಟ ಮಾಡುತ್ತಿಲ್ಲ, ಖರೀದಿ ಮಾಡುವವರೂ ಕೂಡ ಖರೀದಿಸುತ್ತಿಲ್ಲ, ಇದರಿಂದಾಗಿ ಹೆಚ್ಚಿನ ಬೆಲೆ ಬಂದಿದೆ.

PUBLIC NOTICE

I **Rajeshwari V**, residing at Bengaluru have lost my registration sale deed document no. 4460/2006-07, Report no. 2068667/2026. While in transit, if found please contact

Srinath, Advocate
Mobile: 9945646289

IN THE COURT OF THE CIVIL JUDGE AND J.M.F.C, AT MADDUR
C.MIS.No. 232/2025

Petitioners : 1] Sri Krishnegowda S/o Late Cheluvegowda, Aged about 60 years, Major, **2] Smt Gowramma,** D/o Late Cheluvegowda, W/o Late H Boregowda, Aged about 76 years, Major, **3] Smt Sundramma,** D/o Late Cheluvegowda, W/o Girigowda, Aged about 76 years, Major, All are residing at Annur Village, C A Kere Hobli, Maddur Taluk. Mandya District.

---VS---

Respondent s: The Chief Registrar of Birth and Death,/ Tahasildar, Maddur Taluk, Maddur.

NOTIFICATION

It is hereby informed to General public that, the petitioners have filed the above petition for an order to direct the respondent to enter the date of death of their father Cheluvegowda S/o Dasegowda as 01-07-1995 in the register maintained by the respondent.

Hence, it is hereby called upon, any interested person may come before the Hon'ble court and file their objection if any on 24/03/2026 at 11.00 am. Otherwise the case will be decided as prayed.

By the order of the court given with seal and signature 10.02.2026

By Order of the Court
Chief Ministerial Officer, Prl Civil Judge & JMFC Court Maddur

Advocate for petitioners
D N Naveena, B A. LL.B,Advocate, Bharathi College Complex, Maddur-Malavalli Main Road, KM Doddi. Maddur Taluk.

IN THE COURT OF THE HON'BLE SENIOR CIVIL JUDGE & JMFC AT MALUR
Mis petition12/2022

Petitioner : Sri Kempanna -V/S-
Respondants : Sri Premkumar & others

PUBLIC NOTICE TO THE RESPONDENT NO 3 AND 13(a)

Respondent No.3: Smt. Susheelamma W/o C Krishnappa D/o Late Erappa, Aged about 57 year, R/at Ananthapuram Village. S.L.Halli post, Yelahanka Hobli, Bangalore North Taluk **R13 (a).Smt, Ramamani** W/o Gopala Krishna, Aged major, R/at RC layout, marathi badavane, Malur Town Malur Taluk Koalr Dist

Whereas, Petitioner have prepared appeal against the judgment and decree passed in OS No. 31/2003 your Hereby summoned to appear in this Court in person, on pleader duly instructed and able to answer all material question relating to the suit, or who shall be accompanied by some person, able answer all such questions, on the 23 day of March 2026 at 11 "O" in the noon, to answer the claim, and as day fixed for your appearance is appointed for the final disposal of the suit you must be prepared to produce on the day all the witness upon whose evidence and all the documents upon which you intend to rely in support of you defense.

Taken notice that, in default of your appearance of the day before maintained the suit will be heard and determined in your absence. Given under my hand and the seal of the Court is day of 18.02.2026

By Order of the Court
Shirastedar, Hon'ble Civil Judge Court At Malur

T. Venkata reddy, Advocate, Doomlight circle, Kolar

CHANGE OF NAME

I, **SALONI JAIN**, resident of Flat No. 16122, Tower 16, Prestige Lakeside Habitat, Varthur Main Road, Gunjur, Bengaluru-560087, Karnataka, India, do hereby declare that I have changed my name from **JAIN SALONI PRAKASH** to **SALONI JAIN,** vide affidavit dated 18.02.2026, sworn to before B. Chitra, Advocate & Notary Public, Govt. of India, Bengaluru.

CHANGE OF NAME

I, Deepali Agarwal, D/o. Vasudev Agarwal, R/at No. 1121, Prestige Westwoods, Minerva Mill Compound, Gopalapura, Binnipete, Bengaluru - 560023, Karnataka, India, I have changed my name from **DEEPALI VASUDEV AGARWAL** to **DEEPALI AGARWAL**. Vide affidavit dated 11.02.2026, Sworn before Advocate and Notary H S Sakalesh Aradhya, Bengaluru.

PUBLIC NOTICE

My client, **SRI. DEVARAJ**, son of Sri. Annelappa, residing at House No. 20/1, 10th Cross, Swimming pool Extension, Malleshwaram, Bangalore -560 003, and he was the absolute owner in respect of Immovable Property bearing Municipal No. 52, PID No. 15-48-52, E-PID No. 1239872688, 2nd Cross Road, Indiranagar slum, Rajajinagar, Bangalore formed in Survey No. 5, 3rd Block by BDA in Shivanahalli, Indiranagar Slum, now coming under BBMP Ward No. 15, Bangalore measuring East to West 15 feet and North to South 18.6 feet consisting of Ground + 1 + 2 Floors along with all civic amenities and bounded on East by: Site No. 51, West by: Site No. 53, North by: Site No. 84, South by: 2nd Cross Road. That on 15/01/2026, when I was searching for the Original Sale Deed dated 30/08/2006, Document No. RJN-1-03006-2006-07, registered in the Office of the Sub-Registrar, Rajajinagar, Bangalore for registration of the Schedule Property in the name of Smt.S.Shalini and to hand over the Original to Smt. S. Shalini and I found it to be missed and I searched at my residence and all other possible places and could not find the same.

Hence, my client had lodged a Police Complaint intimating the loss of the said original Sale Deed on Online Platform dated 24/01/2026, any person/s finding the Original Sale Deeds may please to hand over the same either to the undersigned or to the Owner, if any person claiming any rights, title or interest based on the said sale Deeds should write the undersigned **within 7 days** of this Public Notice.

S.N. RAMAPRASAD, Advocate
No. 165, 2nd Floor, Near City Central Library, Sampige Road, Malleshwaram, Bangalore - 560003

BEFORE THE MOTOR ACCIDENT CLAIMS TRIBUNAL AT BANGALORE (SCCH-19)
MVC No. 4720/2025

BETWEEN: Shwetha ... PETITIONER
AND: Santhosh.U.R & another ... **RESPONDENT**

NOTICE TO RESPONDENT No.1

Santhosh.U.R, S/o Rajashekar, No.95, Gajanana Nagar, Heggana Halli Cross, Vishwaneedam, Bangalore-91. (Owner of the TT Cab bearing Reg No.KA-53-C-7208)

WHEREAS, the petitioner in MVC.No.4720/2025, has filed the above claim petition against the respondents seeking compensation for a Sum of Rs.50,00,000/- for the injuries sustained by him in a road traffic accident involving your vehicle TT Car bearing Reg No.KA-53-C-7208, which occurred on 30-04-2025 at about 05.20 PM, near Rammandir Bus Stop, 6th Cross, 5th Main, Chamarajpet, Bangalore, you are hereby directed to be present before the Hon'ble court (MAYO HALL SCCH-19) on **11-03-2026** at 11:00 A.M. personally or through a pleader in the above case, duly instructed by you, failing which the matter will be heard in your absence, placing you Ex-parte.

Given under my hand and seal of the court on 12-02-2026

By order of the court, Sheristedar, Court of Small Causes, Mayo Hall Unit, Bangalore.

M. SUBRAMANI, Advocate
No.13, 12th Cross, Udayaravi Divine Paradise Building, 3rd floor, Cubbonpet, Bangalore-560002.

ಮೂರನೇ ಅಪರ ಮುಖ್ಯ ಮಂಡಳಿಯ ನ್ಯಾಯಾಲಯ, ಬೆಂಗಳೂರು

ಸಿ.ಮಿಸ್. ನಂ. 2229/2026

[illegible]

ಮಾನ್ಯ ಪ್ರಧಾನ ... ನ್ಯಾಯಾಲಯ, ಬೆಂಗಳೂರು

Rev.Pet.(BR) No.25/2025.

[illegible]

ಕ್ರಿಮಿನಲ್ ಮಿಸ್ ನಂ. 50036/2026

[illegible]

IN THE COURT OF THE VII ADDL. CITY CIVIL AND SESSIONS JUDGE AT BANGALORE

O.S. No. 2952/2024
CCH No. 19

BETWEEN
State Bank of India
Retail Assets Central Processing Centre (RACPC), No.241, 19th Main Road, HSR Layout, Sector-4, Bangalore-560102.
...**PLAINTIFF**

AND
Isaac Thomas Rajan
...**DEFENDANT**

SUMMONS TO DEFENDANT

Sri. Isaac Thomas Rajan,
Residing at 15/16, New No. 29/11, 36th Cross, 19th Main, 5th Block, HBR Layout, Kalyana Nagar, Bangalore-560043

WHEREAS, the Plaintiff has instituted a suit against you under Order 7 Rule 1 r/w Section 26 of the Code of Civil Procedure, 1908 for the relief of recovery of money for a sum of **Rs. 5,35,798/-** with full costs and current and future interests and interest compounded monthly from the date of filing of the suit.

You are hereby summoned to appear before the court i.e., Additional City Civil and Sessions Judge, CCH-19, Bangalore in person or by pleader duly instructed to answer the claim on **26.02.2026 at 11.00 A.M.** Failing which are will be heared and declared as Ex Parte.

Given under my hand and the seal of the court this the **13th day of January 2026.**

M.G. VYKUNTASWAMY
Advocate,
No. 252/7, 2nd Floor, 9th Main, Sampangiramanagara, Bangalore-560027

By the order of the Assistant Registrar City Civil Court Bangalore

---

ಮಾನ್ಯ ... ನ್ಯಾಯಾಲಯ, ಬೆಂಗಳೂರು

ಸಿ.ಮಿಸ್. ಸಂಖ್ಯೆ. 8880/2025

[illegible]

IN THE COURT OF THE 7th SENIOR CIVIL JUDGE BANGALORE RURAL DISTRICT AT BANGALORE
O.S No. 1269/2009

BETWEEN : Smt. Anjinamma
Since Dead by her Lrs ...**PLAINTIFFS**
AND : Smt. Nanjamma & Others ...**DEFENDANTS**

SUIT SUMMONS TO THE DEFENDANTS No.6 (a) to (c)

6(a). Sunanda, W/o Late. Byrappa, Aged about 35 years, **6(b). Gowtham** S/o Late. Byrappa, Aged about 16 years, **6(c). Nithyashree,** D/o Late. Byrappa Aged about 12 years, D.6(b) & (c) are Minors Represented by their Mother D.6(a). All are residing at M.A. Prakash Layout, Near Railway Station, Devanahalli Road, Doddaballapura, Bangalore Rural District.

Whereas, the plaintiffs have filed the above suit against the defendants for the relief of partition and such other reliefs in respect of properties bearing Sy.No. 15/1 measuring 3 acres 36 guntas, Sy.No. 17/2 measuring 4 guntas, Sy.No. 18/2 measuring 2 acres 26 guntas, Sy.No. 69 measuring 7 guntas out of 2 acres, Sy.No. 83/3, measuring 2 acres 8 guntas, Sy.No. 86/3 measuring 9½ guntas, Sy.No. 269 measuring 34 guntas, Kaneshumari No.3 measuring East to West 39 feet and North to South 67 feet, Kaneshumari No.58 & Property No. 57 measuring East to West 22 feet and North to South 15 feet, Kaneshumari No. 64 & Property No.62 measuring East to West 27 feet and North to South 26 feet and House property bearing No. 67/65 measuring East to West 72 feet and North to South 46 feet all the properties situated at Ittagalapura Village, Hesaragatta Hobli, Bengaluru North Taluk, Bangalore Urban District.

You are hereby summoned to appear before this court **on 28.03.2026 at 11.00 a.m.** in person or through advocate / pleader to answer the questions to the same. Failing which the suit will be heard and determined as ex-parte.

Given under my hand & seal of the court, this 09th day of February 2026.

By Order of the Court, Chief Ministerial Officer, Senior Civil Judge Court, Bengaluru Rural Dist., Bengaluru.

Advocate for Plaintiff LRs

IN THE COURT OF THE HON'BLE ADDL DISTRICT AND SESSIONS JUDGE FTSC 1(SPECIAL COURT FOR POCSO CASES) AT KOLAR.
RA 03/2023.

Appellant : Sharadhamma V/s
Respondent : Munivenkatappa

PAPER PUBLICATION

Proposed respondent No. 05 :5 Anjith S/o Late. Srinivasmurthy, Aged about 25 years, R/a. Narasapura Village, kolar

Summons to the Proposed Respondent No. 5, under order 5 rule 20 of C.P.C

By this Paper Publication, the appellants have filed appeal against you and other respondents by challenging the Judgement and Decree passed by the III Addl.Senior Civil Judge and CJM at Kolar, in O.S No.237/2018.dated: 18.11.2022. The Hon'ble Court has sent a Notice to you through court and register post, but it was returned un-served. Hence this paper publication add that you will be present before this Hon'ble court by yourself or through your advocate on 16.03.2026 at 11 o clock fixed for your appearance before this Hon'ble court otherwise this Hon'ble court order pleased ex-party and proceed in the suit as per law in the interest of justice and equity.

Take notice that in default of your appearance on the day before mentioned the suit will be heard determined in your absence.

Given under my hand & Seal of the court dated. 18.02.2026.

As per orders of Hon'ble court
CMO, Addl District and Section judge FTSC-1 (Spl Court For POCSO)

Advocate for Appellant
H V Krishnegowda, Advocate Maruthi complex,Achari beedi, K.T. street, kolar-563101, Mobile: 9481415999
Kolar, Date. 16-02-2026

IN THE COURT OF THE XIV ADDL CITY CIVIL JUDGE, AT BANGALORE

OS.No 1306/2024 CCH-28

BETWEEN:
State Bank of India
Retail Assets Central Processing Centre (RACPC) No.241, 19 th Main Road, HSR Layout Sector-4, Bangalore-560102
....**Plantiff**

AND
Chethan, Kumar N
No 77/3, Prakash Layout, Rajbhavi Road, Varthur Bangalore-560087 ...... **Defendant**

SUMMONS TO DEFENDANT

WHEREAS, the plaintiff has instituted a suit against you under Order 7 Rule 1 r/w Section 26 of the Code of Civil Procedure, 1908 for the relief of recovery of money for a sum of **Rs. 8,43,825/-** with full costs and current and future interests and interest compounded monthly from the date of filing of the suit. You are hereby summoned to appear before the court ie., Small Causes Judge, CCH-28, Bangalore in person or by pleader duly instructed to answer the claim on... **21.02.2026 at 11.00 AM.** Failing which you will be placed Ex Parte.

Given under my hand and seal of the court this the 31st day of January 2025.

By The Order of the Assistant Registrar City Civil Court Bangalore

M.G. VYKUNTASWAMY
ADVOCATE,
No. 252/7, 2 floor, 9 Main, Sampangiramanagara, Bangalore-560027

ಮಾನ್ಯ ... ನ್ಯಾಯಾಲಯ, ಬೆಂಗಳೂರು

ಸಿ.ಮಿಸ್. ಸಂಖ್ಯೆ. 8881/2025

[illegible]

ಪ್ರಕಟಣೆ — ಓ.ಎಸ್.ನಂ.49/2024

[illegible]

IN THE COURT OF THE HON'BLE ADDL. CIVIL JUDGE AND JMFC AT CHINTHAMANI
Crl.Mis.No. 49/2025

Between; 1.Venkatalakshmamma W/o late Krishnappa Aged about 40 years
2.Chaithra.M.K W/o Venkatesh N D/o Late Krishnappa, Aged about 28 years, R/ at Chilakalanerpu village, Chinthamanai Taluk, Chikkballapura district.
3.Shravani M.K. D/o late Krishnappa, Aged about 25 years, The petitioner No1. And 3 are R/at Kendahalli village, Kaiwara Hobli, Chinthamani Taluk, Now residing at Mavukere village Chinthamani taluk Chikkballapura district. ...**Petitioners**

AND
The Registrar of Births and Deaths
The Tasildar, Chinthamani taluk
..........**Responent**

NOTICE TO THE INTERESTED PERSONS

It is hereby notify for the information that the petitioners have filed petition before this Hon'ble court. to get the death certificate of 1st petitioner, husband and 2nd and 3rd petitioner father by name Krishnappa s/o Munishamappa was died on 17.10.2003 at Kendanahalli village, Kaiwara Hobli, Chinthamani taluk, Chikkballapura district, Under section 13(3) of Birth and Death Registration, and the above case is posted for hearing on 26.03.2026 at about 11.00. a.m any interested persons having any interested in the above case may come and if any objection may file in the proceedings before court without fail this Hon'ble court will decide the matter before grant of leave by this Hon'ble court.

Given under my hand and seal of court this the day 6/02/2026

By Order of the Court
Chief Ministerial Officer, Civil Judge& JMFC Chinthamani

Advocate for Petitioner.
Ashoka K.S. Advocate, Chinthamani
Chinthamani, Date:

ಎಲ್.ಸಿ.ನಂ. 10/2015-16

[illegible]

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಯಶವಂತಪುರ, ಬೆಂಗಳೂರು-22

ಪ್ರಕಟಣೆ

[illegible]

... ದಿನಗಳೊಳಗಾಗಿ ದಾಖಲೆ ಸಹಿತ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಬೆಂಗಳೂರು, ಇವರಿಗೆ ಸಲ್ಲಿಸಲು ತಿಳಿಸಲಾಗಿದೆ ಮತ್ತು ನಿಗದಿತ ಅವಧಿ ಮುಗಿದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/- ಕಾರ್ಯದರ್ಶಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-464/4125/2025-26 ದಿನಾಂಕ: 17.02.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಎ.ದೇವರಾಜ್, ಶ್ರೀಮತಿ ಪಿ.ಹೇಮರೆಡ್ಡಿ ಮತ್ತು ಡಿ. ವಿದ್ಯ	ಆನೇಕಲ್	ಸರ್ಜಾಪುರ	ಹಲಸಹಳ್ಳಿ ತಿಪ್ಪಸಂದ್ರ	29/1	0-14	ವ್ಯವಸಾಯ	ವಸತಿ
2					29/2	0-14.25		
3					29/6	0-28.50		
4					29/7	0-03.50		
5					29/8	0-02.75		
6					30/4	0-10.50		
7					30/5	0-13.75		
8					30/6	0-01		
9					30/7	0-08		
10					30/8	0-01.50		
11					30/9	0-06.25		
12					30/10	0-11.75		
13					30/11	0-04.25		
					ಒಟ್ಟು	3-00		

ಷರಾ: ಪ್ರಸ್ತಾವಿತ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ಈ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು - 560 009. ದೂ.ಸಂಖ್ಯೆ : 080-22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-82/2084/2025-26 ದಿನಾಂಕ: 18.02.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : 1) ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಸಾರಥಿ ಕುರುಬರಹಳ್ಳಿ 1ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ಬೀದಿ ದೀಪಗಳ ಸೌಕರ್ಯ ಒದಗಿಸುವ ಕಾಮಗಾರಿ. (2ನೇ ಕರೆ).

2) ತುಮಕೂರು ತಾಲ್ಲೂಕು ಮತ್ತು ಜಿಲ್ಲೆ, ವಸಂತನರಸಾಪುರ ಕೈಗಾರಿಕಾ ಪ್ರದೇಶದ ಜಪಾನೀಸ್ ಕೈಗಾರಿಕಾ ಪಾರ್ಕ್‌ನ ಆವರಣದಲ್ಲಿ ಹಾದುಹೋಗುವ ಹಾಲಿ 66ಕೆವಿ ಕೋರಾ-ತೋವಿನಕೆರೆ ಎಸ್‌ಸಿ ಮಾರ್ಗವನ್ನು ಸ್ಥಳಾಂತರಿಸುವ ಕಾಮಗಾರಿ.

3) ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ವೈ ಜಂಕ್ಷನ್‌ನಿಂದ ಬೈಕಂಪಾಡಿ ಕೈಗಾರಿಕಾ ಪ್ರದೇಶವನ್ನು ಸಂಪರ್ಕಿಸುವ ಸಂಪರ್ಕ ರಸ್ತೆ (ಒಡಿಸಿ ರಸ್ತೆ) ಸುಧಾರಣೆ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 05.03.2026 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು-1, ಕೆಐಎಡಿಬಿ, ಬೆಂಗಳೂರು

DIPR/CP/5725/Zen/2025-26

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ.ಮಂ.ವಿ.ಟಿ.ಎಸ್.ಡಿ:(49ಇ/46ಇ):2025-26:ಚೆಇ-2 ದಿನಾಂಕ: 17.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ) / ಸಮಯಾವಧಿ ವಿಸ್ತರಣೆ

ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (CMIDP) ಇಂಡೆಂಟ್ ನಂ: 33452 ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಮತ್ತು **ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (CMIDP)** ಇಂಡೆಂಟ್ ನಂ: 32076, 32074, 32070, 32069, 32068, 32067, 32066, 32063 ಈ ಕಾಮಗಾರಿಗಳಿಗೆ **ಸಮಯಾವಧಿ ವಿಸ್ತರಣೆ ಮಾಡಲಾಗಿದ್ದು,** ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 25.02.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.50.00 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.200.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ KW-2, KW-4 ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ರೂ.5.00ಲಕ್ಷ ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಪಾವತಿಸಬೇಕಾದ ಮೊತ್ತ, ಇ.ಎಮ್.ಡಿ. ಮೊತ್ತ ಹಾಗೂ ಕಾಮಗಾರಿಗಳ ಮೀಸಲಾತಿ ವಿವರ, ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

DIPR/DK/KSMCA/1611/25-26 dt 18.02.2026

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬೆಂಗಳೂರು

ಸಾರ್ವಜನಿಕ ಪ್ರಕಟಣೆ

[illegible]

ಸಹಿ/- ಕಾರ್ಯದರ್ಶಿ

ಕರ್ನಾಟಕ ಸರಕಾರ
ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಗದಗ

ಕೊಠಡಿ ಸಂಖ್ಯೆ04, ನೆಲಮಹಡಿ, ಜಿಲ್ಲಾಡಳಿತ ಭವನ, ಹುಬ್ಬಳ್ಳಿ ರಸ್ತೆ, ಗದಗ 582102
ಇ-ಮೇಲ್-lakkundipradhikara@gmail.com ದೂರವಾಣಿ ಸಂಖ್ಯೆ:-9620988939

ಕ್ರ.ಸಂ: ಲ.ಪಾ.ಪ್ರ.ಅ.ಪ್ರಾಧಿಕಾರ/ಪಮ/02/2025-26 ದಿನಾಂಕ: 17-02-2026

ಇ-ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ https://kppp.karnataka.gov.in)

ಆಯುಕ್ತರು, ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಗದಗ ಇವರಿಗೆ ಅವಶ್ಯವಿರುವ ಪುಸ್ತಕಗಳ ಮುದ್ರಣಕ್ಕಾಗಿ ಅನುಬಂಧ-I ರಲ್ಲಿ ನಮೂದಿಸಿರುವಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ (KTPP-ACT) ಅಧಿನಿಯಮ-1999 ಮತ್ತು ನಿಯಮಗಳು 2000 ರ ಪ್ರಕಾರ **kppp.karnataka.gov.in Portal** ಮೂಲಕ ಅರ್ಹ ಮುದ್ರಣಾಲಯದ ಮುದ್ರಕರಿಂದ ದ್ವಿಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್) ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಂಖ್ಯೆ: **LHADA/2025-26/IND00101** ಆಸಕ್ತ ಟೆಂಡರದಾರರು ಕೆ.ಪಿ.ಪಿ.ಪಿ. Portalನಲ್ಲಿ ಇ.ಎಮ್.ಡಿ ಮೊತ್ತದೊಂದಿಗೆ ಟೆಂಡರ್ ಅರ್ಜಿ ಸಲ್ಲಿಸತಕ್ಕದ್ದು.

-: ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ :-

ಅ. ನಂ	ವಿವರ	ಪುಸ್ತಕ ಪ್ರಕಟಣೆ ಟೆಂಡರ್
1	ಟೆಂಡರ್ ಪ್ರಕಟಣೆ ದಿನಾಂಕ	ದಿನಾಂಕ : 17-02-2026
2	ಟೆಂಡರಿನ ಒಟ್ಟು ಅಂದಾಜು ಮೊತ್ತ	ರೂ. 2500000/-
3	ಟೆಂಡರ್ ಅರ್ಜಿ ದೊರೆಯುವ ಸ್ಥಳ	kppp.karnataka.gov.in Portal ಮುಖಾಂತರ
4	ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 24-02-2026 ಸಂಜೆ 5.30 ಗಂಟೆ
5	ತಾಂತ್ರಿಕ ದಾಖಲೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ : 26-02-2026 ಬೆಳಗ್ಗೆ 11.00 ಗಂಟೆ
6	ಆಕ್ಷೇಪಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ	ದಿನಾಂಕ : 20-02-2026 ಸಂಜೆ 05.00 ಗಂಟೆ
7	ಆರ್ಥಿಕ ದಾಖಲೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ : 02-03-2026 ಬೆಳಗ್ಗೆ 11.00 ಗಂಟೆ
8	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ಒಟ್ಟು ರೂ.50000/-
9	ಟೆಂಡರ್ ತೆರೆಯುವ ಸ್ಥಳ ಹಾಗೂ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ಕಚೇರಿ ವಿಳಾಸ, ದೂರವಾಣಿ ಸಂಖ್ಯೆ	ಆಯುಕ್ತರ ಕಾರ್ಯಾಲಯ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕೊಠಡಿ ಸಂಖ್ಯೆ: 04, ಜಿಲ್ಲಾಡಳಿತ ಭವನ, ಗದಗ ದೂರವಾಣಿ ಸಂಖ್ಯೆ: 9620988939

ಸಹಿ/-ಆಯುಕ್ತರು
ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಗದಗ

ವಾ.ಸಾ.ಇ/ಗದಗ/656/ದೇ:ಪಾಂಡೆಪ್ಪು.ಬ/2025-26

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

ಸಂಖ್ಯೆ:ಎಸ್‌ಯುಪಿ(1)ಸಿ-67/2025-26 ದಿನಾಂಕ: 02.02.2026

ಟೆಂಡರ್ ಅಧಿಸೂಚನೆ (ದ್ವಿ-ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿಪಿ. ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ಕ್ಯಾಥ್‌ಲ್ಯಾಬ್ ವಿಭಾಗದ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ ಕನ್ಸ್ಯೂಮೇಬಲ್ಸ್/ಡಿಸ್ಪೋಸೆಬಲ್ಸ್‌ಗಳಿಗೆ ಟೆಂಡರ್ ಕರೆಯಲಾಗಿದೆ. ಕೆಪಿಪಿಪಿ ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 06.03.2026 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.inನ್ನು ಸಂಪರ್ಕಿಸಲು ಕೋರಿದೆ.

DHFWS/2025-26/IND2172

ಸಹಿ/- ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು, ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

DIPR/DK/KSMCA/1619/25-26 dt. 18.02.2026

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರರು, ಕೃಭಾಜನಿನಿ, ಇಂಕಾಕಾ, ನಿಮಹೋ, ವಿಭಾಗ ಸಂ-8, ಝಳಕಿ - 586204. ತಾ:ಇಂಡಿ, ಜಿ: ವಿಜಯಪುರ. ದೂರವಾಣಿ ಸಂ: 08422-282227
ಇ-ಮೇಲ್:eezalakidiv8@gmail.com

ಸಂ:ಕೃಭಾಜನಿನಿ/ಇಂಕಾಕಾವಿ-8/ಝಳಕಿ/ಡಿಬಿ/ಟೆಂಡರ-13/ಅಲ್ಪಾವಧಿ/2025-26/1922 ದಿನಾಂಕ:17.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕೃಭಾಜನಿನಿ, ಇಂಕಾಕಾ, ನಿಮಹೋ, ವಿಭಾಗ ಸಂ: 8 ಝಳಕಿ ತಾ: ಇಂಡಿ ಇವರು ಶೇಕಡಾವಾರು ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-3 ರಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ-1999 ಮತ್ತು ನಿಯಮಗಳು 2000 ರಂತೆ ದ್ವಿ-ಲಕೋಟೆ ಪದ್ಧತಿಯಡಿ ಕ್ಲಾಸ್-3 ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಜಿ.ಎಸ್.ಟಿ ಹೊರತುಪಡಿಸಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಕಾಮಗಾರಿಯ ವಿವರ

Name of Work: Emergency work for Removing the Collapsed and Unstable slopes from Km 75.00 to 77.00 km of IBC (Selected Reaches)

ಟೆಂಡರ ಮೊತ್ತ : ರೂ. 84.72ಲಕ್ಷ, ಇ.ಎಂ.ಡಿ ರೂ: **1,69,000/-**

ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಕೆಳಕಂಡ ಕಛೇರಿಯಿಂದ ಅಥವಾ ವೆಬ್‌ಸೈಟನಲ್ಲಿ www.kppp.karnataka.gov.in ಪಡೆದುಕೊಳ್ಳಬಹುದು.

ಟೆಂಡರಿನ ವಿವಿಧ ಹಂತಗಳು: 1] ಟೆಂಡರ ಡಾಕ್ಯುಮೆಂಟನ್ನು ಇ-ಪೋರ್ಟಲ್‌ನಲ್ಲಿ ವೀಕ್ಷಿಸುವ ಮತ್ತು ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿಯು ದಿನಾಂಕ: **23.02.2026** ರಿಂದ **02.03.2026** ರ **ಸಾಯಂಕಾಲ 4.30 ಗಂಟೆಯವರೆಗೆ.**

2] ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:**04.03.2026** ಬೆಳಗ್ಗೆ 11.00 ಗಂಟೆ.

3] ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **06.03.2026** ಬೆಳಗ್ಗೆ 11.00 ಗಂಟೆ.

ಟಿಪ್ಪಣಿ: 1) ಮೇಲೆ ತಿಳಿಸಿದ ದಿನಾಂಕಗಳು ಸಾರ್ವಜನಿಕ ರಜಾ ದಿನವಾದಲ್ಲಿ ಅಥವಾ ಹಾಗೆ ಘೋಷಿಸಿದಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು. 2) ಷರತ್ತಿನ ಟೆಂಡರುಗಳನ್ನು ನಿರಾಕರಿಸಲಾಗುವುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನು ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 3) ಹೆಚ್ಚಿನ ವಿವರಗಳಿಗಾಗಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜಿನೀಯರರು, ಕೃಭಾಜನಿನಿ, ಇಂಕಾಕಾ, ನಿಮಹೋ, ವಿಭಾಗ ಸಂ:8,ಝಳಕಿ

ವಾಸಾಸಂಇ/ವಿಜಯಪುರ/721/ಕೆಪಿಎಂಸಿಎ/2025-26



ಕೋಲಾರ ಜಿಲ್ಲೆಯ ವೇಮಗಲ್‌ನಲ್ಲಿ ದೇಶದ ಮೊಟ್ಟ ಮೊದಲ ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣೆ ಘಟಕವನ್ನು ಉದ್ಘಾಟಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್ ಅವರು ವರ್ಚುವಲ್ ಮೂಲಕ ಉದ್ಘಾಟನಾ ಸಮಾರಂಭ ನೆರವೇರಿಸಿದ್ದಾರೆ. ಫ್ರಾನ್ಸ್ ಮೂಲದ ಏರ್‌ಬಸ್ ಮತ್ತು ಭಾರತದ ಟಾಟಾ ಅಡ್ವಾನ್ಸಡ್ ಸಿಸ್ಟಮ್ಸ್ ಲಿಮಿಟೆಡ್ ಈ ಘಟಕವನ್ನು ಜಂಟಿಯಾಗಿ ಅಭಿವೃದ್ಧಿಪಡಿಸಿದೆ.

ಕೋಲಾರ ಜಿಲ್ಲೆಯ ವೇಮಗಲ್‌ನಲ್ಲಿ ದೇಶದ ಚೊಚ್ಚಲ ಖಾಸಗಿ ಹೆಲಿಕಾಪ್ಟರ್ ಜೋಡಣಾ ಘಟಕ

ಕರ್ನಾಟಕದಲ್ಲಿ ವರ್ಷಕ್ಕೆ 20 ಕಾಪ್ಟರ್ ನಿರ್ಮಾಣ

ಅರವಿಂದ ಬಿರಾದಾರ

ರಾಜ್ಯಕ್ಕೆ ಮತ್ತೊಂದು ಗರಿ

ಕರ್ನಾಟಕದಲ್ಲಿ ಈಗಾಗಲೇ ಎಚ್‌ಎಎಲ್, ಇಸ್ರೊ, ಡಿಆರ್‌ಡಿಒ ಮೊದಲಾದ ಸಂಸ್ಥೆಗಳು ರಕ್ಷಣೆ ಹಾಗೂ ಬಾಹ್ಯಾಕಾಶ ವ್ಯವಸ್ಥೆಯ ಬೆನ್ನೆಲುಬಿನಂತೆ ಕಾರ್ಯನಿರ್ವಹಿಸುತ್ತಿವೆ. ವೇಮಗಲ್ ನಲ್ಲಿ ನಿರ್ಮಿಸಿರುವ ಎಚ್–125 ಹೆಲಿಕಾಪ್ಟರ್‌ಗಳ ಜೋಡಣಾ ಘಟಕದಿಂದ ರಾಜ್ಯ ಸ್ಥಾನಮಾನ ಮತ್ತಷ್ಟು ಗಟ್ಟಿಯಾಗಲಿದೆ.

ಭಾರತ ಫ್ರಾನ್ಸ್ ಒಪ್ಪಂದ

ಈ ಪಾಲುದಾರಿಕೆಯು ಎಚ್–125 ಹೆಲಿಕಾಪ್ಟರ್‌ನ ನಾಗರಿಕ ಮತ್ತು ಸಂಭಾವ್ಯ ಮಿಲಿಟರಿ ರೂಪಾಂತರಗಳನ್ನು ಉತ್ಪಾದಿಸಲು ಭಾರತೀಯ ಅಸೆಂಬ್ಲಿ ಲೈನ್ ಅನ್ನು ಸ್ಥಾಪಿಸುವುದನ್ನು ಒಳಗೊಂಡಿದೆ. ಸಂವೇದಕಗಳು ಅಥವಾ ಮಿಷನ್ ಉಪಕರಣಗಳನ್ನು ಸಾಗಿಸುವಂತಹ ಸುಧಾರಿತ ಸಾಮರ್ಥ್ಯಗಳೊಂದಿಗೆ ಯುದ್ಧತಂತ್ರದ ಪಾತ್ರಗಳಿಗಾಗಿ ವಿನ್ಯಾಸಗೊಳಿಸಲಾದ ಮಿಲಿಟರೀಕೃತ ಆವೃತ್ತಿಯಾದ ಎಚ್–125 ಅನ್ನು ಸಹ ಯೋಜನೆಗಳು ಪರಿಗಣಿಸುತ್ತವೆ. ಹಲವಾರು ಭಾರತೀಯ ಪೂರೈಕೆದಾರರು ಮೌಲ್ಯ ಸರಪಳಿಯನ್ನು ಪ್ರವೇಶಿಸುತ್ತಿದ್ದಾರೆ, ಉದಾಹರಣೆಗೆ ಮಹೀಂದ್ರಾ ಏರೋಸ್ಟ್ರಕ್ಚರ್ಸ್, ಫ್ಯೂಸ್ಲೇಜ್ ಘಟಕಗಳನ್ನು ತಯಾರಿಸಲು ಒಪ್ಪಂದ ಮಾಡಿಕೊಂಡಿದ್ದು, ಜಾಗತಿಕ ಹೆಲಿಕಾಪ್ಟರ್ ಉತ್ಪಾದನಾ ವ್ಯವಸ್ಥೆಯಲ್ಲಿ ಭಾರತದ ಪಾತ್ರವನ್ನು ಇನ್ನಷ್ಟು ಹೆಚ್ಚಿಸುತ್ತಿದೆ.

ಏನಿದು ಎಚ್ -125 ಹೆಲಿಕಾಪ್ಟರ್? ಏರ್‌ಬಸ್

ಎಚ್–125 ಎಂಬುದು ಎಕ್ಯುರ್ಯುಯಿಲ್ ಸರಣಿಯಿಂದ ಬಂದ ಏಕ–ಎಂಜಿನ್ ಲೈಟ್ ಯುಟಿಲಿಟಿ ಹೆಲಿಕಾಪ್ಟರ್ ಆಗಿದೆ. ಇದುವರೆಗೆ ಈ ಸಂಸ್ಥೆಯಿಂದ ಉತ್ಪಾದಿಸಲಾದ ಅತ್ಯಂತ ಯಶಸ್ವಿ ಹೆಲಿಕಾಪ್ಟರ್‌ಗಳಲ್ಲಿ ಒಂದಾಗಿದೆ. ಇದು ವಿಶ್ವಾದ್ಯಂತ 40 ಮಿಲಿಯನ್‌ಗಿಂತಲೂ ಹೆಚ್ಚು ಹಾರಾಟದ ಗಂಟೆಗಳನ್ನು ದಾಖಲಿಸಿದೆ ಮತ್ತು ವೈಮಾನಿಕ ಕೆಲಸದಿಂದ ಹುಡುಕಾಟ ಮತ್ತು ರಕ್ಷಣೆಯವರೆಗಿನ ಕಾರ್ಯಾಚರಣೆಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ. ಮೂಲತಃ ಎಎಸ್–350 ನಂತಹ ಹಿಂದಿನ ಬ್ರಾಂಡ್ ಹೆಸರುಗಳಲ್ಲಿ ಕರೆಯಲ್ಪಡುತ್ತಿದ್ದ ಎಚ್–125, ಅದರ ವಿಶ್ವಾಸಾರ್ಹತೆ, ಕಡಿಮೆ ನಿರ್ವಹಣೆ ಮತ್ತು ಹೊಂದಿಕೊಳ್ಳುವಿಕೆಗೆ ಮೌಲ್ಯಯುತವಾಗಿದೆ. ಇದು ತುರ್ತು ಸೇವೆಗಳು, ವೈಮಾನಿಕ ಚಿತ್ರೀಕರಣ, ಪ್ರವಾಸೋದ್ಯಮ, ಕಾನೂನು ಜಾರಿ, ಅಗ್ನಿಶಾಮಕ ಮತ್ತು ನಾಗರಿಕ ಸಾರಿಗೆಯಂತಹ ವ್ಯಾಪಕ ಶ್ರೇಣಿಯ ವಲಯಗಳಿಗೆ ಸೇವೆ ಸಲ್ಲಿಸುತ್ತದೆ.

ದೇಶದ ಮೊದಲ ಘಟಕ ವೇಮಗಲ್‌ನಲ್ಲಿ

ಹೆಲಿಕಾಪ್ಟರ್ ಜೋಡಣಾ ಘಟಕವು ಯುರೋಪಿಯನ್ ಯೂನಿಯನ್ ಏವಿಯೇಷನ್ ಸೇಫ್ಟಿ ಏಜೆನ್ಸಿ (ಇಎಎಸ್‌ಎ) ಪ್ರಾರಂಭದಲ್ಲಿಯೇ ಪ್ರಮಾಣೀಕರಿಸಿದ ದೇಶದ ಮೊಟ್ಟ ಮೊದಲ ಘಟಕವಾಗಿದೆ. ದೇಶದ ಮೊದಲ ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣಾ ಘಟಕ ಇದಾಗಿದ್ದು, ಮುಂದಿನ 20 ವರ್ಷಗಳಲ್ಲಿ ದಕ್ಷಿಣ ಏಷ್ಯಾದಲ್ಲಿ ಸುಮಾರು 500 ಹೆಲಿಕಾಪ್ಟರ್‌ಗಳಿಗೆ ಬೇಡಿಕೆ ಸೃಷ್ಟಿಯಾಗಲಿದೆ. ಅದನ್ನು ಪೂರೈಸಲು ಭಾರತವು ಸಮರ್ಥವಾಗಿದೆ. ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ ಮತ್ತು ಏರ್‌ಬಸ್ ಹೆಲಿಕಾಪ್ಟರ್‌ಗಳ ಪಾಲುದಾರಿಕೆಯಲ್ಲಿರುವ ಈ ಸೌಲಭ್ಯವು, ಹಿಮಾಲಯದ ಶಿಖರಗಳಂತಹ ಎತ್ತರದ ಪ್ರದೇಶಗಳು ಸೇರಿದಂತೆ ಕಠಿಣ ಪರಿಸ್ಥಿತಿಯಲ್ಲಿಯೂ ಕಾರ್ಯನಿರ್ವಹಿಸುವ ಸಾಮರ್ಥ್ಯವಿರುವ ಬಹುಮುಖಿ ಹೆಲಿಕಾಪ್ಟರ್‌ಗಳನ್ನು ನಿರ್ಮಿಸುತ್ತದೆ. ಈ ಯೋಜನೆಯು ಭಾರತದ ರಕ್ಷಣೆ, ನಾಗರಿಕ ವಿಮಾನಯಾನ, ರಫ್ತು ಮಹತ್ವಾಕಾಂಕ್ಷೆಗಳು ಮತ್ತು ವಿಶಾಲವಾದ ಮೇಕ್ ಇನ್ ಇಂಡಿಯಾ ಗುರಿಗಳನ್ನು ಬೆಂಬಲಿಸುತ್ತದೆ.

ಆತ್ಮನಿರ್ಭರ ಭಾರತದ ಬಹುದೊಡ್ಡ ಭಾಗ

ಈ ಯೋಜನೆಯು ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ ಮತ್ತು ಮೇಕ್ ಇನ್ ಇಂಡಿಯಾ ಅಭಿಯಾನದ ಭಾಗವಾಗಿದ್ದು, ದೇಶೀಯ ಏರೋಸ್ಪೇಸ್ ವಲಯದಲ್ಲಿ ಸಂಪೂರ್ಣ ಖಾಸಗಿ ಬಂಡವಾಳದಡಿ ಹೆಲಿಕಾಪ್ಟರ್ ನಿರ್ಮಾಣವಾಗುತ್ತಿದೆ. ಈ ಘಟಕದಲ್ಲಿ ಹೆಲಿಕಾಪ್ಟರ್‌ನ ಫ್ಯೂಸ್ಲೇಜ್ (ಕವಚ), ವಿದ್ಯುತ್ ವೈರಿಂಗ್, ನಿಯಂತ್ರಣ ವ್ಯವಸ್ಥೆಗಳು, ಎಂಜಿನ್ ಅಳವಡಿಕೆ ಮತ್ತು ಏವಿಯಾನಿಕ್ಸ್ ಉಪಕರಣಗಳ ಜೋಡಣೆಯ ಜೊತೆಗೆ ಅತ್ಯಾಧುನಿಕ ಗುಣಮಟ್ಟದ ಪರೀಕ್ಷೆಗಳೂ ನಡೆಯಲಿವೆ.



ಕ್ಯಾಥರೀನ್ ವಾಟ್ರಿನ್ ಭೇಟಿಗೆ ಯಾಕಿಷ್ಟು ಮಹತ್ವ?

ಫ್ರಾನ್ಸ್ ರಕ್ಷಣಾ ಸಚಿವೆ ಕ್ಯಾಥರೀನ್ ವಾಟ್ರಿನ್ ಈ ಭಾರತ ಭೇಟಿ ವೇಳೆ ಅವರು ಒಪ್ಪಂದಗಳಿಗೆ ಸಹಿ ಹಾಕಲಿದ್ದಾರೆ. ಒಂದು ರಕ್ಷಣಾ ಸಹಕಾರ ಒಪ್ಪಂದವನ್ನು ಮುಂದಿನ ಹತ್ತು ವರ್ಷಗಳಿಗೆ ನವೀಕರಿಸಲಾಗುತ್ತದೆ. ಹ್ಯಾಮರ್ ಕ್ಷಿಪಣಿಗಳ ಉತ್ಪಾದನೆಗೆ ಎಂಒಯು ಸಹಿ ಹಾಕಲಾಗುತ್ತದೆ. ಇದರೊಡನೆ, ಉಭಯ ದೇಶಗಳ ನಡುವಿನ ಪರಸ್ಪರ ನೈಜ ನಂಬಿಕೆಯನ್ನು ಪ್ರದರ್ಶಿಸುವ ಇನ್ನೊಂದು ಬೆಳವಣಿಗೆಯೂ ಇದ್ದು, ಭಾರತ – ಫ್ರಾನ್ಸ್ ಆಫೀಸರ್ಸ್ ಎಕ್ಸ್‌ಚೇಂಜ್ ಪ್ರೋಗ್ರಾಮ್ ಚಾಲನೆಗೊಳಿಸಲಿವೆ.

ಹೆಲಿಕಾಪ್ಟರ್ ರಫ್ತುದಾರ ದೇಶವಾಗಿ ಭಾರತ

ಇಲ್ಲಿ ತಯಾರಾಗುವ ಹೆಲಿಕಾಪ್ಟರ್‌ಗಳು ಕೇವಲ ಭಾರತಕ್ಕೆ ಸೀಮಿತವಾಗದೆ, ದಕ್ಷಿಣ ಏಷ್ಯಾದ ನೆರೆಯ ರಾಷ್ಟ್ರಗಳ ಅವಶ್ಯಕತೆಯನ್ನು ಪೂರೈಸಲಿವೆ. ಆ ಮೂಲಕ ಭಾರತವು ಹೆಲಿಕಾಪ್ಟರ್ ರಫ್ತುದಾರ ದೇಶವಾಗಿ ಬೆಳೆಯಲು ಸಹಕಾರಿಯಾಗಲಿದೆ.

ನಾನು ಕೈಗಾರಿಕೆ ಸಚಿವನಾದ ಬಳಿಕ ಘಟಕ ನಿರ್ಮಾಣಕ್ಕೆ 17 ಎಕರೆ ಜಮೀನು ನೀಡಲಾಗಿದ್ದು, ದಾಖಲೆಯ ರೀತಿಯಲ್ಲಿ ಕೇವಲ ಒಂದೂವರೆ ವರ್ಷದಲ್ಲಿ ಘಟಕ ಉದ್ಘಾಟನೆಯಾಗಿರುವುದು ಸಂತಸದ ವಿಷಯವಾಗಿದೆ. ಆಂಧ್ರಪ್ರದೇಶ, ಉತ್ತರಪ್ರದೇಶ ಮತ್ತು ಗುಜರಾತ್ ರಾಜ್ಯಗಳ ತೀವ್ರ ಸ್ಪರ್ಧೆ ನಡುವೆ ಈ ಯೋಜನೆ ಸಿಕ್ಕಿದೆ. ಮೊದಲ ವರ್ಷದಲ್ಲಿ 10 ಹೆಲಿಕಾಪ್ಟರ್‌ಗಳು ತಯಾರಾಗಲಿದ್ದು, ಮುಂದಿನ ಎರಡು ದಶಕಗಳಲ್ಲಿ 500 ಹೆಲಿಕಾಪ್ಟರ್‌ಗಳು ಸಿದ್ಧವಾಗಲಿವೆ.

■ **ಎಂ.ಬಿ.ಪಾಟೀಲ್,** ಕೈಗಾರಿಕಾ ಸಚಿವ

ಏರೋಸ್ಪೇಸ್ ಕ್ಷೇತ್ರದಲ್ಲಿ ಸ್ವದೇಶಿ ಬೇಡಿಕೆಗಳನ್ನು ಈಡೇರಿಸುವುದರ ಜತೆಗೆ ಜಾಗತಿಕವಾಗಿ ಹಲವು ರಾಷ್ಟ್ರಗಳ ಬೇಡಿಕೆಗಳನ್ನು ಈಡೇರಿಸುವುದು ದೇಶದ ಗುರಿಯಾಗಿದೆ. ಸಾರ್ವಜನಿಕ ಉದ್ದಿಮೆಗಳ ಮೂಲಕವೇ ರಕ್ಷಣಾ ಕ್ಷೇತ್ರದ ಅಗತ್ಯಗಳನ್ನು ಪೂರೈಕೆ ಮಾಡಿಕೊಳ್ಳಲಾಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಖಾಸಗಿ ಸಂಸ್ಥೆಗಳು ರಕ್ಷಣಾ ಕ್ಷೇತ್ರಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸುತ್ತಿರುವುದು ಗಮನಾರ್ಹವಾಗಿದೆ.

■ **ರಾಜನಾಥ್ ಸಿಂಗ್,** ರಕ್ಷಣಾ ಸಚಿವ

ಕೇವಲ ಎರಡು ವರ್ಷಗಳ ಪ್ರಯತ್ನದ ಫಲವಾಗಿ ಈ ಹೆಲಿಕಾಪ್ಟರ್ ಜೋಡಣಾ ಘಟಕವನ್ನು ಆರಂಭಿಸಲಾಗುತ್ತಿದೆ. ಈ ರೀತಿಯ ಅನೇಕ ಘಟಕಗಳನ್ನು ಭಾರತ ದೇಶದ ಸಹಭಾಗಿತ್ವದಲ್ಲಿ ಆರಂಭಿಸಲಾಗುವುದು. ಈಗಾಗಲೇ ಭಾರತದಲ್ಲಿ 295ಕ್ಕೂ ಹೆಚ್ಚು ಯೋಜನೆಗಳು ಸಾಕಾರಗೊಳ್ಳುತ್ತಿವೆ. ಇದು ಆರ್ಥಿಕವಾಗಿ ಮಾತ್ರವಲ್ಲದೆ ಕೈಗಾರಿಕೆಗಳ ಉನ್ನತೀಕರಣಕ್ಕೂ ಸಹಕಾರಿಯಾಗಿದೆ.

■ **ಕ್ಯಾಥರೀನ್ ವೌಟ್ರಿನ್,** ಫ್ರಾನ್ಸ್ ರಕ್ಷಣಾ ಸಚಿವೆ



ರಾಜ್ಯದ ಯುವಕರಿಗೆ ಉದ್ಯೋಗ

ಫ್ರಾನ್ಸ್ ಮೂಲದ ಪ್ರತಿಷ್ಠಿತ ಏರ್‌ಬಸ್ ಕಂಪನಿಯು ಜಾಗತಿಕ ಮಟ್ಟದಲ್ಲಿ ಏಕ ಎಂಜಿನ್ ಹೆಲಿಕಾಪ್ಟರ್‌ಗಳ ಕ್ಷೇತ್ರದಲ್ಲಿ 4,300 ಹೆಲಿಕಾಪ್ಟರ್‌ಗಳೊಂದಿಗೆ, ಜಾಗತಿಕ ಮಾರುಕಟ್ಟೆಯಲ್ಲಿ ಈ ವಲಯದಲ್ಲಿ ಶೇ.80ರಷ್ಟು ಪಾಲು ಹೊಂದಿದೆ. ರಾಜ್ಯದಲ್ಲಿ ಎಚ್–125 ದರ್ಜೆಯ ಹೆಲಿಕಾಪ್ಟರ್ ತಯಾರಿಕೆಗೆ ಬೇಕಾದ ವಿಶ್ವಾಸಾರ್ಹತೆ ಮತ್ತು ಎಂಜಿನಿಯರಿಂಗ್ ಪರಿಣತಿಯಿದೆ. ಈ ವಲಯದಲ್ಲಿ ರಾಜ್ಯ ಸರಕಾರವು ಕೇಂದ್ರ ಸರಕಾರದೊಂದಿಗೆ ನಿಕಟವಾಗಿ ಕೆಲಸ ಮಾಡುವ ಆಸಕ್ತಿ ಹೊಂದಿದ್ದು, ಈ ಘಟಕವು ಭಾರತದ ದಕ್ಷತೆಯು ಪಡೆದುಕೊಳ್ಳುತ್ತಿರುವ ಹೊಸ ಶಕ್ತಿ ಮತ್ತು ಜಾಗತಿಕ ಮಟ್ಟದಲ್ಲಿ ವಿಸ್ತರಿಸಿಕೊಳ್ಳುವ ಸಹಭಾಗಿತ್ವದ ಸಂಕೇತವಾಗಿದೆ. ಇದರಿಂದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಸಮೃದ್ಧ ಅವಕಾಶಗಳು ತೆರೆದುಕೊಳ್ಳಲಿದ್ದು, ಉದ್ಯೋಗಸೃಷ್ಟಿಯೂ ಹೆಚ್ಚಾಗಲಿದೆ. ಇದರಿಂದ ರಾಜ್ಯದ ಯುವಜನರಿಗೆ ಆಧುನಿಕ ತಂತ್ರಜ್ಞಾನ ವಲಯಕ್ಕೆ ಪ್ರವೇಶ ಸಿಗುವ ಸಾಧ್ಯತೆಯಿದೆ.

- ಏರ್‌ಬಸ್ ಎಚ್–125ನಲ್ಲಿ ಇಬ್ಬರು ಪೈಲಟ್‌ಗಳು ಸೇರಿ 8 ಜನ ಪ್ರಯಾಣಿಸಬಹುದು.
- 1,075 ಕೆ.ಜಿ.ಯಷ್ಟು ತೂಕವನ್ನು ಸಾಗಿಸಬಲ್ಲದು.
- ಎಚ್–125 ಮೌಂಟ್ ಎವರೆಸ್ಟ್ ಶಿಖರದ ಮೇಲಿಳಿದ ಏಕೈಕ ಹೆಲಿಕಾಪ್ಟರ್
- ದಕ್ಷಿಣ ಏಷ್ಯಾದ ಬಹುದೊಡ್ಡ ರಫ್ತು ಮಾರುಕಟ್ಟೆ ಓಪನ್
- ವಿಶ್ವದ ಅತ್ಯಂತ ಯಶಸ್ವಿ ಸಿಂಗಲ್ ಎಂಜಿನ್ ಹೆಲಿಕಾಪ್ಟರ್
- ಕಠಿಣ ಹವಾಮಾನ ಪರಿಸ್ಥಿತಿಯಲ್ಲೂ ಹಾರಾಟ ನಡೆಸುವ ಸಾಮರ್ಥ್ಯ
- ಮುಂದಿನ 20 ವರ್ಷಗಳಲ್ಲಿ ಎಚ್125 ದರ್ಜೆಯ 500 ಲಘು ಹೆಲಿಕಾಪ್ಟರ್ ನಿರ್ಮಾಣ

ಪರಸ್ಪರ ಗರಿಷ್ಠ ನಂಬಿಕೆಗೆ ಸಹಕಾರಿ

ಅಂದರೆ, ಭಾರತೀಯ ಸೇನಾಧಿಕಾರಿಗಳು ತಿಂಗಳುಗಳ ಕಾಲ ಫ್ರಾನ್ಸಿನ ಫ್ರೆಂಚ್ ಮಿಲಿಟರಿ ವಿಭಾಗಗಳಲ್ಲಿ ನಿಯೋಜನೆಗೊಳ್ಳಲಿದ್ದು, ಫ್ರೆಂಚ್ ಯೋಧರು ಹೇಗೆ ಕೆಲಸ ಮಾಡುತ್ತಾರೆ, ಆಹಾರ ಸೇವಿಸುತ್ತಾರೆ, ತರಬೇತಿ ಹೊಂದುತ್ತಾರೆ, ಮತ್ತು ಹೋರಾಟ ನಡೆಸುತ್ತಾರೆ ಎನ್ನುವುದನ್ನು ಕಲಿಯಲಿದ್ದಾರೆ. ಇದೇ ವೇಳೆ, ಫ್ರೆಂಚ್ ಸೇನಾಧಿಕಾರಿಗಳು ಭಾರತದ ಮಿಲಿಟರಿ ಘಟಕಗಳಲ್ಲಿ ನಿಯೋಜನೆಗೊಳ್ಳಲಿದ್ದಾರೆ. ಅವರು ನಮ್ಮೊಡನೆ ವಾಸಿಸುತ್ತಾ, ನಮ್ಮ ಕಾರ್ಯತಂತ್ರಗಳನ್ನು ಕಲಿತು, ನಮ್ಮ ಭೂ ಪ್ರದೇಶಗಳನ್ನು ಅರ್ಥ ಮಾಡಿಕೊಂಡು, ತಮ್ಮ ಪ್ರಾವೀಣ್ಯತೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಉಭಯ ದೇಶಗಳ ನಡುವಿನ ನಂಬಿಕೆಯ ಅತಿದೊಡ್ಡ ಸಂಕೇತವಾಗಿದೆ. ಪರಸ್ಪರ ಗರಿಷ್ಠ ನಂಬಿಕೆ ಹೊಂದಿರುವ ದೇಶಗಳು ಮಾತ್ರವೇ ಇಂತಹ ನಿಯೋಜನೆ ನಡೆಸಲು ಸಾಧ್ಯ.

ಭಾರತ ಈ ಮೂಲಕ ಜಗತ್ತಿಗೆ ತಾನು ಕೇವಲ ರಕ್ಷಣಾ ಉಪಕರಣಗಳ ಖರೀದಿಗೆ ಸೀಮಿತವಾಗಿಲ್ಲ, ಬದಲಿಗೆ ಅವುಗಳನ್ನು ನಾವು ನಮ್ಮ ನಂಬಿಕಸ್ಥ ಸಹಯೋಗಿಗಳೊಡನೆ ನಮಗಾಗಿ ನಿರ್ಮಿಸುತ್ತಿದ್ದೇವೆ ಎಂಬ ಸಂದೇಶವನ್ನೂ ರವಾನಿಸಿದೆ. ಭಾರತ ಅವಲಂಬನೆಯಿಂದ ಸ್ವಾವಲಂಬನೆಯತ್ತ ಸಾಗುತ್ತಿದ್ದು, ಈ ಕ್ರಾಂತಿ ಕರ್ನಾಟಕದಿಂದಲೇ ಆರಂಭಗೊಳ್ಳುತ್ತಿದೆ.

ಹೆಲಿಕಾಪ್ಟರ್ ವಿಶೇಷತೆ

ಇನ್ನು ಎಚ್ 125 ಹೆಲಿಕಾಪ್ಟರ್ ಲೈಟ್ ಯುಟಿಲಿಟಿ ಹೆಲಿಕಾಪ್ಟರ್ ಆಗಿದ್ದು, ರಕ್ಷಣಾ ಕಾರ್ಯಾಚರಣೆಗಳು, ತುರ್ತು ವೈದ್ಯಕೀಯ ಸಾಗಾಣಿಕೆ, ಮತ್ತು ವಿಪತ್ತು ಪರಿಹಾರ ಸೇವೆಗಳಿಗೆ ಬಳಕೆಯಾಗಲಿದೆ. ಏರ್‌ಬಸ್ ಎಚ್–125 ಇಬ್ಬರು ಪೈಲಟ್‌ಗಳು ಮತ್ತು ಆರು ಜನ ಪ್ರಯಾಣಿಕರು ಪ್ರಯಾಣಿಸಬಹುದು. 1,075 ಕೆ.ಜಿ.ಯಷ್ಟು ತೂಕವನ್ನು ಸಾಗಿಸಬಲ್ಲದು. ಎಲ್ಲಕ್ಕಿಂತ ಮುಖ್ಯವಾಗಿ, ಎಚ್–125 ಮೌಂಟ್ ಎವರೆಸ್ಟ್ ಶಿಖರದ ಮೇಲಿಳಿದ ಏಕೈಕ ಹೆಲಿಕಾಪ್ಟರ್ ಆಗಿದ್ದು, ಅತ್ಯಂತ ಎತ್ತರದಲ್ಲಿ, ತೀವ್ರ ಹವಾಮಾನದಲ್ಲಿ ಕಾರ್ಯಾಚರಿಸುವ ಸಾಮರ್ಥ್ಯ ಪ್ರದರ್ಶಿಸಿದೆ.

ಇದು ಕಠಿಣ ಸನ್ನಿವೇಶಗಳಲ್ಲೂ ಕಾರ್ಯಾಚರಿಸಬಲ್ಲದಾಗಿದ್ದು, ವೈಮಾನಿಕ ಕಾರ್ಯ, ಅಗ್ನಿಶಾಮಕ, ಕಾನೂನು ಜಾರಿ, ರಕ್ಷಣೆ, ವಾಯು ಆಂಬುಲೆನ್ಸ್, ಮತ್ತು ಪ್ರಯಾಣಿಕರ ಸಂಚಾರಕ್ಕೂ ಬಳಕೆಯಾಗಲಿದೆ. ಭಾರತ ಇವುಗಳನ್ನು ವೇಮಗಲ್‌ನಲ್ಲಿ ನಿರ್ಮಿಸಲಿದ್ದು, ಎಚ್–125ನ ಹೆಚ್ಚಿನ ಎತ್ತರದ ಕಾರ್ಯಕ್ಷಮತೆಯು ಹೆಚ್ಚಿನ ಹಗುರ ಹೆಲಿಕಾಪ್ಟರ್‌ಗಳಿಗಿಂತ ಇದನ್ನು ಪ್ರತ್ಯೇಕಿಸುತ್ತದೆ. ಇದು ಬಿಸಿ ಮತ್ತು ಹೆಚ್ಚಿನ ಪರಿಸ್ಥಿತಿಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಲ್ಲದು – ತೆಳುವಾದ ಗಾಳಿ ಮತ್ತು ಹೆಚ್ಚಿನ ತಾಪಮಾನದ ಸಂಯೋಜನೆಯು ಸಾಮಾನ್ಯವಾಗಿ ಹೆಲಿಕಾಪ್ಟರ್ ಲಿಫ್ಟ್ ಅನ್ನು ಕಡಿಮೆ ಮಾಡುತ್ತದೆ. ಈ ಸಾಮರ್ಥ್ಯವು ಹಿಮಾಲಯದಂತಹ ಪರ್ವತ ಪ್ರದೇಶಗಳಿಗೆ ಸೂಕ್ತವಾಗಿದೆ, ಅಲ್ಲಿ ಭಾರತವು ಹೆಚ್ಚಾಗಿ ರಕ್ಷಣಾ, ಗಸ್ತು ಮತ್ತು ಲಾಜಿಸ್ಟಿಕ್ಸ್ ಕಾರ್ಯಾಚರಣೆಗಳನ್ನು ನಡೆಸುತ್ತದೆ. ಅಂತಹ ಪರಿಸ್ಥಿತಿಗಳಲ್ಲಿ ಲಿಫ್ಟ್ ಮತ್ತು ಶಕ್ತಿಯನ್ನು ಕಾಪಾಡಿಕೊಳ್ಳಲು ಅನೇಕ ಹೆಲಿಕಾಪ್ಟರ್‌ಗಳು ಹೆಣಗಾಡುತ್ತವೆ, ಆದರೆ ಎಚ್–125 ಇವೆಲ್ಲಕ್ಕಿಂತಲೂ ಭಿನ್ನವಾಗಿದೆ. ಇದು ಯುದ್ಧತಂತ್ರದ ಪ್ರಯೋಜನವನ್ನು ನೀಡುತ್ತದೆ.

ಎಚ್ -125 ಹೆಲಿಕಾಪ್ಟರ್ ಮತ್ತು ಮೌಂಟ್ ಎವರೆಸ್ಟ್ ಸಾಧನೆ

ಮೇ 14, 2005 ರಂದು ಪರೀಕ್ಷಾರ್ಥ ಪೈಲಟ್ ಡಿಡಿಯರ್ ಡೆಲ್ಸಾಲ್ಲೆ ಹೆಲಿಕಾಪ್ಟರ್ ಅನ್ನು ಮೌಂಟ್ ಎವರೆಸ್ಟ್ ಶಿಖರದ (8,848 ಮೀ) ಮೇಲೆ ಮೊದಲ ಬಾರಿಗೆ ಯಶಸ್ವಿಯಾಗಿ ಇಳಿಸಿದ್ದ, ಎಚ್–125 ಎವರೆಸ್ಟ್–ಹತ್ತುವ ಖ್ಯಾತಿ ಗಳಿಸಿತು ಇದು ಇಂದಿಗೂ ಉಳಿದುಕೊಂಡಿರುವ ವಿಶ್ವ ದಾಖಲೆಯಾಗಿದೆ.



20 ವರ್ಷದಲ್ಲಿ 500 ಹೆಲಿಕಾಪ್ಟರ್ ಸಿದ್ಧ

ಫ್ರಾನ್ಸ್ ಮೂಲದ ಏರ್‌ಬಸ್ ಮತ್ತು ಭಾರತದ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್‌ಎಲ್) ಜೊತೆಗೂಡಿ ಅಭಿವೃದ್ಧಿಪಡಿಸಿರುವ ದೇಶದ ಪ್ರಪ್ರಥಮ, ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣೆ ಘಟಕದಲ್ಲಿ ಮುಂದಿನ 20 ವರ್ಷಗಳಲ್ಲಿ ಎಚ್125 ದರ್ಜೆಯ 500 ಲಘು ಹೆಲಿಕಾಪ್ಟರ್ ಸಿದ್ಧವಾಗಲಿವೆ. ಇಲ್ಲಿ ಏವಿಯಾನಿಕ್ಸ್, ಹೈಡ್ರಾಲಿಕ್ ಸರ್ಕ್ಯೂಟ್, ಬಿಡಿಭಾಗಗಳು, ಇಂಧನ ವ್ಯವಸ್ಥೆ ಮತ್ತು ಎಂಜಿನ್‌ಗಳ ತಯಾರಿಕೆ ಸೇರಿದಂತೆ ಹಲವು ಮಹತ್ವದ ಚಟುವಟಿಕೆಗಳು ನಡೆಯಲಿವೆ.

ಮೊದಲ ಹೆಲಿಕಾಪ್ಟರ್ 2027ಕ್ಕೆ

ಮೊದಲ ಭಾರತದಲ್ಲಿ ತಯಾರಿಸಲಾದ ಎಚ್–125 ಹೆಲಿಕಾಪ್ಟರ್‌ಗಳು 2027ರ ಆರಂಭದ ವೇಳೆಗೆ ಬಿಡುಗಡೆಯಾಗುವ ನಿರೀಕ್ಷೆಯಿದೆ. ಆರಂಭಿಕ ಉತ್ಪಾದನಾ ಸಾಮರ್ಥ್ಯವು ವರ್ಷಕ್ಕೆ ಸುಮಾರು 10 ಹೆಲಿಕಾಪ್ಟರ್‌ಗಳಿಗೆ ಯೋಜಿಸಲಾಗಿದೆ, ಅಂತಿಮವಾಗಿ ಪ್ರಾದೇಶಿಕ ಬೇಡಿಕೆಯನ್ನು ಪೂರೈಸಲು ಹೆಚ್ಚಾಗುತ್ತದೆ.

ಏಷ್ಯಾದಲ್ಲಿ ಭಾರತವೇ ಮುಂಚೂಣಿ

ಫ್ರಾನ್ಸ್, ಅಮೆರಿಕ, ಬ್ರೆಜಿಲ್ ನಂತರ ಜಗತ್ತಿನ ನಾಲ್ಕನೆಯ ದೇಶವಾಗಿ ಭಾರತ ಅದರಲ್ಲೂ ಕರ್ನಾಟಕಕ್ಕೆ ಬಂದಿರುವುದು ಹೆಮ್ಮೆಯ ಸಂಗತಿ. ಇದು ಭಾರತ ಹಾಗೂ ಕರ್ನಾಟಕವನ್ನು ಬಾನೆತ್ತರಕ್ಕೆ ಹಾರಿಸುವ ಸಂಗತಿಯಾಗಿದೆ. ಎಚ್–125 ಹೆಲಿಕಾಪ್ಟರ್ ತಯಾರಿಕೆ ಮತ್ತು ಅಂತಿಮ ಜೋಡಣೆ ಘಟಕ ಬಂದಿರುವುದು ಈ ವಲಯಕ್ಕೆ ಮತ್ತಷ್ಟು ಬಲ ತರಲಿದೆ. ಜೊತೆಗೆ ನಿರ್ವಹಣೆ, ದುರಸ್ತಿ ಸ್ಥಾವರವೂ ಆರಂಭಗೊಂಡಿರುವುದು ರಾಜ್ಯದ ಕೈಗಾರಿಕಾ ಸ್ನೇಹಿ ವಾತಾವರಣಕ್ಕೆ ಸಾಕ್ಷಿಯಾಗಿದೆ.


ಸಿಂಗಲ್ ಎಂಜಿನ್ ಕಾಪ್ಟರ್ ಮಾಡಲಿದೆ ಮೋಡಿ

ಭಾರತದಲ್ಲಿ ರಕ್ಷಣಾ ಮತ್ತು ನಾಗರಿಕ ಉದ್ದೇಶದ ಹೆಲಿಕಾಪ್ಟರ್‌ಗಳನ್ನು ತಯಾರಿಸಲು ಖಾಸಗಿ ವಲಯದಲ್ಲಿ ಸ್ಥಾಪನೆಯಾದ ದೇಶದ ಏಕೈಕ ಮತ್ತು ಮೊದಲ ಅಂತಿಮ ಜೋಡಣಾ ಘಟಕ ಇದಾಗಿದೆ. ಈ ಘಟಕದಲ್ಲಿ ತಯಾರಾಗಲಿರುವ ಎಚ್–125 ಹೆಲಿಕಾಪ್ಟರ್, ವಿಶ್ವದ ಅತ್ಯಂತ ಯಶಸ್ವಿ ಸಿಂಗಲ್ ಎಂಜಿನ್ ಹೆಲಿಕಾಪ್ಟರ್ ಎಂದು ಹೆಸರುವಾಸಿಯಾಗಿದೆ. ಇದು ಅತಿ ಎತ್ತರದ ಪ್ರದೇಶಗಳಲ್ಲಿ ಮತ್ತು ಕಠಿಣ ಹವಾಮಾನ ಪರಿಸ್ಥಿತಿಯಲ್ಲೂ ಹಾರಾಟ ನಡೆಸುವ ವಿಶೇಷ ಸಾಮರ್ಥ್ಯವನ್ನು ಹೊಂದಿದೆ.

ಸಂಪಾದಕೀಯ

ಹುಚ್ಚು ಉಮೇದಿನ ಅಪಘಾತಗಳು

ಅಪ್ರಾಪ್ತರು ವಾಹನಗಳನ್ನು ಚಲಾಯಿಸುವುದು, ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತವೆಸಗುವುದು ಮತ್ತು ಇತರರ ಸಾವಿಗೆ ಕಾರಣರಾಗುವುದು ಇತ್ತೀಚಿನ ದಿನಗಳಲ್ಲಿ ಪ್ರತಿದಿನವೆಂಬಂತೆ ವರದಿಯಾಗುತ್ತಲಿದೆ. ದೊಡ್ಡ ಉದ್ಯಮಿಯ ಮಗನೊಬ್ಬ ಐಷಾರಾಮಿ ಕಾರನ್ನು ಪಾದಚಾರಿಗಳ ಮೇಲೆ ಚಲಾಯಿಸಿ ಅವರು ಆಸ್ಪತ್ರೆ ಸೇರುವಂತೆ ಮಾಡಿದ ಘಟನೆ, ಇನ್ನೊಬ್ಬ ಸಿರಿವಂತನ ಅಪ್ರಾಪ್ತ ಪುತ್ರ ಅತ್ಯಂತ ದುಬಾರಿ ಕಾರನ್ನು ನಿರ್ಲಕ್ಷ್ಯದಿಂದ ಚಲಾಯಿಸಿ ಅಪಘಾತವೆಸಗಿ ಕೆಲವರ ಸಾವಿಗೆ ಕಾರಣವಾದದ್ದು, ಮೊನ್ನೆ ಮೊನ್ನೆಯಷ್ಟೇ ದಿಲ್ಲಿಯ ದ್ವಾರ್ಕಾ ರಸ್ತೆಯಲ್ಲಿ ಅಪ್ರಾಪ್ತನೊಬ್ಬ ರೀಲ್ಸ್ ಮಾಡುವ ಉಮೇದಿನಲ್ಲಿ ಕಾರನ್ನು ಅಜಾಗರೂಕತೆಯಿಂದ ಚಲಾಯಿಸಿ ಯುವ ಬೈಕ್ ಸವಾರನೊಬ್ಬನ ಜೀವ ತೆಗೆದುದು... ಇವೆಲ್ಲವೂ ಅಪಾಯಕಾರಿ ಬೆಳವಣಿಗೆಯನ್ನು ತೋರಿಸುತ್ತವೆ. ಕೆಲದಿನಗಳ ಹಿಂದೆ ಕರ್ನಾಟಕದಲ್ಲಿ ಕೂಡಾ ಅಪ್ರಾಪ್ತರು ವೇಗವಾಗಿ ಚಲಾಯಿಸುತ್ತಿದ್ದ ಕಾರು ಅಪಘಾತಕ್ಕೀಡಾಗಿ ಅವರಲ್ಲಿದ್ದವರೆಲ್ಲರೂ ಸಾವಿಗೀಡಾಗಿದ್ದರು.



ಸಿರಿವಂತಿಕೆಯ ಮದ, ಸುಲಭದಲ್ಲಿ ಕೈಗೆ ಸಿಗುವ ಆಧುನಿಕ ವಾಹನಗಳು, ರೀಲ್ಸ್ ಮಾಡುವ ಹುಚ್ಚು, ವಾಹನ ಚಲಾವಣೆಯ ಹುಮ್ಮಸ್ಸು ಮೊದಲಾದವೆಲ್ಲ ಒಟ್ಟು ಸೇರಿ ಅಪ್ರಾಪ್ತರಿಂದ ಮತ್ತು ಯುವಕರಿಂದ ಹೆಚ್ಚೆಚ್ಚು ರಸ್ತೆ ಅಪಘಾತಗಳು ನಡೆಯಲು ಕಾರಣವಾಗುತ್ತಿವೆ.

ಅಪ್ರಾಪ್ತರು ವಾಹನ ಚಲಾಯಿಸುವುದನ್ನು ಗಂಭೀರ ಪ್ರಕರಣವಾಗಿ ಪರಿಗಣಿಸಿರುವ ಸರಕಾರವು ಇದನ್ನು ತಡೆಯಲು ದಂಡವನ್ನು ಹೆಚ್ಚಿಸಿ, ಅಪ್ರಾಪ್ತರ ಹೆತ್ತವರ ಮೇಲೆ ಕೂಡಾ ಕ್ರಮ ತೆಗೆದುಕೊಳ್ಳುವ ಕಾನೂನು ತಂದಿದ್ದರೂ ಅಪ್ರಾಪ್ತರ ವಾಹನ ಚಲಾವಣೆಯ ಹುಚ್ಚು ನಿಂತಿಲ್ಲ. ವರ್ಷ ಕಳೆದಂತೆ ವಾಹನ ಚಲಾಯಿಸಿ ದಂಡ ಕಟ್ಟುವ ಅಪ್ರಾಪ್ತರ ಸಂಖ್ಯೆ ಹೆಚ್ಚುತ್ತಲೇ ಇವೆಯೆನ್ನುವುದು ಪೊಲೀಸರ ಹೇಳಿಕೆ. ವಿಪರ್ಯಾಸವೆಂದರೆ ಬಹುತೇಕ ಸಂದರ್ಭಗಳಲ್ಲಿ ಹೆತ್ತವರೇ ಅಪ್ರಾಪ್ತರು ವಾಹನ ಚಲಾಯಿಸುವುದನ್ನು ಪ್ರೋತ್ಸಾಹಿಸುತ್ತಾರೆ. ತಮ್ಮ ಮಕ್ಕಳು ಸಣ್ಣ ವಯಸ್ಸಿನಲ್ಲೇ ವಾಹನ ಚಲಾಯಿಸುವುದು ಹೆಮ್ಮೆಯ ವಿಷಯವೆಂದೇ ಪರಿಗಣಿಸುತ್ತಾರೆ. ಐಷಾರಾಮಿ ವಾಹನಗಳನ್ನು ಅತಿವೇಗದಿಂದ ಓಡಿಸುವುದು ಕೆಲವು ಮಕ್ಕಳಿಗೆ ಶೋಕಿಯೆಂಬಂತಾಗಿದೆ ಕೂಡಾ. ಆದರೆ ಅವರಿಂದ ಎಸಗಲ್ಪಡುವ ಅಪಘಾತಗಳು ಇತರರ ಜೀವಹಾನಿಗೆ ಕಾರಣವಾಗುವುದನ್ನು ಕ್ಷಮಿಸಲಾಗುವುದಿಲ್ಲ. ಈ ನಿಟ್ಟಿನಲ್ಲಿ ಸಂಬಂಧಿತ ಇಲಾಖೆಗಳಷ್ಟೇ ಅಲ್ಲದೆ, ಮಕ್ಕಳ ಹೆತ್ತವರು ಕೂಡಾ ಹೆಚ್ಚು ಜಾಗೃತರಾಗಬೇಕಾದ ಅಗತ್ಯವಿದೆ. ಮಕ್ಕಳ ಕೈಗೆ ವಾಹನ ಕೊಡುವುದನ್ನು ನಿಲ್ಲಿಸಬೇಕಾಗಿದೆ.

ತಮಿಳುನಾಡಿನ ಆಲೋಚನೆ ಏಕೆ ಹೀಗೆ?

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ನಾವು ಹಿಂದಿ ಒಪ್ಪಿದರೆ, ಭಾರತವನ್ನೂ ಒಪ್ಪಿಕೊಂಡಂತಾಗುತ್ತದೆ ಎಂಬುದು ತಮಿಳುನಾಡಿನ ಡಿಎಂಕೆ ಸರ್ಕಾರವೂ ಸೇರಿದಂತೆ ಇತಿಹಾಸ ಅವರಿಗೆ ಹೇಳಿಕೊಟ್ಟ ಪಾಠವೇ ಇರಬೇಕು. ಸ್ವಾತಂತ್ರ್ಯಪೂರ್ವದಿಂದಲೂ ಈ ಹಿಂದಿ ವಿರೋಧಿ ಗುಣ ಮತ್ತು ಅಪ್ರತಿಮ ತಮಿಳು ಪ್ರೀತಿ ಪ್ರತ್ಯೇಕತೆಯ ನಿಟ್ಟಿನಲ್ಲೇ ಯೋಚಿಸುವಂತೆ ಮಾಡಿತು. ಇದಕ್ಕೆ ಈ ರಾಜ್ಯಗಳ ಇತಿಹಾಸದ ನಾಯಕರು ಕಾರಣರೋ ಅಥವಾ ರಾಜಕೀಯ ಕಾರಣವೋ ಗೊತ್ತಿಲ್ಲ. ಅಲ್ಲದೆ, ಸ್ವಾತಂತ್ರ್ಯ ಬಂದಾಗಿನಿಂದಲೂ ತನಗೆ ವಿಶೇಷ ಅಥವಾ ಸ್ವಾಯತ್ತ ಅಧಿಕಾರ ಬೇಕು ಎಂಬ ನಿಟ್ಟಿನಲ್ಲಿ ಹೋರಾಟ ನಡೆಸುತ್ತಲೇ ಇದೆ. ವಿಚಿತ್ರವೆಂದರೆ, ಒಂದು ಕಾಲದಲ್ಲಿ ತಮಿಳುನಾಡಿನ ಈ ಎಲ್ಲ ಬೇಡಿಕೆಗಳಿಗೆ ಇಲ್ಲ ಎಂದು ಹೇಳುತ್ತಿದ್ದ ಕಾಂಗ್ರೆಸ್, ಇಂದು ಅದರ ಜತೆ ಸೇರಿ ಸ್ವಾಯತ್ತತೆ ಕೇಳುವುದರಲ್ಲಿ ತಪ್ಪೇನಿಲ್ಲ ಎನ್ನುತ್ತಿದೆ.

ಮತ್ತೆ ಈ ವಿಚಾರ ಸುದ್ದಿಗೆ ಬರಲು ಕಾರಣವೂ ಇದೆ. ಇತ್ತೀಚೆಗಷ್ಟೇ ತಮಿಳುನಾಡು ಸರ್ಕಾರವು ನ್ಯಾ. ಕುರಿಯನ್ ಜೋಸೆಫ್ ಅವರ ನೇತೃತ್ವದ ಸಮಿತಿಯಿಂದ ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಸುಧಾರಣೆ ಮತ್ತು ಆಡಳಿತಾತ್ಮಕ ಸುಧಾರಣೆ ಬಗ್ಗೆ ವರದಿಯೊಂದನ್ನು ಸ್ವೀಕರಿಸಿದೆ. ಇದರಲ್ಲಿ ರಾಜ್ಯಗಳಿಗೆ ಹೆಚ್ಚು ಸ್ವಾಯತ್ತತೆ ಇರಬೇಕು, ಕೇಂದ್ರ, ಕೇವಲ ಒಕ್ಕೂಟ ತತ್ತ್ವ ಅನುಸರಿಸಬೇಕು, ಕೇಂದ್ರ ಪಟ್ಟಿಯಲ್ಲಿರುವ ಕೆಲವು ಅಂಶಗಳನ್ನು ರಾಜ್ಯಕ್ಕೆ ಕಳಿಸಬೇಕು ಎಂಬುದನ್ನು ಉಲ್ಲೇಖಿಸಲಾಗಿದೆ. ತಮಿಳುನಾಡು ಮುಖ್ಯಮಂತ್ರಿ, ಎಂ.ಕೆ.ಸ್ಟಾಲಿನ್, ತಮ್ಮ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋವೊಂದನ್ನು ಹಾಕಿಕೊಂಡು ಸ್ವಾಯತ್ತತೆಯ ಒತ್ತಾಯವನ್ನು ಮಂಡಿಸಿದ್ದಾರೆ.

ಈಗ ಒಂದು ಚಿಂತನೆ ಮುಂದಿಟ್ಟುಕೊಂಡರೆ, ಭಾರತದಲ್ಲಿ ರಾಜ್ಯಗಳಿಗೆ ಸ್ವಾಯತ್ತತೆ ನೀಡಬಹುದೇ? ನೀಡಿದರೆ ಎಲ್ಲವೂ ಸರಿಯಾದೀತೇ? ಭಾರತ, ಅಮೆರಿಕದಂಥ ಆಡಳಿತಾತ್ಮಕ ವ್ಯವಸ್ಥೆ ಹೊಂದಿದೆಯೇ? ಈ ಎಲ್ಲ ಪ್ರಶ್ನೆಗಳನ್ನು ಮುಂದಿಟ್ಟುಕೊಂಡೇ ಆಲೋಚನೆ ನಡೆಸಬೇಕು.

ಮೂಲಕ್ಕೇ ಹೋಗಿ ಯೋಚನೆ ಮಾಡೋಣ. ಭಾರತ ಒಂದು ಫೆಡರಲ್ ವ್ಯವಸ್ಥೆಯ ದೇಶ. ಆದರೆ ಅದು ಅಮೆರಿಕದಂತೆ ರಾಜ್ಯಗಳ ಒಕ್ಕೂಟವಲ್ಲ, ಒಕ್ಕೂಟದೊಳಗಿನ ರಾಜ್ಯಗಳು ಎಂಬ ವಿಶೇಷ ವಿನ್ಯಾಸ ಹೊಂದಿದೆ. ಸಂವಿಧಾನ ರಚನೆಯಾಗುವ ವೇಳೆ ಡಾ.ಬಿ.ಆರ್. ಅಂಬೇಡ್ಕರ್ ಸೇರಿದಂತೆ ಸಂವಿಧಾನ ಸೃಷ್ಟಿಕರ್ತರು ದೇಶದ ವಿಭಜನೆಯ ಕಹಿ ಅನುಭವ, ಭಾಷಾಸಾಂಸ್ಕೃತಿಕ ವೈವಿಧ್ಯ ಮತ್ತು ಭದ್ರತಾ ಆತಂಕಗಳನ್ನು ಗಮನದಲ್ಲಿಟ್ಟುಕೊಂಡು ದಿಲ್ಲಿ ಮಟ್ಟದಲ್ಲಿ ಬಲವಾದ ಕೇಂದ್ರವನ್ನು ಆಯ್ಕೆ ಮಾಡಿದರು. ಅದರ ಫಲವಾಗಿ, ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ ಮತ್ತು ಸಮಾನ ಪಟ್ಟಿ ಮೂಲಕ ಅಧಿಕಾರ ಹಂಚಿಕೆ ಮಾಡಲಾಯಿತು.

ಅಮೆರಿಕದ ಸಂವಿಧಾನದಲ್ಲಿ ರಾಜ್ಯಗಳಿಗೆ ಮೂಲಾಧಿಕಾರ ಹೆಚ್ಚು. ಆದರೆ, ಕೇಂದ್ರಕ್ಕೆ ನೀಡಿದ ಅಧಿಕಾರ ಮಾತ್ರ ಸೀಮಿತ. ಆದರೆ ಭಾರತದಲ್ಲಿ ರಾಷ್ಟ್ರೀಯ ಏಕತೆ, ಭದ್ರತೆ, ವಿದೇಶಾಂಗ, ಹಣಕಾಸು ಸ್ಥಿರತೆ ಮೊದಲಾದ ವಿಷಯಗಳಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಮುಖ ಸ್ಥಾನ ನೀಡಲಾಗಿದೆ. ಇದರ ನಡುವೆಯೂ ರಾಜ್ಯಗಳಿಗೆ ಶಿಕ್ಷಣ, ಕೃಷಿ, ಆರೋಗ್ಯ, ಸ್ಥಳೀಯ ಆಡಳಿತ ಮೊದಲಾದ ಕ್ಷೇತ್ರಗಳಲ್ಲಿ ಸಮರ್ಪಕ ಅಧಿಕಾರವಿದೆ.

ತಮಿಳುನಾಡಿನ ರಾಜಕೀಯ ಚಿಂತನೆಯ ಮೂಲವನ್ನು ದ್ರಾವಿಡ ಚಳವಳಿಯಲ್ಲಿ ಹುಡುಕಬೇಕು. 20ನೇ ಶತಮಾನದ ಆರಂಭದಲ್ಲಿ ಉಂಟಾದ ಸ್ವಾಭಿಮಾನ ಚಳವಳಿ ಮತ್ತು ನಂತರದ ದ್ರಾವಿಡ ರಾಜಕೀಯವು ಕೇಂದ್ರ ಸರ್ಕಾರದ ಮೇಲೆ ಅವಿಶ್ವಾಸವನ್ನು ಕಟ್ಟಿಕೊಂಡಿತು (ಆಗ ಕೇಂದ್ರದಲ್ಲಿ ಬಿಜೆಪಿ ಇರಲಿಲ್ಲ, ಕಾಂಗ್ರೆಸ್ ಇತ್ತು). ಹಿಂದುಳಿದ ವರ್ಗಗಳ ಪ್ರತಿನಿಧಿತ್ವ, ಹಿಂದಿ ಹೇರಿಕೆಯ ವಿರುದ್ಧದ ಹೋರಾಟ, ಉತ್ತರ ಭಾರತದ ರಾಜಕೀಯ-ಸಾಂಸ್ಕೃತಿಕ ಪ್ರಭಾವದ ಭೀತಿ ಇವುಗಳೆಲ್ಲ ಸೇರಿ 'ರಾಜ್ಯ ಹಕ್ಕುಗಳು' ಎಂಬ ಧ್ವನಿಯನ್ನು ಗಟ್ಟಿಗೊಳಿಸಿತು.

ಇತಿಹಾಸವನ್ನು ಮತ್ತಷ್ಟು ಕೆದಕಿದರೆ, 1960ರ ದಶಕದಲ್ಲಿ ಹಿಂದಿ ವಿರೋಧಿ ಚಳವಳಿಗಳು ತಮಿಳುನಾಡಿನಲ್ಲಿ ಭಾರೀ ರೂಪ ಪಡೆದವು. ಇದರಿಂದಲೇ ಕೇಂದ್ರ-ರಾಜ್ಯ ಸಂಬಂಧಗಳು ರಾಜಕೀಯವಾಗಿ ತೀವ್ರವಾದವು. 1967ರಲ್ಲಿ ದ್ರಾವಿಡ ಪಕ್ಷಗಳ ಅಧಿಕಾರ ಪ್ರವೇಶದ ಬಳಿಕ, 'ರಾಜ್ಯ ಸ್ವಾಯತ್ತತೆ' ರಾಜಕೀಯ ಘೋಷಣೆಯಾಗಿ ರೂಪುಗೊಂಡಿತು. ಒಂದು ಹಂತದಲ್ಲಿ 'ದ್ರಾವಿಡ ನಾಡು' ಬೇಡಿಕೆಯೂ ಕೇಳಿಬಂದಿತ್ತು. ನಂತರ ಅದು ಸಂವಿಧಾನಾತ್ಮಕ ಸ್ವಾಯತ್ತತೆ ಚರ್ಚೆಗೆ ಸೀಮಿತವಾಯಿತು.

ತಮಿಳುನಾಡಿನ ಭೂ ಪ್ರದೇಶವೂ ವಿಶಿಷ್ಟ ರೀತಿಯಲ್ಲಿದೆ. ಶ್ರೀಲಂಕಾದ ತಮಿಳು ಪ್ರಶ್ನೆ, ಮೀನುಗಾರರ ಸಮಸ್ಯೆ, ಕಡಲ್ ಸೀಮಾ ಭದ್ರತೆಯಂಥ ವಿಚಾರಗಳು ರಾಜ್ಯದ ರಾಜಕೀಯ ಮನೋಭಾವವನ್ನು ಪ್ರಭಾವಿಸಿದೆ. ಶ್ರೀಲಂಕಾದ ಒಳಹೋರಾಟದ ಸಂದರ್ಭದಲ್ಲಿ ತಮಿಳು ಜನಾಂಗೀಯ ಭಾವನೆ ತೀವ್ರಗೊಂಡಿತು. ಕೇಂದ್ರ ಸರ್ಕಾರದ ವಿದೇಶಾಂಗ ನೀತಿಗಳಲ್ಲಿ ರಾಜ್ಯದ ಮಾತು ಕೇಳಿಸಿಕೊಳ್ಳಬೇಕೆಂಬ ಮನೋಭಾವ ಹೆಚ್ಚಾಯಿತು. ಇದನ್ನು ಬೇಕಾದರೆ, ರಾಜೀವ್ ಗಾಂಧಿ ಅವರ ಹತ್ಯೆಯಿಂದ ಹಿಡಿದು, ಅದರ ಹಿಂದಿನ ಎಲ್‌ಟಿಟಿಇ ಹೋರಾಟ ಮತ್ತು ತಮಿಳು ರಾಜಕೀಯ ಪಕ್ಷಗಳ ಸಂಬಂಧಗಳನ್ನೂ ಒರೆಗೆ ಹಚ್ಚಬಹುದು. ಎಲ್‌ಟಿಟಿಇ ಜತೆಗೆ ಡಿಎಂಕೆ ಹೊಂದಿದ್ದ ಸಂಬಂಧ ಎಂಥದ್ದು ಎಂಬುದರ ಬಗ್ಗೆಯೂ ಯೋಚನೆ ಮಾಡಬಹುದು.

ಇದಲ್ಲದೆ, ದಕ್ಷಿಣ ರಾಜ್ಯಗಳ ಆರ್ಥಿಕ ಬೆಳವಣಿಗೆ ವೇಗವಾಗಿದ್ದು, 'ಹಣಕಾಸು ಹಂಚಿಕೆ ನ್ಯಾಯಸಮ್ಮತವೇ?' ಎಂಬ ಪ್ರಶ್ನೆಗಳನ್ನು ಏಳುವಂತೆ ಮಾಡಿದೆ. ಹಣಕಾಸು ಆಯೋಗದ ಶಿಫಾರಸುಗಳಲ್ಲಿ ಜನಸಂಖ್ಯೆ ಮಾನದಂಡದ ಬಳಕೆ, ತೆರಿಗೆ ಹಂಚಿಕೆ ಇತ್ಯಾದಿ ವಿಷಯಗಳಲ್ಲಿ ತಮಿಳುನಾಡು ಸೇರಿದಂತೆ ಕೆಲ ದಕ್ಷಿಣ ರಾಜ್ಯಗಳು ಅಸಮಾಧಾನ ವ್ಯಕ್ತಪಡಿಸಿವೆ. 'ನಾವು ಹೆಚ್ಚು ಉತ್ಪಾದಿಸುತ್ತೇವೆ; ಕಡಿಮೆ ಪಡೆಯುತ್ತೇವೆ' ಎಂಬ ರಾಜಕೀಯ ವಾದ ಇಲ್ಲಿ ರೂಪುಗೊಂಡಿದೆ. ಇದನ್ನು ಕರ್ನಾಟಕವೂ ಬಲವಾಗಿ ಪ್ರತಿಪಾದಿಸುತ್ತದೆ. ಆದರೆ, ಇಂದಿನವರೆಗೂ ಕರ್ನಾಟಕ ಸ್ವಾಯತ್ತತೆ ವಿಚಾರದತ್ತ ಹೋಗಿಲ್ಲ ಎಂಬುದನ್ನು ಮನಗಾಣಬೇಕು. ಏಕೆಂದರೆ, ಸ್ವಾತಂತ್ರ್ಯ ಬಂದಾಗಿನಿಂದಲೂ, ಕರ್ನಾಟಕ ಈ ನಿಟ್ಟಿನಲ್ಲಿ ಬೇರೆಯದ್ದೇ ರೀತಿಯ ಮನೋಭಾವ ಹೊಂದಿದೆ. ಮಧ್ಯಂತರದಲ್ಲಿ ಒಂದಷ್ಟು ವರ್ಷಗಳನ್ನು ಬಿಟ್ಟರೆ, ಕರ್ನಾಟಕದಲ್ಲಿ ಹೆಚ್ಚು ಬಾರಿ ಪ್ರಾದೇಶಿಕ ಪಕ್ಷಗಳಿಗಿಂತ ರಾಷ್ಟ್ರೀಯ ಪಕ್ಷಗಳದ್ದೇ ಆಡಳಿತವಿದೆ. ಅದರಲ್ಲೂ ಕಾಂಗ್ರೆಸ್ ಹೆಚ್ಚು ಬಾರಿ ಆಡಳಿತ ನಡೆಸಿದ್ದು, ಇಂಥ ಮನೋಭಾವಗಳು ಹುಟ್ಟುವಂತೆ ಮಾಡಿದೆ.

ಇದರ ನಡುವೆಯೇ, ಬೇರೆ ರಾಜ್ಯಗಳಿಗೆ ಇಲ್ಲದ ಸಮಸ್ಯೆ ತಮಿಳುನಾಡಿಗೆ ಮಾತ್ರ ಏಕೆ ಎಂಬ ಪ್ರಶ್ನೆಗಳೂ ಇವೆ. ಆದರೆ, ತಮಿಳುನಾಡಿನಂತೆಯೇ ಬೇರೆ ಬೇರೆ ರಾಜ್ಯಗಳೂ ಬೇರೆ ಬೇರೆ ಅವಧಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಸಿಡಿದಿವೆ. ಅದು ಈಗಿನ ಬಿಜೆಪಿ ಸರ್ಕಾರದಲ್ಲಿ ಮಾತ್ರ ಎಂತೇನಿಲ್ಲ, ಹಿಂದೆ ಕಾಂಗ್ರೆಸ್ ಇದ್ದಾಗಲೂ ಇಂಥ ಪ್ರಶ್ನೆಗಳು ಉದ್ಭವವಾಗಿವೆ.

ಅಂದರೆ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಕೇರಳ, ಪಂಜಾಬ್ ಮುಂತಾದ ರಾಜ್ಯಗಳೂ ಹಲವು ಬಾರಿ ಕೇಂದ್ರದ ವಿರುದ್ಧ ಸ್ವಾಯತ್ತತೆ ವಿಚಾರ ಎತ್ತಿವೆ. ಆದರೆ ತಮಿಳುನಾಡಿನಲ್ಲಿ ಇದು ನಿರಂತರ ರಾಜಕೀಯ ಅಜೆಂಡಾ ಆಗಿರುವುದು ದ್ರಾವಿಡ ರಾಜಕೀಯದ ವೈಶಿಷ್ಟ್ಯ. ಭಾಷಾ-ಸಾಂಸ್ಕೃತಿಕ ಹೆಮ್ಮೆ, ಪ್ರಾದೇಶಿಕ ಅಸ್ತಿತ್ವದ ಗಟ್ಟಿತನ, ಪ್ರಬಲ ಪ್ರಾದೇಶಿಕ ಪಕ್ಷಗಳು ಇವುಗಳು ಕೇಂದ್ರದ ವಿರುದ್ಧ ಧ್ವನಿಯನ್ನು ನಿರಂತರವಾಗಿ ಜೀವಂತವಾಗಿರಿಸುತ್ತವೆ. ಅಮೆರಿಕದ ಮಾದರಿಯನ್ನು ಉದಾಹರಿಸಿ ಕೆಲವರು 'ಅಲ್ಲಿ ರಾಜ್ಯಗಳಿಗೆ ಹೆಚ್ಚು ಅಧಿಕಾರವಿದೆ' ಎಂದು ಹೇಳುತ್ತಾರೆ.

ಆದರೆ ಅಮೆರಿಕದ ಇತಿಹಾಸ, ನಾಗರಿಕ ಯುದ್ಧದ ಅನುಭವ, ಎರಡು ಶತಮಾನಗಳ ರಾಜಕೀಯ ಸಂಸ್ಕೃತಿ ವಿಭಿನ್ನವಾಗಿವೆ. ಭಾರತವು ವಿಭಜನೆಯ ನೋವಿನ ಮಧ್ಯೆ ಹುಟ್ಟಿದ ರಾಷ್ಟ್ರ, ಭಾಷಾ ಆಧಾರಿತ ರಾಜ್ಯಗಳ ಮರುರಚನೆಯೂ ಏಕತೆಯನ್ನು ಉಳಿಸಿಕೊಳ್ಳಲು ನಡೆದ ಪ್ರಯತ್ನ. ಆದ್ದರಿಂದಲೇ ಭಾರತ 'ವೈವಿಧ್ಯತೆಯಲ್ಲಿ ಏಕತೆ' ಮಾದರಿಯನ್ನು ಆರಿಸಿಕೊಂಡಿತು.

ಈಗ ಎಂ.ಕೆ.ಸ್ಟಾಲಿನ್ ಅವರು ಸಂವಿಧಾನಕ್ಕೆ ತಿದ್ದುಪಡಿ ತಂದೇ ಸ್ವಾಯತ್ತ ನಿರ್ಧಾರ ತೆಗೆದುಕೊಳ್ಳಬೇಕು ಎಂದಿದ್ದಾರೆ. ಹಾಗೆಯೇ, ರಾಜ್ಯಗಳ ಅಧಿಕಾರ ಹೆಚ್ಚಬೇಕು ಎಂಬ ಬೇಡಿಕೆಯನ್ನೂ ಮುಂದಿಟ್ಟಿದ್ದಾರೆ. ಈಗಲೂ ಭಾರತದ ಸಂವಿಧಾನ ತಿದ್ದುಪಡಿ ಮೂಲಕ ಅಧಿಕಾರ ಹಂಚಿಕೆಯನ್ನು ಪರಿಷ್ಕರಿಸಲು ಅವಕಾಶವಿದೆ. ಆದರೆ 'ಸ್ವಾಯತ್ತತೆ' ಎಂಬ ಪದಪ್ರಯೋಗ ಕೆಲವೊಮ್ಮೆ ರಾಷ್ಟ್ರ ಏಕತೆಯ ಮೇಲೆ ಅನುಮಾನ ಹುಟ್ಟಿಸುತ್ತದೆ. ತೆರಿಗೆ, ಭದ್ರತೆ, ವಿದೇಶಾಂಗ, ಕರೆನ್ಸಿ ಮೊದಲಾದ ವಿಷಯಗಳಲ್ಲಿ ವಿಭಜಿತ ನೀತಿಗಳು ದೇಶದ ಸಮಗ್ರತೆಯನ್ನು ದುರ್ಬಲಗೊಳಿಸಬಹುದು.

ಭಾರತದ ಒಕ್ಕೂಟ ತತ್ತ್ವ ಚಲನೆಯಲ್ಲಿರುವ ವ್ಯವಸ್ಥೆ. ಜಿಎಸ್‌ಟಿ ಮಂಡಳಿ, ಅಂತರ್ ರಾಜ್ಯ ಮಂಡಳಿ, ಹಣಕಾಸು ಆಯೋಗ ಸಹಕಾರಾತ್ಮಕ ಫೆಡರಲಿಸಂಗೆ ಉದಾಹರಣೆ. ಕೇಂದ್ರ-ರಾಜ್ಯಗಳ ನಡುವೆ ಸಂವಾದವೇ ಶಾಶ್ವತ ಪರಿಹಾರ. ಸ್ವಾಯತ್ತತೆ ಎಂದರೆ ಬೇರ್ಪಟ್ಟು ನಿಲ್ಲುವುದಲ್ಲ, ಅಧಿಕಾರ ಹಂಚಿಕೆಯ ಸಮತೋಲನ ಕಾಪಾಡಿಕೊಳ್ಳುವುದು.

ತಮಿಳುನಾಡಿನ ಸ್ವಾಯತ್ತತೆ ಚರ್ಚೆ ಇತಿಹಾಸ, ಭಾಷಾ ಅಸ್ಮಿತೆ, ಆರ್ಥಿಕ ಹಿತಾಸಕ್ತಿಗಳು ಮತ್ತು ರಾಜಕೀಯ ತಂತ್ರಗಳ ಮಿಶ್ರಣ. ಇದು ಕೇವಲ ಭೂ-ರಾಜಕೀಯ ಪ್ರಶ್ನೆಯಲ್ಲ, ಪ್ರಾದೇಶಿಕ ಅಸ್ತಿತ್ವದ ರಾಜಕೀಯ. ಆದರೆ ದೇಶದ ಒಗ್ಗಟ್ಟು, ಸಂವಿಧಾನಾತ್ಮಕ ಚೌಕಟ್ಟು ಮತ್ತು ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡಾಗ, ಅತಿರೇಕ ಬೇಡಿಕೆಗಳಿಗಿಂತ ಸಹಕಾರಾತ್ಮಕ ಮಾರ್ಗವೇ ಸೂಕ್ತ. ರಾಜ್ಯಗಳ ಬಲವೇ ರಾಷ್ಟ್ರದ ಬಲ. ಆದರೆ ರಾಷ್ಟ್ರದ ಏಕತೆ ಕುಂದದಂತೆ, ರಾಜ್ಯಗಳ ಹಕ್ಕುಗಳೂ ಕುಂಠಿತವಾಗದಂತೆ ಈ ಸೂಕ್ಷ್ಮ ಸಮತೋಲನವನ್ನು ಕಾಪಾಡಿಕೊಳ್ಳಬೇಕು.

ಅಕ್ಕಿ ಮೊಳೆಯುವುದಿಲ್ಲ

ಸಂಹತಿ ಶ್ರೇಯಸೀ ಪುಂಸಾಂ ಸ್ವಕುಲೈರಲ್ಪಕೈರಪಿ।
ತುಷೇಣಾಪಿ ಪರಿಭ್ರಷ್ಟಾ ನ ಪ್ರರೋಹಂತಿ ತಂಡುಲಾ:॥ -ಹಿತೋಪದೇಶ

ತಮ್ಮವರು ಎಷ್ಟೇ ಅಲ್ಪರಾಗಿದ್ದರೂ ಅವರೊಡನೆ ಒಟ್ಟಾಗಿರುವುದು ಮಾನವರಿಗೆ ಶ್ರೇಯಸ್ಕರ. ಹೊಟ್ಟು ಹೊರಕ್ಕೆ ಹಾಕಲ್ಪಟ್ಟ ಅಕ್ಕಿ ಮೊಳೆಯುವುದಿಲ್ಲ -ಎಂಬುದು ಶ್ಲೋಕಾರ್ಥ.

'ಮನೆಗೆ ಮಾರಿ ಊರಿಗೆ ಉಪಕಾರಿ' ಎಂಬ ನಾಣ್ನುಡಿಯಿದೆ. ಕೆಲವರ ಗುಣ-ನಡತೆಗಳನ್ನು ಗಮನಿಸಿಯೇ ಈ ಮಾತನ್ನು ಹೇಳಿದ್ದಾರೆ. ನಾವು ಅನೇಕರನ್ನು ನೋಡುತ್ತೇವೆ. ಅವರಿಗೆ ತಮ್ಮವರು ಎಂದರೆ ಅಷ್ಟಕ್ಕಷ್ಟೇ! ತಮ್ಮವರನ್ನು ದ್ವೇಷಿಸುತ್ತಾರೆ, ನಿಂದಿಸುತ್ತಾರೆ. ಹಾಗಂತ ಇತರರಿಗೆ ಒಳ್ಳೆಯವರಾಗಿ ಕಾಣಿಸಿಕೊಳ್ಳುತ್ತಾರೆ. ಮನೆಗೆ ಉಪಕಾರಿಯಾಗದಿದ್ದರೂ ಇತರರಿಗೆ ಉಪಕಾರಿಯಾಗಿ ತೊಡಗಿ ಕೊಳ್ಳುತ್ತಾರೆ. ಇತರರಿಗೆ ಉಪಕಾರಿಯಾಗ ಬೇಕಾದದ್ದು ಮಾನವಧರ್ಮ. ತಾನು ಪ್ರಕೃತಿದತ್ತವಾದ ಎಲ್ಲ ವಸ್ತುಗಳ ಪ್ರಯೋಜನ ಪಡೆಯುತ್ತಾನೆ. ಇತರರಿಂದಲೂ ಸಹಕಾರ ಅಪೇಕ್ಷಿಸುತ್ತಾನೆ. ಹೀಗಿರುವಾಗ ತಾನು ಪರೋಪಕಾರಿಯಾಗದಿದ್ದರೆ ಹೇಗೆ? ತುಂಬಾ ಉಪಕಾರ ಮಾಡಲು ಸಾಧ್ಯವಾಗದಿದ್ದರೂ ತನ್ನ ವ್ಯಾಪ್ತಿಗೆ ಅನುಗುಣವಾಗಿ ತೊಡಗಬೇಕು. ಪರೋಪಕಾರವೇ ಪರಮ ಶ್ರೇಷ್ಠ ಧರ್ಮ.

ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್



ಹೀಗಂದ ಮಾತ್ರಕ್ಕೆ ತಮ್ಮವರನ್ನು, ತನ್ನ ಕುಟುಂಬವನ್ನು ಕಡೆಗಣಿಸಬಾರದು. ತನ್ನ ಕುಟುಂಬಕ್ಕೆ, ತಮ್ಮವರಿಗೆ ವೈಯಕ್ತಿಕ ನೆಲೆಯಲ್ಲಿ ಸಹಕರಿಸಬೇಕು. ಇದು ಕರ್ತವ್ಯ. 'ಅಂಗಳಕ್ಕೆ ಹಾರಿ ಆಮೇಲೆ ಆಕಾಶಕ್ಕೆ ಹಾರಬೇಕು' ಎಂಬ ಮಾತಿದೆ. ಇದನ್ನು ಮನದಟ್ಟು ಮಾಡಿಕೊಳ್ಳಬೇಕು. ಅಂಗಳಕ್ಕೇ ಹಾರಲಾರದವನು ಆಕಾಶಕ್ಕೆಂತ ಹಾರಬಲ್ಲ. ನಮ್ಮೆಲ್ಲ ನೋವು ನಲಿವುಗಳಲ್ಲಿ ಮೊದಲು ಬರಬೇಕಾದವರು ನಮ್ಮವರು. ಇವರೆಂದೂ ನಮ್ಮನ್ನು ಬಿಟ್ಟು ಹಾಕುವುದಿಲ್ಲ. ಕೊನೆಯವರೆಗೂ ನಮ್ಮೊಂದಿಗೆ ನಿಲ್ಲುವವರು ಇವರೇ. ಉಳಿದವರು ಯಾವುದೋ ಸಮಯ ಸಂದರ್ಭಗಳಲ್ಲಿ ಜೊತೆಯಾಗುತ್ತಾರೆ. ಹಾಗೆ ಸಾಗುತ್ತಾರೆ ಕೂಡ.

ನಮ್ಮವರು ಎನ್ನುವವರು ಹಾಗಲ್ಲ. ಅವರೊಂದಿಗೆ ನಮ್ಮತನವನ್ನು ಇರಿಸಿಕೊಂಡರೆ ಜೀವನ ಪೂರ್ತಿ ನಮ್ಮ ಜತೆಗಿರುತ್ತಾರೆ. ಇದಕ್ಕೆ ಕಾರಣ ಮೂಲ ಬೆಸೆದಿರುತ್ತದೆ.

ಆದ್ದರಿಂದ ನಾವು ಚೆನ್ನಾಗಿರಬೇಕು. ನಮ್ಮವರನ್ನು ಚೆನ್ನಾಗಿ ಕಾಣಬೇಕು. ಅವರೊಂದಿಗೆ ಕಲೆತು ಜೀವನ ಸಾಗಿಸಬೇಕು. ಇದನ್ನು ಪಾಲಿಸಿದವರ ಪಾಲಿಗೆ ನೆಮ್ಮದಿಯ ಕ್ಷಣಗಳು ತೆರೆದುಕೊಳ್ಳುತ್ತವೆ. ನಮ್ಮವರು ಅಲ್ಪರಾಗಲಿ, ಮಹಾನ್ ಆಗಿರಲಿ, ತಿರಸ್ಕರಿಸಬಾರದು. ಅಲ್ಪರು ಅಥವಾ ಬಡವರಾಗಿದ್ದರೆ ಹೆಚ್ಚು ಹೆಚ್ಚಾಗಿ ಒಟ್ಟಾಗಿರಬೇಕು. ಅವರಿಗಿರುವ ಪರೋಪಕಾರ ಬುದ್ಧಿ ಮಹತ್ತರವಾದದ್ದು. ನಮ್ಮವರೊಂದಿಗೆ ಒಟ್ಟಾಗಿರುವುದು ಉತ್ತಮ. ಆದ್ದರಿಂದಲೇ ಪ್ರಯೋಜನ. ಶ್ರೇಯಸ್ಕರ ಕೂಡ.

ಬತ್ತ ಮೊಳೆತು ಸರಿಯಾಗಿ ಬೆಳೆದು ಫಲ ನೀಡುವುದಕ್ಕೆ ಯಥಾಸ್ಥಿತಿಯಲ್ಲಿರುವ ಬತ್ತವೇ ಬೇಕಾಗುತ್ತದೆ. ಬತ್ತದಿಂದ ಅಕ್ಕಿಯಾಗುತ್ತದೆ. ಆದ್ದರಿಂದ ಹೊಟ್ಟನ್ನೆಲ್ಲ ತೆಗೆದು ಅಕ್ಕಿಯನ್ನೇ ಬಿತ್ತಿ, ಅಕ್ಕಿಯನ್ನೇ ಬೆಳೆಯೋಣ ಎಂಬುದು ಅಸಾಧ್ಯವಾದ ಮಾತು. ಹೊಟ್ಟು ಹೋದ ಬತ್ತವೆಂದೂ ಮೊಳಕೆಯಾಗುವುದಿಲ್ಲ. ಹೊಟ್ಟು, ತೌಡುಗಳಿಂದ ಕೂಡಿದ ಬತ್ತವೇ ಬೆಳೆದು ಅಕ್ಕಿಯಾಗುತ್ತದೆ. ತನ್ನದಾದವುಗಳಿಂದ ಬೇರ್ಪಡದ ಬತ್ತವು ಹೇಗೆ ಅಕ್ಕಿಗೆ ಕಾರಣವೋ ಅಂತೆಯೇ ನಮ್ಮವರಿಂದೊಡಗೂಡಿದ ಜೀವನವೇ ಉನ್ನತಿಗೆ, ಒಳಿತಿಗೆ ಕಾರಣವಾಗುತ್ತದೆ. ಆದ್ದರಿಂದ ನಮ್ಮವರನ್ನು ಪ್ರೀತಿಸೋಣ. ನಮ್ಮವರೊಂದಿಗೆ ಕೂಡಿ ಬದುಕೋಣ. ತನ್ಮೂಲಕ ನೆಮ್ಮದಿಯನ್ನು ಕಾಣೋಣ.

ತಾಳಮದ್ದಲೆ: ನಿರ್ದೇಶನದ ಪ್ರಶ್ನೆ

ಆ-ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ತಾಳಮದ್ದಲೆಯೊಂದು ಹೇಗೆ ಪ್ರದರ್ಶನಗೊಳ್ಳಬೇಕು, ಹೇಗೆ ಆಗಬಾರದು ಎಂಬ ಎರಡೂ ದಿಕ್ಕಿನಲ್ಲಿ ಅಭಿಪ್ರಾಯಭೇದಗಳಿವೆ. ಇವುಗಳಲ್ಲಿ ಹೆಚ್ಚಿನವುಗಳು ಎಂದಿಗೂ ಒಂದು ಬಿಂದುವಿನಲ್ಲಿ ಸಂಧಿಸುವ ಸಂಭವ ಇಲ್ಲವೇನೋ. ಯಾಕೆಂದರೆ ತಾಳಮದ್ದಲೆಯ ಕುರಿತು ಅನೇಕ ಮಂದಿ ಅನೇಕ ಅಭಿಪ್ರಾಯಗಳನ್ನು ಪ್ರಕಟಿಸುವುದು ಕಲೆ ಅಥವಾ ರಂಗಭೂಮಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಅಲ್ಲ, ವೈಯಕ್ತಿಕವಾಗಿ ತಮಗೆ ಬೇಕಾದ್ದು ಮತ್ತು ಬೇಡವಾದುದನ್ನು ಲಕ್ಷಿಸಿ ಬರುವ ಅಭಿಪ್ರಾಯಗಳು ಅವು. ನಾನು ಹಿಂದೆ ಹೇಳಿದ ಭಾವ ಅಥವಾ ವ್ಯಕ್ತಿನಿಷ್ಠ. ಇದರ ಹೊರತಾಗಿಯೂ ಒಟ್ಟು ರಂಗಭೂಮಿಯ ಕಾಳಜಿಯಿದ್ದವರು ಮಾತನಾಡುವಾಗಲೂ ಪರಸ್ಪರ ಹೊಂದಾಣಿಕೆಯಾಗದಷ್ಟು ಅಂತರ ಇರುತ್ತದೆ.

ಅದಕ್ಕೆ ಸೂಕ್ತ ಉದಾಹರಣೆ ಅಂದರೆ ನಿರ್ದೇಶನಕ್ಕೆ ಸಂಬಂಧಿಸಿದ್ದು.

ಇದನ್ನು ಗ್ರಹಿಸಬೇಕಾದರೆ ಒಂದು ತಾಳಮದ್ದಲೆ ಪ್ರದರ್ಶನ ಹೇಗೆ ಸಂಭವಿಸುತ್ತದೆ ಎಂದು ನೋಡಬೇಕು. ವಿಭಿನ್ನ ಶೈಲಿಯ ನಾಲ್ಕೋ ಐದೋ (ಕೆಲವು ಸಲ ಮೂರು, ಎರಡು) ಅರ್ಥಧಾರಿಗಳನ್ನು ಕರೆದು ಪಾತ್ರ ವಿತರಣೆ ಮಾಡಿ, ಬಳಿಕ ಪ್ರದರ್ಶನ ನಡೆಯುವುದು. ಇಲ್ಲಿ ಪಾತ್ರವನ್ನು ಹಂಚಿದ ಮೇಲೆ ಅರ್ಥಧಾರಿಯ ನಿರ್ವಹಣಾ ಸ್ವಾತಂತ್ರ್ಯದ ಮೇಲೆ ಉಳಿದವರ ಹಸ್ತಕ್ಷೇಪ ಇಲ್ಲ. ಅವನ ಸ್ವಾತಂತ್ರ್ಯವು ಪ್ರಸಂಗದ ಚೌಕಟ್ಟಿಗೆ ಬದ್ಧವಾಗಿರುತ್ತದೆ. ಆದರೆ ಇನ್ನೊಂದು ಪಾತ್ರ ವಹಿಸಿದವನು ಈ ಪಾತ್ರವನ್ನು ಪ್ರಭಾವಿಸುವುದು, ದಿಕ್ಕನ್ನು ಬದಲಿಸುವುದು, ಗತಿಯನ್ನು ವ್ಯತ್ಯಾಸಗೊಳಿಸುವುದು ಇತ್ಯಾದಿಗಳನ್ನು ಮಾಡಬಹುದು. ಅಥವಾ ನಿರುದ್ದೇಶಿತವಾಗಿ ಹಾಗೆ ಆಗಬಹುದು.

ನಾಲ್ಕೂ ಪಾತ್ರಗಳೂ ಪರಸ್ಪರ ಪ್ರಭಾವಿಸುತ್ತ, ಸ್ಪಂದಿಸುತ್ತ ನಾಟಕದಂತೆ ಕಥನವನ್ನು ಕಟ್ಟುವಾಗ, ಒಬ್ಬನಿಂದ ಆಗುವ ಪರಿಣಾಮಕ್ಕೆ ಎಲ್ಲರೂ ತಲೆ ಕೊಡಬೇಕಾಗುತ್ತದೆ. ಅದು ಹೇಗೆಂದರೆ ಒಂದು ದೊಡ್ಡ ಹೊರೆಯನ್ನು ನಾಲ್ಕು ಮಂದಿ ಹೊತ್ತು ಸಾಗಿಸುವ ಹಾಗೆ. ಅವರಲ್ಲಿ ಒಬ್ಬ ಎಡವಿದರೂ, ಜಾರಿದರೂ, ಜಾರಿಸಿದರೂ ಪರಿಣಾಮ ಉಳಿದ ಮೂವರ ಮೇಲೂ ಆಗುವಂತೆ. ಒಟ್ಟಿನಲ್ಲಿ ಹೊರೆ ಕೆಳಗೆ ಬೀಳುತ್ತದೆ. ಯಾರು ತಪ್ಪು ಮಾಡಿದರು ಅನ್ನುವುದು ಮತ್ತಿನ ಪ್ರಶ್ನೆ.

ತಾಳಮದ್ದಲೆಯ ಈ ಗುಣದಿಂದಾಗಿ ನಿರ್ದೇಶನ ಎಂಬುದನ್ನು ಅಳವಡಿಸುವಾಗ ಅಥವಾ ಅದಕ್ಕೆ ತಾಳಮದ್ದಲೆಯನ್ನು ಒಳಪಡಿಸುವಾಗ ಬಹಳ ವಿವೇಚನೆ ಬೇಕು. ನಿರ್ದೇಶಕನ ವ್ಯಾಪ್ತಿಯೂ ಖಚಿತವಿರಬೇಕು. ಮೇಲಿನ ಉದಾಹರಣೆಯನ್ನು ಸ್ವಲ್ಪ ವಿಸ್ತರಿಸೋಣ. ನಾಲ್ವರು ಹೊತ್ತಿದ್ದ ಹೊರೆ ಒಬ್ಬನ ಕಾರಣದಿಂದ ಕೆಳಗೆ ಬಿತ್ತು. ಅದರಿಂದ ಆದ ನಷ್ಟಕಷ್ಟಗಳಿಗೆ ಆ ಒಬ್ಬನನ್ನೇ ಹೊಣೆಯಾಗಿಸುವುದೋ, ಅಥವಾ 'ಹೊರೆ ಸಾಗಿಸುವ ಕೆಲಸ ನಾಲ್ವರಿಗೆ ಒಟ್ಟಾಗಿ ಕೊಟ್ಟದ್ದು, ಅದು ಸಮಾನ ಹೊಣೆ, ನಾಲ್ವರು ಮಾಡಬೇಕಾದ ಕೆಲಸ ಆಗಬೇಕಾದಂತೆ ಆಗಲಿಲ್ಲ' ಎಂದು ಎಲ್ಲರನ್ನೂ ದೂಷಿಸೋಣವೋ? ನಿರ್ದೇಶನವು ಪ್ರತಿಯೊಬ್ಬನ ಹೆಗಲ ಮೇಲೆ ಬಿದ್ದ ಹೊರೆಯ ತೂಕ, ಸಾಮರ್ಥ್ಯ, ಹೆಜ್ಜೆಯಿಡುವ ಜಾಗ, ದಾರಿಯ ಕಲ್ಲು ಮುಳ್ಳು ಇವುಗಳನ್ನು ಗಮನಿಸಿ, ಪ್ರತಿ ಹಂತದಲ್ಲೂ ನಿರ್ದೇಶನ ಕೊಡಬೇಕೋ? ಅಷ್ಟಾಗಿಯೂ ಹೊರೆ ಕೆಳಗೆ ಬಿದ್ದರೆ ನಿರ್ದೇಶಕನು ಉತ್ತರದಾಯಿಯೆ? ಕೆಲಸ ಯಶಸ್ವಿಯಾಗಿ ಪೂರ್ಣವಾದರೆ ಆಗ ಅದರ ಕೀರ್ತಿ ಯಾರಿಗೆ?

ಈ ತೊಡಕನ್ನು ಹೇಗೋ ನಿವಾರಿಸಿದ ಮೇಲೆ, ನಿರ್ದೇಶನ ಮಾಡುವುದು ಯಾರು ಎನ್ನುವುದು ಮುಖ್ಯವಾಗುತ್ತದೆ. ತಾಳಮದ್ದಲೆಗೆ ಭಾಗವತನೇ ನಿರ್ದೇಶಕನಾಗಬೇಕು ಎಂಬ ಮಾತೂ ಕೇಳಿಬರುವುದುಂಟು. ಇದರಲ್ಲಿ ಅನೇಕರು ಯಕ್ಷಗಾನದಲ್ಲಿ ಭಾಗವತನೇ ಪ್ರಧಾನವಿರುವುದರಿಂದ, ತಾಳಮದ್ದಲೆಯೂ ಹಾಗೇ ಎಂದು ಭಾವಿಸಿ ಹೇಳುವುದು ಎಂದು ತೋರುತ್ತದೆ. ಯಕ್ಷಗಾನಕ್ಕೂ ತಾಳಮದ್ದಲೆಗೂ ವ್ಯತ್ಯಾಸ ಉಂಟು ಎಂದು ಒಪ್ಪಿದರೆ ಮಾತ್ರ ನಿರ್ದೇಶನದ ಸಾಧುತ್ವ ಅಸಾಧುತ್ವಗಳನ್ನು ವಿವೇಚಿಸಬಹುದು. ಎರಡು ರಂಗಭೂಮಿಗಳ ಪ್ರತ್ಯೇಕತೆಯನ್ನೂ, ತಾಳಮದ್ದಲೆಯ ಅನನ್ಯತೆಯನ್ನೂ ಬಲ್ಲ ಭಾಗವತನು ತಾಳಮದ್ದಲೆಯ ನಿರ್ದೇಶನದ ಸೂತ್ರವನ್ನು ಹಿಡಿಯಬಹುದೋ ಏನೋ. ಅದಿಲ್ಲವಾದರೆ, ತಾಳಮದ್ದಲೆಯು ವೇಷವಿಲ್ಲದ ಆಟವಾದೀತು. ತನ್ನ ನಿರ್ವಹಣೆಯ ಗೆಲುವಿನ ಕುರಿತು ಮಾತ್ರ ಲಕ್ಷ್ಯ ವಹಿಸುವವನಾದರೆ ಆತ ತಾಳಮದ್ದಲೆಗೆ ನಿರ್ದೇಶನ ಮಾಡಲಾರ. ಯಾರು ನಿರ್ದೇಶಕನಾದರೂ, ಅರ್ಥಧಾರಿಗಳ ವರ್ಚಸ್ಸು, ಜನಪ್ರಿಯತೆಗಳು, ನಿರ್ದೇಶನವನ್ನೂ ನಿರ್ದೇಶಿಸುವಂತೆ ಆಗಬಾರದು.

ಇಷ್ಟು ಕಾಲದವರೆಗೆ ನಿರ್ದೇಶನವಿಲ್ಲದೆ ತಾಳಮದ್ದಲೆ ನಡೆದಿಲ್ಲವೆ? ಈಗ ಹೊಸದಾಗಿ ನಿರ್ದೇಶನದ ಅವಶ್ಯಕತೆಯೇನು? ಎಂಬ ವಾದವೂ ಬರುತ್ತದೆ. ಇಷ್ಟರತನಕ ಇರಲಿಲ್ಲ ಎಂಬುದರಿಂದ ಇನ್ನು ಮುಂದಕ್ಕೂ ಬೇಡ ಎನ್ನುವ ನಿಲುವನ್ನು ಒಪ್ಪುವುದು ಕಷ್ಟ. ತಾಳಮದ್ದಲೆ ರಂಗಭೂಮಿ ಪರಿವರ್ತನೆಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಲೇ ಬಂದಿದೆ. ಆದರೆ ಈ ನಿರ್ದೇಶನ ಎಂಬುದು ನಾಟಕ ನಿರ್ದೇಶನದಂತೆ ಆಗುವುದು ಶಕ್ಯವಿಲ್ಲ. ಅಲ್ಲಿ ನಟನು ನಿರ್ದೇಶಕನ ನಿರೀಕ್ಷೆಯಂತೆ ಅಭಿನಯಿಸಬೇಕಾಗುತ್ತದೆ. ಒಂದೊಂದು ಆಂಗಿಕ ಚಲನೆಯೂ, ಸಂಭಾಷಣೆಯ ವಾಕ್ಯಗಳೂ ನಿರ್ದೇಶನದ ಸೂತ್ರಕ್ಕೆ ಬದ್ಧವಾಗಿರುತ್ತವೆ. ಅದು ನಾಟಕ ರಂಗಭೂಮಿಯ ಧರ್ಮ. ತಾಳಮದ್ದಲೆಯ ಗುಣ ಬೇರೆ. ಅಲ್ಲಿ ಪ್ರದರ್ಶನದ ನಡುವೆ ಪ್ರೇಕ್ಷಕರ ಪ್ರತಿಕ್ರಿಯೆ ಕೂಡ ಅರ್ಥಧಾರಿಯ ಮೇಲೆ ಪರಿಣಾಮ ಬೀರುತ್ತದೆ. ಆಶು ರೂಪದ ಸಂಭಾಷಣೆಯಲ್ಲಿ ಬರುವ ಆ ಕ್ಷಣದ ಹೊಳಹುಗಳಿರುತ್ತವೆ. ಭಾಗವತನ ಪದ್ಯ, ಲಯ, ರಾಗಗಳು ಮೂಡಿಸುವ ಸ್ಫೂರ್ತಿ ಇರುತ್ತದೆ. ಅಷ್ಟೇ ಏನು, ನಿರುತ್ಸಾಹಕ್ಕೆ ಕಾರಣವಾಗುವ, ಕೋಪ ಹುಟ್ಟಿಸುವ ಸಂದರ್ಭಗಳೂ ಬರಬಹುದು. ಇಲ್ಲೆಲ್ಲ ನಿರ್ದೇಶಕ ಮಧ್ಯೆ ಪ್ರವೇಶಿಸುವುದಕ್ಕಾಗುವುದಿಲ್ಲ.

ಹಾಗಾಗಿ ಒಂದು ಸ್ಥೂಲ ಮಟ್ಟಿನ, ಒಟ್ಟು ಅವಧಿಯ ಹಂಚಿಕೆ, ಪಾತ್ರ ವಿತರಣೆ, ಪ್ರಸಂಗದಲ್ಲಿ ಪ್ರಾಶಸ್ತ್ಯ ಕೊಡಬೇಕಾದ ಭಾಗ, ಪ್ರಕಟಿಸಬೇಕಾದ ಆಶಯ ಇಂತಹ ವಿಷಯಗಳಲ್ಲಿ ಸೂಚನೆಯನ್ನು ಕೊಡಬಹುದು. ಅದನ್ನು ಮೀರಿದ ನಿರ್ದೇಶನವು ಅರ್ಥಧಾರಿಯ ಪ್ರತಿಭಾ ವಿಲಾಸವನ್ನು ನಿರ್ಬಂಧಿಸಿದಂತೆ ಆದೀತು. ಕಾವ್ಯ ರಚನೆಯಲ್ಲಿ ಕವಿಗೆ ನಿರ್ದೇಶನ ನೀಡಿದರೆ ಏನಾದೀತು? ಇದೂ ಹಾಗೆಯೇ. ತಾಳಮದ್ದಲೆಯಲ್ಲಿ ಇಂತಹ ಸೂತ್ರಗಳನ್ನೂ ಅರ್ಥಧಾರಿಗಳು ಮೀರಿ ನಡೆಯುವ ಸಂದರ್ಭಗಳಿಲ್ಲವೆ? ಇದ್ದಾವು. ಯಾಕೆಂದರೆ ಅರ್ಥಧಾರಿಯ ವೈಯಕ್ತಿಕ ಜನಪ್ರಿಯತೆಯು ಕೂಡ ತಾಳಮದ್ದಲೆಯನ್ನು ಪ್ರಭಾವಿಸುವ ಸಂಗತಿಗಳಲ್ಲಿ ಒಂದು. ಅನೌಚಿತ್ಯದ ಕಾರಣಗಳಲ್ಲಿ ಇದೂ ಉಂಟು.

ಇವೆಲ್ಲದರ ಆಚೆಗೂ ಇನ್ನೊಂದು ಪ್ರವೃತ್ತಿ ಹಲವರಲ್ಲಿ ಕಾಣಿಸಿಕೊಳ್ಳುವುದನ್ನು ಗಮನಿಸಬಹುದು. ಅದು ಹೇಗೆ ಅಂದರೆ ತಮಗೆ ಉಂಟಾದ ಒಂದೋ ಎರಡೋ ಅನುಭವಗಳನ್ನು ಮಾತ್ರ ಆಧರಿಸಿ ಈ ಕ್ಷೇತ್ರವೇ ಪ್ರಯೋಜನವಿಲ್ಲದ್ದು ಅಥವಾ ಎಂದಿಗೂ ದುರಸ್ತಿಯಾಗದ ಸಂಗತಿ ಎಂದು ನಿರ್ಣಯಿಸಿ ಅದರಿಂದ ಶಾಶ್ವತವಾಗಿ ದೂರವಾಗುವವರು. ಅದಕ್ಕೆ ದೃಷ್ಟಾಂತವಾಗಿ ಒಂದು ಸಂದರ್ಭವನ್ನು ನೋಡಿ.

ಒಂದು ಕಡೆ ಒಂದು ತಾಳಮದ್ದಲೆ ನಡೆಯಿತು. ಆ ಊರು ಕೂಡ ತಾಳಮದ್ದಲೆ ಆಸಕ್ತರಿಗೆ ಪ್ರಸಿದ್ಧಿ. ಒಳ್ಳೆಯ ಹಿಮ್ಮೇಳ, ಸುಪ್ರಸಿದ್ಧ ಅರ್ಥಧಾರಿಗಳು. ದೊಡ್ಡ ಸಂಖ್ಯೆಯ ಶ್ರೋತೃಗಳು. ನಾಲ್ಕು ಪಾತ್ರಗಳಲ್ಲಿ ಇಬ್ಬರ ನಡುವೆ ವಾದ ಬೆಳೆದು ವಿಪರೀತಕ್ಕೆ ಹೋಯಿತು. ತಾಳಮದ್ದಲೆ ಒಮ್ಮೆ ಮುಗಿದರೆ ಸಾಕು ಅನಿಸುವಷ್ಟಾಯಿತು. ಉಳಿದ ಇಬ್ಬರು ಅರ್ಥಧಾರಿಗಳು ಚೆನ್ನಾಗಿಯೇ ಅರ್ಥ ಹೇಳಿದ್ದರು. ಆದರೆ ಮಾಡಿಸಿದವರು, 'ಇನ್ನು ತಾಳಮದ್ದಲೆ ಸುದ್ದಿಯೇ ಬೇಡ' ಎಂಬ ನಿರ್ಧಾರಕ್ಕೆ ಬಂದು ಇದರಿಂದ ದೂರವಾದರು. ಏಳು ಮಂದಿ ಕಲಾವಿದರಲ್ಲಿ ಇಬ್ಬರು ಮಾತ್ರ ಕೆಡಿಸಿದವರು. ಉಳಿದವರ ಅಪರಾಧವೇನೂ ಇಲ್ಲ. ಆದರೆ ನಷ್ಟ ಎಲ್ಲರಿಗೂ ಆಯಿತು. ಈ ದೃಷ್ಟಿಕೋನ ಸರಿ ಎನ್ನುವುದು ಹೇಗೆ?

ಇಂತಹ ಸಂದರ್ಭಗಳಲ್ಲಿ ಅನೌಚಿತ್ಯಕ್ಕೆ ಕಾರಣರಾದವರನ್ನು ಮಾತ್ರವೇ ಪ್ರತ್ಯೇಕಿಸುವ ಹಾಗಿದ್ದರೆ ಒಳ್ಳೆಯದಿತ್ತು. ಅದೂ ಸಾಧ್ಯವಿಲ್ಲದ ಸಂರಚನೆಯಾಗಿ ತಾಳಮದ್ದಲೆಯಿದೆ.

ಅನೇಕ ದಶಕಗಳ ಹಿಂದೆ ತಾಳಮದ್ದಲೆಗೆ ಒಬ್ಬರು ಅಧ್ಯಕ್ಷರನ್ನು ನಿಯೋಜಿಸುವ ಪದ್ಧತಿಯಿತ್ತು ಎಂದು ಕೇಳಿದ್ದೇನೆ. ಅವರು ಸಮಗ್ರ ತಾಳಮದ್ದಲೆಯನ್ನು ಕೇಳಿ ಅವಲೋಕನ ಮಾಡುತ್ತಿದ್ದರಂತೆ. ನಡುವೆ ವಿವಾದಗಳಾದರೆ ಪರಿಹಾರ ಹೇಳುತ್ತಿದ್ದರಂತೆ. ಅಂತಹ ಅಧ್ಯಕ್ಷತೆಯ ಪೀಠವೇರುವ ದಕ್ಷರನ್ನೂ, ಅವರ ತೀರ್ಮಾನಗಳಿಗೆ ಬಾಗಿ ನಡೆಯುವ ಕಲಾವಿದರನ್ನೂ ಒಟ್ಟು ಸೇರಿಸಿದರೆ ಆದೀತೋ ಏನೋ? ಅಂತಹವರನ್ನು ಎಲ್ಲಿ ಹುಡುಕೋಣ?

ರಾಹುಲ್ ವರ್ತನೆ ವಿಪಕ್ಷ ನಾಯಕನಿಗೆ ತಕ್ಕುದಾದುದಲ್ಲ

▸ ರಾಮ್ ಮಾಧವ್

ಸರಕಾರದ ನಿರ್ಧಾರಗಳನ್ನು ಪ್ರಶ್ನಿಸುವ ಎಲ್ಲಾ ಹಕ್ಕು ವಿರೋಧ ಪಕ್ಷಗಳಿಗಿದೆ. ಪ್ರಧಾನಿ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಟ್ರಂಪ್ ನಡುವಿನ ಮಾತುಕತೆಯ ಬಳಿಕ ರೂಪುಗೊಂಡ ಭಾರತ-ಅಮೆರಿಕ ವ್ಯಾಪಾರ ಒಪ್ಪಂದದ ಕುರಿತೂ ಪ್ರಶ್ನಿಸುವ ಅಧಿಕಾರ ವಿಪಕ್ಷಗಳಿಗೆ ಇದೆ. ಆದರೆ ವಿರೋಧ ಪಕ್ಷಗಳು ವ್ಯಾಪಾರ ಒಪ್ಪಂದದ ಕುರಿತಂತೆ ಸಂಸತ್ತಿನಲ್ಲಿ ಅರ್ಥಪೂರ್ಣ ಚರ್ಚೆ ನಡೆಸುವ ಬದಲಾಗಿ ಸಂಸತ್ತಿನ ಕಲಾಪಗಳನ್ನು ಸ್ಥಗಿತಗೊಳಿಸುವುದಕ್ಕೇ ಹೆಚ್ಚು ಆದ್ಯತೆ ನೀಡಿದವು. ಸರಕಾರದ ವಿರುದ್ಧ ನಿರಾಧಾರಿತ ಆರೋಪಗಳನ್ನು ಹೊರಿಸಿದವು. ಸರಕಾರವು ಸಂಸತ್ತಿನ ಒಳಗೂ, ಹೊರಗೂ ಈ ಕುರಿತಂತೆ ಸ್ಪಷ್ಟನೆಗಳನ್ನು ನೀಡಿತು. ವ್ಯಾಪಾರ ಸಚಿವರು ಕೂಡಾ ಮಾಧ್ಯಮಗಳ ಮುಂದೆ ಈ ಆರೋಪಗಳು ನಿರಾಧಾರಿತ ಎಂದು ಹೇಳಿಕೊಂಡರು.

ಹಿಂದೆ ದ್ವಿಪಕ್ಷೀಯ ಒಪ್ಪಂದವೊಂದು ಈ ಬಗೆಯ ಕಾವು ಸೃಷ್ಟಿಸಿದ್ದೆಂದರೆ ಅದು ಎರಡು ದಶಕಗಳ ಹಿಂದೆ ಯುಪಿಎ ಸರಕಾರದಡಿಯಲ್ಲಿ ರೂಪುಗೊಂಡ ಒಪ್ಪಂದ. 2005ರಲ್ಲಿ ಆಗಿನ ಮನಮೋಹನ ಸಿಂಗ್ ನೇತೃತ್ವದ ಸರಕಾರವು ಅಮೆರಿಕದೊಂದಿಗೆ ಪರಮಾಣು ಒಪ್ಪಂದ ಮಾಡಿಕೊಂಡಿತ್ತು. ಈ ಕುರಿತಂತೆ ಸಂಸತ್ತಿನಲ್ಲಿ ಹಾಗೂ ಸಂಸತ್ತಿನ ಹೊರಗೆ ಖಾರವಾದ ಚರ್ಚೆ ನಡೆದಿತ್ತು. ಇದರಿಂದಾಗಿ ಒಪ್ಪಂದವು ಅಂತಿಮಗೊಳ್ಳುವುದಕ್ಕೆ ಮೂರು ವರ್ಷ ಬೇಕಾಗಿತ್ತು. ಈ ಅವಧಿಯಲ್ಲಿ ನಡೆದ ಸಂಸತ್ ಕಲಾಪಗಳಲ್ಲಿ ಪ್ರಧಾನ ವಿಪಕ್ಷ ಬಿಜೆಪಿಯಷ್ಟೇ ಅಲ್ಲದೆ ಕಾಂಗ್ರೆಸಿಗೆ ಬೆಂಬಲ ನೀಡುತ್ತಿದ್ದ ಎಡಪಕ್ಷಗಳೂ ಒಪ್ಪಂದವನ್ನು ವಿರೋಧಿಸಿ ಮಾತನಾಡಿದ್ದವು. ಅಂತಿಮವಾಗಿ ಎಡಪಕ್ಷಗಳು ಸರಕಾರಕ್ಕೆ ನೀಡಿದ್ದ ಬೆಂಬಲ ಹಿಂತೆಗೆದುಕೊಂಡಿದ್ದವು. ಇದರಿಂದಾಗಿ ಮನಮೋಹನ ಸಿಂಗ್ ಸರಕಾರವು ವಿಶ್ವಾಸಮತ ಗೊತ್ತುವಳಿ ಮಂಡಿಸಬೇಕಾಗಿತ್ತು.

ಭಾರತ-ಅಮೆರಿಕ ಪರಮಾಣು ಒಪ್ಪಂದದ ಕುರಿತಂತೆ ಸಂಸತ್ತಿನಲ್ಲಿ ನಡೆದ ಚರ್ಚೆಗಳು ರಚನಾತ್ಮಕವಾಗಿದ್ದವು. ಅವು ನಿರ್ದಿಷ್ಟ ವಿಷಯವನ್ನೇ ಕೇಂದ್ರೀಕರಿಸಿದ್ದವು. ಸಂಸತ್ತಿನ ಹೊರಗೆ ಕೂಡಾ ಈ ಕುರಿತಂತೆ ರಚನಾತ್ಮಕ ಟೀಕೆಗಳು ನಡೆದಿದ್ದವು. ಎಲ್.ಕೆ. ಆಡ್ವಾಣಿ, ಯಶವಂತ ಸಿನ್ಹಾ, ಅರುಣ್ ಶೌರಿ, ಎಡಪಕ್ಷಗಳ ಸೀತಾರಾಂ ಯೆಚೂರಿ, ಗುರುದಾಸ್ ದಾಸ್ ಗುಪ್ತ, ಖ್ಯಾತ ಪರಮಾಣು ವಿಜ್ಞಾನಿಗಳಾದ ಎ.ಎನ್. ಪ್ರಸಾದ್, ಪಿ.ಕೆ. ಅಯ್ಯಂಗಾರ್ ಮೊದಲಾದವರು ಪರಮಾಣು ಒಪ್ಪಂದದ ಕುರಿತಾದ ಲೋಪಗಳನ್ನು ಎತ್ತಿ ತೋರಿದ್ದರು.

ದುರದೃಷ್ಟವೆಂದರೆ ಅಂತಹ ಪ್ರಬುದ್ಧ ಚರ್ಚೆ ಸಂಸತ್ತಿನಲ್ಲಿ ಈಗ ಕಂಡುಬರುವುದಿಲ್ಲ. ಮೊನ್ನೆ ಸಂಸತ್ತಿನಲ್ಲಿ ವಿರೋಧ ಪಕ್ಷಗಳು ರಚನಾತ್ಮಕ ಚರ್ಚೆಗಿಂತಲೂ ಕೋಲಾಹಲ ಸೃಷ್ಟಿಸುವುದಕ್ಕೆ ಆದ್ಯತೆ ಕೊಟ್ಟವು. ವಿಪಕ್ಷ ನಾಯಕ ರಾಹುಲ್‌ಗಾಂಧಿಯಂತೂ ವೈಯಕ್ತಿಕ ನೆಲೆಯಲ್ಲಿ ಪ್ರಧಾನಿಯನ್ನು ತೆಗಳುವುದನ್ನೇ ತಮ್ಮ ಕಾಯಕವನ್ನಾಗಿಸಿಕೊಂಡರು. ಸರಕಾರವು ಭಾರತಮಾತೆಯನ್ನು ಮಾರುತ್ತಿದೆ ಎಂದು ಅವರು ಆರೋಪಿಸಿದರು. ಸದನದ ಹೊರಗೆ ಕೂಡಾ ಅವರ ಟೀಕೆಗಳು ಬಾಲಿಶವಾಗಿದ್ದವು ಹಾಗೂ ಪ್ರಬುದ್ಧತೆಯ ಕೊರತೆ ಹೊಂದಿದ್ದವು. ಎಪ್‌ಸ್ಟೀನ್ ಫೈಲುಗಳು, ಅಂಬಾನಿ ಮತ್ತು ಅದಾನಿಯವರ ಹೆಸರುಗಳನ್ನೂ ಎಳೆದು ತಂದರು. ''ಮೋದಿಯವರು ಒತ್ತಡಕ್ಕೊಳಗಾಗಿ ಒಪ್ಪಂದ ರೂಪಿಸಿದ್ದಾರೆ, ಅಮೆರಿಕದ ಎದುರು ಶರಣಾಗತರಾಗಿದ್ದಾರೆ'' ಮುಂತಾಗಿ ಆರೋಪಿಸಿದರು. ಅವರ ಮಾತುಗಳು ಅದೆಷ್ಟು ಬಾಲಿಶವಾಗಿದ್ದವೆಂದರೆ ''ಅವರು ಪ್ರಧಾನಿಯ ಕತ್ತು ಹಿಸುಕುತ್ತಿದ್ದಾರೆ. ಹಾಗೆ ಮಾಡುವಾಗ ಕಣ್ಣಿನಲ್ಲಿ ಭೀತಿ ಎದ್ದು ಕಾಣುತ್ತದೆ. ಪ್ರಧಾನಿಯ ಕಣ್ಣಲ್ಲೂ ಅದನ್ನು ಕಾಣಬಹುದಾಗಿದೆ'' ಎಂದು ರಾಹುಲ್ ಬಣ್ಣಿಸಿದರು.

ಅಮೆರಿಕ ಮತ್ತು ಭಾರತ ನಡುವೆ ವ್ಯಾಪಾರ ಒಪ್ಪಂದವು ಅಭೂತಪೂರ್ವ ಜಾಗತಿಕ ಸನ್ನಿವೇಶದಲ್ಲಿ ನಡೆಯುತ್ತಿದೆ ಎಂಬುದಾಗಿ ಹಲವಾರು ಪರಿಣತರು ವಿಪಕ್ಷಗಳಿಗೆ ತಿಳಿಹೇಳಲು ಯತ್ನಿಸಿದರು. ಹಿಂದಿನ ದ್ವಿಪಕ್ಷೀಯ ಒಪ್ಪಂದಗಳೆಲ್ಲವೂ ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯುಟಿಒ)ಯ ರಕ್ಷಣಾ ಕೊಡೆಯಡಿ ನಡೆದಿದ್ದವು. ದುರಾದೃಷ್ಟವೆಂದರೆ ಟ್ರಂಪ್‌ರಿಂದಾಗಿ ಈಗ ಜಗತ್ತಿನಲ್ಲಿ ಕೋಲಾಹಲ ಹಾಗೂ ಅರಾಜಕತೆ ಉಂಟಾಗಿದೆ. ಡಬ್ಲ್ಯುಟಿಒ ಅಪ್ರಸ್ತುತವಾಗಿದೆ. ಒಂದೊಂದಾಗಿ ದೇಶಗಳು ಟ್ರಂಪ್‌ರ ಬೇಡಿಕೆಗಳಿಗೆ ಹಾಗೂ ಒತ್ತಡಗಳಿಗೆ ಮಣಿದಿವೆ. ಆದರೆ ಭಾರತ ಮಾತ್ರ ಕಳೆದೊಂದು ವರ್ಷದಿಂದ ಅದನ್ನು ತಾಳಿಕೊಂಡು ಬಂದಿತ್ತು. ಅಂತಿಮವಾಗಿ ಎರಡೂ ದೇಶಗಳಿಗೆ ತೃಪ್ತಿಕರವಾಗುವ ರೀತಿಯಲ್ಲೇ ಒಪ್ಪಂದ ರೂಪಿಸಲು ಸಫಲವಾಗಿದೆ. ಖ್ಯಾತ ಅರ್ಥ ಶಾಸ್ತ್ರಜ್ಞ ಜೆಫ್ರಿ ಸ್ಯಾಚ್ ಕೂಡಾ ಈ ಒಪ್ಪಂದದಲ್ಲಿ ಅಮೆರಿಕವೇ ಹಿನ್ನಡೆ ಕಂಡಿದೆ ಎಂದು ಹೇಳುತ್ತಾರೆ. ''ಪ್ರಧಾನಿ ಮೋದಿಯವರು ಉತ್ತಮ ಕೆಲಸ ಮಾಡಿದ್ದಾರೆ. ಶಾಂತವಾಗಿದ್ದುಕೊಂಡೇ ಪರಿಸ್ಥಿತಿಯನ್ನು ಬುದ್ಧಿವಂತಿಕೆಯಿಂದ ನಿಭಾಯಿಸಿದ್ದಾರೆ'' ಎಂದು ಅವರು ಶ್ಲಾಘಿಸುತ್ತಾರೆ. ಯಾವುದೇ ಒಪ್ಪಂದವು ಏಕಮುಖವಾಗಿರುವುದಿಲ್ಲ. ಆದರೆ ಲಭ್ಯವಿರುವ ಮಾಹಿತಿಗಳ ಪ್ರಕಾರ ಈಗಿನ ವ್ಯಾಪಾರ ಒಪ್ಪಂದದಲ್ಲಿ ಭಾರತಕ್ಕೆ ಹೆಚ್ಚು ಪ್ರಯೋಜನವಿದೆ. ವಿರೋಧ ಪಕ್ಷಗಳು ಆರೋಪಿಸುತ್ತಿರುವಂತೆ ಕೃಷಿ ವಲಯದಲ್ಲಿ ರಾಜಿ ಮಾಡಲಾಗಿಲ್ಲ. ನಮ್ಮ ರೈತರ ಹಿತಾಸಕ್ತಿಗಳನ್ನು ರಕ್ಷಿಸಲಾಗಿದೆ. ಕೇವಲ ಅಮೆರಿಕದೊಂದಿಗಷ್ಟೇ ಅಲ್ಲದೇ ಆಸ್ಟ್ರೇಲಿಯಾ, ಐರೋಪ್ಯ ಒಕ್ಕೂಟ ಮತ್ತು ನ್ಯೂಜಿಲಾಂಡ್ ಜೊತೆಗೆ ನಡೆಸಿದ ಒಪ್ಪಂದಗಳಲ್ಲೂ ಭಾರತದ ಕೃಷಿ ಕ್ಷೇತ್ರದ ಸಂರಕ್ಷಣೆಗೆ ಆದ್ಯತೆ ಕೊಡಲಾಗಿದೆ. ದ್ವಿದಳ ಧಾನ್ಯಗಳು, ಹೈನೋತ್ಪನ್ನಗಳು ಮತ್ತು ಪ್ರಾಣಿಜನ್ಯ ಉತ್ಪನ್ನಗಳನ್ನು ಆಮದು ಸುಂಕದಿಂದ ರದ್ದುಗೊಳಿಸಲಾಗಿಲ್ಲ.

> ರಾಹುಲ್ ಗಾಂಧಿ ಅಪ್ರಬುದ್ಧ ವರ್ತನೆಗಳು ವಿಪಕ್ಷ ನಾಯಕನ ಸ್ಥಾನಕ್ಕೆ ಅಗೌರವ ತರುವಂತಿದೆ.

ಅಮೆರಿಕದ ಒತ್ತಡದಿಂದ ಒಪ್ಪಂದ ವಿಳಂಬವಾಯಿತು ಹಾಗೂ ಮೋದಿ-ಟ್ರಂಪ್ ಮಾತುಕತೆಯ ಫೋನ್ ಕರೆಯ ಬಳಿಕ ಒಪ್ಪಂದ ಅಂತಿಮವಾಯಿತು ಎಂದು ವಿಪಕ್ಷಗಳು ತಪ್ಪಾಗಿ ಗ್ರಹಿಸಿವೆ. ಒಪ್ಪಂದದ ಬಹು ಪ್ರಮುಖ ಅಂಶಗಳನ್ನು ಭಾರತದ ವಾಣಿಜ್ಯ ಸಚಿವಾಲಯ ಮತ್ತು ಅಮೆರಿಕದ ವಾಣಿಜ್ಯ ಇಲಾಖೆಗಳು ಕೆಲವು ತಿಂಗಳ ಹಿಂದೆಯೆ ರೂಪುಗೊಳಿಸಿರುವುದು. ವ್ಯಾಪಾರವನ್ನು ಭೌರಾಜಕೀಯದೊಂದಿಗೆ ತಳುಕು ಹಾಕಲು ಟ್ರಂಪ್ ನಡೆಸಿದ ಯತ್ನದಿಂದಾಗಿಯೇ ಇದು ವಿಳಂಬಗೊಂಡಿತು. ಭಾರತ-ಪಾಕ್ ಸಂಘರ್ಷವನ್ನು ಅವರು ಪದೇಪದೇ ಉಲ್ಲೇಖಿಸಿದ್ದು ಕೂಡಾ ಭಾರತವು ಒಪ್ಪಂದಕ್ಕೆ ಕೂಡಲೇ ಬರದಿರಲು ಕಾರಣವಾಯಿತು. ಇಂತಹ ಪ್ರಯತ್ನ ನಡೆಯುವ ತನಕ ಭಾರತವು ಒಪ್ಪಂದಕ್ಕೆ ಸಹಿ ಹಾಕುವುದಿಲ್ಲ ಎಂದು ಸ್ಪಷ್ಟಪಡಿಸಲಾಯಿತು. ಅಮೆರಿಕವು ಭಾರತದ ಆಗ್ರಹಕ್ಕೆ ಮಣಿದ ಬಳಿಕವೇ ಉಭಯ ದೇಶಗಳ ಮುಖಂಡರು ಮಾತುಕತೆಯಾಡಿದ್ದು ಹಾಗೂ ಒಪ್ಪಂದವನ್ನು ಪ್ರಕಟಿಸಿದ್ದು. ಅಂತಿಮವಾಗಿ ವ್ಯಾಪಾರ ಒಪ್ಪಂದವನ್ನು ಭೌರಾಜಕೀಯದೊಂದಿಗೆ ಮತ್ತು ನೊಬೆಲ್ ಪ್ರಶಸ್ತಿಯೊಂದಿಗೆ ತಳುಕು ಹಾಕುವುದನ್ನು ಬಿಡಬೇಕೆಂಬ ಭಾರತದ ಆಗ್ರಹವು ಫಲ ನೀಡಿತು.

ರಾಹುಲ್ ಗಾಂಧಿಯವರು ಸಂಸತ್ತಿನ ಕಲಾಪದ ವೇಳೆ ಪ್ರಧಾನಿ ಮೋದಿಯವರ ವರ್ಚಸ್ಸು ಕುಂದಿಸಲು ಯತ್ನಿಸಿದರು. ಆದರೆ ಅವರು ಪ್ರಧಾನಿಯನ್ನು ಹೇಡಿ, ವೋಟ್ ಚೋರ್ ಮುಂತಾಗಿ ಟೀಕಿಸಿದಾಗ ಅದನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಇದೇವೇಳೆ, ಬಿಜೆಪಿ ರಾಹುಲ್‌ರ ಅಪ್ರಬುದ್ಧತೆ ಮತ್ತು ಬಾಲಿಶತನವನ್ನು ಟೀಕಿಸಿದಾಗ ಅದು ಎಲ್ಲರನ್ನು ತಟ್ಟಿತು. ಸಂಸತ್ತಿನಲ್ಲಿ ರಾಹುಲ್‌ರ ವರ್ತನೆಯು ಅವರದೇ ವರ್ಚಸ್ಸನ್ನು ಇನ್ನಷ್ಟು ಕುಂದಿಸಿತಷ್ಟೆ.

ಕಿರುಸುದ್ದಿ

ರೈತರಿಗೆ ಬ್ಯಾಂಕಿಂಗ್ ಸೌಲಭ್ಯಗಳ ಬಗ್ಗೆ ಮಾಹಿತಿ



• **ದಾಬಸ್ ಪೇಟೆ:** ಶಿವಗಂಗೆ ಯಾತ್ರಿ ನಿವಾಸದಲ್ಲಿ ನೆಲಮಂಗಲದ ಅರಿಶಿನಕುಂಟೆಯ ರೂಡ್ ಶೆಟ್ ಸಂಸ್ಥೆ ಹಾಗೂ ಶಿವಗಂಗೆ ಕೆನರಾ ಬ್ಯಾಂಕ್ ವತಿಯಿಂದ ರೈತರಿಗೆ ಸಿಗುವ ಸಾಲ ಸೌಲಭ್ಯಗಳ ಬಗ್ಗೆ ಮಾಹಿತಿ ಒದಗಿಸುವ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಬೆಳೆ ವಿಮೆ ಹಾಗೂ ಪಶು ವಿಮೆ, ಡಿಜಿಟಲ್ ಬ್ಯಾಂಕಿಂಗ್ ಸೇವೆಗಳು, ಡಿಜಿಟಲ್ ವಂಚನೆಗಳ ಬಗ್ಗೆ ಜಾಗೃತಿ, ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ (ಪಿಎಂಎಫ್ ಬಿವೈ) ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಉಳಿತಾಯ ಮತ್ತು ಹಣಕಾಸು ಯೋಜನೆಯ ಮಹತ್ವ ಇವುಗಳ ಬಗ್ಗೆ ಬ್ಯಾಂಕ್ ಮ್ಯಾನೇಜರ್ ಹರಿನಾಥ್ ರೆಡ್ಡಿ ಅವರು ಮಾಹಿತಿ ನೀಡಿದರು. ಈ ಭಾಗದ ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿ, ವಿಮೆ ಕ್ಲೈಮ್ ಪ್ರಕ್ರಿಯೆ, ಆನ್‌ಲೈನ್ ಬ್ಯಾಂಕಿಂಗ್ ಸುರಕ್ಷತೆ ಹಾಗೂ ಸಾಲ ಸೌಲಭ್ಯಗಳ ಕುರಿತು ತಮ್ಮ ಸಂದೇಹಗಳನ್ನು ನಿವಾರಿಸಿಕೊಂಡರು.

ಈ ಸಂದರ್ಭದಲ್ಲಿ ಶಿವಗಂಗೆಯ ಪೂಜಾ, ಸಿದ್ದರಾಜು, ಚಂದನ ಗೌಡ, ಮೋಹನ್ ಕುಮಾರ್, ಆರ್‌ಬಿಐ ಪ್ರತಿನಿಧಿ ಮೋಹನ್ ರಾಜ್, ರೂಡ್ ಸೆಟ್ ಸಂಸ್ಥೆಯ ಸಿಬ್ಬಂದಿ ಸಂತೋಷ್ ಹಾಜರಿದ್ದರು.

ಕಾಲೇಜುಗಳಲ್ಲಿ ಸಾಂತ್ವನ ಸಮಿತಿ ರಚನೆಗೆ ಕರವೇ ಮನವಿ

• **ದೊಡ್ಡಬಳ್ಳಾಪುರ:** ಜಿಲ್ಲೆಯ ಪ್ರತಿ ಕಾಲೇಜುಗಳಲ್ಲಿ ಸಭೆ ಕರೆದು ಸಾಂತ್ವನ ಸಮಿತಿ ರಚಿಸುವುದು ಹಾಗೂ ಈ ರೀತಿಯ ಖಿನ್ನತೆಗೆ ಒಳಗಾಗಿರುವ ವಿದ್ಯಾರ್ಥಿಗಳಿಗೆ ಕೌನ್ಸಲಿಂಗ್ ಮಾಡುವಂತೆ ಒತ್ತಾಯಿಸಿ ಕರವೇ ಪ್ರವೀಣ್ ಶೆಟ್ಟಿ ಬಣದಿಂದ ನಗರದ ಡಿವೈಎಸ್ಪಿ ಪಾಂಡುರಂಗ ಅವರಿಗೆ ಮನವಿ ಪತ್ರ ನೀಡಿದರು. ಇದಕ್ಕೆ ಸ್ಪಂದಿಸಿದ ಪೊಲೀಸ್ ಉಪಾಧೀಕ್ಷಕ ಪಾಂಡುರಂಗರವರು ಸೂಕ್ತ ಕ್ರಮದ ಭರವಸೆ ನೀಡಿದರು. ಈ ವೇಳೆ ಕರವೇ ಪ್ರವೀಣ್ ಶೆಟ್ಟಿ ಬಣದ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜಘಟ್ಟ ರವಿ, ಗ್ರಾಮಾಂತರ ಜಿಲ್ಲಾಧ್ಯಕ್ಷ ಎಸ್.ಡಿ.ಮುನಿರಾಜು, ಮುಖಂಡರಾದ ಮಂಜುನಾಥ್, ಡಿ.ಕ್ರಾಸ್ ಬಾಲು, ನಾಗಾರ್ಜುನ ಇದ್ದರು.

ಚಿನ್ನದ ಅಂಗಡಿ ಮಾಲೀಕನ ಮುಖವಾಡ ಬಯಲು

• **ಪಾಂಡವಪುರ:** ಸಾಲಗಾರರು ಹಾಗೂ ಚಿನ್ನ ಅಡವಿಟ್ಟ ಗ್ರಾಹಕರ ಒತ್ತಡದಿಂದ ತಪ್ಪಿಸಿಕೊಳ್ಳಲು, ತನ್ನ ಮೇಲೆ ಆಸಿಡ್ ದಾಳಿ ನಡೆದಂತೆ ನಾಟಕವಾಡಿ ಚಿನ್ನದ ಅಂಗಡಿ ದರೋಡೆ ನಡೆದಿದೆ ಎಂದು ಸುಳ್ಳು ಕತೆ ಕಟ್ಟಿದ್ದ ಚಿನ್ನದ ಅಂಗಡಿ ಮಾಲೀಕನ ಮುಖವಾಡ ಕೊನೆಗೂ ಬಯಲಾಗಿದೆ. ಈ ಘಟನೆ ತಾಲೂಕಿನ ಕ್ಯಾತನಹಳ್ಳಿಯಲ್ಲಿ ನಡೆದಿದೆ. ಮಹಾಲಕ್ಷ್ಮೀ ಜ್ಯುವೆಲರಿ ಶಾಪ್ ನಡೆಸುತ್ತಿದ್ದ ಜಿತೇಂದ್ರ, ಎಂಬುವನೇ ಈ ಪ್ರಕರಣದ ಆರೋಪಿ. ಈತನ ವಿರುದ್ಧ ಕ್ಯಾತನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಆತನನ್ನು ಬಂಧಿಸಿದ್ದಾರೆ. ರಾಜಸ್ಥಾನ ಮೂಲದ ಜಿತೇಂದ್ರ, ಸಿಂಗ್ ಕಳೆದ ಹಲವು ವರ್ಷಗಳಿಂದ ಕ್ಯಾತನಹಳ್ಳಿಯಲ್ಲಿ ಜ್ಯುವೆಲರಿ ವ್ಯಾಪಾರ ನಡೆಸುತ್ತಿದ್ದ. ದುಷ್ಕರ್ಮಿಗಳು ತನ್ನ ಮೇಲೆ ಆಯಸಿಡ್ ಎರಚಿ ಅಂಗಡಿಯಲ್ಲಿದ್ದ ಸುಮಾರು 170 ಗ್ರಾಂ ಚಿನ್ನ ಮತ್ತು 8 ಕೆಜಿ ಬೆಳ್ಳಿ ದರೋಡೆ ಮಾಡಿ ಪರಾರಿಯಾಗಿದ್ದಾರೆ ಎಂದು ಆತ ಆರೋಪಿಸಿದ್ದ. ಗಾಯಗೊಂಡಿದ್ದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದ ಈತನ ಪ್ರಕರಣವನ್ನು ಪೊಲೀಸರು ಸುಮೋಟೋವಾಗಿ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.

ಎಂಎಸ್‌ಜಿಪಿ ಘಟಕಕ್ಕೆ ಬಂದ ಹೆಚ್ಚುವರಿ ಕಸದ ಲಾರಿಗಳು | ಶಾಸಕ ಧೀರಜ್ ನೇತೃತ್ವದಲ್ಲಿ ಕಸದ ಲಾರಿಗಳಿಗೆ ತಡೆ

ಬೆಂಗಳೂರಿನ ಕಸಕ್ಕೆ ಮುಕ್ತಿ ಯಾವಾಗ?





ದೊಡ್ಡಬಳ್ಳಾಪುರದ ಎಂ.ಎಸ್.ಜಿಪಿ ಕಸದ ಘಟಕಕ್ಕೆ ಬಂದಿದ್ದ ಹೆಚ್ಚುವರಿ ಲಾರಿಗಳನ್ನು ತಡೆದು ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ಶಾಸಕ ಧೀರಜ್ ಮುನಿರಾಜು ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಮಾತನಾಡಿದರು. ನಗರಸಭಾ ಸದಸ್ಯರಾದ ಪದ್ಮನಾಭ, ನವೀನ್, ಮುಖಂಡರಾದ ಸಿದ್ದಲಿಂಗಯ್ಯ, ಚನ್ನೇಗೌಡ, ಗ್ರಾಮಸ್ಥರು ಇದ್ದರು.

ತಾರ್ಕಿಕ ಅಂತ್ಯ ಸಿಗುವವರೆಗೂ ಹೋರಾಟ

ಅಧಿಕಾರಿಗಳು ಸೂಕ್ತ ಕ್ರಮವಹಿಸದ ಕಾರಣ ಕಾನೂನು ಹೋರಾಟ ಮಾಡುತ್ತಿದ್ದೇನೆ. ತಾರ್ಕಿಕ ಅಂತ್ಯ ಸಿಗುವವರೆಗೂ ಹೋರಾಟ ಮಾಡುತ್ತೇನೆ. ಅಲ್ಲದೆ ಅಧಿಕಾರಿಗಳು, ಸಿಎಂ, ಡಿಸಿಎಂಗೂ ಈ ಘಟಕ ಮುಚ್ಚುವಂತೆ ಹಲವು ಬಾರಿ ಮನವಿ ಮಾಡಿದ್ದೇನೆ. ಬಿಜೆಪಿ ಸರ್ಕಾರ ಇದ್ದಿದ್ದರೆ ನಾನೇ ಮಂತ್ರಿಗಳಿಗೆ ಹೇಳಿ ಸ್ಥಗಿತಗೊಳಿಸುತ್ತಿದ್ದೆ. ಹೋರಾಟದ ಕೊನೆಯ ಭಾಗವಾಗಿ ಬೀದಿಗಿಳಿದು ಜನರೊಂದಿಗೆ ಹೋರಾಟ ಮಾಡಲಾಗುವುದು. ಸ್ಥಳಕ್ಕೆ ಬಾರದೆ ಹೋಗಿದ್ದರೆ ಸುಮಾರು 400ಕ್ಕೂ ಹೆಚ್ಚು ಲಾರಿಗಳು ಇಲ್ಲಿನ ಘಟಕಕ್ಕೆ ಕಸವನ್ನು ಡಂಪ್ ಮಾಡುತ್ತಿದ್ದವು ಎಂದು ತಿಳಿಸಿದರು.

• **ದೊಡ್ಡಬಳ್ಳಾಪುರ:** ತಾಲೂಕಿನ ದೊಡ್ಡಬೆಳವಂಗಲ ಹೋಬಳಿಯ ಚಿಕ್ಕಮಂಕಾಲ ಬಳಿ ಇರುವ ಬೆಂಗಳೂರು ಕಸ ವಿಲೇವಾರಿ ಘಟಕ ಎಂಎಸ್‌ಜಿಪಿ ಘಟಕಕ್ಕೆ ಹೆಚ್ಚುವರಿ ಕಸದ ಲಾರಿಗಳು ಬರುತ್ತಿವೆ ಎಂಬ ಖಚಿತ ಮಾಹಿತಿ ಮೇರೆಗೆ ಶಾಸಕ ಧೀರಜ್ ಮುನಿರಾಜು ಸ್ಥಳೀಯ ಮುಖಂಡರು ಹಾಗೂ ಗ್ರಾಮಸ್ಥರ ಜತೆಗೆ ಕಸವನ್ನು ಡಂಪ್ ಮಾಡಲು ಬಂದಿದ್ದ ಹೆಚ್ಚುವರಿ ಲಾರಿಗಳನ್ನು ತಡೆದು ವಾಪಸ್ ಕಳಿಸಿರುವ ಘಟನೆ ನಡೆದಿದೆ. ಬೆಂಗಳೂರಿನ ಮಹದೇವಪುರ ಮತ್ತು ಮೀಟಗಾನಹಳ್ಳಿ ಬಳಿಯ ತ್ಯಾಜ್ಯ ವಿಲೇವಾರಿ ಘಟಕಗಳಲ್ಲಿ ಪ್ರತಿಭಟನೆ ಹಿನ್ನೆಲೆಯಲ್ಲಿ ಅಲ್ಲಿನ ಕಸದ ಲಾರಿಗಳು ತಾಲೂಕಿನ ಎಂಎಸ್‌ಜಿಪಿ ಘಟಕದಲ್ಲಿ ವಿಲೇವಾರಿ ಮಾಡಲು ಬಂದಿದ್ದವು. ವಿಷಯ ತಿಳಿದು ಸುತ್ತಮುತ್ತಲಿನ ಗ್ರಾಮಸ್ಥರು ಶಾಸಕ ಧೀರಜ್ ಮುನಿರಾಜುಗೆ ಕರೆ ಮಾಡಿ ತಿಳಿಸಿದ್ದಾರೆ. ಸ್ಥಳಕ್ಕೆ ಆಗಮಿಸಿದ ಶಾಸಕರು ಲಾರಿಗಳನ್ನು ತಡೆದು ವಾಪಸ್ ಕಳಿಸಿದ್ದಾರೆ. ಆರ್‌ಟಿಒ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸಿ ತೆರಿಗೆ ಪಾವತಿ ಮಾಡದ ಲಾರಿಗಳನ್ನು ಜಪ್ತಿ, ಎಫ್.ಸಿ, ಇನ್ಸೂರೆನ್ಸ್ ಇಲ್ಲದ ವಾಹನಗಳಿಗೆ ದಂಡ ವಿಧಿಸುವಂತೆ ಸೂಚಿಸಿದರು. ಬಳಿಕ ಮಾತನಾಡಿದ ಶಾಸಕರು, ಕಸ ವಿಲೇವಾರಿ ಘಟಕವಾದ ಎಂಎಸ್ ಜಿಪಿ ಘಟಕದ ವಿರುದ್ಧ ಸತತವಾಗಿ ಮೂರು ವರ್ಷಗಳಿಂದ ಹೋರಾಟ ಮಾಡುತ್ತಿದ್ದೇನೆ. ಹೈಕೋರ್ಟ್‌ನಲ್ಲಿ ದಾವೆ ಸಲ್ಲಿಸಿದ್ದೇನೆ. ಹೈಕೋರ್ಟ್ ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದು ಜಿಲ್ಲಾ ನ್ಯಾಯಾಧೀಶರ ನೇತೃತ್ವದಲ್ಲಿ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿದೆ. ಜಿಲ್ಲಾ ನ್ಯಾಯಾಧೀಶರು ಎರಡು ಬಾರಿ ಭೇಟಿ ನೀಡಿ ತನಿಖೆ ಮಾಡಿದ್ದಾರೆ. ಇದಲ್ಲದೆ ಐಐಎಸ್ಸಿ ನೇತೃತ್ವದಲ್ಲಿ ತನಿಖೆಯಾಗಬೇಕಿದೆ ಎಂದು ಒತ್ತಾಯಿಸಿದ್ದೇನೆ ಎಂದರು.

ಹಿರಿಯರ ಮಾರ್ಗದರ್ಶನ ಅಗತ್ಯ



• **ದೊಡ್ಡಬಳ್ಳಾಪುರ:** ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಲು ಗುರು ಹಿರಿಯರ ಮಾರ್ಗದರ್ಶನ ಹಾಗೂ ನೆರವು ಅಗತ್ಯವಾಗಿ ಬೇಕಾಗಿದೆ ಎಂದು ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗಳ ಚಿಕ್ಕಬಳ್ಳಾಪುರ ಶಾಖಾ ಮಠದ ಕಾರ್ಯದರ್ಶಿ ಶ್ರೀ ಮಂಗಳನಾಥ ಸ್ವಾಮೀಜಿ ಹೇಳಿದರು.

ಅವರು ತಾಲೂಕಿನ ಮೇಳೇಕೋಟೆ ಕ್ರಾಸ್‌ನ ಎಸ್ ಜೆಸಿಆರ್ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಮಾತಾ ಪಿತೃ ವಂದನಾ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು. ಜೊತೆಗೆ ಉತ್ತಮ ನಡತೆ, ಸಂಸ್ಕಾರಗಳು ಅಗತ್ಯವಿರುತ್ತದೆ. ವಿದ್ಯಾರ್ಥಿಗಳ ವಯಸ್ಸು ಉತ್ತಮ ನಿರ್ಧಾರ ತೆಗೆದುಕೊಳ್ಳಲು ಸೂಕ್ತವಾಗಿರುವುದರಿಂದ ಪೋಷಕರು ಅವರೊಂದಿಗಿದ್ದು ಮಕ್ಕಳ ಉತ್ತಮ ಭವಿಷ್ಯಕ್ಕೆ ಸಹಕರಿಸಬೇಕು ಎಂದು ಆಶೀರ್ವದಿಸಿದರು. ವಿದ್ಯಾರ್ಥಿಗಳು ಪೋಷಕರ ಪಾದ ಪೂಜೆ ಮಾಡಿ ಆಶೀರ್ವಾದ ಪಡೆಯಲು ಮಾರ್ಗದರ್ಶನ ನೀಡಿದರು. ನಂತರ ಮಹಿಳಾ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಡಾ.ನವೀನ್ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳಿಗೆ ಸಾಧನೆ ಮಾಡುವ ಛಲ ಇರಬೇಕು. ಉತ್ತಮ ಸಂಸ್ಕಾರ ಬೆಳೆಸಿಕೊಳ್ಳಬೇಕು, ಕೆಟ್ಟ ದಾರಿಗಳನ್ನು ಆಯ್ಕೆ ಮಾಡಿಕೊಳ್ಳದೆ ವಿಷಯಜ್ಞಾನ ಬೆಳೆಸಿಕೊಂಡು ಉತ್ತಮ ಸಾಧನೆ ಮಾಡುವ ದಿಕ್ಕಿನಲ್ಲಿ ಮುನ್ನಡೆಯಬೇಕು. ಪೋಷಕರು ತಮ್ಮ ಮಕ್ಕಳ ಬಗ್ಗೆ ಹೆಚ್ಚು ಕಾಳಜಿವಹಿಸಿ ಶಿಕ್ಷಣ ಪೂರ್ಣಗೊಳಿಸಲು ಸಹಕರಿಸಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ತೆಂಗು ಮತ್ತು ನಾರು ಸಹಕಾರ ಮಹಾಮಂಡಳಿ ನಿರ್ದೇಶಕ ವೆಂಕಟೇಶ್ ಬಾಬು, ಮುಖ್ಯಶಿಕ್ಷಕ ವಿಜಯಕುಮಾರ್, ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಾಧನೆ ಮಾಡಿ, ಶಾಲೆಗೆ ಕೀರ್ತಿ ತನ್ನಿ

ಸಮೂಹ ಶಿಕ್ಷಣಸಂಸ್ಥೆಗಳ ಮುಖ್ಯ ಆಡಳಿತಾಧಿಕಾರಿ ಡಾ.ಒ.ಶಿವರಾಮರೆಡ್ಡಿ ಮಾತನಾಡಿ, ಪೋಷಕರು ತಮ್ಮ ಮಕ್ಕಳನ್ನು ಹದಿಹರೆಯದ ವಯಸ್ಸಿನಲ್ಲಿ ಉಂಟಾಗುವ ಬದಲಾವಣೆ ಅರ್ಥ ಮಾಡಿಕೊಂಡು ಅನಗತ್ಯವಾಗಿ ಅವರಿಗೆ ಹೆಚ್ಚು ಪ್ರೀತಿ, ಕಡಿಮೆ ಕಾಳಜಿ ಮಾಡದೆ ಮಗು ಹುಟ್ಟಿದ ಮೊದಲ 2 ವರ್ಷ ಜೋಪಾನ ಮಾಡಿದಂತೆ ನಿಮ್ಮ ಮಕ್ಕಳನ್ನು ಪಿಯುಸಿ ಮುಗಿಯುವವರೆಗೂ ಗಮನಿಸಿಕೊಳ್ಳಬೇಕು. ಹಾಗೆಯೇ ವಿದ್ಯಾರ್ಥಿಗಳು ಕೇವಲ ತಮ್ಮ ಸ್ವಹಿತಾಸಕ್ತಿಯ ಕೆಲಸಗಳಿಗೆ ಮಹತ್ವ ನೀಡದೆ ಮಹತ್ತರ ಸಾಧನೆ ಮಾಡಲು ಉತ್ತಮ ಗುರಿ ಇಟ್ಟುಕೊಂಡು ವಿದ್ಯಾಭ್ಯಾಸ ಮಾಡಿ ಸಮಾಜದಲ್ಲಿ ಒಳ್ಳೆಯ ಹೆಸರು ಪಡೆದು ಪೋಷಕರಿಗೆ ಹಾಗೂ ಶಾಲೆಗೆ ಕೀರ್ತಿ ತರಬೇಕೆಂದು ತಿಳಿಸಿದರು.

ಒಳಮೀಸಲಾತಿ ಮಸೂದೆ ಅನುಮೋದನೆಗಾಗಿ ಮನವಿ



ಸಚಿವ ಕೆ.ಎಚ್.ಮುನಿಯಪ್ಪ ನೇತೃತ್ವದ ನಿಯೋಗ ರಾಜ್ಯಪಾಲರ ಭೇಟಿ

• **ಬೆಂಗಳೂರು:** ಒಳ ಮೀಸಲಾತಿ ಮಸೂದೆ ಅಂಗೀಕರಿಸಿ, ಅನುಮೋದನೆ ನೀಡುವಂತೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ, ಅಬಕಾರಿ ಸಚಿವ ತಿಮ್ಮಾಪುರ, ಶಾಸಕರು ಹಾಗೂ ಸಮುದಾಯ ಮುಖಂಡರ ನಿಯೋಗವು ರಾಜಭವನಕ್ಕೆ ಭೇಟಿ ನೀಡಿ ರಾಜ್ಯಪಾಲ ಥಾವರಚಂದ್ ಗೆಹಲೋಟ್ ಅವರಿಗೆ ಮನವಿ ಪತ್ರ ಸಲ್ಲಿಸಿತು.

ವಿಧಾನಸಭೆ ಮತ್ತು ವಿಧಾನ ಪರಿಷತ್ತು ಅಂಗೀಕರಿಸಿದ ಒಳ ಮೀಸಲಾತಿ ಮಸೂದೆಗೆ ನಿಮ್ಮಿಂದ ಆದಷ್ಟು ಬೇಗ ಅನುಮೋದನೆ ನೀಡಬೇಕೆಂದು ನಾವು, ಸಚಿವರು, ಶಾಸಕರು, ಎಂ.ಎಲ್.ಸಿ.ಗಳು ಮತ್ತು ಹಿರಿಯ ನಾಯಕರು ಗೌರವದಿಂದ ವಿನಂತಿಸುತ್ತೇವೆ.

ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಬೆಂಬಲದೊಂದಿಗೆ ಎರಡೂ ಸದನಗಳು ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಿದೆ. ಸಂವಿಧಾನದ ಅಡಿಯಲ್ಲಿ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ತತ್ವಗಳಿಗೆ ಅನುಗುಣವಾಗಿ ಪರಿಶಿಷ್ಟ ಜಾತಿಯ 101 ಒಳ ಸಮುದಾಯಗಳಲ್ಲಿ ಮೀಸಲಾತಿ ಕಲ್ಪಿಸಲು ಈ ಮಸೂದೆ ಸಹಾಯವಾಗಲಿದ್ದು, ಮಸೂದೆಗೆ ಆದಷ್ಟು ಬೇಗ ಒಪ್ಪಿಗೆ ನೀಡಬೇಕೆಂದು ಪತ್ರದ ಮುಖೇನ ನಿಯೋಗವು ರಾಜ್ಯಪಾಲರಿಗೆ ಮನವಿ ಮಾಡಿದ್ದಾರೆ. ಈ ಸಮಯದಲ್ಲಿ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ, ಮಾಜಿ ಎಂ.ಪಿ. ಬಿ.ಎನ್.ಚಂದ್ರಪ್ಪ, ಶಾಸಕರಾದ ರೂಪಕಲಾ ಶಶಿಧರ್, ಎನ್.ಶ್ರೀನಿವಾಸ್, ಮಾಜಿ ಎಂ.ಪಿ. ಎಲ್.ಹನುಮಂತಯ್ಯ, ಸುದಾಮ್ ದಾಸ್, ಧರ್ಮಸೇನ, ಕೋಟೆ ಶಿವಣ್ಣ, ಕೊರಕೋದಂಡ ವಿಠಲ ದಂಡಿಬಾ, ಬಸವಂತಪ್ಪ ಸೇರಿದಂತೆ ಸಮುದಾಯದ ಮುಖಂಡರು ಭಾಗವಹಿಸಿದ್ದರು.

ಶಿವಗಂಗೆ ಬೆಟ್ಟಕ್ಕೆ ಬೆಂಕಿ ಹಚ್ಚಿದ ಕಿಡಿಗೇಡಿಗಳು

ಅಪಾರ ಅರಣ್ಯ ಸಂಪತ್ತು ನಾಶ



ಹೀನ ಮನಸ್ಥಿತಿ ಉಳ್ಳವರಿಗೆ ಧಿಕ್ಕಾರ

ಯಾರೋ ಕಿಡಿಗೇಡಿಗಳು ಹಿಂದೆ ಬೆಂಕಿ ಹಚ್ಚಿದ್ದರು. ಇದೀಗ ಮತ್ತೆ ಬೆಟ್ಟಕ್ಕೆ ಬೆಂಕಿ ಇಟ್ಟು ಬೆಟ್ಟದ ಕಾಡನ್ನು ಸುಟ್ಟಿದ್ದಾರೆ! ವಿವೇಕಿಗಳು, ವಿದ್ಯಾವಂತರು, ಈ ರೀತಿಯ ಕೆಲಸ ಮಾಡಲು ಹೊರಟಿರುವುದು ದುರಂತವೇ ಸರಿ ಎಂಬುದು ಸ್ಥಳೀಯರ ಆರೋಪ. ಕಾಡಿಗೆ ಬೆಂಕಿ ಇಡುವ ಇಂತಹ ಹೀನ ಮನಸ್ಥಿತಿಗಳಿಗೆ ಧಿಕ್ಕಾರವಿರಲಿ ಎನ್ನುತ್ತಾರೆ.

• **ದಾಬಸ್ ಪೇಟೆ:** ನೆಲಮಂಗಲ ತಾಲೂಕಿನ ಪ್ರಸಿದ್ಧ ಶಿವಗಂಗೆ ಬೆಟ್ಟಕ್ಕೆ ಹೊಂದಿಕೊಂಡಂತಿರುವ ಕಾಡಿಗೆ ಮಂಗಳವಾರ ರಾತ್ರಿ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು ಸಾಕಷ್ಟು ಅರಣ್ಯ ಪ್ರದೇಶ ಸುಟ್ಟು ಕರಕಲಾಗಿದೆ. ಸುಮಾರು ಹದಿನೈದು ದಿನಗಳ ಹಿಂದೆ ಕೂಡ ಬೆಂಕಿ ಹಾಕಿದ್ದರು. ಆಗಲೂ ಕಾಡು ಸುಟ್ಟಿತ್ತು. ಇದೀಗ ಮತ್ತೆ ಬೆಂಕಿ ಹಚ್ಚಿದ್ದಾರೆ.

ಎಂತಹ ದರಿದ್ರ ಮನಸ್ಥಿತಿ ಇವರದು. ಕಾಡಿಗೆ ಬೆಂಕಿ ಇಟ್ಟರೆ ಅದರಿಂದ ಅವರಿಗೆ ಸಿಗುವ ಪ್ರಯೋಜನ ಏನು? ಬೆಂಕಿ ಹಾಕುವುದರಿಂದ ಪರಿಸರಕ್ಕೆ ಎಷ್ಟೊಂದು ಅನಾಹುತ ಅನ್ನುವುದನ್ನು ಸಾಮಾನ್ಯವಾಗಿ ಯೋಚಿಸುವುದಿಲ್ಲ ಏಕೆ?

ಬೆಂಕಿಯ ಕೆನ್ನಾಲಿಗೆ ಅಮೂಲ್ಯವಾದ ಮರಗಿಡಗಳು, ಪ್ರಾಣಿ ಪಕ್ಷಿಗಳು, ಜೀವ ಜಂತುಗಳು ಸುಡುತ್ತವೆ ಅನ್ನುವ ಪರಿಜ್ಞಾನ ಬೇಡವೇ ಎನ್ನುತ್ತಾರೆ ಪರಿಸರ ಪ್ರೇಮಿ ಮೋಹನ್ ಕುಮಾರ್. ಎಲ್ಲವೂ ಗೊತ್ತಿದೆ. ಬುದ್ಧಿ ಇದೆ, ಪ್ರಜ್ಞೆ ಇದೆ, ಇವತ್ತು ಪರಿಸರ ನಾಶ, ಕಾಡು ಕಡಿಮೆ ಆಗುತ್ತಿರುವುದರಿಂದ ಆಗುತ್ತಿರುವ ಪರಿಣಾಮ ಎಲ್ಲವೂ ತಿಳಿಯುತ್ತಿದೆ. ಆದರೂ ಖುಷಿಗೆ, ಮೋಜಿಗೆ, ದುರಹಂಕಾರಕ್ಕೆ ಸ್ವಾರ್ಥಕ್ಕೆ ಕಾಡಿಗೆ ಬೆಂಕಿ ಹಾಕಿ ನಾಶ ಮಾಡುವ ಮಂದಿಗೆ ಏನು ಹೇಳುವುದು ಎಂದು ಅವರು ಬೇಸರ ತೋಡಿಕೊಂಡರು.

ಶಿವಗಂಗೆ ಬೆಟ್ಟ ಕೇವಲ ಧಾರ್ಮಿಕ ಕ್ಷೇತ್ರ, ಯಾತ್ರಾ ಸ್ಥಳ ಜೊತೆಗೆ ಸುತ್ತಲೂ ಗಿಡಮರ, ಸಸ್ಯ ಪ್ರಭೇಧದ ಅರಣ್ಯ ಸಂಪತ್ತು ಹೊಂದಿದ ಬೆಟ್ಟ, ವಿವಿಧ ಜಾತಿಯ ಗಿಡಗಳು, ವನ್ಯ ಸಂಪತ್ತು ಬೆಟ್ಟಕ್ಕೆ ಹೊಂದಿಕೊಂಡಂತೆ ಇದೆ. ಬೆಟ್ಟದ ಸೌಂದರ್ಯವನ್ನು ಇದು ಹೆಚ್ಚಿಸಿದೆ. ಹಲವು ಜಾತಿಯ ವನ್ಯಮೃಗಗಳಿಗೆ, ಪಕ್ಷಿಗಳಿಗೆ, ಗಿಡಮೂಲಿಕೆಗಳಿಗೆ ಆಶ್ರಯ ತಾಣವಾಗಿದೆ. ಬೆಂಕಿ ಹಚ್ಚಿದರೆ ಇದೆಲ್ಲಾ ನಾಶವಾಗುತ್ತದೆ ಎನ್ನುತ್ತಾರೆ ಇಲ್ಲಿನ ಪುರೋಹಿತರು. ಈ ಬೆಟ್ಟಕ್ಕೆ ಪ್ರತಿ ವರ್ಷ ಕಿಡಿಗೇಡಿಗಳು ಬೇಸಿಗೆ ಬಂತೆಂದರೆ ಬೆಂಕಿ ಹಾಕುತ್ತಾರೆ. ಕಾಡನ್ನು ಹಾಗೂ ಅಲ್ಲಿನ ಬೆಲೆ ಕಟ್ಟಲಾಗದ ಪ್ರಾಣಿ/ಪಕ್ಷಿ/ಮರಗಳನ್ನು ಸುಡುತ್ತಾರೆ. ಅದು ಮುಂದೆ ಮತ್ತೆ ಚಿಗುರಿ ಜೀವ ಉಳಿಸಿಕೊಂಡು ಬೆಳೆಯುವ ವೇಳೆಗೆ ಮತ್ತೆ ಬೆಂಕಿಗೆ ಸುಡುತ್ತದೆ ಎನ್ನುತ್ತಾರೆ ಅರಣ್ಯ ಅಧಿಕಾರಿಗಳು.

ಬೇಸಿಗೆಯಲ್ಲಿ ಒಣತರಗು ಬಿದ್ದಿರುತ್ತೆ. ಬೇಗ ಬೆಂಕಿ ಪಸರಿಸುತ್ತದೆ. ಇತ್ತೀಚೆಗೆ ಬೆಟ್ಟಕ್ಕೆ ಬರುವ ಭಕ್ತರು, ಯಾತ್ರಿಗಳು ಪ್ಲಾಸ್ಟಿಕ್ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆದು ಹೋಗುತ್ತಿದ್ದಾರೆ. ಇನ್ನು ಕಿಡಿಗೇಡಿಗಳು ತಮಾಷೆಗೆ, ಬೇಕಂತಲೇ ಕಾಣದಂತೆ ಬೆಂಕಿ ಹಚ್ಚಿ ಹೋಗುತ್ತಿದ್ದಾರೆ ಎನ್ನುತ್ತಾರೆ ಅವರು.

ಜಿಲ್ಲಾ ಕಸಾಪದಿಂದ ಜೋಸೈಮನ್‌ಗೆ ಶ್ರದ್ಧಾಂಜಲಿ



• **ದೇವನಹಳ್ಳಿ:** ಪಟ್ಟಣದ ದೇಶದಪೇಟೆ ಚೌಕದಲ್ಲಿರುವ ಹೆಣ್ಣು ಮಕ್ಕಳ ಮಾದರಿ ಸರ್ಕಾರಿ ಶಾಲೆಯಲ್ಲಿ ಇತ್ತೀಚೆಗೆ ನಮ್ಮನ್ನಗಲಿದ ಕನ್ನಡ ಚಲನಚಿತ್ರ ರಂಗದ ಖ್ಯಾತ ನಟ, ನಿರ್ದೇಶಕ, ಲೇಖಕ ಹಾಗೂ ನಿರ್ಮಾಪಕರಾಗಿದ್ದ, ಜೋಸೈಮನ್‌ರವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸಂತಾಪ ಸೂಚಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಮಯದಲ್ಲಿ ಜಿಲ್ಲಾ ಸಹಕಾರ್ಯದರ್ಶಿ ಎಸ್. ರಮೇಶ್‌ಕುಮಾರ್ ಮಾತನಾಡಿ, ಕನ್ನಡ ಸಿನಿಮಾರಂಗಕ್ಕೆ ತನ್ನದೇ ಆದ ಕೊಡುಗೆ ನೀಡಿದ್ದ ಜೋಸೈಮನ್‌ರವರು ಸ್ವತಃ ಸಾಹಿತಿಗಳಾಗಿಯೂ ಕೆಲಸ ಮಾಡಿದ್ದಾರೆ. ಅವರ ನಿಧನದಿಂದ ಕನ್ನಡ ಕಿರುತೆರೆ ಹಾಗೂ ಚಿತ್ರರಂಗಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ತಿಳಿಸಿದರು.

ಈ ಸಮಯದಲ್ಲಿ ಸಾಹಿತಿ, ನಿವೃತ್ತ ಶಿಕ್ಷಕ ಶರಣಯ್ಯ ಹಿರೇಮಠ ನುಡಿನಮನಗಳನ್ನು ನುಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಬಿ.ಎನ್.ಕೃಷ್ಣಪ್ಪ, ಕೋಶಾಧ್ಯಕ್ಷ ಡಾ.ಎಂ.ಮುನಿರಾಜು(ಅಪ್ಪಯ್ಯಣ್ಣ), ಸಹಕಾರ್ಯದರ್ಶಿ ಎಸ್.ರಮೇಶ್ ಕುಮಾರ್, ತಾಲೂಕು ಗೌರವ ಕಾರ್ಯದರ್ಶಿ ಯಲಿಯೂರು ದೇವರಾಜ್, ಪದಾಧಿಕಾರಿ ಸುರೇಶ್ ಆಚಾರ್ ಭಾಗವಹಿಸಿದ್ದರು. ಗಾಯಕ ಪ್ರಭು ಆಚಾರ ಗೀತಗಾಯನ ಮಾಡಿದರು. ಎಸ್‌ಡಿಎಂಸಿ ಅಧ್ಯಕ್ಷ ನವೀನ್‌ಕುಮಾರ್, ಮುಖ್ಯಶಿಕ್ಷಕಿ ಬೊಮ್ಮಕ್ಕ, ಶಾಲಾ ಶಿಕ್ಷಕರಾದ ಸುನೀಲ್‌ಕುಮಾರ್, ಗೀತಾ, ಬೋಧಕೇತರ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಅಧಿಕಾರಿಗಳ ವಿರುದ್ಧ ದೂರು ನೀಡಿದ್ದ ಹೋರಾಟಗಾರ ನಾಗರಾಜ್

ಕಳಪೆ ಕಾಮಗಾರಿ: ಅಧಿಕಾರಿಗಳಿಂದ ಪರಿಶೀಲನೆ



• **ಹೊಸಕೋಟೆ:** 2021-22ನೇ ಸಾಲಿನಲ್ಲಿ ಹೊಸಕೋಟೆ ನಗರಸಭೆ ವ್ಯಾಪ್ತಿಯಲ್ಲಿ ಕೈಗೊಂಡಿದ್ದ 4 ಕೋಟಿ ಅಭಿವೃದ್ಧಿ ಕಾಮಗಾರಿಗಳಲ್ಲಿ ಕಳಪೆಯಾಗಿದೆ ಎಂದು ಸಾಮಾಜಿಕ ಹೋರಾಟಗಾರ ಕೆ.ನಾಗರಾಜ್ ಸಲ್ಲಿಸಿದ ದೂರಿನ ಹಿನ್ನೆಲೆಯಲ್ಲಿ ಬುಧವಾರ ಹೊಸಕೋಟೆ ನಗರದ ವಿವಿಧೆಡೆ ಲೋಕಾಯುಕ್ತ ಅಧಿಕಾರಿಗಳು ಕಾಮಗಾರಿಗಳ ಗುಣಮಟ್ಟ ಪರಿಶೀಲನೆ ಮಾಡಿದರು.

ಕೆ.ಆರ್.ರಸ್ತೆಯ ಕೆಇಬಿ ವೃತ್ತದಿಂದ ಬಸವೇಶ್ವರ ವೃತ್ತದವರಿಗೆ ಮೀಡಿಯನ್ ಸರ್ಕಲ್ ಅಭಿವೃದ್ಧಿ ಮತ್ತು ಪಾದಚಾರಿ ಮಾರ್ಗ ಹಾಗೂ ಗಿಡಗಳನ್ನು ನೆಡುವುದರ ಕಾಮಗಾರಿ 98.50 ಲಕ್ಷ, ಕೆಇಬಿ ವೃತ್ತದಿಂದ ಬಸವಣ್ಣ ಪ್ರತಿಮೆವರೆಗೆ ಎರಡು ಭಾಗಗಳಲ್ಲಿ ಮಳೆ ನೀರು ಚರಂಡಿ ನಿರ್ಮಾಣ ಮೊತ್ತ 30 ಲಕ್ಷ, ಕೆ.ಆರ್ ರಸ್ತೆಯ ಕೆಇಬಿ ವೃತ್ತದಿಂದ ಬಸವಣ್ಣ ಪ್ರತಿಮೆಗೆ ಪಾದಚಾರಿ ಮಾರ್ಗ, ಗ್ರಿಲ್ ವರ್ಕ್, ಗಿಡ ನೆಡುವುದು 48.20 ಲಕ್ಷ, ಸಿಸಿ ಚರಂಡಿ ಸರ್ಕಲ್ ನಿರ್ಮಾಣ ಇತರೆ ಉಳಿಕೆ ಅಭಿವೃದ್ಧಿ ಮೊತ್ತ 72 ಲಕ್ಷ, ಮರು ಡಾಂಬರೀಕರಣ 87 ಲಕ್ಷ, ಕೆ.ಆರ್ ರಸ್ತೆಯ ಜೆಸಿ ವೃತ್ತದಲ್ಲಿ ಅಭಿವೃದ್ಧಿ ಕಾಮಗಾರಿಗಳ ಮೊತ್ತ 20 ಲಕ್ಷ, ರಸ್ತೆ ಮಧ್ಯದಲ್ಲಿ ವಿದ್ಯುತ್ ದೀಪ ಅಳವಡಿಸಲು 15 ಲಕ್ಷ ವೆಚ್ಚ ಮಾಡಿದ್ದಾರೆ. ಆದರೆ, ಕಳಪೆ ಕಾಮಗಾರಿ ಮಾಡಿ ರಸ್ತೆಯಲ್ಲಿ ತೆಗೆದ ಮಣ್ಣು, ಕಲ್ಲು ಇವುಗಳನ್ನು ಹೊರಗಡೆ ಹಾಕಿಸದೆ ನಗರಸಭೆಯ ಪಾರ್ಕಿನಲ್ಲಿ ಹಾಕಿಸಿ ಕರ್ತವ್ಯ ಲೋಪ ಎಸಗಿದ್ದಾರೆ ಎಂದು ಆರೋಪಿಸಿ ಅಂದಿನ ಪೌರಾಯುಕ್ತರು ಹಾಗೂ ಸಂಬಂಧ ಪಟ್ಟ ಅಧಿಕಾರಿಗಳ ವಿರುದ್ಧ ಹೋರಾಟಗಾರ ನಾಗರಾಜ್ ಕೆ.ಲೋಕಾಯುಕ್ತರಿಗೆ ದೂರು ಸಲ್ಲಿಸಿದರು. ಈ ಸಂಬಂಧ ಲೋಕಾಯುಕ್ತದಲ್ಲಿ ವಿಚಾರಣೆ ನಡೆಯುತ್ತಿದ್ದು, ತನಿಖೆಯ ಭಾಗವಾಗಿ ಲೋಕಾಯುಕ್ತ ತನಿಖಾಧಿಕಾರಿಗಳಾದ ಅರವಿಂದ್ ಜೆ.ಕಾರ್ಯಪಾಲಕ ಅಭಿಯಂತರರು ಇವರನ್ನೊಳಗೊಂಡ ಅಧಿಕಾರಿಗಳ ತಂಡ ದೂರಿನ ಸ್ಥಳಗಳನ್ನು ಪರಿಶೀಲನೆ ಮಾಡಿದರು. ಈ ವೇಳೆ ದೂರುದಾರ ಸಾಮಾಜಿಕ ಹೋರಾಟಗಾರ ನಾಗರಾಜ್ ಕೆ.ಹಾಜರಿದ್ದರು.

ನಿರ್ದಿಷ್ಟ ಮತಗಟ್ಟೆ ಪ್ರದೇಶಗಳಿಗೆ ಬೂತ್ ಮಟ್ಟದ ಏಜೆಂಟ್‌ಗಳ ನೇಮಕ

ಜೆಡಿಎಸ್ ಬಿಎಲ್‌ಎ 2 ಕಾರ್ಯಾಗಾರ ಯಶಸ್ವಿ



• **ದೇವನಹಳ್ಳಿ:** 1950ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 13ಬಿ (2) ರ ಅಡಿಯಲ್ಲಿ, ಬಿಎಲ್‌ಒ ಗಳನ್ನು ಸರ್ಕಾರಿ/ಅರೆ ಸರ್ಕಾರಿ/ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಂದ ನೇಮಿಸಲಾಗುತ್ತದೆ, ಸಾಮಾನ್ಯವಾಗಿ, ಒಬ್ಬ ಬಿಎಲ್‌ಒ ಮತದಾರರ ಪಟ್ಟಿಯ ಒಂದು ಭಾಗಕ್ಕೆ ಜವಾಬ್ದಾರರಾಗಿರುತ್ತಾರೆ, 2006 ರಿಂದ ಆಯೋಗವು ಮತದಾರರ ಪಟ್ಟಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಜವಾಬ್ದಾರರಾಗಿರುವ ಬಿಎಲ್‌ಒ ಗಳನ್ನು ನೇಮಿಸುವ ಪರಿಕಲ್ಪನೆಯನ್ನು ಪರಿಚಯಿಸಿದೆ ಎಂದು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಎಚ್.ಎನ್.ದೇವರಾಜ್ ತಿಳಿಸಿದರು.

ಅವರು ತಾಲೂಕಿನ ಚಪ್ಪರಕಲ್ ಬಳಿಯಿರುವ ಮನ್ವಂತರ ಪಾರ್ಟಿ ಹಾಲ್‌ನಲ್ಲಿ ನಡೆದ ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಬಿಎಲ್‌ಒ-2 ಕಾರ್ಯಾಗಾರದಲ್ಲಿ ಮಾತನಾಡಿ, ಮತದಾರರ ಪಟ್ಟಿಯ ತಯಾರಿಕೆ ಮತ್ತು ಪರಿಷ್ಕರಣೆ ಸಮಯದಲ್ಲಿ ತಳಮಟ್ಟದಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಸಲುವಾಗಿ, ಚುನಾವಣಾ ಆಯೋಗವು ಬೂತ್ ಮಟ್ಟದ ಏಜೆಂಟ್ ನೇಮಕಾತಿ ವ್ಯವಸ್ಥೆಯನ್ನು ಪರಿಚಯಿಸಿತು.

ಆಯಾ ಮತಗಟ್ಟೆಗಳ ಬೂತ್ ಮಟ್ಟದ ಅಧಿಕಾರಿಗಳಿಗೆ ಪೂರಕವಾಗಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಂದ ನಿರ್ದಿಷ್ಟ ಮತಗಟ್ಟೆ ಪ್ರದೇಶಗಳಿಗೆ ಬೂತ್ ಮಟ್ಟದ ಏಜೆಂಟ್‌ಗಳನ್ನು ನೇಮಿಸಲಾಗುತ್ತದೆ.

ಸಭೆಯಲ್ಲಿ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ, ಬೆಂ.ಗ್ರಾ.ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ವಿ.ಮಂಜುನಾಥ್, ದೇವನಹಳ್ಳಿ ತಾಲೂಕು ಪ್ರಧಾನ ಕಾರ್ಯದರ್ಶಿ ಜಿ.ಎ.ರವೀಂದ್ರ, ವಿಧಾನಸಭಾ ಕ್ಷೇತ್ರದ ಬಿಎಲ್‌ಎ 1 ಟಿ.ರವಿ, ಕುಂದಾಣ ಹೋಬಳಿ ಅಧ್ಯಕ್ಷ ಮನಗೊಂಡನಹಳ್ಳಿ ಜಗದೀಶ್, ವಿಜಯಪುರ ಹೋಬಳಿ ಅಧ್ಯಕ್ಷ ಪುರುಷೋತ್ತಮ್ಮ ಹಾಗೂ ಪಕ್ಷದ ಮುಖಂಡರು, ಪದಾಧಿಕಾರಿಗಳು ಮತ್ತು ಬೂತ್ ಮಟ್ಟದ ಕಾರ್ಯಕರ್ತರು ಉಪಸ್ಥಿತರಿದ್ದರು.

ಏಜೆಂಟ್‌ಗಳಿಗೆ ಮಾರ್ಗದರ್ಶನ: ಕ್ಷೇತ್ರದ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಮಾತನಾಡಿ, ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಎಸ್‌ಎಸ್‌ಆರ್ ಕುರಿತಾದ ಬೂತ್ ಮಟ್ಟದ ಏಜೆಂಟ್‌ಗಳ ಬಿಎಲ್‌ಒ 2 ಕಾರ್ಯಾಗಾರ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಎಚ್.ಎನ್.ದೇವರಾಜ್ ಅವರು, ಮತದಾರರ ಪಟ್ಟಿ ಪರಿಷ್ಕರಣೆಯ ಮಹತ್ವ ಹಾಗೂ ತಾಂತ್ರಿಕ ಅಂಶಗಳ ಬಗ್ಗೆ ಏಜೆಂಟ್‌ಗಳಿಗೆ ಸವಿಸ್ತಾರವಾಗಿ ಮಾರ್ಗದರ್ಶನ ನೀಡಿದರು ಎಂದು ತಿಳಿಸಿದರು.

ಎನ್‌ಐಟಿಗಳ ಪ್ರವೇಶಕ್ಕೆ ಅರ್ಹತೆ, 8 ವಿದ್ಯಾರ್ಥಿಗಳ ಸಾಧನೆ, ಇಂಚರಾ ಸಾಧನೆ ತಾಲೂಕಿಗೆ ಮಾದರಿ

ಜೆಇಇ: ಬಸವೇಶ್ವರ ವಿದ್ಯಾರ್ಥಿಗಳ ಸಾಧನೆ

• ನೆಲಮಂಗಲ: ಜೆಇಇ ಜೇಮ್ಸ್ ಪರೀಕ್ಷೆ-1ರಲ್ಲಿ ಶ್ರೀ ಬಸವೇಶ್ವರ ಸ್ವತಂತ್ರ ಪಿಯು ಕಾಲೇಜು ಹಾಗೂ ಬಸವೇಶ್ವರ ಮಹಿಳಾ ಪಿಯು ಕಾಲೇಜಿನ 8 ವಿದ್ಯಾರ್ಥಿಗಳು ಅತಿಹೆಚ್ಚು ಅಂಕ ಪಡೆದು ಸಾಧನೆ ಮಾಡಿದ್ದಾರೆ.

ನಗರದ ಪವಾಡ ಬಸವಣ್ಣದೇವರ ಮಠದ ಆವರಣದಲ್ಲಿ ಶ್ರೀ ಬಸವೇಶ್ವರ ಸಮೂಹ ಸಂಸ್ಥೆಗಳ ಕಾಲೇಜಿನಿಂದ ಆಯೋಜಿಸಲಾಗಿದ್ದ ಜೆಇಇ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಜೆಇಇ ಮೈನ್ಸ್ ಪರೀಕ್ಷೆಗೆ ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.

ಶ್ರೀ ಬಸವೇಶ್ವರ ಸ್ವತಂತ್ರ ಪಿಯು ಕಾಲೇಜು ಪ್ರಾಂಶುಪಾಲ ದೇವರಾಜು ಬಿ.ಆರ್. ಮಾತನಾಡಿ, ಜೆಇಇ ಮೈನ್ ಪರೀಕ್ಷೆಯಲ್ಲಿ ನಮ್ಮ ಕಾಲೇಜಿನ ಸುಚಿತ್ರಾ, ಹರ್ಷಿತ್ ಅತಿ ಹೆಚ್ಚು ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದರೆ ಇಂಚರಾ ಸಾಧನೆ ಎಲ್ಲರಿಗೂ ಮಾದರಿಯಾಗಿದೆ. ನಮ್ಮ ಕಾಲೇಜಿನ 8 ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ವಿದ್ಯಾರ್ಥಿಗಳು ಸಾಧನೆ ಮಾಡಲಿದ್ದಾರೆ. ಕ್ರಿಯಾಶೀಲ ಶಿಕ್ಷಕವರ್ಗ, ಪೋಷಕರ ಸಹಕಾರ, ವಿದ್ಯಾರ್ಥಿಗಳ ನಿರಂತರ ಕಲಿಕೆಯಿಂದ ಸಾಧನೆಗೆ ಶಕ್ತಿಯಾಗಿದೆ ಎಂದರು.

ಇಂಚರಾ ಸಾಧನೆ!: ಬಸವೇಶ್ವರ ಮಹಿಳಾ ಪಿಯು ಕಾಲೇಜಿನ ವಿದ್ಯಾರ್ಥಿ ಇಂಚರಾ ಎತ್ತರದಲ್ಲಿ ತುಂಬ ಕಡಿಮೆ ಇದ್ದರೂ ಸಹ ಸಾಧನೆಯಲ್ಲಿ ಎತ್ತರವಾಗಿ ಬೆಳೆದಿದ್ದಾಳೆ. ಜೆಇಇ ಮೈನ್ಸ್ ಪರೀಕ್ಷೆ-1ರಲ್ಲಿ ಶೇಕಡವಾರು 77 ಅಂಕ ಪಡೆಯುವ ಮೂಲಕ ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಧನೆ ಮಾಡಿದ್ದು, ವಿಶಿಷ್ಟಚೇತನರ ವಿಭಾಗದಲ್ಲಿ ಮುಂದಿನ ಪರೀಕ್ಷೆಗಳಿಗೆ ಅರ್ಹತೆ ಪಡೆದಿದ್ದಾರೆ. ಇಂಚರಾ ಸಾಧನೆ ಕಾಲೇಜು ಹಾಗೂ ತಾಲೂಕಿಗೆ ಮಾದರಿಯಾಗಿದ್ದು, ಬಸವಣ್ಣದೇವರ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಪ್ರಾಂಶುಪಾಲರು, ಶಿಕ್ಷಕರು ಅಭಿನಂದನೆ ಸಲ್ಲಿಸಿದರು.

ಅಭಿನಂದನೆ: ಬಸವೇಶ್ವರ ಮಹಿಳಾ ಪಿಯು ಕಾಲೇಜು ಹಾಗೂ ಶ್ರೀ ಬಸವೇಶ್ವರ ಸ್ವತಂತ್ರ ಪಿಯು ಕಾಲೇಜಿನ ವಿದ್ಯಾರ್ಥಿ ಸುಚಿತ್ರಾ ಶೇಕಡವಾರು 91, ಹರ್ಷಿತ್ ಶೇಕಡವಾರು 91, ಇಂಚರಾ ಶೇಕಡವಾರು 77 ಅಂಕ ಪಡೆದರೆ , ಜಿ.ವಿ.ಜ್ಯೋತಿ, ಪೂರ್ವಿಕಾ. ಎಂ, ದರ್ಶನ್, ಚಿರಂತ್, ಹೇಮಂತ್, ಚಂದು ಸೇರಿದಂತೆ 8 ವಿದ್ಯಾರ್ಥಿಗಳು ಅತಿಹೆಚ್ಚು ಅಂಕ ಪಡೆದು ಎನ್‌ಐಟಿಗಳಲ್ಲಿ ಪ್ರವೇಶ ಪಡೆಯಲು ಅರ್ಹತೆ ಪಡೆದಿದ್ದು ಕಾಲೇಜು ಪ್ರಾಂಶುಪಾಲರು ಹಾಗೂ ಶಿಕ್ಷಕರು ಸನ್ಮಾನಿಸಿ, ಸಿಹಿ ಹಂಚಿ ಅಭಿನಂದನೆ ಸಲ್ಲಿಸಿದರು. ಬಸವೇಶ್ವರ ಕಾಲೇಜಿನ ಅಧ್ಯಾಪಕ ಅಕ್ಕಮಹಾದೇವಿ.ಸಿ, ನವ್ಯಶ್ರೀ ಎಂ.ಸಿ., ದೀಪಾ ಕಲ್ಲಡಿ, ವೇದಾವತಿ ಡಿ, ವಿನಯ್.ಎಸ್ ಸೇರಿದಂತೆ ಅನೇಕರ ಶಿಕ್ಷಕರು, ಪೋಷಕರು, ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದು ಶುಭಕೋರಿದರು.



> ಗ್ರಾಮೀಣ ಭಾಗದ ವಿದ್ಯಾರ್ಥಿನಿಯರಿಗೆ ಗುಣಮಟ್ಟದ ಶಿಕ್ಷಣ ನೀಡಲು ಆರಂಭವಾದ ಕಾಲೇಜು ವಿದ್ಯಾರ್ಥಿಗಳ ಸಾಧನೆಯ ಗುರಿಯನ್ನು ಮುಟ್ಟುವಂತೆ ಮಾಡಿದೆ. ನಮ್ಮ ಕಾಲೇಜಿನ 8 ವಿದ್ಯಾರ್ಥಿಗಳು ಜೆಇಇ ಮೈನ್ಸ್ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಸಾಧನೆ ಮಾಡಿರುವುದು ಸಂತೋಷ ಸಂಗತಿ, ಅದರಲ್ಲಿಯೂ ಇಂಚರಾ ಸಾಧನೆ ಎಲ್ಲಾ ವಿದ್ಯಾರ್ಥಿಗಳಿಗೂ ಮಾದರಿ.
>
> ■ **ನೀಲಾ ಎಚ್.ಎಸ್,** ಪ್ರಾಂಶುಪಾಲರು, ಶ್ರೀ ಬಸವೇಶ್ವರ ಮಹಿಳಾ ಪಿಯು ಕಾಲೇಜು

ಕಿರುಸುದ್ದಿ

ಬಿರಿಯಾನಿ ಹೋಟೆಲ್‌ಗೆ ಒಂದು ಲಕ್ಷ ದಂಡ

• ಬೆಂಗಳೂರು: ಶುಚಿತ್ವ ಕಾಪಾಡದ ಹಿನ್ನೆಲೆ ಸ್ಟಾರ್ ಅಂಬೂರ್ ಬಿರಿಯಾನಿ ಹೋಟೆಲ್ ಮೇಲೆ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಅಧಿಕಾರಿಗಳು ದಾಳಿ ನಡೆಸಿದ್ದು, ಒಂದು ಲಕ್ಷ ರೂಪಾಯಿ ದಂಡ ವಿಧಿಸಿದ್ದಾರೆ. ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಜಯನಗರ 4ನೇ ಟಿ-ಬ್ಲಾಕ್ ನ ಸ್ವಾಗತ್ ರಸ್ತೆಯಲ್ಲಿರುವ ಸ್ಟಾರ್ ಅಂಬೂರ್ ಬಿರಿಯಾನಿ ಹೋಟೆಲ್‌ನಲ್ಲಿ ಹಸಿ ಕಸ ಹಾಗೂ ಒಣ ಕಸ ಬೇರ್ಪಡಿಸದೆ ಘನತ್ಯಾಜ್ಯ ನಿರ್ವಹಣೆ ಸರಿಯಾಗಿ ನಿರ್ವಹಣೆ ಮಾಡದೇ ಇದ್ದುದರಿಂದ ಪಾಲಿಕೆಯ ಘನತ್ಯಾಜ್ಯ ವಿಭಾಗದಿಂದ ಹೋಟೆಲ್ ಮೇಲೆ ದಾಳಿ ನಡೆಸಲಾಗಿದೆ ಎಂದು ಪಾಲಿಕೆ ತಿಳಿಸಿದೆ. ಶುಚಿತ್ವ ಕಾಪಾಡದೆ, ಘನತ್ಯಾಜ್ಯ ನಿರ್ವಹಣೆಯನ್ನು ಸರಿಯಾಗಿ ಮಾಡಿಲ್ಲ, ಹೋಟೆಲ್ ಒಳಗಡೆ ಅಶುಚಿತ್ವ ಹೊಂದಿರುವುದರಿಂದ ಘನತ್ಯಾಜ್ಯ ನಿರ್ವಹಣೆ ನಿಯಮಗಳಡಿ ಹೋಟೆಲ್ ಮಾಲೀಕರಿಗೆ ಒಂದು ಲಕ್ಷ ರೂ. ದಂಡ ವಿಧಿಸಲಾಗಿದೆ ಹಾಗೂ ಘನತ್ಯಾಜ್ಯ ನಿರ್ವಹಣೆ ಕುರಿತು ಅರಿವು ಮೂಡಿಸಿ ಅಶುಚಿತ್ವ ಪುನರಾವರ್ತನೆಯಾಗದಂತೆ ನೋಡಿಕೊಳ್ಳಲು ಎಚ್ಚರಿಕೆ ನೀಡಲಾಗಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಪಿಎಚ್‌ಡಿ ವಿದ್ಯಾರ್ಥಿ ಪ್ರವೀಣ್‌ಗೆ ಫೆಲೋಶಿಪ್

• ಬೆಂಗಳೂರು: ಜಿ.ಕೆ.ವಿ.ಕೆ. ಯ ಜೈವಿಕ ತಂತ್ರಜ್ಞಾನ ವಿಭಾಗದ ಜೀವರಸಾಯನಶಾಸ್ತ್ರ ವಿಭಾಗದ ಪಿಎಚ್‌ಡಿ ವಿದ್ಯಾರ್ಥಿ ಪ್ರವೀಣ್.ಎಸ್.ವಿ. ಅವರಿಗೆ ಅನುಸಂಧಾನ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ ಮತ್ತು ಕಾನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್‌ರವರು ನೀಡುವ ಪ್ರಧಾನಮಂತ್ರಿ ಡಾಕ್ಟೋರಲ್ ಸಂಶೋಧನಾ ಫೆಲೋಶಿಪ್ (ಪಿ.ಎಂ.ಎಫ್. ಡಿ.ಆರ್)ರವರ ಡಾಕ್ಟೋರಲ್ ಸಂಶೋಧನೆಗೆ ಲಭಿಸಿದೆ. ಪ್ರವೀಣ್.ಎಸ್.ವಿ. ಅವರು ಮೆಟಾಬೊಲೈಟ್ ಫಿಂಗರ್ ಪ್ರಿಂಟಿಂಗ್ ಮತ್ತು ಜೇನಿನ ಕೊಯ್ಲು ಹಾಗೂ ಗುಣಮಟ್ಟದ ಲಕ್ಷಣಗಳನ್ನು ಹೊರತೆಗೆಯಲು ಎನ್.ಎಂ.ಆರ್ ಸ್ಪೆಕ್ಟ್ರೋಸ್ಕೋಪಿಕ್ ಡೇಟಾವನ್ನು ಮೇಲ್ವಿಚಾರಿತ ಯಂತ್ರದ ಕಲಿಕೆಯ ಮೂಲಕ ವಿಶ್ಲೇಷಣೆ ಎಂಬ ಶೀರ್ಷಿಕೆಯಡಿಯಲ್ಲಿ, ತಮ್ಮ ಪಿಎಚ್.ಡಿ ಸಂಶೋಧನೆಯನ್ನು ಪ್ರೊ.ಪಿ.ಎಸ್. ಬೆನ್‌ಹರ್‌ಲಾಲ್, ಜೀವರಸಾಯನಶಾಸ್ತ್ರ ವಿಭಾಗ ರವರ ಮಾರ್ಗದರ್ಶನದಲ್ಲಿ ನಡೆಸುತ್ತಿದ್ದಾರೆ. ಈ ಸಂಶೋಧನೆ, ಜೇನಿನ ಗುಣಮಟ್ಟ ಮತ್ತು ಭೌಗೋಳಿಕ ಪ್ರಾಮಾಣಿಕತೆಯನ್ನು ನಿರ್ಧರಿಸಲು ಅಣು ಪ್ರತಿಧ್ವನಿ ಸ್ಪೆಕ್ಟ್ರಲ್ ಡೇಟಾದ ಸ್ಥಳಕಾಲಿಕ ಬದಲಾವಣೆಗಳನ್ನು ಬಹು-ಆಯಾಮದ ಕೀಮೋಮೆಟ್ರಿಕ್ ಗಣನೆಗಳ ಮೂಲಕ ವಿಶ್ಲೇಷಿಸುತ್ತದೆ. ಈ ಅಧ್ಯಯನವು ಎನ್.ಎಂ.ಆರ್ ಸ್ಪೆಕ್ಟ್ರೋಮೆಟ್ರಿ ಬಳಸಿ ಜೇನಿನ ಗುಣಮಟ್ಟವನ್ನು ವೇಗವಾಗಿ ಮೌಲ್ಯಮಾಪನ ಮಾಡಲು ಸಹಾಯಕವಾಗುವ ಮಾದರಿ ಕಲಿಕೆ ಯಂತ್ರವನ್ನು ಅಭಿವೃದ್ಧಿಪಡಿಸುವುದರ ಬಗ್ಗೆ ಪ್ರಸ್ತಾಪಿಸುತ್ತದೆ.

ಔಷಧಿ ಪೂರೈಕೆಗೆ ಅನುದಾನ ಬಿಡುಗಡೆ

• ಬೆಂಗಳೂರು: ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಔಷಧಿಗಳ ಪೂರೈಸಲು ಹೆಚ್ಚುವರಿ ಅನುದಾನ 3 ಸಾವಿರ ಲಕ್ಷ ರೂ. ಹಣವನ್ನು ತಾತ್ಕಾಲಿಕವಾಗಿ 2 ತಿಂಗಳ ಅವಧಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ. ಕರ್ನಾಟಕ ರಾಜ್ಯ ವೈದ್ಯಕೀಯ ಸರಕು ಸರಬರಾಜು ನಿಗಮ ನಿಯಮಿತ (ಕೆಎಸ್‌ಎಂಎಸ್‌ಸಿಎಲ್) ಅವರು 3 ಲಕ್ಷ ರೂ. ಮೊತ್ತವನ್ನು ತಕ್ಷಣವೇ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್ಎಎಸ್‌ಟಿ) ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಬೇಕು. ಎಸ್‌ಎಎಸ್‌ಟಿ ಹಣ ಸ್ವೀಕರಿಸಿದ ನಂತರ, ಸಂಬಂಧಿತ ಸರ್ಕಾರಿ ಆಸ್ಪತ್ರೆಗಳ ಬ್ಯಾಂಕ್ ಖಾತೆಗಳಿಗೆ ಹಣ ಬಿಡುಗಡೆಗೊಳಿಸಬೇಕು ಎಂದು ಸೂಚಿಸಿದೆ. ಔಷಧಿಗಳ ಖರೀದಿ ಕಡ್ಡಾಯವಾಗಿ ಗವರ್ನಮೆಂಟ್ ಇ-ಮಾರ್ಕೆಟ್‌ಪ್ಲೇಸ್ ಅಥವಾ ರಾಜ್ಯ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯ ಮೂಲಕವೇ ಕೈಗೊಳ್ಳಬೇಕು. ಮತ್ತು ಕೇವಲ ಅತ್ಯಾವಶ್ಯಕ ಔಷಧಿಗಳನ್ನು ಪ್ರಾಥಮಿಕತೆಯ ಆಧಾರದ ಮೇಲೆ ಮಾತ್ರ ಖರೀದಿಸಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ತಿಳಿಸಿದ್ದಾರೆ.

ರಾಮಯ್ಯ ಆಸ್ಪತ್ರೆಗೆ ಅಸ್ಥಿಮಜ್ಜೆ ಕಸಿ ಥೆರಪಿ ಕ್ಷೇತ್ರದಲ್ಲಿ ಮಾನ್ಯತೆ

• ಬೆಂಗಳೂರು: ಫೌಂಡೇಶನ್ ಫಾರ್ ದಿ ಅಕ್ರಿಡೇಶನ್ ಆಫ್ ಸೆಲ್ಯುಲಾರ್ ಥೆರಪಿ (ಎಫ್‌ಎಸಿಟಿ) ವತಿಯಿಂದ ರಾಮಯ್ಯ ಮೆಮೋರಿಯಲ್ ಆಸ್ಪತ್ರೆಗೆ ಅಸ್ಥಿಮಜ್ಜೆ ಕಸಿ ಹಾಗೂ ಸೆಲ್ಯುಲಾರ್ ಥೆರಪಿ ಕ್ಷೇತ್ರದಲ್ಲಿ ಮಾನ್ಯತೆ ನೀಡಲಾಗಿದೆ. ಈ ಮಾನ್ಯತೆ ಪಡೆದ ಭಾರತದ ಎರಡನೇ ಆಸ್ಪತ್ರೆ ಇದಾಗಿದ್ದು, ಎಫ್‌ಎಸಿಟಿ ಮತ್ತು ಜಾಯಿಂಟ್ ಕಮಿಷನ್ ಇಂಟರ್‌ನ್ಯಾಷನಲ್ (ಜೆಸಿಐ) ಎರಡೂ ಮಾನ್ಯತೆಗಳನ್ನು ಹೊಂದಿರುವ ಗೌರವಕ್ಕೂ ಪಾತ್ರವಾಗಿದೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗೋಕುಲ್ ಎಜುಕೇಶನ್ ಫೌಂಡೇಶನ್ (ವೈದ್ಯಕೀಯ) ಅಧ್ಯಕ್ಷ ಡಾ. ಎಂ.ಆರ್. ಜಯರಾಮ್, ಈ ಮಾನ್ಯತೆ ಗಳಿಸಿರುವ ಸಾಧನೆಯಿಂದ ರೋಗಿಗಳಿಗೆ ವಿಶ್ವಮಟ್ಟದ ಆರೈಕೆ ದೊರೆಯುತ್ತದೆ ಎಂದರು.

ಕಳ್ಳನ ಸೆರೆ: 10 ಬೈಕ್ ವಶ

• ಬೆಂಗಳೂರು: ದ್ವಿಚಕ್ರ ವಾಹನಗಳ ಕಳ್ಳತನದಲ್ಲಿ ತೊಡಗಿದ್ದ ಆರೋಪಿಯನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿ, ಆತನಿಂದ ಸುಮಾರು 6 ಲಕ್ಷ ರೂ. ಮೌಲ್ಯದ 10 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಕಾಡುಗೋಡಿ ನಿವಾಸಿಯೊಬ್ಬರು ಗರುಡಾಚಾರ್ ಪಾಳ್ಯದ ವಾಟರ್ ಪ್ಲಾಂಟ್ ಬಳಿ ನಿಲ್ಲಿಸಿದ್ದ ತಮ್ಮ ದ್ವಿಚಕ್ರ ವಾಹನ ನಾಪತ್ತೆಯಾದ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದರು. ಈ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ಮಲ್ಲೇಶ್‌ಪಾಳ್ಯದ ಬಳಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ವಾಹನ ಕಳ್ಳತನದ ಜಾಲ ಬಯಲಾಗಿದೆ.

ಬಂಧಿತ ಆರೋಪಿಯು ಕಳ್ಳತನ ಮಾಡಿರುವ ವಾಹನಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಕಾಮಧೇನು ಲೇಔಟ್‌ನ ಮಾಲ್‌ವೊಂದರ ಹಿಂಭಾಗದ ಖಾಲಿ ಜಾಗದಲ್ಲಿ 7 ಹಾಗೂ ತನ್ನ ಮನೆಯಲ್ಲಿ 3 ವಾಹನಗಳನ್ನು ಬಚ್ಚಿಟ್ಟಿರುವುದಾಗಿ ಒಪ್ಪಿಕೊಂಡಿದ್ದಾನೆ. ಪೊಲೀಸರು ಆತನ ಮಾಹಿತಿಯ ಮೇರೆಗೆ ಒಟ್ಟು 10 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಈತನ ಬಂಧನದಿಂದ ಮಹದೇವಪುರ ಠಾಣೆಯ 6 ಮತ್ತು ಯಲಹಂಕ ಠಾಣೆಯ 1 ಪ್ರಕರಣ ಸೇರಿದಂತೆ ಒಟ್ಟು 7 ಕಳ್ಳತನದ ಪ್ರಕರಣಗಳು ಪತ್ತೆಯಾಗಿವೆ. ಉಳಿದ 3 ವಾಹನಗಳ ವಾರಸುದಾರರನ್ನು ಪತ್ತೆಹಚ್ಚುವ ಕೆಲಸ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮತದಾರರ ಪಟ್ಟಿ ಬಗ್ಗೆ ಆಕ್ಷೇಪ ಸಲ್ಲ

• ಬೆಂಗಳೂರು: ರಾಜ್ಯಸರ್ಕಾರಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಜಿಬಿಎ) ಚುನಾವಣೆ ನಡೆಸಲು ಮನಸ್ಸು ಇಲ್ಲದ ಕಾರಣ ಮತದಾರರ ಪಟ್ಟಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದೆ ಎಂದು ಬಿಜೆಪಿ ಶಾಸಕ ಎಸ್.ಆರ್.ವಿಶ್ವನಾಥ್ ಆರೋಪಿಸಿದ್ದಾರೆ.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಳೆದ ಹಲವಾರು ದಿನಗಳಿಂದ ಕಾಂಗ್ರೆಸ್ ಸರ್ಕಾರ ಚುನಾವಣೆ ನಡೆಸಲು ಉದ್ದೇಶ ಇಟ್ಟುಕೊಂಡಿಲ್ಲ, ಪದೇಪದೇ ಮುಂದೂಡುವುದಕ್ಕಾಗಿಯೇ ಕುಂಟು ನೆಪಗಳನ್ನು ಹೇಳುತ್ತಿದೆ. ಈಗ ಮತದಾರರ ಪಟ್ಟಿ ಸರಿ ಇಲ್ಲ ಎಂದು ಆಕ್ಷೇಪಿಸಿರುವುದು ಚುನಾವಣೆಯ ಮುಂದೂಡಿಕೆಯ ಹುನ್ನಾರ ಎಂದು ದೂರಿದ್ದಾರೆ. ಮತದಾರರ ಪಟ್ಟಿ ಸರಿ ಇಲ್ಲ ಎಂದರೆ ಹೇಗೆ?, ಇದನ್ನು ಚುನಾವಣಾ ಆಯೋಗ ಸರಿಪಡಿಸಬೇಕು. ಇಲ್ಲಿಯ ತನಕ ಇವರಿಗೆ ಇದು ನೆನಪಾಗಲಿಲ್ಲವೇ?, ಚುನಾವಣೆ ನಡೆದರೆ ಪಕ್ಷಕ್ಕೆ ಹಿನ್ನಡೆಯಾಗುತ್ತದೆ ಎಂಬ ಕಾರಣಕ್ಕೆ ಕುಂಟುನೆಪಗಳನ್ನು ಹುಡುಕುತ್ತಿದೆ. ಹಾಗಾಗಿ ಜಿಬಿಎ ಚುನಾವಣೆ ನಡೆಯುವುದು ಅನುಮಾನ ಎಂದು ಹೇಳಿದರು. ಮತದಾರರ ಪಟ್ಟಿಯಲ್ಲಿ ಲೋಪದೋಷಗಳಿದ್ದರೆ ಆಯೋಗಕ್ಕೆ ಮನವಿ ಮಾಡಿಕೊಂಡು ಸರಿಪಡಿಸಬೇಕು. ಎಲ್ಲೆಲ್ಲಿ ತಪ್ಪುಗಳಿವೆಯೋ ಅದನ್ನು ಸರಿಪಡಿಸಿ ಎಂದರೆ ಅಧಿಕಾರಿಗಳು ತಕ್ಷಣವೇ ಸರಿಪಡಿಸುತ್ತಾರೆ. ದಿನಾಂಕ ಘೋಷಣೆಗೆ ಮುಂದಾಗಿರುವಾಗ ಈ ಕಾರಣ ಹುಡುಕುವುದು ಸರಿಯೇ ಎಂದು ಪ್ರಶ್ನಿಸಿದ್ದಾರೆ.

ಜಿಬಿಎ ಕಟ್ಟಡಕ್ಕೆ ಲಿಫ್ಟ್ ಅಳವಡಿಕೆಗೆ ಪ್ರಸ್ತಾವನೆ

• ಬೆಂಗಳೂರು: ಐತಿಹಾಸಿಕ ಪಾರಂಪಾರಿಕ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಕೇಂದ್ರ ಕಚೇರಿಯ ಕಟ್ಟಡಕ್ಕೆ ಲಿಫ್ಟ್ ಅಳವಡಿಕೆಗೆ ಕೇಂದ್ರ ಕಚೇರಿಯ ನಿರ್ವಹಣಾ ಅಧಿಕಾರಿಗಳು ಜಿಬಿಎ ಮುಖ್ಯ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಕಳೆದ 90 ವರ್ಷಗಳಿಂದ ನಗರದ ಆಡಳಿತ ಮಾಡಿದ ಮೇಯರ್ ಕಟ್ಟಡ ಎಂದು ಖ್ಯಾತಿ ಗಳಿಸಿದ ಅನೆಕ್ಸ್-1 ಕಟ್ಟಡಕ್ಕೆ ಲಿಫ್ಟ್ ಅಳವಡಿಕೆ ಜಿಬಿಎ ಮುಂದಾಗಿದೆ.

ಬಿಬಿಎಂಪಿಯನ್ನು ಜಿಬಿಎ ಮಾಡಿ 5 ನಗರಪಾಲಿಕೆಯನ್ನು ಮಾಡಲಾಗಿದೆ. ಜಿಬಿಎಗೆ ಮುಖ್ಯಮಂತ್ರಿಗಳು ಅಧ್ಯಕ್ಷರು ಹಾಗೂ ಬೆಂಗಳೂರು ಉಸ್ತುವಾರಿ ಮಂತ್ರಿಗಳು ಉಪಾಧ್ಯಕ್ಷರಾಗಿರುತ್ತಾರೆ. ಜಿಬಿಎ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ಹಾಗೆ ಜಿಬಿಎ ಅಧ್ಯಕ್ಷರಿಗೆ ಹಾಗೂ ಉಪಾಧ್ಯಕ್ಷರಿಗೆ ಕಚೇರಿ ಹಂಚಿಕೆ ಮಾಡಡಲಾಗಿದೆ. ಕೇಂದ್ರ ಕಚೇರಿಯ ಮೊದಲ ಮಹಡಿಯಲ್ಲಿ ಮೇಯರ್ ಕಚೇರಿಯನ್ನು ಸಿಎಂ ಅವರ ಅಣದರೆ ಜಿಬಿಎ ಅಧ್ಯಕ್ಷರ ಕಚೇರಿಯನ್ನಾಗಿ ಹಂಚಿಕೆ ಮಾಡಲಾಗಿದೆ.ಆದರೆ ಲಿಫ್ಟ್‌ನ ವ್ಯವಸ್ಥೆ ಇರಲಿಲ್ಲ, ಈಗ ಜಿಬಿಎ ಅಧ್ಯಕ್ಷರಿಗೆ ಅಂದರೆ ಮುಖ್ಯಮಂತ್ರಿಗಳಿಗೆ ಕಚೇರಿ ಹಂಚಿಕೆ ಮಾಡಲಾದ ಕಾರಣ ಮೊದಲ ಮಹಡಿಗೆ ಲಿಫ್ಟ್ ಅಳವಡಿಕೆ ಮಾಡಲು ಸುಮಾರು 45 ಲಕ್ಷ ರೂಪಾಯಿಗಳ ಪ್ರಸ್ತಾವನೆಯನ್ನು ಕಟ್ಟಡ ನಿರ್ವಹಣಾ ಅಧಿಕಾರಿಗಳು ಜಿಬಿಎಮುಖ್ಯ ಆಯುಕ್ತರಿಗೆ ಸಲ್ಲಿಸಿದ್ದಾರೆ.

ಹಳೆಯ ಪಾರಂಪರಿಕ ಕಟ್ಟಡವಾದ ಅನೆಕ್ಸ್ ಒಂದು ಕಟ್ಟಡ ಕೇವಲ ಒಂದೇ ಅಂತಸ್ತಿನ ಕಟ್ಟಡವಾಗಿದ್ದು, 1936 ರಲ್ಲಿ ಅಂದಿನ ಮೈಸೂರು ಸಂಸ್ಥಾನದ ದಿವಾನರಾಗಿದ್ದ ರಾಜಗೋಪಾಲಚಾರಿಯವರು ಕಟ್ಟಡ ನಿರ್ಮಾಣ ಮಾಡಿದ್ದರು. ಅಲ್ಲಿಂದ ಇಲ್ಲಿಯವರೆಗೆ ಮೇಯರ್ ಕಟ್ಟಡ ಅಂತ ಹೆಸರುವಾಸಿಯಾಗಿತ್ತು.



ನಾಳೆ ಭಾರತೀ ಸಮ್ಮೇಳನ

• ಬೆಂಗಳೂರು: ಭಾರತೀಯ ವಿದ್ವತ್ ಪರಿಷತ್ -ಕರ್ನಾಟಕ, ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ರಾಷ್ಟ್ರ ಸೇವಿಕಾ ಸಮಿತಿ ಸಂಸ್ಥೆ ಸಹಯೋಗದಲ್ಲಿ ಫೆ.20ರಂದು ಬೆಳಗ್ಗೆ 10 ಗಂಟೆಗೆ ಕೃಷ್ಣರಾಜ ಪರಿಷತ್ ಮಂದಿರದಲ್ಲಿ ಭಾರತೀ ಸಮ್ಮೇಳನವನ್ನು ಹಮ್ಮಿಕೊಂಡಿದೆ.

ಭಾರತೀ ಎಂಬುದು ಭಾರತದ ಸ್ತ್ರೀಯರ ಉತ್ಕರ್ಷದ ಕುರಿತಾದ ಆಳವಾದ ಚಿಂತನೆಯಾಗಿದೆ. ನಾರೀ ಸ್ವರೂಪವನ್ನು ನಾರಾಯಣಿಯಾಗಿಸುವ ಹೊಣೆಗಾರಿಕೆಯ ಕಲ್ಪನೆ, ಅಂದರೆ ಸ್ತ್ರೀ ಶಕ್ತಿಯ ಒಳಹರಿವನ್ನು ಸಮ್ಯಕ್ ದೃಷ್ಟಿಯಿಂದ ಸಬಲವಾಗಿ ರೂಪಿಸುವುದು. ಅಷ್ಟೇ ಅಲ್ಲದೇ ಹೊಣೆಗಾರಿಕೆಯನ್ನು ಸಾಕಾರಗೊಳಿಸುವ ಪೂರ್ಣ ಪ್ರಯತ್ನ. ಈ ಹಾದಿಯಲ್ಲಿ ಸ್ತ್ರೀಯರ ಉತ್ಕರ್ಷದ ಪರಿಚಯ, ಸಾಮಾಜಿಕ-ಆರ್ಥಿಕ-ವೈಯಕ್ತಿಕ-ಕೌಟುಂಬಿಕ ಮುಂತಾದ ಕ್ಷೇತ್ರಗಳಲ್ಲಿ ಎದುರಾಗುವ ಸಮಸ್ಯೆಗಳ ಗುರುತಿಸುವಿಕೆ, ಪರಿಹಾರಕ್ಕಾಗಿ ಎಲ್ಲ ಮಹಿಳೆಯರು ಒಟ್ಟಾಗಿ ನಿಲ್ಲುವುದು ಮುಂತಾದುವುಗಳನ್ನು ಗಂಭೀರವಾಗಿ ಚರ್ಚಿಸಲು ಭಾರತೀ ಸಮ್ಮೇಳನವನ್ನು ಏರ್ಪಡಿಸಲಾಗಿದೆ.

ಭಾರತೀ ಸಮ್ಮೇಳನದಲ್ಲಿ ಸ್ತ್ರೀಯರ ಕುರಿತಾಗಿ ವಿದ್ಯಾ, ಶಕ್ತಿ, ಮುಕ್ತಿ ಈ ಮೂರು ವಿಷಯಗಳಲ್ಲಿ ಚರ್ಚೆ, ಪತ್ರ ಲೇಖನ ಮುಂತಾದ ಹಲವು ಶೈಕ್ಷಣಿಕ ಚಟುವಟಿಕೆಗಳು ನಡೆಯಲಿವೆ. ವಿದ್ಯಾ - ಜ್ಞಾನಶಕ್ತಿ ಈ ವಿಭಾಗದಲ್ಲಿ ಮಹಿಳೆಯರ ಓದು, ಉನ್ನತ ಶಿಕ್ಷಣ, ಮಧ್ಯದಲ್ಲಿ ಓದನ್ನು ನಿಲ್ಲಿಸಿದ ವಿದ್ಯಾರ್ಥಿನಿಯರು, ವಯಸ್ಕ ಮಹಿಳೆಯರು ಓದನ್ನು ಮುಂದುವರೆಸುವುದು ಇತ್ಯಾದಿಗಳ ಕುರಿತಾಗಿ ಚರ್ಚಿಸಲಾಗುವುದು. ಶಿಕ್ಷಣದ ಪ್ರವೇಶ ಹೆಚ್ಚಿಸಲು ಸರ್ಕಾರದಿಂದ ನಿರಂತರ ಪ್ರಯತ್ನಗಳು ನಡೆದರೂ, ಗ್ರಾಮೀಣ, ಆದಿವಾಸಿ ಹಾಗೂ ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಶಿಕ್ಷಣದ ನಿರಂತರತೆ, ಗುಣಮಟ್ಟ, ಕೌಶಲ ಮತ್ತು ಉದ್ಯೋಗ ಪ್ರವೇಶದಲ್ಲಿ ಹಲವು ವ್ಯವಸ್ಥಾತ್ಮಕ ಅಡೆತಡೆಗಳನ್ನು ಎದುರಿಸುತ್ತಿದ್ದಾರೆ. ಈ ಸವಾಲುಗಳ ಪರಿಹಾರಕ್ಕಾಗಿ ಮಹಿಳಾ ಶಿಕ್ಷಣಕ್ಕೆ, ವಿಶೇಷವಾಗಿ ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಜೀವಮಾನಪೂರ್ಣ ಅಧ್ಯಯನಕ್ಕೆ ಸಮಗ್ರ ದೃಷ್ಟಿಕೋನವುಳ್ಳ ಚರ್ಚೆಯು ಅಗತ್ಯವಾಗಿದೆ.

ನಾರಿಯರಿಗೆ ಶೌರ್ಯ ಸಮ್ಮಾನ್ ಪ್ರಶಸ್ತಿ ಪ್ರದಾನ: ಗುರುಜೀ



• ಬೆಂಗಳೂರು: ಶೌರ್ಯವು ಪ್ರೇಮ ಮತ್ತು ಕರುಣೆಯೊಂದಿಗೆ ಒಂದಾಗುವ ಭೂಮಿ ಭಾರತ. ನಮ್ಮಲ್ಲಿ ಕಂಡುಬರುವ ಶಾಂತಿಯು ಸ್ಮಶಾನ-ಶಾಂತಿಯಲ್ಲ, ನಮ್ಮ ಶಾಂತಿಯು ಶೌರ್ಯ, ಸ್ಫೂರ್ತಿ ಮತ್ತು ಕ್ರಾಂತಿಯ ಜತೆ ನಡೆಯುತ್ತದೆ ಎಂದು ಗುರುದೇವ ರವಿಶಂಕರ್ ಗುರುಜೀ ತಿಳಿಸಿದರು.

ದಿ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ 16 ಮಂದಿ ಭಾರತೀಯ ಸೇನೆಯ ನಿವೃತ್ತ ಯೋಧರು ಮತ್ತು ವೀರ ನಾರಿಯರಿಗೆ ಶೌರ್ಯ ಸಮ್ಮಾನ್ 2026 ಪ್ರಶಸ್ತಿಯನ್ನು ಪ್ರದಾನ ಮಾಡಿ ಮಾತನಾಡಿದ ಅವರು, ಕ್ರಾಂತಿ ಮತ್ತು ಉತ್ಸಾಹವು ಜತೆಯಲ್ಲೇ ಸಾಗುತ್ತವೆ, ಆದರೂ ಮನಸ್ಸು ಶಾಂತವಾಗಿರುತ್ತದೆ. ಭಗವದ್ಗೀತೆಯನ್ನು ಯುದ್ಧಭೂಮಿಯಲ್ಲಿರುವ ಯೋಧನಿಗೆ ನೀಡಲಾಯಿತು. ಆಧ್ಯಾತ್ಮಿಕತೆಗೂ ಮಿಲಿಟರಿಗೂ ಏನು ಸಂಬಂಧವಿದೆ ಎಂದು ಜನರು ಆಗಾಗ್ಗೆ ಕೇಳುತ್ತಾರೆ. ಯುದ್ಧಭೂಮಿಯ ಮಧ್ಯದಲ್ಲೇ ಆಧ್ಯಾತ್ಮ ಜ್ಞಾನವು ಹುಟ್ಟಿಕೊಂಡಿತು ಮತ್ತು ಅದನ್ನು ಯೋಧನಿಗೆ ನೀಡಲಾಯಿತು. ಯೋಧನ ಜೀವನವನ್ನು ಜ್ಞಾನ ಮತ್ತು ಆಂತರಿಕ ಅರಿವಿನಿಂದ ಎಂದಿಗೂ ಬೇರ್ಪಡಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಸಹಕಾರ ಸಂಘಗಳಿಗೆ ಕಟ್ಟಡ ನಿರ್ಮಾಣಕ್ಕೆ ಚಿಂತನೆ

• ಕೆಂಗೇರಿ: ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಚಿಂತಿಸಲಾಗಿದೆ ಎಂದು ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕೆಂಗಲ್ ಹನುಮಂತಯ್ಯ ವಾರ್ಡ್‌ನ 3ನೇ ಮುಖ್ಯ ರಸ್ತೆಯ ಪಾರ್ಕ್ ರಸ್ತೆಯಲ್ಲಿ ಎಲ್ಇಡಿ ವಿದ್ಯುತ್ ಬೀದಿ ದೀಪ ಅಳವಡಿಸುವ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲ ಕೃಷಿ ಪತ್ತಿನ ಸಹಕಾರ ಸಂಘಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಮುಂದಿನ ದಿನಗಳಲ್ಲಿ ಸ್ವಂತ ಕಟ್ಟಡ ನಿರ್ಮಾಣ ಮಾಡಲಾಗುವುದು ಎಂದರು.

ಕೆಂಗೇರಿ ಉಪನಗರದ ರೈಲ್ವೆ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭವಾಗುವುದು. ರೈತರಿಗೆ 30 ಲಕ್ಷ ರೂ. ವರೆಗೆ ಸಾಲ ಸೌಲಭ್ಯ ನೀಡಲು ಚಿಂತನೆ ಮಾಡಲಾಗಿದೆ. ಸಹಕಾರ ಸಂಘಗಳಲ್ಲಿ ಮಹಿಳೆಯರ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಾಲ ಸೌಲಭ್ಯ ನೀಡಲಾಗುವುದು ಎಂದು ತಿಳಿಸಿದರು. ಈ ವೇಳೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಶಿವಮಾದಯ್ಯ, ಕೆಂಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೈಲಸಂದ್ರ ನಾಗರಾಜ್, ಉಪಾಧ್ಯಕ್ಷ ಲೋಹಿತ್, ವಾರ್ಡ್ ಅಧ್ಯಕ್ಷ ಟಿ.ಪ್ರಭಾಕರ್ ಸೇರಿದಂತೆ ಇತರರಿದ್ದರು.



ಕೋರ್ಟ್ ಆದೇಶ: ಯೂಟ್ಯೂಬರ್ ಬಂಧನ

• ಬೆಂಗಳೂರು: ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ ಆರೋಪದ ಮೇಲೆ ಸಂಚಾರಿ ಸ್ಟುಡಿಯೋ ಯೂಟ್ಯೂಬರ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಆತನ ವಿರುದ್ಧ ಬೆಂಗಳೂರು ಪ್ರಿನ್ಸಿಪಲ್ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಬಂಧಿಸುವಂತೆ ವಾರೆಂಟ್ ಜಾರಿ ಮಾಡಿತ್ತು.

ಅರ್ಜಿದಾರರು ಮಾನಹಾನಿ ಪ್ರಕರಣವನ್ನು ದಾಖಲಿಸಿ ಪ್ರತಿವಾದಿಯ ವಿರುದ್ಧ ಬಂಧನ ವಾರಂಟ್ ಜಾರಿ ಮಾಡುವಂತೆ ಮನವಿ ಮಾಡಿದ್ದರು. ಇದನ್ನು ಪುರಸ್ಕರಿಸಿದ ನ್ಯಾಯಾಲಯ ಮಂಗಳೂರು ಪೊಲೀಸ್ ಅಧೀಕ್ಷಕರಿಗೆ ನ್ಯಾಯಾಲಯದ ಅಧಿಕಾರಿಗಳಿಗೆ ಅಗತ್ಯ ಸಹಾಯ ಒದಗಿಸುವಂತೆ ನಿರ್ದೇಶಿಸಲಾಗಿತ್ತು. ಅಲ್ಲದೇ ಬಂಟ್ವಾಳ ಪೊಲೀಸ್ ಠಾಣೆ ಮತ್ತು ಕಡಬ ಪೊಲೀಸ್ ಠಾಣೆಯ ಅಧಿಕಾರಿಗಳಿಗೆ ಪ್ರತಿವಾದಿಯನ್ನು ಪತ್ತೆಹಚ್ಚಿ ನ್ಯಾಯಾಲಯಕ್ಕೆ ಹಾಜರುಪಡಿಸಲು ಸೂಚನೆ ನೀಡಿತ್ತು. ನ್ಯಾಯಾಲಯದ ನಿಂದನೆಗಾಗಿ ಪ್ರತಿವಾದಿಗೆ 30 ದಿನಗಳ ಕಾಲ ಜೈಲು ಶಿಕ್ಷೆ ವಿಧಿಸಲಾಗಿದೆ. ಸಂಚಾರಿ ಸ್ಟುಡಿಯೋನ ಸಂತೋಷ್‌ನನ್ನು ಪೊಲೀಸರು ಬಂಧಿಸಿದ್ದಾರೆ.


ಪ್ರಕರಣದ ಹಿನ್ನೆಲೆ: ಅರ್ಜಿದಾರರು ಸುಳ್ಳು ಸುದ್ದಿ, ಮಾನಹಾನಿ ವಿಷಯಗಳಿಂದ ರಕ್ಷಣೆ ಪಡೆಯಲು ತಾತ್ಕಾಲಿಕ ತಡೆ ಆದೇಶಕ್ಕಾಗಿ ಅರ್ಜಿ ಸಲ್ಲಿಸಿದ್ದರು. 2023ರ ಸೆ.13ರಂದು ನ್ಯಾಯಾಲಯವು ತಾತ್ಕಾಲಿಕ ತಡೆ ಆದೇಶ ನೀಡಿದ್ದು, ಪ್ರತಿವಾದಿ ಅಥವಾ ಯಾರಾದರೂ ಡಾ. ಡಿ.ವೀರೇಂದ್ರ ಹೆಗ್ಗಡೆ, ಸಂಸ್ಥೆ, ಕುಟುಂಬ ಸದಸ್ಯರು ಅಥವಾ ದೇವಸ್ಥಾನದ ವಿರುದ್ಧ ಸುಳ್ಳು ಆರೋಪ ಮಾಡಬಾರದು, ಮಾನಹಾನಿ ವಿಡಿಯೋಗಳನ್ನು ಪ್ರಕಟಿಸಬಾರದು ಅಥವಾ ಹರಡಬಾರದು ಎಂದು ಸ್ಪಷ್ಟವಾಗಿ ಆದೇಶ ನೀಡಿತ್ತು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಹೇಳಿಕೆ

ವೈಜ್ಞಾನಿಕ ಕಸ ವಿಲೇವಾರಿಗೆ ಕಾರ್ಯರೂಪ

• ಬೆಂಗಳೂರ: ನಗರದ ಕಸದ ಸಮಸ್ಯೆಗೆ ಶಾಶ್ವತ ಪರಿಹಾರಕ್ಕಾಗಿ ಎಂಡ್-ಟು-ಎಂಡ್ ವೈಜ್ಞಾನಿಕ ವಿಲೇವಾರಿಗಾಗಿ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಸಧ್ಯದಲ್ಲೆ ಕಾರ್ಯರೂಪಕ್ಕೆ ಬರಲಿದೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಜಿಬಿಎ ಕೇಂದ್ರ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ಕೆ.ಆರ್. ಮಾರುಕಟ್ಟೆ ಸೇರಿದಂತೆ ವಿವಿಧ ಭಾಗಗಳಲ್ಲಿ ಕಸದ ರಾಶಿ ಸಂಗ್ರಹವಾಗುತ್ತಿರುವ ಬಗ್ಗೆ ದೂರು ಬರುತ್ತಿದ್ದು, ಕಸದ ಸಮಸ್ಯೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದೇವೆ. ಈಗಾಗಲೇ ಎಂಡ್-ಟು-ಎಂಡ್ ವೈಜ್ಞಾನಿಕ ವಿಲೇವಾರಿಗಾಗಿ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಶೀಘ್ರದಲ್ಲೇ ಶಾಶ್ವತ ಪರಿಹಾರ ಕಂಡುಕೊಳ್ಳಲಾಗುವುದು. ಪ್ರಸ್ತುತ 7 ಸ್ಥಳಗಳಲ್ಲಿ ಕಸದಿಂದ ಗೊಬ್ಬರ ತಯಾರಿಸುವ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಜನರು ಮನೆಯಲ್ಲೇ ಕಸ ವಿಂಗಡಣೆ ಮಾಡುವ ಮೂಲಕ ಪಾಲಿಕೆಯೊಂದಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.



> **10 ಕೆರೆಗಳಲ್ಲಿ ಬೋಟಿಂಗ್ ವ್ಯವಸ್ಥೆ**
>
> ನಗರದ ಪ್ರವಾಸೋದ್ಯಮ ಮತ್ತು ಪರಿಸರ ಸ್ನೇಹಿ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಬೆಂಗಳೂರಿನ ಹತ್ತು ಪ್ರಮುಖ ಕೆರೆಗಳಲ್ಲಿ ಬೋಟಿಂಗ್ ವ್ಯವಸ್ಥೆಯನ್ನು ಆರಂಭಿಸಲು ಪಾಲಿಕೆ ಉದ್ದೇಶಿಸಿದೆ. ಈ ಬಗ್ಗೆ ಈಗಾಗಲೇ ಅರಣ್ಯ ಇಲಾಖೆ ಹಾಗೂ ಜಂಗಲ್ ಲಾಡ್ಜಸ್ ಅವರೊಂದಿಗೆ ಮಾತುಕತೆ ನಡೆಸಲಾಗುತ್ತಿದೆ. ಕೆರೆ ಅಭಿವೃದ್ಧಿ ಪ್ರಾಧಿಕಾರದ ಅನುಮತಿ ದೊರೆತ ಕೂಡಲೇ ಈ ಯೋಜನೆ ಜಾರಿಗೆ ಬರಲಿದೆ ಎಂದು ಮಹೇಶ್ವರ್ ರಾವ್ ತಿಳಿಸಿದರು.

ಮತದಾರರ ಪಟ್ಟಿಯಲ್ಲಿನ ದೋಷಗಳ ತಿದ್ದುಪಡಿ: ವಾರ್ಡ್‌ಗಳ ಮರುವಿಂಗಡಣೆಯಿಂದಾಗಿ ಸುಮಾರು 2,000 ಪೋಲಿಂಗ್ ಸ್ಟೇಷನ್‌ಗಳ ವ್ಯಾಪ್ತಿಯಲ್ಲಿ ಮತದಾರರ ಸಂಖ್ಯೆಯಲ್ಲಿ ವ್ಯತ್ಯಾಸಗಳಾಗಿವೆ. ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿದ್ದು, ಫೆ.15ರವರೆಗೆ ಸಾರ್ವಜನಿಕರು ತಿದ್ದುಪಡಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ತಪ್ಪು ಮಾಹಿತಿಗಳಿದ್ದರೆ ಅವುಗಳನ್ನು ಸರಿಪಡಿಸಲಾಗುವುದು ಎಂದು ಭರವಸೆ ನೀಡಿದರು.

ಬೀದಿನಾಯಿಗಳ ಸಮಸ್ಯೆ ಪರಿಹಾರ: ಬೀದಿನಾಯಿಗಳ ಹಾವಳಿ ತಡೆಗಟ್ಟಲು ನಗರದ ಹೊರವಲಯದ ದಾಸರಹಳ್ಳಿ, ಯಲಹಂಕ ಸೇರಿದಂತೆ ಐದು ವಿವಿಧ ಕಡೆಗಳಲ್ಲಿ ನಾಯಿಗಳಿಗೆ ಆಶ್ರಯ ತಾಣಗಳನ್ನು ನಿರ್ಮಿಸಲಾಗುತ್ತಿದೆ. ಅನಿಮಲ್ ಬರ್ತ್ ಕಂಟ್ರೋಲ್ ಯೋಜನೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೆ ತರಲಾಗುವುದು. ಅಲ್ಲದೆ, ಪಾಲಿಕೆಯ ಆಸ್ಪತ್ರೆಗಳಲ್ಲಿ ರೇಬೀಸ್ ವಿರೋಧಿ ಲಸಿಕೆಗಳ ಕೊರತೆಯಾಗದಂತೆ ಕ್ರಮ ವಹಿಸಲು ಸೂಚನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಮನರಂಜನೆ ಜತೆಗೆ ಪ್ರೋತ್ಸಾಹ ನೀಡುವ ಕಾರ್ಯಕ್ರಮ

ಸಾಧಕರಿಗೆ ಆರ್‌ಪಿಎಸ್ ಪ್ರೇರಣಾ ಪುರಸ್ಕಾರ

• ಆನೇಕಲ್: ಶಾಲಾ ವಾರ್ಷಿಕೋತ್ಸವ ವಿದ್ಯಾರ್ಥಿಗಳಿಗೆ, ಪೋಷಕರಿಗೆ ಮತ್ತು ಶಾಲಾ ಆಡಳಿತ ಮಂಡಳಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಮನರಂಜನೆ ನೀಡುವುದರ ಜೊತೆಗೆ ಪ್ರೇರಣೆ ಮತ್ತು ಪ್ರೋತ್ಸಾಹ ನೀಡುವ ಸಲುವಾಗಿ ರೈನ್ ಬೋ ಪಬ್ಲಿಕ್ ಶಾಲೆಯ ವಾರ್ಷಿಕೋತ್ಸವ ಆರ್‌ಪಿಎಸ್ ವಿಜಯೋತ್ಸವದಲ್ಲಿ ಪ್ರೇರಣಾ ಪುರಸ್ಕಾರ ಕಾರ್ಯಕ್ರಮವನ್ನು ಫೆ.21ರ ಶನಿವಾರ 3ಗಂಟೆಗೆ ಆಯೋಜಿಸಲಾಗಿದೆ ಎಂದು ರೈನ್ ಬೋ ಪಬ್ಲಿಕ್ ಶಾಲೆಯ ಮುಖ್ಯಸ್ಥರಾದ ವಿಜಯಕುಮಾರ್ ಗೌಡ ತಿಳಿಸಿದರು.

ತಾಲೂಕಿನ ಅತ್ತಿಬೆಲೆ ಮಂಚನಹಳ್ಳಿ ಶಾಲೆಯಲ್ಲಿ ಆಯೋಜನೆ ಮಾಡಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್‌ಪಿಎಸ್ ಪ್ರೇರಣಾ ಪುರಸ್ಕಾರ ಕಾರ್ಯಕ್ರಮದಲ್ಲಿ ಆನೇಕಲ್ ತಾಲೂಕಿನ 100 ಮಂದಿ ಪ್ರಗತಿಪರ ರೈತರು, ತಾಲೂಕಿನ ನಿವೃತ್ತ ಯೋಧರು- ಯುದ್ಧಗಳಲ್ಲಿ ಮೃತರಾದ ಯೋಧರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ವಿಜ್ಞಾನ ತಂತ್ರಜ್ಞಾನ-ಕಲೆ-ಸಾಹಿತ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ತಾಲೂಕಿನ ಸುಪ್ತ ಪ್ರತಿಭೆಗಳು, ಶಿಕ್ಷಣ ಕ್ರಾಂತಿಗೆ ಶ್ರಮಿಸುತ್ತಿರುವ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಮುಖ್ಯಸ್ಥರು, ಅನಾಥಾಶ್ರಮ ಮತ್ತು ವೃದ್ಧಾಶ್ರಮ ನಡೆಸುವವರು ಸೇರಿದಂತೆ ಒಟ್ಟು 250 ಮಂದಿ ಸಾಧಕರಿಗೆ ಮತ್ತು ಪ್ರಗತಿಪರ ರೈತರಿಗೆ ಆರ್‌ಪಿಎಸ್ ಪ್ರೇರಣಾ ಪುರಸ್ಕಾರ ಕಾರ್ಯಕ್ರಮವನ್ನು ರೂಪಿಸಲಾಗಿದೆ ಎಂದರು.

ಆರ್‌ಪಿಎಸ್ ವಿಜಯೋತ್ಸವವನ್ನು ಸಾಮಾಜಿಕ ಕಾರ್ಯಕ್ರಮವಾಗಿ ಮಾಡಬೇಕು ಮತ್ತು ರೈತರು, ಯೋಧರು, ಸಾಧಕರಿಂದ ವಿದ್ಯಾರ್ಥಿಗಳಿಗೆ ಸ್ಫೂರ್ತಿ ದೊರೆಯಬೇಕು ಎಂಬ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಾಗಿದೆ. ಆನೇಕಲ್ ತಾಲೂಕಿನ ಸುಪ್ತ ಪ್ರತಿಭೆಗಳಿಗೆ ವೇದಿಕೆ ನೀಡಲಾಗುತ್ತಿದೆ ಎಂದರು.



> **ವಿಜಯೋತ್ಸವಕ್ಕೆ ತಾರೆಯರ ಮೆರುಗು**
>
> ಆರ್‌ಪಿಎಸ್ ವಿಜಯೋತ್ಸವದಲ್ಲಿ ಸ್ಯಾಂಡಲ್‌ವುಡ್‌ನ 10ಕ್ಕೂ ಹೆಚ್ಚು ನಟ-ನಟಿಯರು ಭಾಗಿಯಾಗಲಿದ್ದಾರೆ. ಸಂಜೆ 4ಗಂಟೆಗೆ ಸ್ಯಾಂಡಲ್‌ವುಡ್‌ನ ನಿಶ್ವಿಕಾ ನಾಯ್ಡು, ಡಾರ್ಲಿಂಗ್ ಕೃಷ್ಣ, ಮಿಲನ ನಾಗರಾಜು, ಮೇಘಾ ಶೆಟ್ಟಿ, ವಸಿಷ್ಠ ಸಿಂಹ, ಹರಿಪ್ರಿಯಾ ಸೇರಿದಂತೆ ವಿವಿಧ ನಟ-ನಟಿಯರು ಭಾಗಿಯಾಗಲಿದ್ದಾರೆ. ಅತ್ತಿಬೆಲೆ ಸುತ್ತಮುತ್ತಲಿನ ಎಲ್ಲಾ ನಾಗರಿಕರು ಆರ್‌ಪಿಎಸ್ ವಿಜಯೋತ್ಸವದಲ್ಲಿ ಭಾಗಿಯಾಗಬೇಕು ಎಂದು ಪತ್ರಿಕಾಗೋಷ್ಠಿಯಲ್ಲಿ ಶಾಲೆಯ ಉಪನ್ಯಾಸಕರಾದ ಮುರಳಿ ಮನವಿ ಮಾಡಿದರು.

ಶಾಸಕ ಪಿ. ರವಿಕುಮಾರ್ ಸ್ಪಷ್ಟನೆ | ಹೈ ಕಮಾಂಡ್ ಮಧ್ಯಪ್ರವೇಶಿಸಿದರೆ ಸುಖಾಂತ್ಯ

ಸರ್ಕಾರವನ್ನು ಬದಲಾಯಿಸಲಾಗದು

• ಮಂಡ್ಯ: ಯಾರದರೂ ಫಾರಿನ್ ಟೂರ್‌ಗೆ ಹೋಗಿರಲಿ, ಯಾರಾದರೂ ಸ್ವಾಸ್ಟರ್ ಮಾಡಿರಲಿ, ಫಾರಿನ್‌ನಲ್ಲಿ ಕೂತ ಮಾತ್ರಕ್ಕೆ ಸಿಎಂ ಹಾಗೂ ಸರ್ಕಾರವನ್ನು ಬದಲಾಯಿಸಲಾಗದು. ಅದೇನಿದ್ದರೂ ಹೈಕಮಾಂಡ್, ಸಿಎಂ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ತೀರ್ಮಾನ ಮಾಡಬೇಕು ಎಂದು ಶಾಸಕ ಪಿ. ರವಿಕುಮಾರ್ ಸ್ಪಷ್ಟಪಡಿಸಿದರು.

ಶಾಸಕರ ವಿದೇಶ ಪ್ರವಾಸಕ್ಕೆ ಸಂಬಂಧಿಸಿದಂತೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 50 ಜನ ಶಾಸಕರನ್ನು ಕರೆದುಕೊಂಡು ಹೋದರೂ ಬದಲಾವಣೆ ಮಾಡುವುದಕ್ಕಾಗಲ್ಲ, ಹೈಕಮಾಂಡ್ ಸೂಕ್ತ ಕಾಲದಲ್ಲಿ ಸೂಕ್ತ ನಿರ್ಧಾರ ಮಾಡುತ್ತದೆ ಎಂದು ಹೇಳಿದರು. ಎಲ್ಲಿಯವರೆಗೆ ಹೈಕಮಾಂಡ್ ಮಧ್ಯ ಪ್ರವೇಶ ಮಾಡಿ ಫುಲ್‌ಸ್ಟಾಪ್ ಇಡುವುದಿಲ್ಲವೋ ಅಲ್ಲಿಯವರೆಗೂ ಇದು ಚರ್ಚೆ ಆಗುತ್ತಲೇ ಇರುತ್ತದೆ. ಇದು ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಿಗೆ ನೋವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು. ಸುಮ್ಮನೆ ಟೈಮ್‌ಪಾಸ್ ರೀತಿ ನಡೆಸಿಕೊಂಡರೆ ಆಗುವುದಿಲ್ಲ. ಏನಾದರೊಂದು ನಿರ್ಧಾರ ಮಾಡಬೇಕು. ದಿನಕ್ಕೆ ಒಬ್ಬೊಬ್ಬರು ಒಂದೊಂದು ರೀತಿ ಹೇಳಿಕೆ ಕೊಡುವುದರಿಂದ ಸರ್ಕಾರಕ್ಕೆ, ಪಕ್ಷಕ್ಕೆ ಹಾನಿಯಾಗುತ್ತಿದೆ. ಹೈಕಮಾಂಡ್ ಕೂಡಲೇ ಮಧ್ಯ ಪ್ರವೇಶ ಮಾಡಬೇಕು ಎಂದು ಒತ್ತಾಯಿಸಿದರು.

ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಮಾಡ್ತೀವಿ ಅಥವಾ ಇಲ್ಲ ಅಂತಾದರೂ ಹೇಳಬೇಕು. ಇಲ್ಲದಿದ್ದರೆ ಇದೇ ರೀತಿ ಟೂರ್, ರೆಸಾರ್ಟ್‌ಗೆ ಹೋಗುತ್ತಿರುತ್ತಾರೆ. ಮಧ್ಯ ಪ್ರವೇಶಿಸದಿದ್ದರೆ ಪಕ್ಷಕ್ಕೆ ಡ್ಯಾಮೇಜ್ ಆಗುತ್ತದೆ. ಇದನ್ನು ಹೈಕಮಾಂಡ್ ಅರ್ಥ ಮಾಡಿಕೊಂಡು ಡ್ಯಾಮೇಜ್ ಕಂಟ್ರೋಲ್ ಮಾಡಬೇಕು ಎಂದರು.



ನಿಯತ್ತು ಅಂದರೆ ಡಿಕೆಶಿ

ನಿಯತ್ತು ಅಂದರೆ ನಾಯಿ, ನಿಯತ್ತು ಅಂದರೆ ಡಿ.ಕೆ. ಶಿವಕುಮಾರ್ ಎಂದು ಸಚಿವ ಎಚ್.ಸಿ. ಮಹದೇವಪ್ಪ ಅವರ ನಾಯಿ ಹೇಳಿಕೆಗೆ ಶಾಸಕ ರವಿಕುಮಾರ್ ತಿರುಗೇಟು ನೀಡಿದರು. ಮಹದೇವಪ್ಪನವರು ಎಲ್ಲಾ ಶಾಸಕರು ನಿಯತ್ತು ಎಂದು ಹೇಳಬಹುದು. ನಿಯತ್ತು ಅಂದರೆ ಅದು ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಪಕ್ಷದ ನಿಯತ್ತು. ಡಿ.ಕೆ.ಶಿವಕುಮಾರ್ ಹೈಕಮಾಂಡಿನ ನಿಯತ್ತಿನ ಸೈನಿಕ. 40 ವರ್ಷದಿಂದ ಹೈಕಮಾಂಡಿಗೆ ನಿಯತ್ತಿಂದ ಇರುವ ಮನುಷ್ಯ ಎಂದರು. 2013ರಲ್ಲಿ 6 ತಿಂಗಳು ಮಂತ್ರಿ ಮಾಡಲಿಲ್ಲ, ಆಗಲೂ ಬೇಜಾರು ಮಾಡಿಕೊಂಡಿಲ್ಲ, ಈಗ ಸಿಎಂ ಆಗಿಲ್ಲ, ಆದರೂ ಬೇಸರ ಮಾಡಿಕೊಳ್ಳಲಿಲ್ಲ, ಡಿ.ಕೆ.ಶಿವಕುಮಾರ್ ಅವರ ಪಕ್ಷದ ನಿಯತ್ತನ್ನು ನೋಡಿ ಮಹದೇವಪ್ಪನವರು ಆ ಮಾತು ಹೇಳಿರಬೇಕು. ಒಂದು ವಾರ ಸಮಯ ಕೊಡಿ ನಾಯಿ, ವ್ಯಂಗ್ಯ ಎಲ್ಲದಕ್ಕೂ ಉತ್ತರ ಸಿಗುತ್ತೆ. ಸಿಎಂ ಸೇರಿದಂತೆ 136 ಶಾಸಕರು ಡಿ.ಕೆ. ಶಿವಕುಮಾರ್ ಅವರ ಆಪ್ತರೆ ಆಗಿದ್ದಾರೆ ಎಂದು ಹೇಳಿದರು.

ಎನ್‌ಡಿಎ ಮೈತ್ರಿ ಪರವಾಗಿದ್ದೇನೆ: ಪ್ರೀತಂ

• ಪಾಂಡವಪುರ: ಜೆಡಿಎಸ್ ನಾಯಕರು ಮುಂದಿನ ಮುಖ್ಯಮಂತ್ರಿ, ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಎಲ್ಲಿಯೂ ಚರ್ಚಿಸುವಾರು. ಆ ವಿಚಾರವಾಗಿ ದಿಲ್ಲಿಯ ನಾಯಕರು ಚರ್ಚಿಸಿ ತೀರ್ಮಾನಿಸಲಿದ್ದಾರೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಮಾಜಿ ಶಾಸಕ ಪ್ರೀತಂಗೌಡ ಹೇಳಿದರು.

ನಾನು ಎನ್‌ಡಿಎ ಮೈತ್ರಿ ಪರವಾಗಿದ್ದೇನೆ. ಮೈತ್ರಿಯ ರೀತಿ ರಿವಾಜುಗಳನ್ನು ತೀರ್ಮಾನಿಸುವುದು ದಿಲ್ಲಿಯ ನಾಯಕರು. ಹೀಗಾಗಿ ಅವರ ಸೂಚನೆಯನ್ನು ಪ್ರೀತಂಗೌಡ ಸೇರಿದಂತೆ ಎಲ್ಲಾ ಮೈತ್ರಿಯ ನಾಯಕರು ಪಾಲನೆ ಮಾಡಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಸಲಹೆ ನೀಡಿದರು.

ಮೈತ್ರಿ ವಿಚಾರವಾಗಿ ಹಾದಿ ಬೀದಿಯಲ್ಲಿ ಚರ್ಚಿಸುವುದು ಬೇಡ. ನಾಲ್ಕು ಗೋಡೆ ಮಧ್ಯೆ ಚರ್ಚಿಸಬೇಕೆಂದು ಸಲಹೆ ಕೊಟ್ಟಿದ್ದಾರೆ. ಆ ಸಲಹೆ ನಿಜಕ್ಕೂ ಸರಿಯಾಗಿದೆ. ಆದ್ದರಿಂದ ನಾನು ಸೈಲೆಂಟ್ ಆಗಿದ್ದೇನೆ ಎಂದರು.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದಾಗ ನಮ್ಮ ಕಾರ್ಯಕರ್ತರಿಗೆ ಸ್ವಲ್ಪ ಗೊಂದಲ ಇತ್ತು. ಹೀಗಾಗಿ ಗೊಂದಲ ಬಗೆಹರಿಸುವ ಕೆಲಸ ಮಾಡಿದ್ದೇವೆ ಅಷ್ಟೆ ಎಂದು ತಿಳಿಸಿದರು.

ಚಿಕ್ಕವರೇ ಆಗಲಿ, ದೊಡ್ಡವರೇ ಆಗಲಿ ರಚನಾತ್ಮಕ ಸಲಹೆಗಳು ಬಂದರೆ ಅದನ್ನು ಎರಡು ಕಡೆಯವರು ಪಾಲನೆ ಮಾಡಬೇಕು. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಎರಡು ಪಕ್ಷದ ಕಾರ್ಯಕರ್ತರೊಂದಿಗೆ ಚರ್ಚಿಸಿ ಮೈತ್ರಿಯ ನಾಯಕರು ತೀರ್ಮಾನಿಸಲಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಅವರ ನೇತೃತ್ವದಲ್ಲಿ 2028ರವರೆಗೂ ಎಲ್ಲಾ ಚುನಾವಣೆಗಳನ್ನು ಎದುರಿಸುತ್ತೇವೆ. 2028ಕ್ಕೂ ವಿಜಯೇಂದ್ರ ಅವರ ನೇತೃತ್ವದಲ್ಲಿ ಹಾಗೂ ಎನ್‌ಡಿಎ ಮೈತ್ರಿಕೂಟದಿಂದ 160ಕ್ಕೂ ಅಧಿಕ ಸ್ಥಾನ ಗೆಲ್ಲಲಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಪಕ್ಷ ನನಗೆ ಸಂಘಟನೆ ಮಾಡುವ ದೊಡ್ಡದಾದ ಜವಾಬ್ದಾರಿ ಕೊಟ್ಟಿದೆ. ಪಕ್ಷ ಬೆಳೆಸುವುದಷ್ಟೇ ನನ್ನ ಧ್ಯೇಯವಾಗಿದೆ. ಈಗಾಗಲೆ ಪಕ್ಷ ಸಂಘಟನೆ ಮಾಡುವ ವಿಚಾರವಾಗಿ ಮಂಡ್ಯದಲ್ಲಿ ಹಲವು ಸಂಘಟನಾತ್ಮಕ ಕಾರ್ಯಕರ್ತರ ಸಭೆ ನಡೆಸಿದ್ದೇವೆ. ಇದೀಗ ಮೈಸೂರು ಜಿಲ್ಲೆಯಲ್ಲಿ ಸಂಘಟನಾತ್ಮಕ ಸಭೆಯನ್ನು ನಡೆಸಿ ಪಕ್ಷ ಸಂಘಟನೆ ಮಾಡುವ ಕೆಲಸ ಮಾಡುತ್ತಿದ್ದೇವೆ. ಎಲ್ಲರ ಜತೆಗೂಡಿ ಪಕ್ಷ ಸಂಘಟನೆ ಮಾಡಲಿದ್ದೇವೆ ಎಂದರು.

ಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್. ಎಸ್. ಇಂದ್ರೇಶ್, ತಾಲೂಕು ಅಧ್ಯಕ್ಷ ಧನಂಜಯ್, ಟೌನ್ ಅಧ್ಯಕ್ಷ ಎನ್. ಸೋಮಶೇಖರ್, ಪುರಸಭೆ ಮಾಜಿ ಉಪಾಧ್ಯಕ್ಷ ಎಲ್.ಅಶೋಕ್, ಮುಖಂಡರಾದ ಬಳಘಟ್ಟ ಅಶೋಕ್, ಕೆ.ಎಲ್.ಆನಂದ್, ನವೀನ್, ಉದಯ್, ಎಚ್.ಡಿ.ಶ್ರೀಧರ್, ಶ್ರೀನಿವಾಸನಾಯಕ, ಚೇರಿ ರಾಮಲಿಂಗಂ ಇದ್ದರು.

ಫಸಲು ಕೊಯ್ದುಕೊಳ್ಳುವ ಹಕ್ಕಿನ ಬಹಿರಂಗ ಹರಾಜು ಪ್ರಕ್ರಿಯೆ

• ಪಾಂಡವಪುರ: ಪಟ್ಟಣದಲ್ಲಿ ಪ್ರತಿ ಗುರುವಾರ ನಡೆಯುವ ಒಂದು ದಿನದ ಸಂತೆಯ ನೆಲ ಸುಂಕ ವಸೂಲಿ ಮಾಡುವ ಹಕ್ಕು, ಪುರಸಭೆ ವ್ಯಾಪ್ತಿಯಲ್ಲಿ ಮಾರಾಟ ಮಾಡುವ ವ್ಯಾಪಾರಸ್ಥರಿಂದ ದಿನವಹಿ ನೆಲ ಸುಂಕ ಹಾಗೂ ಪುರಸಭೆಗೆ ಸೇರಿದ ತೆಂಗಿನಮರದ ಫಸಲು ಕೊಯ್ದುಕೊಳ್ಳುವ ಹಕ್ಕನ್ನು ಬಹಿರಂಗ ಹರಾಜು ಪ್ರಕ್ರಿಯೆ ನಡೆಸುವ ಮೂಲಕ ನೀಡಲಾಯಿತು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಮುಖ್ಯಾಧಿಕಾರಿ ಸತೀಶ್ ಕುಮಾರ್ ನೇತೃತ್ವದಲ್ಲಿ ಶುಕ್ರವಾರ ನಡೆದ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಮೊದಲಿಗೆ ಗುರುವಾರ ಸಂತೆಯ ನೆಲ ಸುಂಕ ವಸೂಲಿಗೆ ಹರಾಜು ನಡೆಯಿತು. ಸರ್ಕಾರಿ ಬಿಡ್ಡು 6.75ಲಕ್ಷ ರೂ.ಗಳಿಂದ ಹರಾಜಿನ ಬಿಡ್ಡು ಕೂಗಲಾಯಿತು. 7.10ಲಕ್ಷ ರೂ.ಗೆ ಶಶಿಕುಮಾರ್ ಬಿನ್ ಲಕ್ಷ್ಮೇಗೌಡ ಹಾರೋಹಳ್ಳಿ ಅವರು ಬಿಡ್ಡು ಕೂಗಿದರು. 13 ಮಂದಿ ಹರಾಜಿನಲ್ಲಿ ಭಾಗಿಯಾಗಿದ್ದರು. 15, 20, 25, 30ರೂ.ಗಳವರೆಗೆ ಸುಂಕ ವಸೂಲಿ ಮಾಡಬೇಕು. ಕಡ್ಡಾಯ ರಶೀತಿ ನೀಡಬೇಕು. ನಿಗದಿಗಿಂತ ಹೆಚ್ಚಿನ ಹಣ ವಸೂಲಿ ಮಾಡಬಾರದು. ಜತೆಗೆ ರೈತರಿಂದ ಯಾವುದೇ ಸುಂಕ ವಸೂಲಿ ಮಾಡಬಾರದು ಎಂದು ನಿರ್ಣಯಿಸಲಾಯಿತು.

ಬಳಿಕ ಪುರಸಭೆ ವ್ಯಾಪ್ತಿಯಲ್ಲಿ ಮಾರಾಟ ಮಾಡುವ ವ್ಯಾಪಾರಸ್ಥರಿಂದ ದಿನವಹಿ ನೆಲ ಸುಂಕ (ಗುರುವಾರ ಹೊರತುಪಡಿಸಿ) ವಸೂಲಿಗೆ ಹರಾಜು ನಡೆಯಿತು. ಸರ್ಕಾರಿ ಬಿಡ್ಡು 7.15ಲಕ್ಷ ರೂ.ಗಳಿಂದ ಬಿಡ್ಡು ಕೂಗಲಾಯಿತು. 12.40 ಲಕ್ಷ ರೂ.ಗೆ ಚಂದ್ರಶೇಖರ್ ಬಿನ್ ಸಿ.ಕೆ.ದೇವೇಗೌಡ



ಪಾಂಡವಪುರ ಅವರು ಬಿಡ್ಡು ಕೂಗಿದರು. ಹರಾಜಿನಲ್ಲಿ 16ಮಂದಿ ಭಾಗಿಯಾಗಿದ್ದರು.

ನಂತರ ಪುರಸಭೆಗೆ ಸೇರಿದ ಕೃಷ್ಣನಗರ ಪಂಪ್‌ಹೌಸ್ ನಲ್ಲಿರುವ 9, ದರಸಗುಪ್ಪೆ ನೀರು ಶುದ್ಧಿಕರಣ ಘಟಕದ 2 ಹಾಗೂ ಪುರಸಭೆ ಕಚೇರಿ ಆವರಣದಲ್ಲಿರುವ3 ತೆಂಗಿನಮರಸೇರಿದಂತೆಒಟ್ಟು 14 ತೆಂಗಿನ ಮರದ ಫಸಲು ಕೊಯ್ದುಕೊಳ್ಳುವ ಹರಾಜು ನಡೆಯಿತು. 18.5 ಸಾವಿರ ರೂ.ಗೆ ಕಿಡ್ ಕಾರ್ಟ್ಸ್‌ನ ಲಲಿತಾ ಅವರಿಗೆ ಬಿಡ್ಡು ದೊರಕಿತು. ಹರಾಜಿನಲ್ಲಿ 2 ಮಂದಿ ಭಾಗಿಯಾಗಿದ್ದರು. ಉಳಿದಂತೆ ಹಳೆ ಬಸ್ ನಿಲ್ದಾಣದ ಖಾಸಗಿ ವಾಹನ ಸುಂಕ ವಸೂಲಿ ಹರಾಜನ್ನು ನವೀಕರಣದ ಹಿನ್ನೆಲೆ ಮುಂದೂಡಲಾಯಿತು. ಇನ್ನೂ ಸಂತೆ ಮೈದಾನದ ಮಾಂಸ ಮಾರುಕಟ್ಟೆಯಲ್ಲಿ ಮಾಂಸ ಕಟಾಯಿಸಿ ಮಾರುವ ಹರಾಜಿಗೆ ಯಾರು ಕೂಡ ಡಿಡಿ ಹಣ ಕಟ್ಟದ ಕಾರಣ ಬಹಿರಂಗ ಹರಾಜು ರದ್ದಾಯಿತು.

ಹರಾಜು ಪ್ರಕ್ರಿಯೆಯಲ್ಲಿ ಪುರಸಭೆ ಮ್ಯಾನೇಜರ್ ಮಂಜುಳಾ, ಸಿಬ್ಬಂದಿ ಮಣಿ ಪ್ರಸಾದ್, ನಾಗೇಶ್, ನರಸಿಂಹ, ಪುರಸಭೆ ಸರ್ಕಾರದ ನಾಮ ನಿರ್ದೇಶನ ಸದಸ್ಯರಾದ ಎಚ್.ಎಲ್.ಮುರಳೀಧರ್, ಹಾರೋಹಳ್ಳಿ ಲಕ್ಷ್ಮೇಗೌಡ ಇತರರಿದ್ದರು.


ರೈತರಿಂದ ತೀವ್ರ ವಿರೋಧ, ಪ್ರತಿಭಟನೆ ಎಚ್ಚರಿಕೆ

• ಚಾಮರಾಜನಗರ: ಹುಲಿ ದಾಳಿಯಿಂದ ಸರಣಿ ಸಾವು ಹಿನ್ನೆಲೆಯಲ್ಲಿ, ಬಂಡಿಪುರ ಹಾಗೂ ನಾಗರಹೊಳೆ ಹುಲಿ ಸುರಕ್ಷಿತ ಪ್ರದೇಶಗಳಲ್ಲಿ ನಿಷೇಧಿಸಲಾಗಿದ್ದ ಸಫಾರಿಯನ್ನು ಹಂತ – ಹಂತವಾಗಿ ಪುನಾರಂಭಿಸಲು ಸರ್ಕಾರ ನಿರ್ಧರಿಸಿದೆ. ಗುರುವಾರದಿಂದಲೇ ಜಾರಿಗೆ ಬರಲಿದ್ದು, ಮೂರು ತಿಂಗಳ ಬಳಿಕ ಮತ್ತೆ ಸಫಾರಿ ಆರಂಭವಾಗಲಿದೆ.

ಕಳೆದ ವರ್ಷ ಬಂಡಿಪುರ ಹಾಗೂ ನಾಗರಹೊಳೆಯ ಕಾಡಂಚಿನ ಪ್ರದೇಶಗಳಲ್ಲಿ ಹುಲಿಗಳ ದಾಳಿಯಿಂದಾಗಿ ಸರಣಿ ಸಾವುಗಳು ಸಂಭವಿಸಿದ್ದವು. ಮಾನವ ಹಾಗೂ ವನ್ಯಜೀವಿ ಸಂಘರ್ಷ ತಪ್ಪಿಸಲು ಕಳೆದ ವರ್ಷ ನ.7ರಂದು ಸಫಾರಿ ಬಂದ್ ಮಾಡಲಾಗಿತ್ತು. ತಜ್ಞರು ಹಾಗೂ ಅಧಿಕಾರಿಗಳ ಒಳಗೊಂಡ ತಾಂತ್ರಿಕ ಸಮಿತಿ ರಚಿಸಲಾಗಿತ್ತು. ಈ ಕುರಿತು ಅಧ್ಯಯನ ನಡೆಸಿ ಮಧ್ಯಂತರ ವರದಿ ನೀಡಿದೆ. ವರದಿ ಕೂಲಂಕಷವಾಗಿ ಚರ್ಚಿಸಿ ಹಂತ–ಹಂತವಾಗಿ ಸಫಾರಿ ಆರಂಭಿಸಲು ನಿರ್ಧರಿಸಲಾಗಿದೆ ಎಂದು ಅರಣ್ಯ ಇಲಾಖೆ ಸಚಿವ ಈಶ್ವರ್ ಖಂಡ್ರೆ, ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ತಾಂತ್ರಿಕ ಸಮಿತಿ ತಂಡವು ಮಧ್ಯಂತರ ವರದಿ ನೀಡಿದೆ. ಸಮಗ್ರ ಅಧ್ಯಯನ ನಡೆಸಿ ಎರಡು ತಿಂಗಳೊಳಗೆ ಅಂತಿಮ ವರದಿ ನೀಡುವ ಸಾಧ್ಯತೆಯಿದೆ. ವರದಿ ಶಿಫಾರಸು ಹಾಗೂ ಸ್ಥಳೀಯರ ಬೇಡಿಕೆ ಹಾಗೂ ಪ್ರವಾಸೋದ್ಯಮ ನಿಟ್ಟಿನಲ್ಲಿ ಸಫಾರಿ ಮರು ಪ್ರಾರಂಭಿಸಲು ತೀರ್ಮಾನಿಸಲಾಗಿದೆ. ಸಫಾರಿಯನ್ನು ಬೆಳಗ್ಗೆ 8ರಿಂದ 5 ಗಂಟೆಗೆ ತಗ್ಗಿಸಲಾಗಿದೆ. ವಾಹನಗಳ ಸಂಖ್ಯೆ ಇಳಿಸಲಾಗಿದೆ. ಹೆಚ್ಚು ಸಫಾರಿಗಾಗಿ ಬಸ್‌ಗಳನ್ನು ಬಳಸುವಂತೆ ಷರತ್ತು ವಿಧಿಸಿ, ನಾಳೆಯಿಂದ ನಿಯಮಿತವಾಗಿ ಹುಲಿ ಸಫಾರಿ ಆರಂಭಿಸುವಂತೆ ಸೂಚಿಸಲಾಗಿದೆ ಎಂದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಒಟ್ಟು ವಿಸ್ತೀರ್ಣ 1,036 ಚದರ ಕಿಲೋ ಮೀಟರ್ ಆಗಿದ್ದು, ಇದರಲ್ಲಿ ಪ್ರವಾಸೋದ್ಯಮ ವಲಯ ಕ್ಷೇತ್ರ, ಶೇ.8 ಅಂದರೆ ಕೇವಲ 80 ಚದರ ಕಿ.ಮೀ ಆಗಿದೆ. ಅದೇ ರೀತಿ ನಾಗರಹೊಳೆಯ ಒಟ್ಟು ವಿಸ್ತೀರ್ಣ 844 ಚದರ ಕಿಲೋ ಮೀಟರ್ ಆಗಿದ್ದು, ಪರಿಸರ ಪ್ರವಾಸೋದ್ಯಮ ವಲಯ ಕೇವಲ 63 ಚದರ ಕಿಲೋ ಮೀಟರ್ ಅಂದರೆ ಶೇ.7.5 ಮಾತ್ರ. ಹೀಗಾಗಿ, ಹುಲಿಗಳು ಕಾಡಿನಿಂದ ನಾಡಿಗೆ ಬರುತ್ತಿರುವುದಕ್ಕೆ ಸಫಾರಿಯೇ ಕಾರಣ ಎಂದು ಹೇಳಲು ಯಾವುದೇ ವೈಜ್ಞಾನಿಕ ಆಧಾರವಿಲ್ಲ ಎಂದು ತಾಂತ್ರಿಕ



ನಾಳೆಯಿಂದ ಬಂಡೀಪುರ, ನಾಗರಹೊಳೆ ಹುಲಿ ಸಫಾರಿ ಪುನಾರಂಭ

ಸಮಿತಿ ಅಭಿಪ್ರಾಯಪಟ್ಟಿದೆ. ಸಫಾರಿ ನಿಷೇಧ ಬಳಿಕ ಮುಂಜಾಗ್ರತಾ ಕ್ರಮವಾಗಿ ಕೈಗೊಂಡಿರುವ ಕ್ರಮ ಆಧರಿಸಿ ಹಂತ–ಹಂತವಾಗಿ ಸಫಾರಿ ಆರಂಭಿಸಬಹುದು ಎಂದು ಇಲಾಖೆಯ ಹಿರಿಯ ಅಧಿಕಾರಿಗಳ ಹೇಳಿದ್ದರು. ಈ ಎಲ್ಲಾ ಅಂಶಗಳನ್ನ ಆಧರಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಚಿವರು ಸಮರ್ಥಿಸಿಕೊಂಡರು.

ಸಫಾರಿ ವಾಹನಗಳಿಗೆ ಜಿಪಿಎಸ್, ಡ್ಯಾಷ್ ಕ್ಯಾಮೆರಾ ಅಳವಡಿಕೆ: ಪ್ರಸ್ತುತ ಪರಿಸರ ಪ್ರವಾಸೋದ್ಯಮ ಅಂದರೆ ಸಫಾರಿಯಿಂದ ಬರುವ ಒಟ್ಟು ಆದಾಯದ ಮೂರನೇ ಒಂದು ಭಾಗದಷ್ಟು ಹಣವನ್ನು ಅರಣ್ಯದಂಚಿನ ಗ್ರಾಮಗಳ ಸ್ಥಳೀಯ ಸಮುದಾಯದವರಿಗೆ ಕೌಶಲ್ಯ ಅಭಿವೃದ್ಧಿಗಾಗಿ, ಜಾನುವಾರುಗಳಿಗೆ ಮೇವು ಬೆಳೆಸಲು ಮತ್ತು ಪರಿಸರ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸುವ ಷರತ್ತಿನೊಂದಿಗೆ ಆರಂಭಿಸಲು ಮತ್ತು ವನ್ಯಜೀವಿ–ಮಾನವ ಸಂಘರ್ಷ ತಡೆಯಲು ಸೂಕ್ತ ಸಿಬ್ಬಂದಿಯನ್ನು ಸೂಕ್ಷ್ಮ ಪ್ರದೇಶಗಳಲ್ಲಿ ನಿಯೋಜಿಸುವ ಷರತ್ತಿನೊಂದಿಗೆ ಆರಂಭಿಸಲು ಸಮ್ಮತಿಸಲಾಗಿದೆ ಎಂದೂ ಖಂಡ್ರೆ, ತಿಳಿಸಿದರು.

ಜೊತೆಗೆ, ಸಫಾರಿ ವಾಹನಗಳನ್ನು ಕತ್ತಲಾದ ಬಳಿಕ ಓಡಿಸುವುದು, ಹೆಚ್ಚುವರಿ ಅವಧಿಗೆ ಓಡಿಸುವುದೇ ಮೊದಲಾದ ದುರ್ಬಳಕೆ ತಡೆಗಟ್ಟಲು ಕಡ್ಡಾಯವಾಗಿ ಮುಂದಿನ 2 ತಿಂಗಳೊಳಗಾಗಿ ಎಲ್ಲ ಸಫಾರಿ ವಾಹನಗಳಿಗೆ ಎಂಜಿನ್ ಸಂಪರ್ಕಿತ ಜಿಪಿಎಸ್ ಮತ್ತು ಡ್ಯಾಶ್ ಕ್ಯಾಮೆರಾ ಅಳವಡಿಸಬೇಕು ಎಂದೂ ಸೂಚಿಸಲಾಗಿದೆ ಎಂದು ಹೇಳಿದರು.

ರೆಸಾರ್ಟ್‌ಗಳ ಒತ್ತಡಕ್ಕೆ ಮಣಿದು ಸಫಾರಿ ಪುನರಾರಂಭ: ಆರೋಪ

ಬಂಡೀಪುರ ಸಫಾರಿ ಪುನಾರಂಭಕ್ಕೆ ರೈತ ಮುಖಂಡರು ತೀವ್ರ ಅಸಮಾಧಾನ ಹೊರಹಾಕಿದ್ದಾರೆ. ಸಾಮೂಹಿಕ ನಾಯಕತ್ವದ ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ರೆಸಾರ್ಟ್‌ಗಳ ಒತ್ತಡಕ್ಕೆ ಮಣಿದು ಸಫಾರಿ ಪುನಾರಂಭ ಮಾಡುತ್ತಿದ್ದಾರೆ. ರೈತರ ಜೀವ ಹಾನಿ, ವನ್ಯಜೀವಿಗಳಿಗೆ ತೊಂದರೆ ಉಂಟಾಗುವ ಸಫಾರಿಯನ್ನು ಮತ್ತೇ ಆರಂಭಿಸುತ್ತಿರುವುದು ಸರಿಯಲ್ಲ ಎಂದಿದ್ದಾರೆ. ಸಫಾರಿ ಪುನಾರಂಭಗೊಳ್ಳಲು ರೈತರು ಬಿಡುವುದಿಲ್ಲ. ಬಂಡೀಪುರ ಸಫಾರಿ ಕೇಂದ್ರಕ್ಕೆ ಗುರುವಾರದಂದೇ ಮುತ್ತಿಗೆ ಹಾಕುತ್ತೇವೆ. ಸಚಿವರು ಚಾಮರಾಜನಗರ ಹಾಗೂ ಮೈಸೂರಿಗೆ ಬಂದರೆ ಘೇರಾವ್ ಹಾಕುತ್ತೇವೆ ಎಂದು ಎಚ್ಚರಿಸಿದ್ದಾರೆ.
ಇರುವ ಹುಲಿಗಳಿಗೇ ಅರಣ್ಯ ಪ್ರದೇಶ ಸಾಲುತ್ತಿಲ್ಲ ಈಗ ಸಫಾರಿಯಿಂದಲೂ ಕಾಡಿಗೆ ನೂರಾರು ಮಂದಿ ಹೋದರೇ ವನ್ಯಜೀವಿ- ಮಾನವ ಸಂಘರ್ಷ ಹೆಚ್ಚಾಗಲಿದೆ ಎಂದು ಕಿಡಿಕಾರಿದ್ದಾರೆ.

ಅಪಹರಣ ಪ್ರಕರಣ ಸುಖಾಂತ್ಯ

• ಬೆಂಗಳೂರು ದಕ್ಷಿಣ/ಆನೇಕಲ್: ಬೆಂಗಳೂರು ದಕ್ಷಿಣ ಕ್ಷೇತ್ರದ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಅಪಹರಣ ಪ್ರಕರಣ ಸುಖಾಂತ್ಯ ಕಂಡಿದ್ದು, ಸಿನಿಮೀಯ ರೀತಿಯಲ್ಲಿ ಅಪಹರಣಕಾರರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಗೊಟ್ಟಿಗೆರೆಯ ಮಂಜುನಾಥ್(28) ಹೊಂಪಲಘಟ್ಟ ನಿವಾಸಿ ಪ್ರಜ್ವಲ್(25) ಹಾಗೂ ಜಿಗಣಿಯ ಅಕ್ಷಯ್(26) ಎಂಬುವವರನ್ನು ಡಿಸಿಪಿ ನಾರಾಯಣ್ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ನವೀನ್ ನೇತೃತ್ವದ ತಂಡ ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಆರೋಪಿ ಮಂಜುನಾಥ್ ಗೊಟ್ಟಿಗೆರೆಯ ಸ್ಕಾಲರಿಸ್ ಅಪಾರ್ಟ್‌ಮೆಂಟ್‌ನಲ್ಲಿ 'ಫೆಸಿಲಿಟಿ ಮ್ಯಾನೇಜರ್' ಆಗಿ ಕೆಲಸ ಮಾಡುತ್ತಿದ್ದು, ಅಪಾರ್ಟ್‌ಮೆಂಟ್‌ನ ಒಂದೂವರೆ ಲಕ್ಷ ರೂಪಾಯಿ ಹಣವನ್ನು ದುರ್ಬಳಕೆ ಮಾಡಿಕೊಂಡು ಆನ್‌ಲೈನ್ ಗೇಮಿಂಗ್‌ನಲ್ಲಿ ಕಳೆದುಕೊಂಡಿದ್ದ. ಅಪಾರ್ಟ್‌ಮೆಂಟ್‌ನ ಹಣವನ್ನು ಹೊಂದಿಸಲು ಸ್ನೇಹಿತರ ಜೊತೆಗೂಡಿ ಸ್ವಾಮೂಲೀಕರ ಬಳಿ ಹಣವಿರುತ್ತದೆ ಎಂಬ ಅಂದಾಜಿನ ಮೇಲೆ ಕಿಡ್ನಾಪ್ ಮಾಡಲು ಸಂಚು ರೂಪಿಸಿದ್ದ. ಮಾರಕಾಸ್ತ್ರದಿಂದ ಆಶೀಶ್ ಕುಮಾರ್ ಹಾಗೂ ಮನು ಕುಮಾರ್ ಕಾಲಿಗೆ ಲಾಂಗ್ ನಿಂದ ಹೊಡೆದು ಹಲ್ಲೆ ಮಾಡಿದ್ದಾರೆ. ಮನು ಕುಮಾರ್ ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋಗಿದ್ದು ಆಶೀಶ್ ಕುಮಾರ್ ನನ್ನು ಆರೋಪಿಗಳು ಕಾರಿನಲ್ಲಿ ಅಪಹರಣ ಮಾಡಿದ್ದಾರೆ.

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಭಾರತ ಎಐ ಇಂಪ್ಯಾಕ್ಟ್ ಶೃಂಗಕ್ಕೆ ಇಂದು ಚಾಲನೆ

ವಿಶ್ವನಾಯಕರಿಗೆ ಪ್ರಧಾನಿ ಮೋದಿ ಆತ್ಮೀಯ ಸ್ವಾಗತ

• ಹೊಸದಿಲ್ಲಿ: ಇಲ್ಲಿನ ಭಾರತ ಮಂಟಪ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯುತ್ತಿರುವ ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಭಾಗಿಯಾಗುತ್ತಿರುವ ವಿಶ್ವನಾಯಕರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಆತ್ಮೀಯ ಸ್ವಾಗತ ಕೋರಿದರು. ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರು, ಈ ಎಐ ಸಮ್ಮೇಳನಕ್ಕೆ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ. ವಿಶ್ವಸಂಸ್ಥೆಯ ಮಹಾಪ್ರಧಾನಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಯ ಮುಖ್ಯಸ್ಥೆ ಕ್ರಿಸ್ಟಾಲಿನಾ ಜಾರ್ಜಿಯೇವಾ ಸೇರಿದಂತೆ ಅನೇಕ ಗಣ್ಯರು ಸಮಾವೇಶಕ್ಕೆ ಆಗಮಿಸಿದ್ದಾರೆ. ಈಗಾಗಲೇ ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ ಭಾರತಕ್ಕೆ ಆಗಮಿಸಿದ್ದಾರೆ. ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ದಿಸನಾಯಕೆ, ಭೂತಾನ್ ಪ್ರಧಾನಿ ಶೆರಿಂಗ್ ಟೋಬ್ಗೇ ಸೇರಿದಂತೆ ಅತಿಥಿಗಳನ್ನು ನಾದಸ್ವರ, ತಬಲಾ ಮತ್ತು ತಾಂಪುರಾದ ಸಾಂಪ್ರದಾಯಿಕ ಸಂಗೀತದ ಮೇಳದಲ್ಲಿ ಮೋದಿ ಆತ್ಮೀಯವಾಗಿ ಸ್ವಾಗತಿಸಿದರು. ಭಾರೀ ಅಲಂಕಾರಗೊಂಡ ವೇದಿಕೆಯಲ್ಲಿ ಸಭೆ ಆರಂಭವಾಯಿತು.

ಮಾರಿಷಸ್ ಪ್ರಧಾನಿ ನವೀನಚಂದ್ರ ರಾಮಗೂಲಾಮ್, ಕ್ರೊಯೇಶಿಯಾ ಪ್ರಧಾನಿ ಆಂದ್ರೇಜ್ ಪ್ಲೆಂಕೋವಿಕ್, ಸರ್ಬಿಯಾ ಅಧ್ಯಕ್ಷ ಅಲೆಕ್ಸಾಂಡರ್ ವುಸಿಕ್, ಸೆಶೆಲ್ಸ್ ಉಪಾಧ್ಯಕ್ಷ ಸೆಬಾಸ್ಟಿಯನ್ ಪಿಲ್ಲೇ, ಎಸ್ಟೋನಿಯಾ ಅಧ್ಯಕ್ಷ ಅಲಾರ್ ಕಾರಿಸ್ ಹಾಗೂ ಫಿನ್ಲೆಂಡ್ ಪ್ರಧಾನಿ ಪೆಟೇರಿ ಓರ್ಪೋ ಅವರಿಗೂ ಮೋದಿ ಸ್ವಾಗತ ಕೋರಿದರು.

ಇದೇ ವೇಳೆ, ಗ್ರೀಸ್ ಪ್ರಧಾನಿ ಕ್ಯಾರಿಯಾಕೋಸ್ ಮಿಟ್ಸೋಟಾಕಿಸ್ ಮತ್ತು ಗಯಾನಾ ಉಪಾಧ್ಯಕ್ಷ ಬರೆದ್ ಜಗ್ದೇವ್ ಕೂಡ ಸಮಾವೇಶದಲ್ಲಿ ಭಾಗಿಯಾಗಿದ್ದಾರೆ.

ಫೆ.16ರಿಂದ 20ರವರೆಗೆ ನಡೆಯುವ ಈ ಶೃಂಗಸಭೆಯಲ್ಲಿ 500ಕ್ಕೂ ಹೆಚ್ಚು ಜಾಗತಿಕ ಎಐ ನಾಯಕರು, 150 ವಿಜ್ಞಾನಿಗಳು, ಸಂಶೋಧಕರು ಮತ್ತು 400ಕ್ಕೂ ಹೆಚ್ಚು ಜಾಗತಿಕ ಕಂಪನಿಗಳ ಅಧಿಕಾರಿಗಳು ಭಾಗವಹಿಸುತ್ತಿದ್ದಾರೆ. ಸುಮಾರು 20 ದೇಶಗಳ ಅಧ್ಯಕ್ಷರು ಮತ್ತು ಪ್ರಧಾನಿಗಳು, 60ಕ್ಕೂ ಹೆಚ್ಚು ಮಂತ್ರಿಗಳು ಮತ್ತು ಸರಕಾರದ 100ಕ್ಕೂ ಹೆಚ್ಚು ಪ್ರತಿನಿಧಿಗಳ ಉಪಸ್ಥಿತಿ ಸಮಾವೇಶಕ್ಕೆ ಅಂತಾರಾಷ್ಟ್ರೀಯ ತೂಕ ನೀಡಿದೆ ಎಂದು ಆಯೋಜಕರು ತಿಳಿಸಿದ್ದಾರೆ.



ಪ್ರಧಾನಿ ಮೋದಿ ಚಾಲನೆ

ಕೃತಕ ಬುದ್ಧಿಮತ್ತೆ(ಎಐ) ಕ್ಷೇತ್ರದಲ್ಲಿ ಭಾರತವನ್ನು ಜಾಗತಿಕ ನಾಯಕನಾಗಿ ಸ್ಥಾಪಿಸುವ ಉದ್ದೇಶದೊಂದಿಗೆ ಆಯೋಜಿಸಲಾಗುತ್ತಿರುವ ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆ 2026ಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಚಾಲನೆ ನೀಡಲಿದ್ದಾರೆ. ಪ್ರಧಾನಿ ಕಚೇರಿ ಬುಧವಾರ ಬಿಡುಗಡೆ ಮಾಡಿದ ಅಧಿಕೃತ ಪ್ರಕಟಣೆಯ ಪ್ರಕಾರ, ಶೃಂಗಸಭೆ ವೇದಿಕೆಯಲ್ಲಿ ಭಾಗವಹಿಸುವ ದೇಶಗಳ ನಾಯಕರಿಗೆ ಪ್ರಧಾನಿ ಮೋದಿ ಸ್ವಾಗತ ಕೋರಲಿದ್ದಾರೆ. ಕಾರ್ಯಕ್ರಮಗಳು ಭಾರತ ಮಂಟಪದಲ್ಲಿ ನಡೆಯಲಿವೆ. ಉದ್ಘಾಟನಾ ಸಮಾರಂಭದಲ್ಲಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್, ವಿಶ್ವಸಂಸ್ಥೆ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಹಾಗೂ ಜಾಗತಿಕ ಉದ್ಯಮ ಕ್ಷೇತ್ರದ ಪ್ರಮುಖ ನಾಯಕರು ಭಾಷಣ ಮಾಡಲಿದ್ದಾರೆ. ಬಳಿಕ, ವಿವಿಧ ದೇಶಗಳ ಪೆವಿಲಿಯನ್‌ಗಳನ್ನು ಒಳಗೊಂಡ ಭಾರತ ಎಐ ಇಂಪ್ಯಾಕ್ಟ್ ಎಕ್ಸ್‌ಪೋ 2026ಗೆ ನಾಯಕರು ಭೇಟಿ ನೀಡಲಿದ್ದಾರೆ.

- ಮಾ.31ರೊಳಗೆ ಪೂರ್ಣಗೊಳ್ಳಲಿದೆ ಶಾಹ್ಪುರ್ ಕಂಡಿ ಅಣೆಕಟ್ಟು
- ಪಾಕಿಸ್ತಾನಕ್ಕೆ ಹರಿಯುವ ಹೆಚ್ಚುವರಿ ರಾವಿ ನೀರು ನಿಲ್ಲುವ ಸಾಧ್ಯತೆ
- ಯೋಜನೆಯ ವೆಚ್ಚ: 3,394.49 ಕೋಟಿ ರೂ.
- 206 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ
- ಸುಮಾರು 92,000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ

ಹೆಚ್ಚುತ್ತಿರುವ ಉದ್ವಿಗ್ನತೆ

26 ಜನರ ಸಾವಿಗೆ ಕಾರಣವಾದ ಪಹಲ್ಗಾಮ್ ದಾಳಿಯ ನಂತರ 1960ರಲ್ಲಿ ಸಹಿ ಹಾಕಲಾದ ಸಿಂಧೂ ಜಲ ಒಪ್ಪಂದವನ್ನು ಭಾರತ ಅಮಾನತುಗೊಳಿಸಿತ್ತು. ಆ ಒಪ್ಪಂದ, ಸಿಂಧೂ, ಝೇಲಂ ಮತ್ತು ಚೆನಾಬ್ ನದಿಗಳ ನೀರಿನ ಹಕ್ಕನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಟ್ಟಿತ್ತು. ಆದರೆ ಭಾರತ, ರಾವಿ, ಬಿಯಾಸ್ ಮತ್ತು ಸಟ್ಲೆಜ್ ನದಿಗಳ ಮೇಲಿನ ಹಕ್ಕನ್ನು ಉಳಿಸಿಕೊಂಡಿತ್ತು. ಅದರ ತನ್ನ ಜಿಡಿಪಿಯ ಕಾಲು ಭಾಗದಷ್ಟು ಕೊಡುಗೆ ನೀಡುವ ಕೃಷಿಗೆ ಪಾಕಿಸ್ತಾನ ಸಿಂಧೂ ನದಿ ವ್ಯವಸ್ಥೆಯನ್ನು ಹೆಚ್ಚು ಅವಲಂಬಿಸಿದೆ. ಇಸ್ಲಾಮಾಬಾದ್, ಭಾರತದ ಕ್ರಮಗಳನ್ನು ಜಲ ಯುದ್ಧ ಎಂದು ಕರೆದಿದೆ ಮತ್ತು ವಿಶ್ವಸಂಸ್ಥೆ ಸೇರಿದಂತೆ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಈ ವಿಷಯವನ್ನು ಎತ್ತಿದೆ. ನೀರಿನ ಶಸ್ತ್ರೀಕರಣವನ್ನು ಆರೋಪಿಸಿ ಅದು ಹೇಗ್ ನಲ್ಲಿರುವ ಮಧ್ಯಸ್ಥಿಕೆ ನ್ಯಾಯಾಲಯವನ್ನೂ ಸಂಪರ್ಕಿಸಿದೆ. ಆದರೆ, ಈ ಹೇಳಿಕೆಯನ್ನು ಭಾರತ ತಿರಸ್ಕರಿಸಿದೆ. ಭಾರತ ತಾನು ಪೂರ್ವದ ನದಿಗಳ ಮೇಲೆ ತನ್ನ ಹಕ್ಕಿನೊಳಗೆ ಕಾರ್ಯನಿರ್ವಹಿಸುತ್ತಿರುವುದಾಗಿ ಪ್ರತಿಪಾದಿಸಿದೆ. ಅಲ್ಲದೆ, ರಾಷ್ಟ್ರೀಯ ಭದ್ರತೆಯ ಕಾಳಜಿಯನ್ನು ನಿರ್ಲಕ್ಷಿಸಲಾಗುವುದಿಲ್ಲ ಎಂದು ಕಟ್ಟುನಿಟ್ಟಾಗಿ ಹೇಳಿದೆ.

ಸಿಂಧೂ ನದಿ ನಂತರ ಭಾರತದಿಂದ ರಾವಿ ಹರಿವಿಗೆ ಕಡಿವಾಣ?

ಪಾಕ್‌ಗೆ 2ನೇ ಜಲ ಪೆಟ್ಟು!



ವಿಳಂಬವಾಗಿದ್ದ ಶಾಹ್ಪುರ್ ಕಂಡಿ ಅಣೆಕಟ್ಟು ಪೂರ್ಣಗೊಳ್ಳುವ ಹಂತದಲ್ಲಿರುವುದರಿಂದ ರಾವಿ ನದಿಯಿಂದ ಪಾಕಿಸ್ತಾನಕ್ಕೆ ಹರಿದು ಹೋಗುತ್ತಿರುವ ಹೆಚ್ಚುವರಿ ನೀರನ್ನು ತಡೆಯಲು ಭಾರತ ಸಜ್ಜಾಗಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಹೊಸದಿಲ್ಲಿ ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಿದ ಕೆಲವು ತಿಂಗಳ ನಂತರ ಈ ಕ್ರಮಕ್ಕೆ ಮುಂದಾಗಿದೆ. ಇದು ಜಲ ಹಂಚಿಕೆಯ ವಿಷಯದಲ್ಲಿ ಉದ್ವಿಗ್ನತೆ ಹೆಚ್ಚಿಸಿದೆ. ಬೇಸಿಗೆ ಸಮೀಪಿಸುತ್ತಿರುವುದರಿಂದ ಮತ್ತು ನೀರಿನ ಮಟ್ಟ ಈಗಾಗಲೇ ಕಡಿಮೆಯಾಗಿರುವುದರಿಂದ ಈ ನಿರ್ಧಾರ ಪಾಕಿಸ್ತಾನದಲ್ಲಿ, ವಿಶೇಷವಾಗಿ ಈಗಾಗಲೇ ನೀರಿನ ಅಭಾವ ಎದುರಿಸುತ್ತಿರುವ ಪಂಜಾಬ್ ಪ್ರಾಂತ್ಯಕ್ಕೆ ಎಚ್ಚರಿಕೆಯಾಗಿದೆ. ಅಂತೆಯೇ ಭಯೋತ್ಪಾದಕರನ್ನು ಪೋಷಿಸುತ್ತಿರುವ ಪಾಕ್‌ಗೆ ಭಾರತದ ಜಲ ಪಾಠವಾಗಿದೆ.

ಶಾಹ್ಪುರ್ ಕಂಡಿ ಅಣೆಕಟ್ಟು

ಪಂಜಾಬ್-ಜಮ್ಮು ಮತ್ತು ಕಾಶ್ಮೀರ ಗಡಿಯ ಉದ್ದಕ್ಕೂ ರಾವಿ ನದಿಯ ಮೇಲೆ ಕಟ್ಟಲಾಗಿರುವ ಶಾಹ್ಪುರ್ ಕಂಡಿ ಅಣೆಕಟ್ಟು ಮಾರ್ಚ್ 31ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಈ ಯೋಜನೆಯನ್ನು ಮೊದಲು 1979ರಲ್ಲಿ ವಿನ್ಯಾಸಪಡಿಸಿ, 1982ರಲ್ಲಿ ಉದ್ಘಾಟಿಸಲಾಯಿತು. 2008ರಲ್ಲಿ ರಾಷ್ಟ್ರೀಯ ಯೋಜನೆಯಾಗಿ ಘೋಷಿಸುವ ಮೊದಲು, ಪಂಜಾಬ್ ಮತ್ತು ಜಮ್ಮು ಕಾಶ್ಮೀರದ ನಡುವಿನ ವಿವಾದಗಳಿಂದಾಗಿ ಈ ಯೋಜನೆ ದಶಕಗಳ ವಿಳಂಬ ಎದುರಿಸಿತು. 3,394.49 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ 55.5 ಮೀಟರ್ ಎತ್ತರದ ಅಣೆಕಟ್ಟು, 7.7 ಕಿಮೀ ಜಲವಿದ್ಯುತ್ ಚಾನಲ್ ಹೊಂದಿದೆ. ಉಳಿದ ವೆಚ್ಚವನ್ನು ಪಂಜಾಬ್ ಭರಿಸಿದೆ. ಜಮ್ಮು ಮತ್ತು ಕಾಶ್ಮೀರದ ಸಚಿವ ಜಾವೇದ್ ಅಹ್ಮದ್ ರಾಣಾ, ಈ ಯೋಜನೆ ರಾವಿ ನದಿಯಿಂದ ಹೆಚ್ಚುವರಿ ನೀರು ಇನ್ನು ಮುಂದೆ ಪಾಕಿಸ್ತಾನಕ್ಕೆ ಹರಿಯುವುದಿಲ್ಲ ಎಂಬುದನ್ನು ಖಾತ್ರಿಪಡಿಸುತ್ತದೆ ಎಂದು ಹೇಳಿದ್ದಾರೆ.

ಪಾಕಿಸ್ತಾನಕ್ಕೆ ನೀರು ಪೂರೈಕೆ ಸ್ಥಗಿತ?


ದಶಕಗಳಿಂದ ರಾವಿ ನದಿಯ ಹೆಚ್ಚುವರಿ ನೀರು ಮಾಧೋಪುರದ ಮೂಲಕ ಪಾಕಿಸ್ತಾನಕ್ಕೆ ಹರಿಯುತ್ತಿತ್ತು. ಅಣೆಕಟ್ಟು ಆ ನೀರನ್ನು ಗೃಹ ಬಳಕೆಗಾಗಿ ತಡೆಹಿಡಿಯುವುದರಿಂದ, ಕೆಳಮುಖದ ಹರಿವು ತೀವ್ರವಾಗಿ ಕಡಿಮೆಯಾಗುವ ಸಾಧ್ಯತೆಯಿದೆ.

ಭಾರತಕ್ಕೆ ಏನು ಪ್ರಯೋಜನ?

ಬರಪೀಡಿತ ಕಥುವಾ ಮತ್ತು ಸಾಂಬಾ ಜಿಲ್ಲೆಗಳಿಗೆ ಈ ಅಣೆಕಟ್ಟು ನಿರ್ಣಾಯಕವಾಗಿದೆ ಎನ್ನಲಾಗುತ್ತಿದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದ ನಂತರ, ಹೆಚ್ಚುವರಿ 91,856 ಎಕರೆ ಕೃಷಿ ಭೂಮಿಗೆ ನೀರಾವರಿ ಒದಗಿಸುವ ನಿರೀಕ್ಷೆಯಿದ್ದು, ಇದು ಪಂಜಾಬ್ ಮತ್ತು ಜಮ್ಮು ಮತ್ತು ಕಾಶ್ಮೀರಕ್ಕೆ ಪ್ರಯೋಜನ ನೀಡಲಿದೆ. ಇದು 206 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಿದೆ ಮತ್ತು ಈ ಪ್ರದೇಶದಲ್ಲಿ ಪ್ರವಾಸೋದ್ಯಮ ಮತ್ತು ಜಲ ಕ್ರೀಡೆಗಳನ್ನು ಉತ್ತೇಜಿಸುವ ನಿರೀಕ್ಷೆಯಿದೆ.

ಲಾಹೋರ್‌ಗೆ ಹೊಡೆತ

ಪಾಕಿಸ್ತಾನದ ಎರಡನೇ ಅತಿದೊಡ್ಡ ನಗರ ಲಾಹೋರ್ ಅಂತರ್ಜಲ ಮರುಪೂರಣಕ್ಕಾಗಿ ರಾವಿ ನದಿಯನ್ನು ಹೆಚ್ಚು ಅವಲಂಬಿಸಿದೆ. ನದಿಯ ಹರಿವಿನ ನಿರಂತರ ಕಡಿತ ನಗರದಲ್ಲಿ ನೀರಿನ ಕೊರತೆಯನ್ನು ಇನ್ನಷ್ಟು ಹೆಚ್ಚಿಸಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ. ಕೆಲವು ವಿಶ್ಲೇಷಕರು ಸಂಭಾವ್ಯ ಸನ್ನಿವೇಶವನ್ನು ಕೇಪ್ ಟೌನ್‌ನ ತೀವ್ರ ನೀರಿನ ಬಿಕ್ಕಟ್ಟಿಗೆ ಹೋಲಿಸಿದ್ದಾರೆ. ಅಲ್ಲಿ, ನಿವಾಸಿಗಳು ಕುಡಿಯುವ ನೀರಿಗಾಗಿ ಕಟ್ಟುನಿಟ್ಟಾದ ಪಡಿತರ ವ್ಯವಸ್ಥೆಗೆ ಅನುಗುಣವಾಗಿ ಸರತಿಯಲ್ಲಿ ಕಾಯಬೇಕಾದ ಪರಿಸ್ಥಿತಿ ಇದೆ. ನದಿಯ ಮಟ್ಟ ಮತ್ತಷ್ಟು ಕುಸಿದರೆ ಲಾಹೋರ್‌ನಲ್ಲಿ ರಾವಿ ನದಿಯ ಉದ್ದಕ್ಕೂ ಕೈಗೊಂಡಿರುವ ನಗರ ಅಭಿವೃದ್ಧಿ ಯೋಜನೆಗಳು ಹಿನ್ನಡೆ ಎದುರಿಸಬಹುದು. ಪಾಕಿಸ್ತಾನವು ಈಗಾಗಲೇ ಕುಸಿಯುತ್ತಿರುವ ಮಳೆ ಮತ್ತು ಹೆಚ್ಚುತ್ತಿರುವ ತಾಪಮಾನವನ್ನು ಎದುರಿಸುತ್ತಿರುವ ಸಮಯದಲ್ಲಿ ಈ ಕ್ರಮ ನುಂಗಲಾರದ ತುತ್ತಾಗಿದೆ.



ಗಲ್ಗೋಟಿಯಾಸ್ ಮಳಿಗೆ ತೆರವು

• ಹೊಸದಿಲ್ಲಿ: ರೋಬಾಟಿಕ್ ನಾಯಿಯೊಂದನ್ನು ವಿಶ್ವವಿದ್ಯಾನಿಲಯದ ಸ್ವಂತ ಆವಿಷ್ಕಾರ ಎಂದು ತಪ್ಪಾಗಿ ಹೇಳಿಕೊಳ್ಳಲಾಗಿದೆ ಎಂದು ಆರೋಪಿಸಿ, ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಗಲ್ಗೋಟಿಯಾಸ್ ವಿಶ್ವವಿದ್ಯಾಲಯದ ಮಳಿಗೆಯನ್ನು ತೆರವುಗೊಳಿಸಲಾಗಿದೆ. ವಿವಿಯ ಬೋಧಕವರ್ಗದ ಸದಸ್ಯೆ ನೇಹಾ ಸಿಂಗ್ ಡಿಡಿ ನ್ಯೂಸ್‌ಗೆ ನೀಡಿದ ವಿಡಿಯೋ ಸಂದರ್ಶನದಲ್ಲಿ, ಓರಿಯನ್ ಎಂಬ ರೋಬೋಟಿಕ್ ನಾಯಿಯನ್ನು ವಿಶ್ವವಿದ್ಯಾಲಯದ ಸೆಂಟರ್ ಆಫ್ ಎಕ್ಸಲೆನ್ಸ್ ಅಭಿವೃದ್ಧಿಪಡಿಸಿದೆ ಎಂಬಂತೆ ಮಾತನಾಡಿದ್ದರು. ವಿಡಿಯೋ ವೈರಲ್ ಆಗುತ್ತಿದ್ದಂತೆ, ಸಾಮಾಜಿಕ ಮಾಧ್ಯಮ ಬಳಕೆದಾರರು ರೋಬೋಟ್ ವಾಸ್ತವವಾಗಿ ''ಯೂನಿಟ್ರೀ ಗೋ 2'' ಆಗಿದ್ದು, ಅದನ್ನು ಚೀನಾ ಮೂಲದ ಯೂನಿಟ್ರೀ ರೋಬೋಟಿಕ್ಸ್ ತಯಾರಿಸಿದೆ. ಸಂಶೋಧನೆ ಮತ್ತು ಶಿಕ್ಷಣದಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಬಳಿಕ ಸಂಘಟಕರು ವಿಶ್ವವಿದ್ಯಾನಿಲಯದ ಮಳಿಗೆಯನ್ನು ಖಾಲಿ ಮಾಡುವಂತೆ ಕೇಳಿಕೊಂಡಿದ್ದಾರೆ. ಸ್ವತಃ ಅಭಿವೃದ್ಧಿಪಡಿಸದ ಉತ್ಪನ್ನಗಳ ಪ್ರದರ್ಶನ ಮುಂದುವರಿಸಲು ಅನುಮತಿಯಿಲ್ಲ ಎಂದು ಐಟಿ ಕಾರ್ಯದರ್ಶಿ ಎಸ್. ಕೃಷ್ಣನ್ ಹೇಳಿದ್ದಾರೆ.

ಕ್ಷಮೆ ಕೋರಿದ ವಿಶ್ವವಿದ್ಯಾಲಯ: ನಂತರ ಕ್ಷಮೆಯಾಚಿಸಿದ ವಿಶ್ವವಿದ್ಯಾನಿಲಯ, ಪೆವಿಲಿಯನ್ ನಿರ್ವಹಿಸುವ ವ್ಯಕ್ತಿಗೆ ತಪ್ಪು ಮಾಹಿತಿ ನೀಡಲಾಗಿತ್ತು ಮತ್ತು ಅನುಮತಿಯಿಲ್ಲದೆ ಆ ರೀತಿ ಮಾಡಲಾಗಿತ್ತು ಎಂದು ಹೇಳಿದೆ. ಉತ್ಪನ್ನವನ್ನು ತಪ್ಪಾಗಿ ನಿರೂಪಿಸುವ ಯಾವುದೇ ಉದ್ದೇಶವಿರಲಿಲ್ಲ ಎಂದು ಹೇಳಲಾಗಿದೆ. ಜಾಗತಿಕವಾಗಿ ಲಭ್ಯವಿರುವ ವೇದಿಕೆಗಳನ್ನು ಬಳಸಿಕೊಂಡು ಎಐ ಪ್ರೋಗ್ರಾಮಿಂಗ್ ಮತ್ತು ಕೌಶಲ್ಯ ಅಭಿವೃದ್ಧಿಯ ಸಾಧನವಾಗಿ ರೋಬೋಟ್ ಅನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲಾಗಿದೆ. ಶೈಕ್ಷಣಿಕ ಸಮಗ್ರತೆ ಮತ್ತು ಪಾರದರ್ಶಕತೆ ಕೇಂದ್ರಬಿಂದುವಾಗಿದೆ ಎಂದು ಹೇಳಿಕೊಂಡಿದೆ. ಹೆಚ್ಚುವರಿ ಕಾರ್ಯದರ್ಶಿ ಅಭಿಷೇಕ್ ಸಿಂಗ್, ನಾವೀನ್ಯತೆಯ ಹೆಸರಲ್ಲಿ ದಾರಿತಪ್ಪಿಸಬಾರದು ಎಂದು ಹೇಳಿದ್ದಾರೆ. ಬುಧವಾರ ಮಳಿಗೆಯಲ್ಲಿ ಯಾವುದೇ ಪ್ರದರ್ಶನ ಕಂಡುಬಂದಿಲ್ಲ.

ಕಿರುಸುದ್ದಿ

3 ಚೀತಾ ಮರಿಗಳಿಗೆ ಜನ್ಮ ನೀಡಿದ ಗಾಮಿನಿ

• ಹೊಸದಿಲ್ಲಿ: ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ಉದ್ಯಾನವನದಲ್ಲಿ ಮೂರು ಚೀತಾ ಮರಿಗಳ ಜನನವಾಗಿದೆ. ಈ ಮೂಲಕ ದೇಶದಲ್ಲಿರುವ ಚೀತಾಗಳ ಒಟ್ಟು ಸಂಖ್ಯೆ 38ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಹೇಳಿದ್ದಾರೆ. ದಕ್ಷಿಣಾ ಆಫ್ರಿಕಾದಿಂದ ಭಾರತಕ್ಕೆ ತರಲಾದ ಚೀತಾ ಗಾಮಿನಿ ಈ ಮೂರು ಮರಿಗಳಿಗೆ ಜನ್ಮ ನೀಡಿದೆ.

ಪೂಜಾ ಸ್ಥಳಗಳ ಕಾಯ್ದೆ: ವಿಚಾರಣೆಗೆ ಸುಪ್ರೀಂ ಅಸ್ತು

• ಹೊಸದಿಲ್ಲಿ: ನಿರ್ದಿಷ್ಟ ದೇವಾಲಯಗಳು 1947ರ ಆ.15ರಂದು ಹೊಂದಿದ್ದ ಸ್ವರೂಪವನ್ನು ಬದಲಿಸಬೇಕೆಂದು ಕೋರುವ ಮತ್ತು ಅನ್ಯರ ಹಿಡಿತದಲ್ಲಿರುವ ಆರಾಧನಾ ಕೇಂದ್ರಗಳ ಮರುಸ್ವಾಧೀನಕ್ಕೆ ಆಗ್ರಹಿಸುವ ಮೊಕದ್ದಮೆಗಳನ್ನು ನಿಷೇಧಿಸಿರುವ 1991ರ ಕಾಯ್ದೆಯ ನಿರ್ದಿಷ್ಟ ನಿಯಮಾವಳಿಗಳ ಸಿಂಧುತ್ವ ಪ್ರಶ್ನಿಸಿ, ಸಲ್ಲಿಕೆಯಾಗಿರುವ ಅರ್ಜಿಗಳ ಅಂತಿಮ ವಿಚಾರಣೆಗೆ ಸರ್ವೋಚ್ಚ ನ್ಯಾಯಾಲಯ ಸಮ್ಮತಿಸಿದೆ. ಈ ವಿಚಾರದಲ್ಲಿ ಅಂತಿಮ ವಿಚಾರಣೆಗೆ ನಾವು ದಿನ ನಿಗದಿಪಡಿಸುತ್ತೇವೆಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೋಮಲ್ಯ ಬಾಗ್ಚಿ, ವಿಪುಲ್ ಎಂ.ಪಾಂಚೋಲಿ ಅವರನ್ನು ಒಳಗೊಂಡ ನ್ಯಾಯಪೀಠ ಹೇಳಿದೆ. 9 ನ್ಯಾಯಾಧೀಶರನ್ನು ಒಳಗೊಂಡ ವಿಸ್ತೃತ ನ್ಯಾಯಪೀಠದ ವಿಚಾರಣೆಗೆ ನಿರ್ದಿಷ್ಟ ವಿಚಾರಗಳು ಈಗಾಗಲೆ ಮಾರ್ಚ್, ಏಪ್ರಿಲ್‌ಗೆ ನಿಗದಿಯಾಗಿದೆ. ಇದಾದ ನಂತರ 1991ರ ಕಾಯ್ದೆಯ ನಿರ್ದಿಷ್ಟ ನಿಯಮಗಳ ಕುರಿತು ಅಂತಿಮ ವಿಚಾರಣಾ ದಿನಾಂಕ ನಿಗದಿಪಡಿಸಲಾಗುವುದು ಎಂದು ನ್ಯಾಯಪೀಠ ಪ್ರಕಟಿಸಿದೆ.

ಮನುಕುಲಕ್ಕೆ ಸೇವೆ ಸಲ್ಲಿಸುತ್ತಿರುವ ಇಸ್ಕಾನ್

• ನಾದಿಯಾ: ವಿಶ್ವದಾದ್ಯಂತ ಸನಾತನ ಧರ್ಮದ ಧ್ವಜವನ್ನು ಹೊತ್ತೊಯ್ಯುವಲ್ಲಿ ಇಸ್ಕಾನ್ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಹೇಳಿದ್ದಾರೆ. ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯ ಮಾಯಾಪುರದಲ್ಲಿರುವ ಇಸ್ಕಾನ್ ದೇವಾಲಯದಲ್ಲಿ ಭಕ್ತಿಸಿದ್ಧಾಂತ ಸರಸ್ವತಿ ಠಾಕೂರ್ ಅವರ 152ನೇ ಜನ್ಮ ವಾರ್ಷಿಕೋತ್ಸವದ ಆಚರಣೆಯ ಸಂದರ್ಭದಲ್ಲಿ ಭಕ್ತರನ್ನುದ್ದೇಶಿಸಿ ಮಾತನಾಡಿದ ಶಾ, ತಾವು ಆಧ್ಯಾತ್ಮಿಕೇಂದ್ರಕ್ಕೆ ತಮ್ಮ ಅಧಿಕೃತ ಸಾಮರ್ಥ್ಯದಲ್ಲಿ ಬರಲಿಲ್ಲ, ಬದಲಿಗೆ ಚೈತನ್ಯ ಮಹಾಪ್ರಭುವಿನ ಭಕ್ತನಾಗಿ ಬಂದಿದ್ದೇನೆ ಎಂದು ಹೇಳಿದ್ದಾರೆ. ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಪರಿಹಾರ ಕಾರ್ಯಾಚರಣೆಗಳು ಮತ್ತು ಸಾಮಾಜಿಕ ಕಲ್ಯಾಣ ಯೋಜನೆಗಳ ಮೂಲಕ ಮನುಕುಲಕ್ಕೆ ಇಸ್ಕಾನ್ ಸೇವೆ ಸಲ್ಲಿಸುತ್ತಿದೆ ಎಂದಿದ್ದಾರೆ.

ದೇಶದ ಪ್ರತಿಷ್ಠೆ ಹಾಳು ಮಾಡಲು ರಾಗಾ ಯತ್ನ

• ಹೊಸದಿಲ್ಲಿ: ದಿಲ್ಲಿಯಲ್ಲಿ ನಡೆಯುತ್ತಿರುವ ಎಐ ಶೃಂಗಸಭೆ ಕುರಿತಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾಡಿದ ಟೀಕೆಗೆ ಪ್ರತಿಕ್ರಿಯಿಸಿರುವ ಬಿಜೆಪಿ, ಸಾಕಷ್ಟು ತಿಳುವಳಿಕೆ ಇಲ್ಲದ ಯಾರಾದರೂ ಕೃತಕ ಬುದ್ಧಿಮತ್ತೆಯಂತಹ ವಿಷಯಗಳ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ''ಸಿದ್ಧ'' ಕಾಮೆಂಟ್‌ಗಳನ್ನು ಪೋಸ್ಟ್ ಮಾಡಬಾರದು ಎಂದು ಕುಟುಕಿದೆ. ಇದು ಅತ್ಯಂತ ದುಃಖಕರವಾದ ವಿಷಯ. ರಾಹುಲ್ ಗಾಂಧಿಗೆ ಒಂದು ಗುರಿ ಇದೆ. ಅದೆಂದರೆ ಭಾರತವು ವಿಶ್ವ ವೇದಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದಾಗ ಮತ್ತು ಭಾರತದ ಪ್ರಯತ್ನಗಳು ಶ್ಲಾಘನೆಗೊಳಗಾದಾಗಲೆಲ್ಲ, ರಾಹುಲ್ ಗಾಂಧಿ ಭಾರತದ ಪ್ರತಿಷ್ಠೆಯನ್ನು ಹಾಳು ಮಾಡಲು ಪ್ರಯತ್ನಿಸುತ್ತಾರೆ ಎಂದು ಬಿಜೆಪಿಯ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ತೀವ್ರ ತರಾಟೆಗೆತ್ತಿಕೊಂಡರು. ಮತ ಎಐ ಶೃಂಗಸಭೆಯನ್ನು ''ಅಸ್ತವ್ಯಸ್ತವಾದ ಪಿಆರ್ ಪ್ರದರ್ಶನ'' ಎಂದು ರಾಹುಲ್ ಗಾಂಧಿ ಕುಹಕವಾಡಿದ್ದರಲ್ಲದೆ ಅಲ್ಲಿ ಚೀನೀ ಉತ್ಪನ್ನಗಳನ್ನು ಪ್ರದರ್ಶಿಸಲಾಗುತ್ತಿದೆ ಎಂದೂ ಗಾಂಧಿ ಪ್ರಚಾರ ನಡೆಸಿದ್ದರು. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ತನ್ನ ಕೊಡುಗೆಗಳೊಂದಿಗೆ ವಹಿಸುತ್ತಿರುವ ಧನಾತ್ಮಕ ಪಾತ್ರವನ್ನು ಮೆಚ್ಚುವ ವಿಶ್ವ ನಾಯಕರು ಇಲ್ಲಿಗೆ ಆಗಮಿಸಿರುವುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ವಿಷಯವಾಗಿದೆ. ಆದರೆ ಇದೇ ವೇಳೆ, ಭಾರತದ ಪ್ರತಿಷ್ಠೆಯನ್ನು ಹಾಳು ಮಾಡಲು ಸಂಚು ಪಿತೂರಿಗಳು ನಡೆಯುತ್ತಿರುವುದು ವಿಷಾದನೀಯ ಎಂದು ಭಾಟಿಯಾ ಖೇದ ವ್ಯಕ್ತಪಡಿಸಿದರು.

ಕತ್ರಾದಲ್ಲಿ ಆದಿ ಶಂಕರರಿಗೆ ಸಮರ್ಪಿತ ದೇವಾಲಯ

• ಶ್ರೀನಗರ: ಜಮ್ಮು-ಕಾಶ್ಮೀರದ ಕತ್ರಾದ ಸರ್ವತೋಮುಖ ಬೆಳವಣಿಗೆಗಾಗಿ ಹಲವು ಅಭಿವೃದ್ಧಿ ಯೋಜನೆಗಳನ್ನು ಘೋಷಿಸಿರುವ ಜಮ್ಮು-ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಕತ್ರಾದಲ್ಲಿ ಆದಿ ಶಂಕರಾಚಾರ್ಯರಿಗೆ ಸಮರ್ಪಿತ ಒಂದು ದೇವಾಲಯ ಹಾಗೂ ದೇವತೆಗಳ ಅಂತಾರಾಷ್ಟ್ರೀಯ ವಸ್ತುಸಂಗ್ರಹಾಲಯವನ್ನು ನಿರ್ಮಿಸಲಾಗುತ್ತದೆ ಎಂದು ಹೇಳಿದ್ದಾರೆ. ಈಗಾಗಲೇ ಹಲವು ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. ಅದೇ ರೀತಿ ಶಿವ ಖೋರಿ ಗುಹಾ ದೇವಾಲಯಕ್ಕೆ ಹೆಲಿಕಾಪ್ಟರ್ ವ್ಯವಸ್ಥೆಯನ್ನು ಜಾರಿಗೊಳಿಸಲು ಸಿದ್ಧತೆ ನಡೆಯುತ್ತಿದೆ ಎಂದು ಸಿನ್ಹಾ ಹೇಳಿದ್ದಾರೆ. 1967ರಲ್ಲಿ ಮೊದಲ ಬಾರಿಗೆ ರೂಪಿಸಲಾದ ಶಂಕರಾಚಾರ್ಯ ದೇವಾಲಯದ ಮರು ನಿರ್ಮಾಣಕ್ಕೆ ಶಂಕುಸ್ಥಾಪನೆಯನ್ನು ಸಿನ್ಹಾ ನೆರವೇರಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರತದಾದ್ಯಂತದ ಪ್ರಮುಖ ದೇವಿ ಯಾತ್ರಾ ಸ್ಥಳಗಳ ಪ್ರತಿಕೃತಿಗಳು ಮತ್ತು ಪ್ರಾತಿನಿಧ್ಯಗಳನ್ನು ಒಳಗೊಂಡ ದೇವತೆಗಳ ವಸ್ತುಸಂಗ್ರಹಾಲಯದ ನಂತರ, ಲೆಫ್ಟಿನೆಂಟ್ ಗವರ್ನರ್ ಅವರ ನೇತೃತ್ವದಲ್ಲಿ ರೂಪಿಸಲಾದ ಈ ಅತ್ಯಾಧುನಿಕ ದೇವಾಲಯವು ಮತ್ತೊಂದು ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಇದನ್ನು ರಿಯಾಸಿ ಜಿಲ್ಲೆಯ ಮಾತಾ ವೈಷ್ಣೋ ದೇವಿಯ ಬೇಸ್ ಕ್ಯಾಂಪ್ ಕತ್ರಾದಲ್ಲಿ ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಸಮಾರಂಭದ ವೇಳೆ, ಆದಿ ಶಂಕರಾಚಾರ್ಯರು ದೇಶದಾದ್ಯಂತ ಭೇಟಿ ನೀಡಿ ನಾಲ್ಕು ಮಠಗಳನ್ನು ಸ್ಥಾಪಿಸಿದರು ಎಂದು ಸಿನ್ಹಾ ಹೇಳಿದರು. ಅವರು ಜಮ್ಮು ಮತ್ತು ಕಾಶ್ಮೀರಕ್ಕೂ ಭೇಟಿ ನೀಡಿದ್ದರು. ಕಾಶ್ಮೀರದ ಶ್ರೀನಗರದಲ್ಲಿರುವ ಶಂಕರಾಚಾರ್ಯರ ದೇವಾಲಯಕ್ಕೆ ನೂರಾರು ಯಾತ್ರಿಕರು ಭೇಟಿ ನೀಡುತ್ತಿದ್ದಾರೆ.

ಮಹಾರಾಷ್ಟ್ರ ಮುಸ್ಲಿಮರ ಶೇ.5 ಮೀಸಲಾತಿ ರದ್ದು

• ಮುಂಬೈ: ಮಹಾರಾಷ್ಟ್ರದಲ್ಲಿ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮುಸ್ಲಿಮರಿಗೆ ನೀಡಲಾಗಿದ್ದ ಶೇ.5ರಷ್ಟು ಮೀಸಲಾತಿಯನ್ನು ದೇವೇಂದ್ರ ಫಡ್ನವೀಸ್ ಸರ್ಕಾರ ಹೊರಡಿಸಿದ ಅಧಿಸೂಚನೆ ಮೂಲಕ ಔಪಚಾರಿಕವಾಗಿ ರದ್ದುಪಡಿಸಲಾಗಿದೆ.

ಈ ಕೋಟಾವನ್ನು 2014ರಲ್ಲಿ ಅಂದಿನ ಕಾಂಗ್ರೆಸ್-ಎನ್‌ಸಿಪಿ ಸರ್ಕಾರ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಸುಗ್ರೀವಾಜ್ಞೆಯ ಮೂಲಕ ಘೋಷಿಸಿತ್ತು. ಆದರೆ, ಬಿಜೆಪಿ-ಶಿವಸೇನೆ ಮೈತ್ರಿಕೂಟ ಅಧಿಕಾರಕ್ಕೆ ಬಂದ ನಂತರ ಮತ್ತು ಸುಗ್ರೀವಾಜ್ಞೆ ರದ್ದಾದ ನಂತರ ಅದು ಕಾನೂನಾಗಲೇ ಇಲ್ಲ. ಈಗ ಈ ಕೋಟಾವನ್ನು ಅನೂರ್ಜಿತವೆಂದು ಘೋಷಿಸಲಾಗಿದ್ದು, ಇದು ಒಂದು ದಶಕದ ಅನಿಶ್ಚಿತತೆಗೆ ಕೊನೆ ಹಾಡಿದೆ.

ಕಾನೂನು ಸಂಘರ್ಷ: ಈ ನಿಬಂಧನೆ, ಕಾನೂನು ಅಡೆತಡೆಗಳನ್ನೂ ಎದುರಿಸಿತ್ತು. ಮರಾಠ ಸಮುದಾಯಕ್ಕೆ ಉದ್ದೇಶಿತ ಶೇ.21ರಷ್ಟು ಮೀಸಲಾತಿ ಒಳಗೊಂಡಿರುವ ಸುಗ್ರೀವಾಜ್ಞೆಯನ್ನು ಸುಪ್ರೀಂ ಕೋರ್ಟ್‌ನ ಶೇ.50ರಷ್ಟು ಮೀಸಲಾತಿಯ ಮಿತಿ ಉಲ್ಲಂಘಿಸಿದ್ದಕ್ಕಾಗಿ ಪ್ರಶ್ನಿಸಲಾಗಿತ್ತು. ಬಾಂಬೆ ಹೈಕೋರ್ಟ್‌ನ ವಿಚಾರಣೆಗಳು ಮಧ್ಯಂತರ ತಡೆಯಾಜ್ಞೆ ತಂದಿದ್ದವು. ಹೀಗಾಗಿ ಮೀಸಲಾತಿ ಜಾರಿಗೆ ಕಾನೂನು ಸಂಕಷ್ಟಗಳೂ ಇದ್ದವು.

ವಿರೋಧ ಪಕ್ಷಗಳ ಟೀಕೆ: ಈ ಕ್ರಮವನ್ನು ವಿರೋಧ ಪಕ್ಷದ ನಾಯಕರು ಟೀಕಿಸಿದ್ದಾರೆ. ಈ ನಿರ್ಧಾರ ಅಲ್ಪಸಂಖ್ಯಾತರ ಹಕ್ಕುಗಳಿಗೆ ಹಿನ್ನಡೆಯಾಗಿದೆ ಎಂದು ಕಾಂಗ್ರೆಸ್ ಸಂಸದೆ ವರ್ಷಾ ಗಾಯಕ್ವಾಡ್ ಹೇಳಿದ್ದಾರೆ. ಎಐಎಂಐಎಂ ನಾಯಕ ಇಮ್ತಿಯಾಜ್ ಜಲೀಲ್ ಇದನ್ನು ರಂಜಾನ್ ಉಡುಗೊರೆ ಎಂದು ಬಣ್ಣಿಸಿದ್ದಾರೆ. ಆದರೆ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಂದುವರಿಸಬೇಕೆಂದು ಒತ್ತಾಯಿಸಿದ್ದಾರೆ.

ಕೊನೆ ಹಂತದಲ್ಲಿ ನಕ್ಸಲ್ ಮುಕ್ತ ಭಾರತ ಧ್ಯೇಯ

• ಹೊಸದಿಲ್ಲಿ: ಮಾವೋವಾದಿಗಳ ವಿರುದ್ಧದ ಹೋರಾಟದ ಕೊನೆ ಹಂತದಲ್ಲಿ, ನಾಲ್ವರು ಉನ್ನತ ನಾಯಕರು ಮತ್ತು ಸುಮಾರು 300 ಸಶಸ್ತ್ರ ಕಾರ್ಯಕರ್ತರು ಶರಣಾದರೇ ಅಥವಾ ಅವರ ವಧೆಯಾದರೇ ದೇಶವು ನಕ್ಸಲ್-ಮುಕ್ತವಾಗುತ್ತದೆ ಎಂದು ಭದ್ರತಾ ಮೌಲ್ಯಮಾಪನಗಳ ವರದಿ ಹೇಳಿದೆ. ಭದ್ರತಾ ಸಂಸ್ಥೆಗಳ ಪ್ರಕಾರ, ಉಳಿದ ಉನ್ನತ ನಕ್ಸಲರಲ್ಲಿ ಜಾರ್ಖಂಡ್‌ನ ಮಿಸಿರ್ ಬೆಸ್ರಾ, ಛತ್ತೀಸ್‌ಗಢ-ತೆಲಂಗಾಣ ಗಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾನೆ ಎಂದು ಶಂಕಿಸಲಾಗಿದೆ. ಭಾರತದಿಂದ ನಕ್ಸಲಿಸಂ ಅನ್ನು ನಿರ್ಮೂಲನೆ ಮಾಡಲು ಕೇಂದ್ರವು 2026ರ ಮಾರ್ಚ್ ತಿಂಗಳ ಗಡುವನ್ನು ನಿಗದಿಪಡಿಸಿರುವುದರಿಂದ ಕೇಂದ್ರ ಸಮಿತಿಯ ನಾಲ್ವರು ಸದಸ್ಯರು ಮತ್ತು ಅಂದಾಜು 300 ಸಶಸ್ತ್ರ ಕಾರ್ಯಕರ್ತರನ್ನು ಬಂಡಾಯವನ್ನು ಉಳಿಸಿಕೊಳ್ಳುವ ಅಂತಿಮ ಪ್ರಮುಖ ಗುಂಪು ಎಂದು ಪರಿಗಣಿಸಲಾಗಿದೆ. ಏತನ್ಮಧ್ಯೆ, ನಕ್ಸಲ್ ದೇವ್‌ಜಿ ಇರುವಿಕೆಯ ಬಗ್ಗೆ ನಿರ್ದಿಷ್ಟ ಗುಪ್ತಚರ ಮಾಹಿತಿಯ ನಂತರ ಛತ್ತೀಸ್‌ಗಢ-ತೆಲಂಗಾಣ ಗಡಿಯಲ್ಲಿರುವ ಕೆಜಿಎಚ್-ಕರೇಗುಟ್ಟಾ ಬೆಟ್ಟಗಳ ಪ್ರದೇಶದಲ್ಲಿ ತೀವ್ರ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ಈ ಪ್ರದೇಶದಲ್ಲಿ ಸುಮಾರು 2,000 ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ವರ್ಷವಿಡೀ ಮಕರಂದ, ಪರಾಗಸ್ಪರ್ಶ ಖಾತ್ರಿಗಾಗಿ ಎನ್‌ಎಚ್‌ಎಐ ಯೋಜನೆ

ಹೆದ್ದಾರಿಗಳಲ್ಲಿ ಜೇನುಸ್ನೇಹಿ ಬೀ ಕಾರಿಡಾರ್

• ಹೊಸದಿಲ್ಲಿ: ಅಲಂಕಾರಿಕ ಸಸ್ಯಗಳಿಂದ ಪರಿಸರ ಸಸಿಗಳ ಅಭಿವೃದ್ಧಿಗೆ ಬದಲಾಗಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು(ಎನ್‌ಎಚ್‌ಎಐ), ಅಲಂಕಾರಿಕ ಸಸ್ಯಗಳ ಬದಲಿಗೆ ಈಗ ಹೆದ್ದಾರಿಯುದ್ದಕ್ಕೂ ಹೂವು ಬಿಡುವ ಮತ್ತು ಜೇನು-ಸ್ನೇಹಿ ಸಸ್ಯವರ್ಗದ ಅಭಿವೃದ್ಧಿಗೆ ಮುಂದಾಗಿದೆ. ಇದರಿಂದ ವರ್ಷವಿಡೀ ಮಕರಂದ ಮತ್ತು ಪರಾಗಸ್ಪರ್ಶವನ್ನು ಖಾತ್ರಿಗೊಳಿಸಬಹುದು ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಮೂಲಗಳು ತಿಳಿಸಿವೆ.

ಇದಕ್ಕೆ ಅನುಗುಣವಾಗಿ ಪರಾಗಸ್ಪರ್ಶಕ್ಕೆ ಪೂರಕವಾದ ವಿವಿಧ ರೀತಿಯ ಮರಗಿಡಗಳು, ನೆಡುತೋಪುಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಎಲ್ಲಾ ಋತುಗಳಲ್ಲಿ ನಿರಂತರ ಹೂ ಬಿಡುವಂತಹ ಸಸಿಗಳನ್ನು ಆಯ್ಕೆ ಮಾಡಲಾಗುವುದು, ಬೇವು, ಕರಂಜ್, ಮಹುವಾ, ಸಿರಿಸ್ ಮತ್ತಿತರ ಸ್ಥಳೀಯ ಜಾತಿಯ ಗಿಡಮರಗಳನ್ನು



ನೆಡಲಾಗುವುದು.

ವಿಶಿಷ್ಟವಾದ 'ಬೀ ಕಾರಿಡಾರ್' ಯೋಜನೆಯಿಂದ ಪರಿಸರ ಮತ್ತು ಪರಾಗಸ್ಪರ್ಶ ಸಂರಕ್ಷಣೆಗೆ ನೆರವಾಗುತ್ತದೆ. ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಯ ಪರಿಸರ ಹೊಣೆಯ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ. ಇದರಿಂದ ಜೇನುನೊಣಗಳು ಮತ್ತು ಇತರ ಪರಾಗಸ್ಪರ್ಶಕ ಜೀವಿಗಳು ಎದುರಿಸುತ್ತಿರುವ ಪರಿಸರ ಒತ್ತಡ ಸಮಸ್ಯೆ ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ಅವು ತಿಳಿಸಿವೆ.

ಕೃಷಿ-ಹವಾಮಾನ ಪರಿಸ್ಥಿತಿ ಮತ್ತು ಸ್ಥಳೀಯ ಅಗತ್ಯ-ಸೂಕ್ತತೆಯನ್ನು ಅವಲಂಬಿಸಿ, ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿನ ಮಾರ್ಗಗಳು ಮತ್ತಿತರ ಖಾಲಿಯಿರುವ ಪ್ರದೇಶಗಳಲ್ಲಿ ಇಂತಹ ಕಾರಿಡಾರ್ ಅಭಿವೃದ್ಧಿಪಡಿಸಲಾಗುತ್ತಿದೆ. ದೇಶಾದ್ಯಂತದ ಎನ್‌ಎಚ್‌ಎಐ ಕ್ಷೇತ್ರ ಕಚೇರಿಗಳು ರಾಷ್ಟ್ರೀಯ ಹೆದ್ದಾರಿ ಸೆಕ್ಷನ್ ಗುರುತಿಸುತ್ತವೆ. ಅಲ್ಲಿ ಜೇನುನೊಣಗಳು ಮತ್ತು ಕಾಡು ಜೇನುನೊಣಗಳ ಸರಾಸರಿ ದೂರಕ್ಕೆ ಅನುಗುಣವಾಗಿ, ಹೂವಿನ ಸಸಿಗಳನ್ನು ಸುಮಾರು 500 ಮೀ.ಗಳಿಂದ 1 ಕಿ.ಮೀ. ಅಂತರದಲ್ಲಿ ನೆಡಬಹುದು ಎಂದು ಈ ಮೂಲಗಳು ಮಾಹಿತಿ ನೀಡಿವೆ.

ಇದರಂತೆ, ಈ ವಿತ್ತೀಯ ವರ್ಷದಲ್ಲಿ ಕನಿಷ್ಠ ಮೂರು ಪರಾಗಸ್ಪರ್ಶ ಕಾರಿಡಾರ್ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. 2026-27ನೇ ಸಾಲಿನಲ್ಲಿ, ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ಸುಮಾರು 40 ಲಕ್ಷ ಗಿಡಗಳನ್ನು ನೆಡಲು ಯೋಜಿಸಲಾಗಿದೆ. ಅದರಲ್ಲಿ ಸುಮಾರು ಶೇ.60 ರಷ್ಟು 'ಬೀ ಕಾರಿಡಾರ್' ಉಪಕ್ರಮದಲ್ಲಿ ಸಸಿಗಳನ್ನು ನೆಡಲಾಗುವುದು ಎಂದು ಅವು ವಿವರಿಸಿವೆ.

ಪರ್ಲ್ಸ್ ಗ್ರೂಪ್‌ನಿಂದ ಅಕ್ರಮ ಹಣ ವರ್ಗಾವಣೆ

ಬಹುಮೊತ್ತದ ಆಸ್ತಿಜಪ್ತಿ, ಇದೇ ಮೊದಲು

• ಹೊಸದಿಲ್ಲಿ: ಚಂಡೀಗಢ ಮೂಲದ ಪಿಎಸಿಎಲ್(ಪರ್ಲ್ಸ್ ಗ್ರೂಪ್) ವಿರುದ್ಧದ ಅಕ್ರಮ ಹಣ ವರ್ಗಾವಣೆ ತನಿಖೆ ಭಾಗವಾಗಿ ಬೃಹತ್ ಮೊತ್ತದ 10,000 ಕೋಟಿ ರೂ.ಗೂ ಹೆಚ್ಚು ಮೌಲ್ಯದ 247 ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕುವಂತೆ ಜಾರಿ ನಿರ್ದೇಶನಾಲಯ (ಇಡಿ) ಬುಧವಾರ ಆದೇಶ ಹೊರಡಿಸಿದೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಲ್ಲಿ(ಪಿಎಂಎಲ್‌ಎ) ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಳ್ಳಲಾದ ಆಸ್ತಿಗಳು ಪಂಜಾಬ್‌ನ ಎಸ್‌ಎಎಸ್ ನಗರ(ಮೊಹಾಲಿ), ರೂಪ್ ನಗರ ಮತ್ತು ಜಿರಾಕ್ಪುರದಲ್ಲಿವೆ ಎಂದು ಇಡಿ ತಿಳಿಸಿದೆ. ಮುಟ್ಟುಗೋಲು ಹಾಕಿಕೊಂಡ 247 ಆಸ್ತಿಗಳನ್ನು ಹೂಡಿಕೆದಾರರ ನಿಧಿಗಳಿಂದ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ತನಿಖೆಯಲ್ಲಿ ಬಹಿರಂಗಗೊಂಡಿದೆ. ಇದು ಅಕ್ರಮವಾಗಿಗಳಿಸಿದ ಆದಾಯವಾಗಿದೆ. ಅವುಗಳ ಮೌಲ್ಯ 10,021.46 ಕೋಟಿ ರೂ.ಗಳಷ್ಟಿದೆ. ಈ ಆಸ್ತಿಗಳ ಮೌಲ್ಯ ಮತ್ತು ಸಂಖ್ಯೆ ದೃಷ್ಟಿಯಿಂದ ಇದು ಅತಿ ಹೆಚ್ಚು ಏಕಕಾಲೀನ ಜಪ್ತಿ ಆದೇಶವಾಗಿದೆ ಎಂದು ಇಡಿ ಅಧಿಕಾರಿಗಳು ತಿಳಿಸಿದ್ದಾರೆ. ಅಕ್ರಮ ಹಣ ವರ್ಗಾವಣೆ ಪ್ರಕರಣಗಳಲ್ಲಿ ಹೆಚ್ಚಿನ ಮೌಲ್ಯದ ಹೆಚ್ಚಿನ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡ ನಿದರ್ಶನಗಳಿವೆ. ಒಂದೇ ಪ್ರಕರಣದಿಂದ ಇಷ್ಟು ಬೃಹತ್ ಮೊತ್ತದ ಹಣವನ್ನು ಇದೇ ಮೊದಲ ಬಾರಿಗೆ ಜಪ್ತಿ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

ವಂಚನೆ ಆರೋಪ ನಟ ಜಯಸೂರ್ಯ ಆಸ್ತಿ ಜಪ್ತಿ

• ತಿರುವನಂತಪುರಂ: ಹೂಡಿಕೆದಾರರೊಂದಿಗೆ ವಂಚನೆ ಮಾಡಿದ ಆರೋಪಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ತನಿಖೆ ಭಾಗವಾಗಿ ಮಲಯಾಳಂ ಜನಪ್ರಿಯ ನಟ ಜಯಸೂರ್ಯ ಅವರ 39 ಲಕ್ಷ ಮೌಲ್ಯದ ಸ್ಥಿರ ಆಸ್ತಿಯನ್ನು ಇಡಿ ಮುಟ್ಟುಗೋಲು ಹಾಕಿಕೊಂಡಿದೆ. ಈ ಪ್ರಕರಣದಲ್ಲಿ ನಟ ಮತ್ತು ಅವರ ಪತ್ನಿ ಸರಿತಾ ಅವರನ್ನು ಇಡಿ ಸಂಸ್ಥೆ 2025ರ ಡಿಸೆಂಬರ್‌ನಲ್ಲಿ ಪ್ರಶ್ನಿಸಿತ್ತು. 'ಸೇವ್ ಬಾಕ್ಸ್' ಎಂಬ ಆನ್‌ಲೈನ್ ಬಿಡ್ಡಿಂಗ್ ಅಪ್ಲಿಕೇಶನ್‌ನಲ್ಲಿ ಹಣವನ್ನು ಹೂಡಿಕೆ ಮಾಡಲು ಪ್ರೇರೇಪಿಸುವ ಮೂಲಕ ಅನೇಕ ಹೂಡಿಕೆದಾರರನ್ನು ವಂಚಿಸಿದ ಆರೋಪದ ಮೇಲೆ ಸ್ವಾತಿ ರಹೀಮ್ ಮತ್ತು ಇತರರ ವಿರುದ್ಧ ಕೇರಳ ಪೊಲೀಸ್ ಎಫ್‌ಐಆರ್‌ನಿಂದ ಇಡಿ ತನಿಖೆಗಳು ನಡೆದಿದೆ.

ಸಾರ್ವಜನಿಕ ಪ್ರಕಟಣೆ

[illegible]

ವಿನೋದ್ ಎಸ್, ಬಿ.ಎ., ಎಲ್‌ಎಲ್‌ಬಿ, ವಕೀಲರು,
'ಎ.ವಿ.ಎಸ್. ಲಾ ಅಸೋಸಿಯೇಟ್ಸ್',
ನಂ.19, 2 ನೇ ಮಹಡಿ, [illegible]
ಬೆಂಗಳೂರು -560079. ಮೊಬೈಲ್ ಸಂಖ್ಯೆ 6362002036

IN THE COURT OF THE HON'BLE VI ADDL. PRINCIPAL JUDGE FAMILY COURT AT BENGALURU

O.S. No. 342 OF 2025

BETWEEN : Mr. Aftab Ahmed Aged About 50 Years, S/o. Late M A Shariff, R/at. No.418/02, 4th Cross, 6th Main, Wilson Garden, Bengaluru-560027. **...PLAINTIFF**

AND : Mrs. Saniya Tabassum @ Hajira, Aged About 32 Years, W/o. Aftab Ahmed, R/at. 64, Beson Town Cross, Near Masjid Usmaniya, Bengaluru-560046. **...DEFENDANT**

SUIT SUMMONS TO DEFENDANT

WHEREAS the above named Plaintiff have instituted case against respondent for the relief of dissolve the marriage solemnized between the Plaintiff and Defendant on 29.12.2023, at CMA Mahal, Frazer Town, Opposite Hajee Sir Ismail Sait Masjid, Bengaluru And for such other relief.

You are hereby summoned to appear before this Hon'ble Court in person or by an advocate/pleader **on 28.03.2026 at 11.00 A.M** to answer the questions of the same. Failing which the plaint will be heard and determined in your absence.

Given under my hand and seal of the court on this 17.01.2026.

By Order of the Court, Senior Sheristedar, Family Court, Bengaluru.

Advocate for plaintiff :
Mr. Abhishek S Halliberi, Advocates
M/s. J G Law House & Co.,
No. 418/1/02, Unit No. 101, 1st Floor, 6th Main, 4th Cross, Wilson Garden, Bengaluru-560027. Mob : 9845099666

IN THE COURT OF THE ASSISTANT COMMISSIONER, TUMAKURU SUB DIVISION, TUMAKURU.

R.A.(KUN) 389/2019.

Appellant : Basheer Ahamed Khan, dead by his LRS **And others.**

V/s.

Respondent : The Tahasildar, Kunigal Taluk and others.

DRAFT PAPER PUBLICATION.

Notice to respondents No.3 and 4 in the above appeal:

R-3: Dilshad W/o Amanulla Khan @ Pyare S/o Ismail Khan, Aged about 55 years, **R-4 : Mohammed Aslam** S/o Abul Gafar, Major, Both are R/at Abubakar Masjid, Ward No.2, Neelathahalli Cross, Mavinaktte Village, Kothagere Hobli, Kunigal Taluk, Tumakuru District.

WHEREAS, the above appellants have preferred the above appeal against the respondents for challenge mr and such other relief.

Take notice that, you have been made as a respondents No.3 and 4 in the above case and the same is posted for your appearance of **06.03.2026** at 11.00 A.M. before the Asst. Commissioner Court at Kunigal, therefore, you are hereby informed to appear on the said date, failing which, the case shall be heard and determined as ex-parte and case will be continue in your absence.

Given under my hand and seal of this court, this day of 18.02.2026.

BY ORDER OF THE COURT
THE ASSISTANT COMMISSIONER, TUMAKURU SUB DIVISION, TUMAKURU.

Advocate for Appellant:
Lakshminarayana, B.A. LL.B., Advocate, SRS Building, Near Civil Bus Stand, Tumakuru. Mobile No.9448581909.

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ತುಮಕೂರು

ಮಿಸ್.ನಂ.03/2024

[illegible]

ಈ ಹನುಮಂತರಾಯಪ್ಪ, ಬಿ.ಕಾಂ., ಎಲ್.ಎಲ್.ಬಿ ವಕೀಲರು, [illegible] ಬಿಲ್ಡಿಂಗ್, 1ನೇ ಕ್ರಾಸ್, ಎಂ.ಜಿ.ರಸ್ತೆ, ತುಮಕೂರು, ಮೊ.9880515969

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು

-: ಸಾರ್ವಜನಿಕ ಪ್ರಕಟಣೆ :-

[illegible]

ಸಹಿ/- ಕಾರ್ಯದರ್ಶಿ

[illegible] ಅಸಲು ದಾವೆ ನಂ. 71/2021

[illegible]

ದಿನಾಂಕ:1-02-2026 ರಂದು ನ್ಯಾಯಾಲಯದ ಅಪ್ಪಣೆ ಮೇರೆಗೆ ಮೊಹರುನೊಂದಿಗೆ ನೀಡಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು, ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮಧುಗಿರಿ.

ಬಿ.ಎ. ಹಾಲಪ್ಪ ಬಿ.ಎಸ್.ಸಿ. ಎಲ್.ಎಲ್.ಬಿ
ಸಹಿ: ವಾದಿಯ ಪರ ವಕೀಲರು
ಮಧುಗಿರಿ, ದಿನಾಂಕ: 18-02-2026

IN THE COURT OF THE JOINT DIRECTOR OF LAND RECORDS AT BENGALURU

RJDLR APPEAL No. 93/2025

Appellants: Anasuyamma and another -V/s-
Respondents: The D.D.L.R., Tumakuru and others

DRAFT PAPER PUBLICATION

Notice to Respondent No. 7 in the above case

Respondent No. 7: Kempanna S/o late Andanaiah, Aged about 46 years, R/at Halgonahalli village, Kothagere Hobli, Kunigal Taluk.

Whereas the above petitioner have instituted the above appeal against the order passed by the RJDLR at Tumakuru No. 93/2025 dated: ______

Take notice that you have been made as Respondent No. 7 in the above appeal and the same is posted for your appearance on 06/03/2026 at 3.00 P.M. before RJDLR at Tumakuru, therefore, you are hereby notice to appear on the said date, failing which the case will be heard and determined in your absence.

Given under my hand and seal of this Court that the 13th Feb. 2026.

By order of the Court
Sd/- Joint Directors Land Records
at Tumakuru

Advocate for Appellants
Sd/- **H.A. Ashwathnarayana,** Advocate
Sri Sai Associates, 2nd cross, K.R. Extension, Tumakuru. Mob: 9945033676

IN THE COURT OF THE HON'BLE 1ST ADDL. DISTRICT AND SESSIONS JUDGE, KOLAR DIST AT KOLAR.

P&SC.No. 181/2025

BETWEEN: Sri. C. Narendrakumar, S/o Late. B. Chandrashekhar, Aged about 51 years, R/at Nagadenahalli Village, Kasaba Hoball, Doddaballapura Taluk, Bengaluru Rural District. ....**Petitioner**

AND; 1. Smt. Sarojamma W/o Late. M.S. Shankarachari, Aged about 74 years,

2. Smt. Bharathi.C D/o Late. M.S.Shankarachari, Aged about 49 years, The Respondent No. 1 & 2 are R/at Madivala village, Kasaba Hobali, Maluru Taluk. Kolar District.

3. Smt. Manjula.C D/o Late. M.S.Shankarachari, Aged about 48 years, R/at No.36, Nagadenahalli Village, Kasaba Hobali, Doddaballapura Taluk, Bengaluru Rural District.

....**Respondents**

NOTICE TO THE INTRESTED PERSONS UNDER ORDER 5 RULE 20 OF CPC

The petitioner herein above named filed this petition Under Section 276 of Indian Succession Act 1925 for grant of probate before this Hon'ble court in P & SC.No. 181/2025 for obtaining probate certificate in favour of the petitioner in respect of the schedule properties on the basis of the registered Will executed by deceased M.S.Shankarachari @ Chadrachari, in favour of the petitioner on dated; 09-04-2007 presence of the witnesses in respect of the schedule properties in presence of the witnesses. The said M.S.Shankarachari @ Chadrachari was died on 14.1.2016 at Madivala village, Kasaba Hobli, Malur Taluk.

Hence this Hon'ble court fixed the date of for appearance of the interested persons through their advocate on 18-03-2026 that day at 11.00.am to file your objections if any, for issue of probate certificate. Failing which the matter will be heard and determined exparte.

SCHEDULE

All the piece and parcel of the agricultural property bearing Old Sy.No.159/1, New Sy. No.159/18 measuring 09.04 Guntas and the property and the property bearing Old Sy.No. 187/3, New Sy.No.187/38 measuring 01 Guntas both are situated at Madivala Village, Kasaba Hobali, Malur Taluk, Kolar District and jointly and commonly bounded on: East by : Land of Vasudevan, West by : Land bearing Sy.No. 187/38 & Thereafter the Thornahalli-Malur Road, North by : Vasanthappa of Land Sheshachari & Vasanthappa, South by : Land of Subbamma & Venkatesh of two separate Sy.No.s

Given under my hand and the seal of the court on this 18th Day of Feb-2026

By the order of the Court
Chief Administrative' officer Hon'ble District & Sessions court at Kolar

Advocate for Petitioner
H.S.Subramanyaswamy Advocate, Bangalore, Kolar, Date: 18-02-2026

ಕರ್ನಾಟಕ ಸರ್ಕಾರ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಮಹಾತ್ಮಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು-22

ಸಂ: ಕೃಮಾಸ/[illegible]/2025-26 ದಿ: 12.02.2026

ಪ್ರಕಟಣೆ

ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ ಸಮಸ್ತ ರೈತಬಾಂಧವರು, ಪೇಟೆ ಕಾರ್ಯಕರ್ತರು ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೆ|ಶ್ರೀ ರಂಗನಾಥ್ ಎಂಟರ್ ಪ್ರೈಸಸ್, ಸಂಸ್ಥೆಯು ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಇ-ಬ್ಲಾಕ್‌ನ ತರಕಾರಿ ಮಾರುಕಟ್ಟೆಯಲ್ಲಿ ಮಳಿಗೆ ಸಂಖ್ಯೆ 04ನ್ನು ಲೀಸ್-ಅಂಡ್-ಸೇಲ್ಸ್ ಹಂಚಿಕೆ ಆಧಾರದ ಮೇಲೆ ಹಂಚಿಕೆ ಪಡೆದು ವ್ಯವಹರಿಸುತ್ತಿದ್ದು, ಪ್ರಸ್ತುತ ಸದರಿ ಸಂಸ್ಥೆಯ ಮಾಲೀಕರಾದ ಶ್ರೀ ಸಿ.ರಂಗನಾಥ್, ಇವರು ತಮ್ಮ ಜೊತೆಯಲ್ಲಿ ಸಂಸ್ಥೆಯ ವ್ಯಾಪಾರಾಭಿವೃದ್ಧಿಗಾಗಿ ಕುಮಾರ್ ಸಿ.ಎಂ ತಂದೆ ಮುನಿಸ್ವಾಮಿ ಸಿ. ಹೆಚ್, ಹುಸ್ಕೂರು ಪಾಳ್ಯ, ಹುಸ್ಕೂರು ಮುಖ್ಯ ರಸ್ತೆ, ದಾಸನಪುರ, ಬೆಂಗಳೂರು, ಇವರನ್ನು ಪಾಲುದಾರರನ್ನಾಗಿ ಸೇರ್ಪಡೆಗೊಳಿಸಿಕೊಳ್ಳಲು ಅನುಮತಿ ನೀಡಲು ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

ಆದುದರಿಂದ ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಯಾರಿಂದಲಾದರೂ ಆಕ್ಷೇಪಣೆ /ತಕರಾರುಗಳಿದ್ದಲ್ಲಿ ಈ ಪ್ರಕಟಣೆಯು ದಿನ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ದಾಖಲೆ ಸಹಿತ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಬೆಂಗಳೂರು, ಇವರಿಗೆ ಸಲ್ಲಿಸಲು ತಿಳಿಸಲಾಗಿದೆ ಮತ್ತು ನಿಗಧಿತ ಅವಧಿ ಮುಗಿದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/- ಕಾರ್ಯದರ್ಶಿ

ಶ್ರೀರಂಗಪಟ್ಟಣದ ಪ್ರಧಾನ ಸಿವಿಲ್ ಹಿರಿಯ ಶ್ರೇಣಿ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ.ನ್ಯಾಯಾಲಯದಲ್ಲಿ,

M.V.C.1772/2025

[illegible]

ಈ ಪ್ರಕರಣದಲ್ಲಿ, ಅಪಘಾತಕ್ಕೆ ಒಳಗಾಗಿರುವ ವಾಹನ ನಂ. KA-13-C-4697 [illegible]

[illegible] ದಿನಾಂಕ: 16/02/2026 ರಂದು ನೀಡಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಶ್ರೀರಂಗಪಟ್ಟಣದ ಸಿವಿಲ್ (ಹಿ.ಶ್ರೇ) ನ್ಯಾಯಾಧೀಶರ ನ್ಯಾಯಾಲಯದಲ್ಲಿ.

ಅರ್ಜಿದಾರರ ಪರ ವಕೀಲರು : **ಡಿ.ಪವನ್ ಕುಮಾರ್.** ಬಿ.ಎ., ಎಲ್ ಎಲ್. ಬಿ.,ದಾಖಲಾತಿ ನಂ.3264/2009 ಶ್ರೀರಂಗಪಟ್ಟಣ-571438, ಮೊ.ನಂ.9739643090

ಜಾಹೀರಾತಿಗಾಗಿ ಸಂಪರ್ಕಿಸಿ: 9845438807 / 9611755391

BEFORE THE COMMISSIONER FOR KARNATAKA HINDU RELIGIOUS INSTITUTIONS & CHARITABLE ENDOWMENTS, AT BENGALURU

ADM 7 AP. No.02 / 2025-26

BETWEEN: SRI. VARUN ...APPELLANT

AND: THE DEPUTY COMMISSIONER, AND OTHERS **...RESPONDENTS**

RESPONDENT No.3: SRI. MADHAVA IYYENGAR, S/o. Venkatachala Iyyenger, Aged About 43 Years, Residing at Hosahalli Village, Thalagattapura Post, Bengaluru South Taluk, Bengaluru District - 560062 ....**RESPONDENT No.3**

SUMMONS FOR UNDER ORDER V RULE 20 (1-A) OF THE CIVIL PROCEDURE CODE, 1908

Whereas the appellant above named has filed the present appeal challenging the correctness and legality of the order dated 15/07/2024 passed by Respondent No. 1, the Deputy Commissioner, Bengaluru Urban District, Bengaluru, under Section 25B(6)(iii) of the Karnataka Hindu Religious Institutions and Charitable Endowments Act, 1997, in Case No. DVS (B)/CR 310/2013-14. The appeal has been set down for your appearance on **12-03-2026** at 3:00 PM before the Commissioner for Karnataka Hindu Religious Institutions & Charitable Endowments, Bengaluru.

Therefore, you are hereby informed to appear before the Hon'ble Court on **12-03-2026** at 3:00 PM in person or through an advocate with documents upon which you intend to rely in support of your defense. Take notice that in default of your appearance on the above-said date, the Appeal will be heard and disposed of in your absence ex parte.

Given under my hand and the seal of the Court on 17-02-2026.

By order of the court, For Commissioner, Hindu Religious Institutions Charitable Endowments Dept, Chamarajpet, Bangalore.

Sri. VARADARAJU .L, Advocate,
No.13/11, OM Shakthi Krupe, Pampa Mahakavi Road, Shankarapuram, Chamarajpete, Bengaluru-560004. Mob: 9008157983.
Email: Varadaraju1212@gmail.com

ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯ ಕೋಲಾರ,
ಪಿ.ಟಿ.ಸಿ.ಎಲ್.ನಂ 119/2025

ಮೇಲ್ಮನವಿದಾರರು : [illegible] ಮತ್ತು ಇತರರು,

ವಿರುದ್ಧ

ಎದುರುದಾರರು : [illegible] ಮತ್ತು ಇತರರು,
ಎದುರುದಾರರ ಸಂಖ್ಯೆ: 4. ಶ್ರೀ. ಎ.ಕೆ. [illegible], [illegible] ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.,

ನೋಟಿಸು

ಈ ಮೂಲಕ ಎದುರುದಾರರ ಆದ ನಿಮಗೆ [illegible] ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ಕಸಬಾ ಹೋಬಳಿ, [illegible] ಗ್ರಾಮದ ಸರ್ವೆ ನಂ.17/1 ರಲ್ಲಿ ವಿಸ್ತೀರ್ಣ 1 ಎಕರೆ 10 ಗುಂಟೆ ಮತ್ತು ಸರ್ವೆ ನಂ. 17/2 ರಲ್ಲಿ 0-30 ಗುಂಟೆ ಜಮೀನುಗಳಿಗೆ ಸಂಬಂಧಪಟ್ಟಂತೆ [illegible] ದಿನಾಂಕ: 2.03.2026 [illegible] ದಿನಾಂಕ: 02.03.2026ರಂದು ಬೆಳಿಗ್ಗೆ 11-00 ಗಂಟೆಗೆ [illegible]

ನ್ಯಾಯಾಲಯದ ಆದೇಶದ ಮೇರೆಗೆ
ಜಿಲ್ಲಾಧಿಕಾರಿಗಳ ನ್ಯಾಯಾಲಯ ಕೋಲಾರ
ಮೇಲ್ಮನವಿದಾರರ ಪರ ವಕೀಲರು.
ಶ್ರೀ. ಎಂ. ಮುನೇಗೌಡ,
ಶ್ರೀ. ಟಿ. ನಾರಾಯಣಗೌಡ, ವಕೀಲರು, ಕೋಲಾರ
ಸ್ಥಳ: ಕೋಲಾರ, ದಿನಾಂಕ:

ಮಹಾನಗರ ಪಾಲಿಕೆ, ವಿಜಯಪುರ

ದಿನಾಂಕ:17.02.2026

ಟೆಂಡರ್ ಪ್ರಕಟಣೆ (E-PREOCUREMENT OF KARNATAKA)

ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು DBFOT ನಿರ್ಮಿಸಿ ನಿರ್ವಹಿಸುವ ಬಗ್ಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 10.03.2026 ಅಪರಾಹ್ನ 4.00 ಗಂಟೆಗೆ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಹೆಚ್ಚಿನ ವಿವರವನ್ನು ಪಡೆಯಬಹುದು.

ಕ್ರ.ಸಂ	ಕಾಮಗಾರಿಯ ಹೆಸರು	ಕಾಮಗಾರಿಯ ಅವಧಿ
1	THE DESIGN, DEVELOPMENT, IMPLEMENTATION AND MAINTAINANCE OF BUS SHELTERS, MEDIAN ADVERTISEMENT BOXES AND DIRECTIONAL SIGNAGE STRUCTURE (CANTILEVERS & GANTRIES) WITH ADVERTISEMENT RIGHTS ON A DBFOT BASIS FOR CITY CORPORATION VIJAYAPUR	5 YEARS

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/717/ಸಿಎಸ್‌ಎಂಸಿಎ/2025–26

IN THE HON'BLE COURT OF THE CIVIL JUDGE AND J.M.F.C, AT MADDUR

C.MIS.No. 233/2025

Petitioners : 1] Sri Krishnegowda S/o Late Cheluvegowda, Aged about 60 years, Major, **2] Smt Gowramma,** D/o Late Cheluvegowda, W/o Late H Boregowda, Aged about 76 years, Major, **3] Smt Sundramma,** D/o Late Cheluvegowda, W/o Girigowda, Aged about 76 years, Major, All are residing at Annur Village, C A Kere Hobli, Maddur Taluk. Mandya District. ----**VS**----

Respondent s: The Chief Registrar of Birth and Death,/ Tahasildar, Maddur Taluk, Maddur.

NOTIFICATION

It is hereby informed to General public that, the petitioners have filed the above petition for an order to direct the respondent to enter the date of death of their mother Smt Manchamma W/o Chaluvegowda as 30-08-1995 in the register maintained by the respondent.

Hence, it is hereby called upon, any interested person may come before the Hon'ble court and file their objection if any on 24.03.2026 at 11.00 am. Otherwise the case will be decided as prayed.

By the order of the court given with seal and signature 10.02.2026

By Order of the Court
Chief Ministerial Officer, Pri Civil Judge & JMFC Court Maddur

Advocate for petitioners
D N Naveena, B A. LL.B,Advocate,
Bharathi College Complex, Maddur-Malavalli Main Road, KM Doddi. Maddur Taluk.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ–ಮೇಲ್: eemidkln@rediffmail.com, oemigwddkolar@gmail.com ದೂರವಾಣಿ ಸಂಖ್ಯೆ: 08152–200049

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ಶಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/ 2680/2025–26/ ದಿನಾಂಕ:13.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:29/2025–26/ ದಿನಾಂಕ: 13.02.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ–4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 02 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಹಾಗೂ ಕನಿಷ್ಠ ಮೊತ್ತ ರೂ.300.00 ಲಕ್ಷ. ನಿಗದಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **www.kppp.karnataka.gov.in** ನಲ್ಲಿ **ದಿನಾಂಕ: 13.02.2026ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯನ್ನು ದಿನಾಂಕ: 18.02.2026 ರಂದು ಬೆಳಗ್ಗೆ 11.30 ಗಂಟೆಗೆ** ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇಲ್ಲಿ ಆಯೋಜಿಸಲಾಗಿರುತ್ತದೆ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ **(Upload)** ಕೊನೆಯ **ದಿನಾಂಕ: 23.02.2026 ಸಂಜೆ 04:30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 24.02.2026ರ ಸಂಜೆ 04:30 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.kppp.karnataka.gov.in** ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:500/ಸಿಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಧಾರವಾಡ

ಕಾರ್ಯನಿರ್ವಾಹಕ ಇಂಜಿನೀಯರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ

ಕ್ರ.ಸಂ.ಪಂ.ರಾ.ಇಂ.ವಿ.ಧಾ/ಗ.ಇಂ.–2/2025–2026/4769 ದಿನಾಂಕ: 18–02–2026

ಅಲ್ಪಾವಧಿ ಟೆಂಡರ್ ಪ್ರಕಟಣೆ-41/2025–26
(ಇ–ಪ್ರೊಕ್ಯೂರಮೆಂಟ್ ಮುಖಾಂತರ)

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ ಇವರಿಂದ ಸರ್ಕಾರಿ ಆದೇಶ ಸಂಖ್ಯೆ: **No. FD 876 Exp-12/2017, Bangalore, dated: 15-09-2017** ರನ್ವಯ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಪಂ. ರಾ. ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ **KW- 2 & 3** ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ–ಪ್ರೊಕ್ಯುರಮೆಂಟನ **https://kppp.karnataka.gov.in/** ದಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.

Indent Numbers :
General : 24379, 24390, 24726, 24428, 24430, 24433, 24723, 24384, 24859, 24625, 24618, 24507, 24485, 24494, 24488, 24884.
SC Category : 24387, 24376, 24424, 24418.
Category – II (A) : 24419, 24435, 24623, 24721, 24490.

ಕ್ಯಾಲೆಂಡರ್ ಆಫ್ ಇವೆಂಟ್:

1) ಟೆಂಡರ್ ದಾಖಲೆಗಳನ್ನು **ದಿನಾಂಕ: 19–02–2026** ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: **26–02–2026 ರ ಸಂಜೆ 4.00** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.
2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27–02–2026 ರ ಸಾಯಂಕಾಲ 4.30 ಗಂಟೆಗೆ.** ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.
3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 04–03–2026 ರ ಬೆಳಿಗ್ಗೆ 11.00 ಗಂಟೆಗೆ.** ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಕಾಮಗಾರಿಯ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ/EMD ಮೊತ್ತ ಇತ್ಯಾದಿ ವಿವರಗಳಿಗೆ **https://kppp.karnataka.gov.in/** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–
(ಆರ್.ಎಂ.ಸೊಪ್ಪಿಮಠ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/
1249/ಟೆಂಡರ್‌ನೋಟಿಫಿಕೇಷನ್/2025–26

ಕರ್ನಾಟಕ ಸರ್ಕಾರ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,

ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ವಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು – 560024.
ಇ–ಮೇಲ್: commissionerahvs@gmail.com ಫೋನ್: 080–23412767

ನಂ: ಆಪಸಂ/ವಿಎಂಎಸ್/ವಿಜ-39/ಪಾ.ವೀ.ಸ/ಟೆಂಡರ್/2025–26 ದಿನಾಂಕ: 18–02–2026

ಟೆಂಡರ್ ನೋಟಿಫಿಕೇಷನ್
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2026–27 ನೇ ಸಾಲಿನಲ್ಲಿ ರಾಜ್ಯದಲ್ಲಿರುವ ವೀರ್ಯ ಸಂಸ್ಕರಣಾ ಕೇಂದ್ರಗಳಿಗೆ ಆವಶ್ಯವಿರುವ ಖಾಲಿ ವೀರ್ಯ ನಳಿಕೆಗಳನ್ನು ಖರೀದಿಸುವ ಸಲುವಾಗಿ ಕೆಪಿಪಿ ಪೋರ್ಟಲ್ ನ ಮೂಲಕ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಸಂಬಂಧ ಒಂದು ವರ್ಷದ ಅವಧಿಗೆ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿಸಿದ ಮೊತ್ತ ರೂ. 183.16 ಲಕ್ಷಗಳು.

ಪೂರ್ಣ ಟೆಂಡರ್ ದಾಖಲೆಗಳನ್ನು https://kppp.karnataka.gov.in ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 18–02–2026 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ನಲ್ಲಿ ದಿನಾಂಕ: 18–02–2026 ರಿಂದ 17–03–2026 ರವರೆಗೆ 17.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಟೆಂಡರ್‌ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು ಪಶುವೈದ್ಯಕೀಯ ಔಷಧಿ ಭಂಡಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

DIPR/CP/5729/NR/2025-26

ಕರ್ನಾಟಕ ಸರ್ಕಾರ

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ

ಕಾಳಿದಾಸ ಮಾರ್ಗ, ಕೆ.ಜಿ. ರಸ್ತೆ, ಬೆಂಗಳೂರು–560009
e-mail: prcdeputysecretaryadm@gmail.com ದೂರವಾಣಿ 080–22010422

ಸಂಖ್ಯೆ: **RDPR/2025-26/SE3482** ದಿನಾಂಕ: 19.02.2026

ಟೆಂಡರ್ ಪ್ರಕಟಣೆ

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಿಂದ ಆಯೋಜಿಸಲಾಗುವ 2024–25ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ ಸಮಾರಂಭದಲ್ಲಿ ಊಟೋಪಚಾರ ಒದಗಿಸುವ ಸಲುವಾಗಿ ಇ–ಟೆಂಡರ್ ಮೂಲಕ ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಯನ್ನು ಸಲ್ಲಿಸುವ ಪ್ರಕ್ರಿಯೆಯು ದಿನಾಂಕ: 18.02.2026 ರಿಂದ ಪ್ರಾರಂಭವಾಗಿ ದಿನಾಂಕ: 25.02.2026 ರಂದು ಮುಕ್ತಾಯಗೊಳ್ಳುತ್ತದೆ. ಇಚ್ಛೆಯುಳ್ಳ ಟೆಂಡರ್‌ದಾರರು **https://kppp.karnataka.gov.in** ಮೂಲಕ ದಿನಾಂಕ: **25.02.2026**ರ ಸಂಜೆ **4:00** ರ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ಆಯುಕ್ತಾಲಯವನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಉಪ ಕಾರ್ಯದರ್ಶಿ (ಆಡಳಿತ)
ಪಂಚಾಯತ್‌ರಾಜ್ ಆಯುಕ್ತಾಲಯ
ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು

DIPR/CP/YC/5704/2025-26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ತಾಲೂಕ ಪಂಚಾಯತ ಕಾರ್ಯಾಲಯ, ಶಿರಹಟ್ಟಿ ಗದಗ ಜಿಲ್ಲೆ

ಇ–ಮೇಲ್ : **eotpshir@gmail.com**

ನಂ: ತಾ.ಪಂ.ಶಿ/ಟೆಂಡರ/2025–26/00 ದಿನಾಂಕ : 18–02–2025

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ ನಿಯಮಗಳನ್ವಯ ಅರ್ಹ ಗುತ್ತಿಗೆದಾರ/ಸರಬರಾಜುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, ಮುಖಾಂತರ 03 ಕಾಮಗಾರಿಗಳ ಗುಣಮಟ್ಟದ ಸಾಮಗ್ರಿ ಪೂರೈಕೆಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: 2025–26ನೇ ಸಾಲಿನ ಅನಿರ್ಬಂಧಿತ ಅನುದಾನ ಯೋಜನೆ ಅಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರ/ಸರಬರಾಜುದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, https://kppp.karnataka.gov.in ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ಗೂಡ್ಸ ಇಂಡೆಂಟ್ ಸಂಖ್ಯೆಗಳು ಈ ಕೆಳಗಿನಂತೆ ಇರುತ್ತವೆ.

1) INDENT NO : RDPR/2025-26/IND13619, 13620 & 13624
ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. : Rs. **4.23** To **8.47** Lakhs

ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ, ಇ.ಎಂ.ಡಿ. ಸಂಬಂಧಪಟ್ಟ ಪರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **18–02–2026** ರಿಂದ **04–03–2026** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **05–03–2026** ರಂದು 16.30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕ ಪಂಚಾಯತ, ಶಿರಹಟ್ಟಿ

ವಾಸಾಸಂಇ/ಗದಗ/ಸಿಎಸ್‌ಎಂಸಿಎ/658/2025–26

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಹುಬ್ಬಳ್ಳಿ – ಬಾಯಪಾಸ್ ರಸ್ತೆ, ಯುನಿಟ್–2, ಫುಡ್ ಪಾರ್ಕ ಎದುರಿಗೆ, ಸೆಕ್ಟರ್ ನಂ. 85, 5ನೇ ಅಡ್ಡರಸ್ತೆ, ನವನಗರ, ಬಾಗಲಕೋಟೆ. ದೂ.: 08354–220446, ಇ–ಮೇಲ್ : eerwssdbagalkot@gmail.com

ಸಂಖ್ಯೆ : ಗ್ರಾ.ಕು.ನೀ. ಮತ್ತು ನೈ.ವಿ./ಬಾಗಲಕೋಟೆ/ಪಿಬಿ – 1, 3/ಟೆಂಡರ್/ 2025–26/2282 ದಿನಾಂಕ : 17–02–2026

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಬಾಗಲಕೋಟೆ ಜಿಲ್ಲೆಯ **MVS O&M, TTF-4215 MP Fund, JJM - 2215** ಹಾಗೂ **TP FUND** ಯೋಜನೆಯ ಒಟ್ಟು **06** ಕಾಮಗಾರಿಗಳ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

(ಎ) ದ್ವಿ–ಲಕೋಟೆ ಟೆಂಡರ್ **(Two Cover) 1) RWSSD/2025-26/WS/WORK_INDENT9883, APT - 60.38 Lakhs, (MVS O&M Hulyal)** 1) ಗುತ್ತಿಗೆದಾರರ ಅರ್ಹತೆ : 3ನೇ ದರ್ಜೆ ಹಾಗೂ ಮೇಲ್ಪಟ್ಟ, 2) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್.ಡಿ. ಮೊತ್ತ : ಕೆ.ಪಿ.ಪಿ.ಪಿ. ಪ್ರಕಾರ, 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **24–02–2026** ರ ಸಂಜೆ **5.30** ಗಂಟೆಯ ವರೆಗೆ, 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **26–02–2026** ರ ಬೆಳಿಗ್ಗೆ **11.00** ಗಂಟೆಯ ನಂತರ, 5) ಆರ್ಥಿಕ ಬಿಡ್ ತೆರೆಯುವ ದಿನಾಂಕ : **27–02–2026** ರ ಬೆಳಿಗ್ಗೆ **11.00** ಗಂಟೆಯ ನಂತರ. (ಬಿ) ಏಕ-ಲಕೋಟೆ ಟೆಂಡರ್ **(Single Cover) - RWSSD/2025-26/WS/WORK_INDENT9884, APT - 19.09 Lakhs, (TTF - 4215 Amalazari), 2) RWSSD/2025-26/WS/WORK_INDENT9885, APT - 5.08 Lakhs, (MP Fund Tungal), 3) RWSSD/2025-26/WS/WORK_INDENT9886, APT - 6.76 Lakhs, (TTF-4215 Bhairamatti),** 1) ಗುತ್ತಿಗೆದಾರರ ಅರ್ಹತೆ : 4ನೇ ದರ್ಜೆ ಹಾಗೂ ಮೇಲ್ಪಟ್ಟ, 2) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್.ಡಿ. ಮೊತ್ತ : ಕೆ.ಪಿ.ಪಿ.ಪಿ. ಪ್ರಕಾರ, 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **24–02–2026** ರ ಸಂಜೆ **5.30** ಗಂಟೆಯವರೆಗೆ, 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **26–02–2026** ರ ಬೆಳಿಗ್ಗೆ **11.00** ಗಂಟೆಯ ನಂತರ, (ಸಿ) ಏಕ-ಲಕೋಟೆ ಟೆಂಡರ್ **(Single Cover) Call-2 Tender 1) RWSSD/2025-26/WS/WORK_INDENT9831, APT - 42.86 Lakhs, (JJM - 2215) Call-2, 2) RWSSD/2025- 26/WS/WORK_INDENT9841, APT - 10.57 Lakhs, (TP Fund) SC Category Call-2,** 1) ಗುತ್ತಿಗೆದಾರರ ಅರ್ಹತೆ : 3 & 4ನೇ ದರ್ಜೆ ಹಾಗೂ ಮೇಲ್ಪಟ್ಟ, 2) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್.ಡಿ. ಮೊತ್ತ : ಕೆ.ಪಿ.ಪಿ.ಪಿ. ಪ್ರಕಾರ, 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **25–02–2026** ರ ಸಂಜೆ **5.30** ಗಂಟೆಯವರೆಗೆ, 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **27–02–2026** ರ ಬೆಳಿಗ್ಗೆ **11.00** ಗಂಟೆಯ ನಂತರ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ, ಅಂತರ್ಜಾಲ ತಾಣದ ವಿಳಾಸ https://kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾ.ಕು.ನೀ. & ನೈ. ವಿಭಾಗ, ಬಾಗಲಕೋಟೆ.

ವಾಸಾಸಂಇ/
ಬಾಗಲಕೋಟೆ/592/ಮರಳಿಮಾರ್/2025–26

ನಗರಸಭಾ ಕಾರ್ಯಾಲಯ, ಪುತ್ತೂರು, ದ.ಕ

ಕಿಲ್ಲೆ ಮೈದಾನದ ಹತ್ತಿರ, ಕೋರ್ಟ್ ರಸ್ತೆ, ಪುತ್ತೂರು, ದಕ್ಷಿಣ ಕನ್ನಡ – 574201
ದೂ: 08251–230251 ಇಮೇಲ್: co.puttur@gmail.com
ವೆಬ್‌ಸೈಟ್: www.puttucity.mrc.gov.in

ಸಂ:ಪುನಸ/ಆವಿ/ವಿವಿ05/ಒಆರ್260/ಟ್ರೈವರ್/2025–26 ದಿನಾಂಕ: 16.02.2026

ಟೆಂಡರ್ ಪ್ರಕಟಣೆ

ಪುತ್ತೂರು ನಗರಸಭೆ ವ್ಯಾಪ್ತಿಯಲ್ಲಿ ಮನೆ ಮನೆ ಕಸ ಸಂಗ್ರಹಣೆಯ ವಾಹನಗಳಿಗೆ ಚಾಲಕರನ್ನು ಹಾಗೂ ಸ್ಯಾನಿಟರಿ ಸುಪರ್ ವೈಸರ್ ನ್ನು ಹೊರಗುತ್ತಿಗೆ ಆಧಾರದಲ್ಲಿ ಮುಖಾಂತರ ಒಂದು ವರ್ಷದ ಅವಧಿಗೆ ಪೂರೈಸಿಕೊಳ್ಳುವ ಬಗ್ಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೀಡಿರುವ ಅರ್ಹತಾ ಮಾನದಂಡದಂತೆ ದಾಖಲೆಗಳನ್ನು ಪರಿಶೀಲಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಇಂಡೆಂಟ್ ಸಂಖ್ಯೆ	ವಿಷಯ	ಟೆಂಡರ್‌ಗೆ ಇಟ್ಟ ಮೊತ್ತ (ರೂ)	ಇ.ಎಮ್.ಡಿ ಮೊತ್ತ (ರೂ.)
DMA/ 2025-26/ SE7221	ಪುತ್ತೂರು ನಗರ ಸಭೆ ವ್ಯಾಪ್ತಿಯಲ್ಲಿ ಮನೆ ಮನೆ ಕಸ ಸಂಗ್ರಹಣೆಯ ವಾಹನಗಳಿಗೆ ಚಾಲಕರನ್ನು ಹಾಗೂ ಸ್ಯಾನಿಟರಿ ಸುಪರ್ ವೈಸರ್‌ನ್ನು ಹೊರಗುತ್ತಿಗೆ ಆಧಾರದಲ್ಲಿ ಮುಖಾಂತರ ಒಂದು ವರ್ಷದ ಅವಧಿಗೆ ಪೂರೈಸಿಕೊಳ್ಳುವ ಬಗ್ಗೆ	52,52,764/–	1,11,000/–

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 05.03.2026 ಅಪರಾಹ್ನ 04:00 ಗಂಟೆಯೊಳಗೆ, ಟೆಂಡರ್ ತೆರೆಯುವ ದಿನಾಂಕ: 06.03.2026 ಅಪರಾಹ್ನ 04:01 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ (www.kppp.karnataka.gov.in) ಮುಖಾಂತರ ಪಡೆಯಬಹುದಾಗಿದೆ ಅಥವ ಕಛೇರಿ ಸಮಯದಲ್ಲಿ ನಗರಸಭೆಯ ಆರೋಗ್ಯ ಶಾಖೆಯಿಂದ ಪಡೆಯಬಹುದಾಗಿದೆ.

ಸಹಿ/–, ಪೌರಾಯುಕ್ತರು,
ನಗರಸಭೆ, ಪುತ್ತೂರು

DIPR/DK/KSMCA/1616/25-26 dt. 18.02.2026

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಿ.ಎ ನಿವೇಶನ ಖಾತೆ ನಂ. 31–511–371, ವಾರ್ಡ್ ನಂ. 20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110

ಸಂ. ಬಿಐಎಎಪಿಎ/ಟಿಪಿ/ಭೂಉಬ/47/2025–26/3119 ದಿನಾಂಕ : 16.02.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀ ಮೋಹನ್‌ಕುಮಾರ್ ಬಿನ್ ಲೇ॥ ಮುನಿಚಿನ್ನಪ್ಪ ಎಸ್, ಶ್ರೀ ಎಂ. ಜಗದೀಶ್ ಬಿನ್ ಲೇ॥ ಮುನಿಚಿನ್ನಪ್ಪ ಎಸ್. & ಶ್ರೀಮತಿ ನಳಿನ ಎನ್.ಆರ್. ಕೋಂ ಲೇ॥ ಎಂ. ಮಂಜುನಾಥ	ದೇವನಹಳ್ಳಿ	ಚನ್ನರಾಯಪಟ್ಟಣ	ಕೊಟ್ಟ ತೇವರು	53	3–36	ವ್ಯವಸಾಯ	ವಸತಿ
2					54	4–0		
3	ಶ್ರೀಮತಿ ಟಿ.ಎಸ್.ಆಶಾ ಕೋಂ ಎಂ.ಸುಧಾಕರ				58	4–0		
4					59	4–0		
5	ಶ್ರೀ ಎಂ.ಸುಧಾಕರ ಬಿನ್ ಲೇ॥ ಮುನಿಮುದ್ದಪ್ಪ, ಶ್ರೀ ಎಂ. ಶಿವರಾಜ್ ಬಿನ್ ಲೇ॥ ಮುನಿಮುದ್ದಪ್ಪ & ಶ್ರೀ ಎಂ.ರಾಜಶೇಖರ ಬಿನ್ ಲೇ॥ ಮುನಿಮುದ್ದಪ್ಪ	ಯಲಹಂಕ	ಜಾಲ	ಗೊಲ್ಲಹಳ್ಳಿ	9	3–35.02	ವ್ಯವಸಾಯ	ವಸತಿ
6					22/7	2–0.08		

ಪ್ರಶ್ನಿತ ಜಮೀನುಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರ ಕಛೇರಿ ಅಧಿಸೂಚನೆ ಸಂಖ್ಯೆ : ಬಿಎಂಆರ್‌ಡಿಎ/ ಎಎಲ್‌ಎನ್/ಸಿಆರ್/44/2011–12, ದಿನಾಂಕ: 16/03/2023 ರಂತೆ ಮರು ನಿಗಧಿಗೊಂಡಿರುವ ಮಧ್ಯಂತರ ವರ್ತುಲ ರಸ್ತೆ ಪಂಕ್ತೀಕರಣ ಹಾದು ಹೋಗುತ್ತಿದ್ದು, ಸದರಿ ಪಂಕ್ತೀಕರಣವನ್ನು ಯಥಾವತ್ತಾಗಿ ಕಾಯ್ದಿರಿಸಬೇಕಾಗಿರುತ್ತದೆ.

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಹಾಗೂ ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ಈಗಾಗಲೇ ವಸತಿ ಉದ್ದೇಶದ ಅಭಿವೃದ್ಧಿಗಳು ಬಂದಿರುವುದರಿಂದ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದು. ಸದರಿ ಜಮೀನುಗಳು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸದರಿ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಯೋಜನಾಬದ್ಧವಾಗಿ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಪಿ.ಎ, ದೇವನಹಳ್ಳಿ

ವಾ.ಸಾ.ಸಂ.ಇ/ವಾಪ್ರ/ಶಿರಡಿ ಸಾಯಿ/5719/2025–26

ಸಿಟಿ ಮಾರುಕಟ್ಟೆಯಲ್ಲಿ ಅತ್ಯಾಧುನಿಕ ಪಾರ್ಕಿಂಗ್ ವ್ಯವಸ್ಥೆ

ಬೆಂಗಳೂರು: ನಗರದ ಪ್ರಮುಖ ಮಾರುಕಟ್ಟೆಯಾದ ಕೆ.ಆರ್.ಮಾರುಕಟ್ಟೆಯಲ್ಲಿ ಅತ್ಯಾಧುನಿಕ ಪಾರ್ಕಿಂಗ್ ತಂತ್ರಜ್ಞಾನ ವ್ಯವಸ್ಥೆ ಜಾರಿಗೊಳಿಸಲಾಗುತ್ತಿದ್ದು, ಬಾಕಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಕೆ.ಆರ್.ಮಾರುಕಟ್ಟೆಗೆ ಮಂಗಳವಾರ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಕೆ.ಆರ್. ಮಾರುಕಟ್ಟೆಯ ತಳಮಹಡಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುತ್ತಿದೆ. ಶೇ.90ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಿ ಸಾರ್ವಜನಿಕರ ಉಪಯೋಗಕ್ಕೆ ಒದಗಿಸಲು ಸೂಚಿಸಿದರು. ಕೆ.ಆರ್. ಮಾರುಕಟ್ಟೆ ಮುಂಭಾಗದಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡು ನಿರಂತರವಾಗಿ ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು. ಮಾರುಕಟ್ಟೆಯಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ. ಮೊದಲನೇ ಮಹಡಿಯಲ್ಲಿರುವ ಶೌಚಾಲಯಗಳ ದುರಸ್ತಿ ಕಾರ್ಯ ಕೈಗೊಂಡು ನಾಗರಿಕರು ಬಳಸುವಂತೆ ಮಾಡಬೇಕೆಂದು ಹೇಳಿದರು. ತಳಮಹಡಿಯಲ್ಲಿ ಮಳೆನೀರು ನಿಲ್ಲುವುದನ್ನು ತಪ್ಪಿಸುವ ಸಲುವಾಗಿ ಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ.



ಕೆ. ಆರ್. ಮಾರುಕಟ್ಟೆಯಲ್ಲಿ ಸ್ವಚ್ಛತೆ, ಕೈಗೊಳ್ಳಬೇಕಾದ ಕಾಮಗಾರಿ, ಮಳಿಗೆಗಳಿಂದ ಕಂದಾಯ ವಸೂಲಾತಿ, ವಾಹನಗಳ ಪಾರ್ಕಿಂಗ್ ವ್ಯವಸ್ಥೆ, ಸುರಕ್ಷತೆ ದೃಷ್ಟಿಯಿಂದ ಅಧಿಕಾರಿಗಳು ಪ್ರತಿ ವಾರ ಸಮನ್ವಯ ಸಭೆ ನಡೆಸಲು, ಗ್ರಾಹಕರಿಗೆ ಹಾಗೂ ವ್ಯಾಪಾರಸ್ಥರಿಗೆ ಅನುಕೂಲಕರ ವಾತಾವರಣ ನಿರ್ಮಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.
■ **ರಾಜೇಂದ್ರ ಚೋಳನ್,** ಕೇಂದ್ರ ಪಾಲಿಕೆ ಆಯುಕ್ತ

ಅದಲ್ಲದೆ, ವಿದ್ಯುತ್ ಸಂಪರ್ಕ, ಅಗ್ನಿಶಾಮಕ ಸುರಕ್ಷತಾ ಕ್ರಮಗಳು ಸೇರಿದಂತೆ ಇತರೆ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ ಎಂದು ಅಧಿಕಾರಿಗಳು ಆಯುಕ್ತರಿಗೆ ಮಾಹಿತಿ ನೀಡಿದರು.

ಎಐ ಆಧಾರಿತ ಕ್ಯಾಮೆರಾಗಳ ಅಳವಡಿಕೆ

ನಗರದಲ್ಲಿರುವ ಪ್ರಸಿದ್ಧ ಕೆ.ಆರ್. ಮಾರುಕಟ್ಟೆಗೆ ಪ್ರತಿದಿನ ಸಹಸ್ರಾರು ಗ್ರಾಹಕರು ಭೇಟಿ ನೀಡುತ್ತಾರೆ. ಗ್ರಾಹಕರು ಹಾಗೂ ವ್ಯಾಪಾರಸ್ಥರಿಗೆ ಸುವ್ಯವಸ್ಥಿತ ಪಾರ್ಕಿಂಗ್ ಸ್ಥಳ ಕಲ್ಪಿಸುವ ಉದ್ದೇಶದಿಂದ ರೈಟ್ ಪಾರ್ಕಿಂಗ್ ಸಂಸ್ಥೆ ವತಿಯಿಂದ ತಳಮಹಡಿಯಲ್ಲಿ ನವೀಕರಣ ಕಾರ್ಯ ಕೈಗೊಳ್ಳಲಾಗುತ್ತಿದೆ. ಇಲ್ಲಿ 400 ದ್ವಿಚಕ್ರ ವಾಹನಗಳು ಹಾಗೂ 200 ಕಾರುಗಳು ನಿಲುಗಡೆ ಮಾಡಲು ವ್ಯವಸ್ಥೆ ಮಾಡಲಾಗುತ್ತಿದೆ.ಪಾರ್ಕಿಂಗ್ ಸ್ಥಳದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ 67 ಎಐ ಆಧಾರಿತ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ. ಇದರಿಂದ ಎಷ್ಟು ವಾಹನಗಳು ಪ್ರವೇಶಿಸುತ್ತವೆ ಹಾಗೂ ನಿರ್ಗಮಿಸುತ್ತವೆ ಎಂಬ ಸಂಪೂರ್ಣ ಮಾಹಿತಿ ದಾಖಲೆಯಾಗಲಿದೆ. ಇದಲ್ಲದೆ, ಸುರಕ್ಷತಾ ದೃಷ್ಟಿಯಿಂದ 12 ಅಲಾರಂ ವ್ಯವಸ್ಥೆಗಳು ಕೂಡ ಕಲ್ಪಿಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಅನಾವರಣ



9 ಡ್ರೀಮ್ಸ್ ಸಂಸ್ಥೆಯಿಂದ ಆಯೋಜಿಸಲಾಗುತ್ತಿರುವ ಸಿಎಂ ಕಪ್ 2026 ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಅಧಿಕೃತ ಲೋಗೋವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಿದರು. ಮುಖ್ಯಮಂತ್ರಿ ಅವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಚಿತ್ರರಂಗದ ಇಮ್ರಾನ್ ಸರ್ದಾರಿಯಾ, ಕವಿತಾ ಲಂಕೇಶ್, ಸಿಎಂ ಕಪ್ ಆಯೋಜಕ ಮಂಜುನಾಥ್ ಗೌಡ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಪತ್ನಿಯನ್ನೇ ಕೊಂದ ಪತಿ

ಬೆಂಗಳೂರು: ನಗರದ ಗೋವಿಂದರಾಜನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪತ್ನಿಯ ಮೇಲಿನ ಅನುಮಾನದಿಂದ ಪತಿಯೇ ಮಚ್ಚಿನಿಂದ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿದ್ದಾನೆ. ದೇವಿ ಅಲಿಯಾಸ್ ದೇವಮ್ಮ (58) ಹತ್ಯೆಯಾದವರು. ಕುಮಾರ್ (66) ಬಂಧಿತ ಪತಿ. ಸದ್ಯ ಆರೋಪಿಯನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದರು. ಕುಮಾರ್ ಗಾರೆ ಕೆಲಸ ಮಾಡುತ್ತಿದ್ದು, ದೇವಮ್ಮ ರೈಲು ನಿಲ್ದಾಣಗಳಲ್ಲಿ ಕಸ ಗುಡಿಸುವ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಕುಟುಂಬ ಸಮೇತ ಕೇರಳ ಪ್ರವಾಸಕ್ಕೆ ತೆರಳಿದ್ದರು. ಈ ವೇಳೆ ದೇವಿ ಅವರು ಚಾಲಕನ ಜತೆ ಮಾತನಾಡಿದ್ದನ್ನು ಕಂಡು, ಕುಮಾರ್ ಅನುಮಾನಗೊಂಡಿದ್ದನು. ಕಳೆದ ಒಂದು ತಿಂಗಳಿನಿಂದ ಇದೇ ವಿಚಾರವಾಗಿ ಪತ್ನಿಯ ಮೇಲೆ ಸಂಶಯಪಡುತ್ತಿದ್ದ ಕುಮಾರ್, ಫೆ.17ರಂದು ರಾತ್ರಿ ದೇವಮ್ಮ ಮಲಗಿದ್ದ ಸಮಯ ನೋಡಿ ಮಚ್ಚಿನಿಂದ ಕೊಚ್ಚಿ ಹತ್ಯೆ ಮಾಡಿದ್ದಾನೆ. ಕೃತ್ಯದ ನಂತರ ತಾನೂ ಆತ್ಮಹತ್ಯೆಗೆ ಯತ್ನಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯ ನಂತರ ಕುಮಾರ್ ತನ್ನ ಮಗನಿಗೆ ಕರೆ ಮಾಡಿ, ನಿಮ್ಮ ತಾಯಿಯನ್ನು ಕೊಂದಿದ್ದೇನೆ. ನಾನೂ ನೇಣು ಹಾಕಿಕೊಳ್ಳುತ್ತೇನೆ ಬನ್ನಿ ಎಂದು ತಿಳಿಸಿದ್ದಾನೆ. ತಕ್ಷಣವೇ ಮಕ್ಕಳು ಪೊಲೀಸರಿಗೆ ಮಾಹಿತಿ ನೀಡಿ ಸ್ಥಳಕ್ಕೆ ಬಂದಿದ್ದಾರೆ. ಗೋವಿಂದರಾಜನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಚಿನ್ನಾಭರಣ ಕದ್ದ ಮನೆಕೆಲಸದಾಕೆ ಬಂಧನ

ಬೆಂಗಳೂರು: ಮನೆ ಮಾಲೀಕರ ಕಣ್ತಪ್ಪಿಸಿ ಚಿನ್ನಾಭರಣ ಕಳ್ಳತನ ಮಾಡಿದ್ದ ಮನೆಗೆಲಸದಾಕೆಯನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿ, ಸುಮಾರು 3.40 ಲಕ್ಷ ರೂ. ಮೌಲ್ಯದ 35 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಪ್ರಮೀಳಾ (40) ಬಂಧಿತೆ. ಬಾಬುಸಾಬ್‌ಪಾಳ್ಯದ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿರುವ ನಿವಾಸಿಯೊಬ್ಬರು ಸಂಕ್ರಾಂತಿ ಹಬ್ಬದ ಹಿನ್ನೆಲೆ ದೇವರಿಗೆ ಆಭರಣಗಳನ್ನು ತೊಡಿಸಿ ಅಲಂಕರಿಸಿದ್ದರು. ಪೂಜೆ ನಂತರ ಆಭರಣಗಳನ್ನು ಬೀರುವಿನಲ್ಲಿಟ್ಟಿದ್ದರು. ಇದನ್ನು ಗಮನಿಸಿದ ಪ್ರಮೀಳಾ, ಮಾಲೀಕರಿಗೆ ತಿಳಿಯದಂತೆ ಆಭರಣಗಳನ್ನು ಕಳವು ಮಾಡಿದ್ದಳು. ಫೆ.9 ರಂದು ಸಮಾರಂಭಕ್ಕೆ ಹೋಗಲು ಮಾಲೀಕರು ಬೀರು ತೆರೆದಾಗ ಆಭರಣಗಳು ನಾಪತ್ತೆಯಾಗಿರುವುದು ಬೆಳಕಿಗೆ ಬಂದಿದೆ. ಆಭರಣ ಕಾಣದಿದ್ದಾಗ ಮಾಲೀಕರು ತಮ್ಮ ಮನೆ ಕೆಲಸದಾಕೆಯ ಮೇಲೆ ಅನುಮಾನ ವ್ಯಕ್ತಪಡಿಸಿ, ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಹೆಣ್ಣೂರು ಪೊಲೀಸರು ಕಾರ್ಯಾಚರಣೆ ನಡೆಸಿ ಜ್ಯೋತಿನಗರದ ನಿವಾಸದಲ್ಲಿದ್ದ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ವಿಚಾರಣೆಯ ಸಂದರ್ಭದಲ್ಲಿ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡಿದ್ದಾಳೆ ಎಂದು ಪೊಲೀಸರು ಹೇಳಿದರು. ಕದ್ದಿರುವ ಆಭರಣಗಳನ್ನು ಜ್ಯೋತಿನಗರ ಮತ್ತು ಬೊಮ್ಮನಹಳ್ಳಿಯ ಜ್ಯುವೆಲರಿ ಅಂಗಡಿಗಳಲ್ಲಿ ಮಾರಾಟ ಮಾಡಿರುವುದಾಗಿ ಪೊಲೀಸರಿಗೆ ಮಾಹಿತಿ ನೀಡಿದ್ದಾಳೆ. ಆಕೆಯ ಹೇಳಿಕೆಯ ಆಧಾರದ ಮೇಲೆ ಪೊಲೀಸರು ಅಂಗಡಿಗಳಿಂದ 35 ಗ್ರಾಂ. ಚಿನ್ನವನ್ನು ವಶಪಡಿಸಿಕೊಂಡು ಆಕೆಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಾಳೆಯಿಂದ ರಾಷ್ಟ್ರೀಯ ಭಾವೈಕ್ಯತಾ ಶಿಬಿರ

ಬೆಂಗಳೂರು: ಡಾ. ಮನಮೋಹನ್ ಸಿಂಗ್ ಬೆಂ. ನಗರ ವಿ.ವಿ. ಎನ್‌ಎಸ್‌ಎಸ್ ಕೋಶದ ಆಶ್ರಯದಲ್ಲಿ ಫೆ.20 ರಿಂದ 26 ರವರೆಗೆ ರಾಷ್ಟ್ರೀಯ ಭಾವೈಕ್ಯತಾ ಶಿಬಿರ – 2026 ಅನ್ನು ಹಮ್ಮಿಕೊಳ್ಳಲಾಗಿದೆ. ಸೆಂಟ್ರಲ್ ಕಾಲೇಜಿನ ಆವರಣ ದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಫೆ.20 ರಂದು ಶುಕ್ರವಾರ ಸಂಜೆ 4 ಗಂಟೆಗೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಶಿಬಿರದ ಉದ್ಘಾಟನೆ ನೆರವೇರಿಸಲಿದ್ದಾರೆ.

ದೃಷ್ಟಿ ವಿಶೇಷಚೇತನ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಬ್ರೈಲ್ ಸಂಪನ್ಮೂಲ ಕೇಂದ್ರ ಮತ್ತು ಸಮರ್ಥನಂ ಅಂಗವಿಕಲರ ಸಂಸ್ಥೆಯ ಸಹಯೋಗದಿಂದ 8 ದೃಷ್ಟಿ ವಿಶೇಷಚೇತನ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಕುಲಪತಿ ಡಾ.ಜಯಕರ ಎಸ್.ಎಂ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ವಿತರಿಸಿದರು. ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರ, ಮಹಿಳಾ ಅಧ್ಯಯನ ಕೇಂದ್ರ ಹಾಗೂ ಅರ್ಥಶಾಸ್ತ್ರ ವಿಭಾಗಗಳಲ್ಲಿ ಪ್ರಥಮ ವರ್ಷದ ಸ್ನಾತಕೋತ್ತರ ವ್ಯಾಸಂಗ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ನೀಡಲಾಗಿದ್ದು, ದೃಷ್ಟಿ ವಿಶೇಷಚೇತನ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆ, ಅಧ್ಯಯನಕ್ಕೆ ಅನುಕೂಲವಾಗುವಂತೆ ಮತ್ತು ವಿದ್ಯಾರ್ಥಿಗಳನ್ನು ಸಬಲಗೊಳಿಸುವ ದೃಷ್ಟಿಯಿಂದ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಯಿತು. ಈ ವೇಳೆ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವೆ ಶಾಂತಲಾ ಕೆ.ಟಿ, ಬ್ರೈಲ್ ಸಂಪನ್ಮೂಲ ಕೇಂದ್ರದ ಸಂಯೋಜಕ ಡಾ. ಕುಂಜಿನರಸಯ್ಯ ಮತ್ತು ಸಮರ್ಥನಂ ಅಂಗವಿಕಲ ಸಂಸ್ಥೆಯ ಉನ್ನತ ಶಿಕ್ಷಣ ವಿಭಾಗದ ರಾಘವೇಂದ್ರ, ಮತ್ತು ಸುಹಾಸ್ ಇತರರಿದ್ದರು.

ಡಂಪಿಂಗ್ ಯಾರ್ಡ್‌ಗೆ ಹೋಗದಂತೆ ಲಾರಿಗಳನ್ನು ತಡೆದ ಗ್ರಾಮಸ್ಥರು | ಕಸ ವಿಲೇವಾರಿ ಅಸ್ತವ್ಯಸ್ತ

ಕಸದ ಲಾರಿಗಳ ತಡೆದು ಹೋರಾಟ

ಬೆಂಗಳೂರು: ಬೆಳ್ಳಹಳ್ಳಿ–ಮಿಟ್ಟಗಾನಹಳ್ಳಿ ಗ್ರಾಮಸ್ಥರು ಕಸದ ಲಾರಿಗಳನ್ನು ಕಸ ಡಂಪಿಂಗ್ ಯಾರ್ಡ್(ಲ್ಯಾಂಡ್‌ಫಿಲ್–ಭೂ ಭರ್ತಿ)ಗೆ ಕಸದ ಲಾರಿಗಳನ್ನು ಬಿಡದೆ ಹೋರಾಟ ಮುಂದುವರೆಸಿದ್ದಾರೆ. ಇದರಿಂದ ನಗರದಲ್ಲಿ ಕಸ ವಿಲೇವಾರಿ ಸಮಸ್ಯೆ ಎದುರಾಗುವ ಸಾಧ್ಯತೆ ದಟ್ಟವಾಗಿದೆ. ಕಸದ ಲಾರಿಗಳು ಕಸವನ್ನು ತುಂಬಿಕೊಂಡು ಹಾಗೆ ನಿಂತಿರುವುದರಿಂದ ಕಸ ವಿಲೇವಾರಿ ಮಾಡಲಾಗದೆ ಸಿಲಿಕಾನ್ ಸಿಟಿಯಲ್ಲಿ ಕಸದ ರಾಶಿ ಹೆಚ್ಚಾಗಿ, ನಗರದಾದ್ಯಂತ ಕಸ ವಿಲೇವಾರಿ ಅಸ್ತವ್ಯಸ್ತಗೊಳ್ಳುವ ಲಕ್ಷಣವಿದೆ.

ಪಟ್ಟು ಬಿಡದ ಗ್ರಾಮಸ್ಥರು: ಸ್ಥಳೀಯ ಮೂಲಸೌಕರ್ಯ ಅಭಿವೃದ್ಧಿಗೆ ಭರವಸೆ ನೀಡಿದ ಹಣವನ್ನು ಸುಮಾರು ಎರಡು ವರ್ಷಗಳಿಂದ ಬಿಡುಗಡೆ ಮಾಡಿಲ್ಲ.ಮಿಟ್ಟಗಾನಹಳ್ಳಿ ತ್ಯಾಜ್ಯ ಸಂಸ್ಕರಣೆ ಘಟಕದಿಂದ ಸುತ್ತಮುತ್ತಲಿನ ಗ್ರಾಮಗಳಾದ ಕಣ್ಣೂರು, ಬಂಡೆಹೊಸೂರು, ಮಿಟ್ಟಗಾನಹಳ್ಳಿ ಇನ್ನಿತರ ಹಳ್ಳಿಗಳಲ್ಲಿ ಹಲವಾರು ಸಮಸ್ಯೆಗಳು ಉಂಟಾಗಿದೆ. ಮೂಲಭೂತ ಸೌಕರ್ಯಗಳ ಕೊರತೆಯು ಇದೆ. ಕಸದ ಘಟಕದಿಂದ ಸ್ಥಳೀಯ ನಿವಾಸಿಗಳಿಗೆ ಆರೋಗ್ಯ ಸಮಸ್ಯೆಗಳು ಹೆಚ್ಚಾಗಿದೆ.ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗದ ಹೊರತು ಹೋರಾಟ ನಿಲ್ಲಿಸುವುದಿಲ್ಲ ಎಂದು ಸ್ಥಳೀಯರು ಬಿಗಿಪಟ್ಟು ಹಿಡಿದಿದ್ದಾರೆ.



ದೊಡ್ಡಬಳ್ಳಾಪುರದಲ್ಲೂ ಹೋರಾಟ

ಬೆಳ್ಳಹಳ್ಳಿ–ಮಿಟ್ಟಗಾನಹಳ್ಳಿ ಭೂ ಭರ್ತಿಗೆ ವಿರೋಧ ವ್ಯಕ್ತವಾದ ಹಿನ್ನೆಲೆ ಜಿಬಿಎ ದೊಡ್ಡಬಳ್ಳಾಪುರ ಚಿಗರೇನಹಳ್ಳಿ ಬಳಿಯ ಎಂಎಸ್‌ಜಿಪಿ ಕಸದ ಘಟಕ್ಕೆ ಲಾರಿಗಳನ್ನು ಕಳುಹಿಸಿದೆ. ಆದರೆ ವಿಷಯ ತಿಳಿದ ಅಲ್ಲಿಯ ಗ್ರಾಮಸ್ಥರು ಸಹಿತ ಶಾಸಕ ಧೀರಜ್ ಮುನಿರಾಜು ನೇತೃತ್ವದಲ್ಲಿ ಹೋರಾಟ ಮಾಡಿದ್ದು, ನಿತ್ಯ ಬರುವ 72 ಲಾರಿ ಹೊರತು ಪಡಿಸಿ, ಹೆಚ್ಚುವರಿಯಾಗಿ ಬಂದ ಲಾರಿಯನ್ನು ತಡೆ ಹಿಡಿದು ಹೋರಾಟ ಮುಂದುವರೆಸಿದ್ದಾರೆ.

ಕಸದ ನಿರ್ವಹಣೆಗೆ ಆಧುನಿಕ ತಂತ್ರಜ್ಞಾನ ತರುತ್ತೇವೆ, ವಿದ್ಯುತ್ ಆಗಿ ಪರಿವರ್ತಿಸುವುದಾಗಿ ಕಾಂಗ್ರೆಸ್ ಸರ್ಕಾರ ಹೇಳಿತ್ತು.ಆದರೆ ಇಲ್ಲಿನವರೆಗೂ ಯಾವುದನ್ನೂ ಮಾಡಿಲ್ಲ.ಹಿಂದೆ ಬಿಜೆಪಿ ಸರಕಾರ ಇದ್ದಾಗ ಏನಿತ್ತೋ ಹಾಗೇ ಇದೆ. ಕಸ ಹಾಕುವ ಹೊಸ ಘಟಕ ಮಾಡಿಲ್ಲ. ಸರ್ಕಾರ ವೈಜ್ಞಾನಿಕವಾಗಿ ಕಸ ನಿರ್ವಹಣೆ ಮಾಡಬೇಕು.
■ **ಎಸ್.ಆರ್.ವಿಶ್ವನಾಥ್,** ಬಿಜೆಪಿ ಶಾಸಕ

ತಾಲ್ಲೂಕಿನ ಜನತೆಯ ಪರವಾಗಿ ನನ್ನ ಹೋರಾಟವನ್ನು ನಾನು ನಿಲ್ಲಿಸುವುದಿಲ್ಲ, ಯಾವುದೇ ಕಾರಣಕ್ಕೂ ನಿಗದಿಪಡಿಸಿದ ಕಸದ ವಾಹನ, ಒಎಂ ಕಾಪಿಯಲ್ಲಿ ಏನಿದೆಯೋ ಅದನ್ನು ಬಿಟ್ಟು ಉಳಿದ ಹೆಚ್ಚುವರಿ ವಾಹನಗಳನ್ನು ನಾನು ನಿಲ್ಲಿಸುತ್ತೇನೆ. ಎಸ್ಮಾದಡಿ ಬಂಧನಕ್ಕೆ ಒಳಗಾಗಲೂ ಸಿದ್ಧ. ಯಾವ ಬೆದರಿಕೆಗೂ ಬಗ್ಗುವುದಿಲ್ಲ.
■ **ಧೀರಜ್ ಮುನಿರಾಜು,** ಬಿಜೆಪಿ ಶಾಸಕ, ದೊಡ್ಡಬಳ್ಳಾಪುರ


ಕಸ ವಿಲೇವಾರಿ ಶೀಘ್ರ ಇತ್ಯರ್ಥ



ಕಸದ ವಿಲೇವಾರಿ ವಿರುದ್ಧ ಸ್ಥಳೀಯರು ಆಕ್ರೋಶದ ವ್ಯಕ್ತಪಡಿಸಿರುವ ಹಿನ್ನೆಲೆ, ಸ್ಥಳೀಯ ನಿವಾಸಿಗಳ ಜೊತೆ ಮಾತುಕತೆ ನಡೆಸಿ ಮುಂದಿನ 2–3 ದಿನಗಳಲ್ಲಿ ಸಮಸ್ಯೆಯನ್ನು ಇತ್ಯರ್ಥಗೊಳಿಸಲಾಗುವುದು. ಈಗಾಗಲೇ ಘನತ್ಯಾಜ್ಯ ವಿಭಾಗದ ಅಧಿಕಾರಿಗಳು ಹಾಗೂ ಎಂಜಿನಿಯರ್‌ಗಳು ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯರ ಮನವೊಲಿಸಲು ಪ್ರಯತ್ನಿಸಿದ್ದಾರೆ .ಸ್ಥಳೀಯಪ್ರದೇಶ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಣ ಬಿಡುಗಡೆ ಮಾಡುವಂತೆ ನಿವಾಸಿಗಳುಒತ್ತಾಯಿಸಿದ್ದಾರೆ.ಹಣ ಬಿಡುಗಡೆಗೆ ಸಂಬಂಧಿಸಿದಂತೆ ಎಲ್ಲಾ ತಯಾರಿಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸ್ಪಷ್ಟನೆ ನೀಡಿದ್ದಾರೆ.

ಪತ್ನಿ ಹತ್ಯೆಗೈದ ಇಸ್ರೋ ನಿವೃತ್ತ ಉದ್ಯೋಗಿ

ಬೆಂಗಳೂರು: ನಗರದ ಅವಲಹಳ್ಳಿ ಬಳಿಯ ಖಾಸಗಿ ಅಪಾರ್ಟ್‌ಮೆಂಟ್‌ನಲ್ಲಿ ಇಸ್ರೋ ನಿವೃತ್ತ ಉದ್ಯೋಗಿಯೊಬ್ಬರು ಪತ್ನಿಯನ್ನೇ ಹತ್ಯೆಗೈದಿದ್ದಾರೆ.



ನಾಗೇಶ್ವರರಾವ್ (75) ಬಂಧಿತ. ಈತನ ಪತ್ನಿ ಸಂಧ್ಯಾಶ್ರೀ ಕೊಲೆಯಾದವರು. ಬಹಳ ದಿನಗಳಿಂದ ಅನಾರೋಗ್ಯದ ಸಮಸ್ಯೆಯಿಂದ ಬಳಲುತ್ತಿದ್ದ ನಾಗೇಶ್ವರ್ ರಾವ್, ಆತ್ಮಹತ್ಯೆಗೆ ತೀರ್ಮಾನಿಸಿದ್ದ. ನಂತರ ಪತ್ನಿ ಒಂಟಿಯಾಗುತ್ತಾಳೆ ಎಂದು ತೀರ್ಮಾನಿಸಿ ಪತ್ನಿ ಸಂಧ್ಯಾಳನ್ನು ಟವಲ್‌ನಿಂದ ಕತ್ತು ಬಿಗಿದು ಕೊಲೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಂಧ್ಯಾಶ್ರೀ ಅವರು ಮನೆಯ ಅಡುಗೆ ಮನೆಯಲ್ಲಿದ್ದಾಗ ಕೃತ್ಯ ನಡೆಸಲಾಗಿದೆ. ಬುಧವಾರ ಬೆಳಗ್ಗೆ 10 ಸಮಯದಲ್ಲಿ ಈ ಘಟನೆ ನಡೆದಿದೆ. ನಾಗೇಶ್ವರ ರಾವ್ ಅವರು ಟವಲ್ ಬಳಸಿ ಹಿಂದಿನಿಂದ ಹೋಗಿ ಹತ್ಯೆ ಮಾಡಿದ್ದಾರೆ. ಬಳಿಕ ಅದೇ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸುತ್ತಿದ್ದ ಓರ್ವರಿಗೆ ಕರೆ ಮಾಡಿ ಪತ್ನಿಯನ್ನು ಕೊಲೆ ಮಾಡಿರುವುದಾಗಿ ತಿಳಿಸಿದ್ದಾರೆ.ನಂತರಅಪಾರ್ಟ್‌ಮೆಂಟ್‌ನಲ್ಲಿರುವವೈದ್ಯರೂ ಪರಿಶೀಲನೆ ನಡೆಸಿ, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಆ ಮಾಹಿತಿಯ ಅನ್ವಯ ಪ್ರಕರಣ ದಾಖಲಿಸಿ, ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿ ವಿಚಾರಣೆ ವೇಳೆ ಅಸ್ಪಷ್ಟ ಮಾಹಿತಿ ನೀಡುತ್ತಿದ್ದಾರೆ. ಮೇಲ್ನೋಟಕ್ಕೆ ಅವರು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವಂತೆ ತೋರುತ್ತಿದೆ. ಕೃತ್ಯಕ್ಕೆ ನಿಖರವಾದ ಕಾರಣವನ್ನು ಪತ್ತೆಹಚ್ಚಲು ತನಿಖೆ ಮುಂದುವರಿಸಿದ್ದೇವೆ.
■ **ರಮೇಶ್ ಬಾನೋತ್,** ಜಂಟಿ ಪೊಲೀಸ್ ಆಯುಕ್ತ (ಪೂರ್ವ ವಲಯ)

ಫೆ. 21ಕ್ಕೆ ಜನರಂಜನೆಯ ರಸದೌತಣ ಕಾರ್ಯಕ್ರಮ

ಬೆಂಗಳೂರು: ಗಾಯಕ ಶ್ರೀನಾಥ್ ಭಾರದ್ವಾಜ್ ಅವರ ಶ್ರುತಿ ಲಯ ಸಂಗೀತ ಕಲ್ಚರಲ್ ಅಕಾಡೆಮಿ ವತಿಯಿಂದ ಫೆ.21 ರಂದು ಸಂಜೆ 5.30ಕ್ಕೆ ಮಲ್ಲೇಶ್ವರದ ನೀಲಾದ್ರಿ ಆಡಿಟೋರಿಯಂನಲ್ಲಿ ಜನರಂಜನೆಯ ರಸದೌತಣ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ, ಖ್ಯಾತ ನರರೋಗ ತಜ್ಞ ಡಾ.ವೆಂಕಟರಮಣ, ನಿರ್ಮಾಪಕ ಕೆ.ಗಣೇಶ್ ರಾವ್ ಕೇಸರ್ಕರ್, ರಾಜೀವ್‌ಗಾಂಧೀ ಕಾನೂನು ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಮಂಜುಳ, ರಾಜ್ಯ ಪ್ರಶಸ್ತಿ ಪುರಸ್ಕೃತ ದರ್ಶನ್, ಸೌಂಡ್ ಆಫ್ ಮ್ಯುಸಿಕ್‌ನ ಗುರುರಾಜ್.ಕೆ, ಗೆಳೆಯರ ಬಳಗದ ವಿಜಯ್ ಕುಮಾರ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ. ಜನರಂಜನೆಯ ರಸದೌತಣದಲ್ಲಿ ಸಿಚಂನ ಅವರಿಂದ ಶಾಸ್ತ್ರೀಯ ನೃತ್ಯ, ಶಾಲಾ ಮಕ್ಕಳಿಂದ ನೃತ್ಯ ಪ್ರದರ್ಶನ, ಜನಪದ ಗೀತೆ, ಭಾವಗೀತೆ ಮತ್ತು ಚಲನಚಿತ್ರ ಜನಪ್ರಿಯ ಗೀತೆಗಳ ಗಾಯನ ಕಾರ್ಯಕ್ರಮಗಳು ಜರುಗಳಿವೆ.

ಸಾಹಿತ್ಯಕ್ಕೆ ಚಿದಾನಂದಮೂರ್ತಿ ಕೊಡುಗೆ ಅನನ್ಯ: ಹಂಪನಾ



ಬೆಂಗಳೂರು: ಕನ್ನಡ ನೆಲ, ಜಲ, ಭಾಷೆಯ ವಿಚಾರಕ್ಕಾಗಿ ತಮ್ಮ ಪ್ರಾಣವನ್ನೇ ಮುಡುಪಿಟ್ಟ ಅಪರೂಪದ ಬರಹಗಾರ ಡಾ.ಎಂ.ಚಿದಾನಂದಮೂರ್ತಿ. ಅವರು ಕನ್ನಡ ಸಾಹಿತ್ಯ, ಸಂಶೋಧನೆ ಮತ್ತು ವೈಚಾರಿಕತೆಗೆ ಕೊಟ್ಟ ಕೊಡುಗೆ ಅನನ್ಯವಾದದ್ದು ಎಂದು ಹಿರಿಯ ಸಾಹಿತಿ ನಾಡೋಜ ಡಾ. ಹಂಪ ನಾಗರಾಜಯ್ಯ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ನಯನ ರಂಗಮಂದಿರದಲ್ಲಿ ಆಯೋಜಿಸಿದ್ದ ಡಾ.ಎಂ. ಚಿದಾನಂದಮೂರ್ತಿಯವರ ಸಮಗ್ರ ಸಾಹಿತ್ಯ ಸಂಪುಟಗಳು ಹಾಗೂ ವಿವಿಧ ಮರು ಮುದ್ರಣ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚಿದಾನಂದಮೂರ್ತಿಯವರು ಕನ್ನಡ ಸಾಹಿತ್ಯ ಲೋಕಕ್ಕೆ ಕೊಟ್ಟ ಕೊಡುಗೆಯನ್ನು ಒಂದು ಹಿಡಿತದಲ್ಲಿ ಅಳತೆ ಮಾಡಲಾಗದು. ಸೃಜನಶೀಲ, ಸೃಜನೇತರ ಬರಹಗಳ ಜತೆಜತೆಗೆ ಅವರ ಸಂಶೋಧನಾಶೀಲ ವಿಚಾರ ವೈಖರಿಯು ನಮ್ಮನ್ನು ಅಚ್ಚರಿಗೊಳಿಸುತ್ತದೆ. ಅವರ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕೃತಿ ಸಂಶೋಧಕರ ಪಾಲಿಗೆ ಭಗವದ್ಗೀತೆಯಾಗಿದೆ. ಅವರ ಸಾಹಿತ್ಯದ ವಿಸ್ತಾರ ಮತ್ತು ಶಾಸ್ತ್ರೀಯ ಅಧ್ಯಯನ ಮಾಡುವ ಅವಶ್ಯಕತೆ ಹಿಂದೆಂದಿಗಿಂತ ಅಧಿಕವಾಗಿದೆ ಎಂದು ಅವರು ಹೇಳಿದರು. ಕೃತಿಯ ಸಂಪಾದಕರ ಡಾ. ಬಸವರಾಜ ಕಲ್ಗುಡಿ ಮಾತನಾಡಿ, ಡಾ.ಎಂ.ಚಿದಾನಂದಮೂರ್ತಿ ಅವರು ಬಹುಮುಖಿ ಸಂವೇದನೆ ಮತ್ತು ಬಹುಮುಖಿ ಚಿಂತನೆಯುಳ್ಳ ಅಪರೂಪದ ವ್ಯಕ್ತಿ ಅವರು ಬರೆದ ಸಾಹಿತ್ಯದ ಪ್ರಮಾಣ ಬಹಳ ದೊಡ್ಡದು ಈಗ ನಾವು 15 ಸಂಪುಟಗಳಲ್ಲಿ ಅವರ ಕೃತಿಗಳನ್ನು ವಿಂಗಡಿಸಿದ್ದೇವೆ. ಎಂದು ಹೇಳಿದರು.

ಪುಸ್ತಕಪ್ರಾಧಿಕಾರದಅಧ್ಯಕ್ಷ ಡಾ.ಮಾನಸ, ಡಾ.ಎಂ.ಚಿದಾನಂದಮೂರ್ತಿಗಳ ಮಗ ವಿನಯ್ ಚಿದಾನಂದಮೂರ್ತಿ, ಡಾ. ಸಿ.ಆರ್. ಚಂದ್ರಶೇಖರ, ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಇದ್ದರು.

ಫೆ.24ರಂದು ಇಎಸ್‌ಐಸಿ ಸಂಸ್ಥಾಪನಾ ದಿನಾಚರಣೆ

ಬೆಂಗಳೂರು: ಕರ್ನಾಟಕ ರಾಜ್ಯ ವಿಮಾ ನಿಗಮದ (ಇ.ಎಸ್.ಐ.ಸಿ.) ಉಪ ಪ್ರಾದೇಶಿಕ ಕಚೇರಿ, ಬೊಮ್ಮಸಂದ್ರ ವತಿಯಿಂದ ಫೆ.24 ರಿಂದ ಮಾ.10 ರವರೆಗೆ 75ನೇ ಇಎಸ್‌ಐಸಿ ಸಂಸ್ಥಾಪನಾ ದಿನಾಚರಣೆ ಹಾಗೂ ವಿಶೇಷ ಸೇವಾ ಪಕ್ಷೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಈ ಅವಧಿಯಲ್ಲಿ ವಿಮೆದಾರರು ಹಾಗೂ ಉದ್ಯೋಗದಾತರಿಗೆ ಸಂಬಂಧಿಸಿದ ಬಾಕಿ ಇರುವ ಕುಂದು–ಕೊರತೆಗಳನ್ನು ಪರಿಹರಿಸಲು ಮತ್ತು ನಿಗಮದ ವಿವಿಧ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲು ವಿಶೇಷ ಅದಾಲತ್ ಮತ್ತು ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ಬೊಮ್ಮಸಂದ್ರದ ಉಪ ಪ್ರಾದೇಶಿಕ ಕಚೇರಿಯಲ್ಲಿ ಫೆ.26 ರಂದು ಬೆಳಗ್ಗೆ 11 ಗಂಟೆಗೆ ಸಾರ್ವಜನಿಕ ಕುಂದುಕೊರತೆಗಳ ಅದಾಲತ್ ಹಾಗೂ ಮಾ.5 ರಂದು ಬೆಳಗ್ಗೆ 11ಗಂಟೆಗೆ ಉದ್ಯೋಗದಾತರ ಕಾರ್ಯಾಗಾರ (ಸಿ ಮತ್ತು ಲೇಬರ್ ಲಾ) ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಪಕ್ಷೋತ್ಸವದ ಪ್ರಮುಖ ಉದ್ದೇಶಗಳು

ವಿಮೆದಾರರು ಮತ್ತು ಅವರ ಅವಲಂಬಿತರಿಗೆ ಸಂಬಂಧಿಸಿದ ಹಕ್ಕು ಪ್ರತಿಪಾದನೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವುದು. ಬಾಕಿ ಇರುವ ಸೌಲಭ್ಯಗಳ ಪಾವತಿ ಮತ್ತು ವೈದ್ಯಕೀಯ ಮರುಪಾವತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವುದು. ಉದ್ಯೋಗದಾತರಿಗೆ ಇಎಸ್‌ಐಸಿ ಕಾಯ್ದೆ, ಆನ್‌ಲೈನ್ ಸೌಲಭ್ಯಗಳು ಮತ್ತು ಇತ್ತೀಚಿನ ತಿದ್ದುಪಡಿಗಳ ಬಗ್ಗೆ ಮಾಹಿತಿ ನೀಡುವುದು. ನಿಗಮದ ಸೇವೆಗಳಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬಜೆಟ್‌ನಲ್ಲಿ ಕಾಸಿಯಾ ಬೇಡಿಕೆ ಪರಿಗಣನೆಗೆ ಮನವಿ

ಬೆಂಗಳೂರು: ರಾಜ್ಯದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಮತ್ತು ಏಳಿಗೆ ಹಿತದೃಷ್ಟಿಯಿಂದ ಮುಂಬರುವ 2026–27ರ ರಾಜ್ಯ ಆಯವ್ಯಯದಲ್ಲಿ ಕಾಸಿಯಾ ಶ್ರೇಷ್ಠತಾ ಮತ್ತು ನಾವೀನ್ಯತಾ ಕೇಂದ್ರಕ್ಕೆ ಅನುದಾನ ಸೇರಿದಂತೆ ಮುಂತಾದ ಬೇಡಿಕೆಯನ್ನು ಪರಿಗಣನೆ ಮಾಡಬೇಕೆಂದು ಕಾಸಿಯಾ ಉಪಾಧ್ಯಕ್ಷ ನಿಂಗಣ್ಣ ಎಸ್. ಬಿರಾದರ ಮನವಿ ಮಾಡಿದರು.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯಯವರು ತಮ್ಮ ಹಿಂದಿನ ಅವಧಿಯಲ್ಲಿ 2017–18ರ ಬಜೆಟ್‌ನಲ್ಲಿ ದಾಬಸ್‌ಪೇಟೆಯಲ್ಲಿ ಕಾಸಿಯಾ ಶ್ರೇಷ್ಠತಾ ಮತ್ತು ನಾವೀನ್ಯತಾ ಕೇಂದ್ರವನ್ನು ಸ್ಥಾಪಿಸಲು, 5 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಮಂಜೂರು ಮಾಡಿದ್ದಾರೆ. ಕೋವಿಡ್ ಮಹಾಮಾರಿಯ ಕಾರಣದಿಂದ ಯೋಜನೆ ಅನುಷ್ಠಾನದಲ್ಲಿ ಅಸಹಜ ವಿಳಂಬ ಉಂಟಾಗಿ, ಸಮಯಕ್ಕೆ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ, ವಿವಿಧ ಕಾರಣಗಳಿಂದಾಗಿ ಯೋಜನೆಯ ಒಟ್ಟು ವೆಚ್ಚವನ್ನು 34 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಇದುವರೆಗೆ ಕಾಸಿಯಾ ಸಂಸ್ಥೆಯು ಯೋಜನೆಗಾಗಿ ಸುಮಾರು 20 ಕೋಟಿ ರೂ.ಗಳನ್ನು ವೆಚ್ಚ ಮಾಡಿದೆ. ಯೋಜನೆಯನ್ನು ಸಂಪೂರ್ಣಗೊಳಿಸಲು ಕಂಪೌಂಡ್ ಗೋಡೆ, ರಸ್ತೆಗಳು, ಒಳಚರಂಡಿ ಶುದ್ಧೀಕರಣ ಘಟಕ, ವಿದ್ಯುತ್ ಸಂಪರ್ಕ, ಪೇಂಟಿಂಗ್ ಹಾಗೂ ಇತರೆ ಬಾಕಿ ಕೆಲಸಗಳಿಗೆ ಕನಿಷ್ಠ 9 ಕೋಟಿ ರೂ.ಗಳ ಅಗತ್ಯವಿದೆ. ಆದ್ದರಿಂದ 2026–27ರ ಬಜೆಟ್‌ನಲ್ಲಿ 7 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಮಂಜೂರು ಮಾಡಬೇಕೆಂದು ಮನವಿ ಮಾಡಿದರು.


20 ವರ್ಷ ನಂತರ ಕಾರ್ಯಾರಂಭ | ₹4 ಕೋಟಿ ಅನುದಾನ

ಹಲಸೂರು ಕೆರೆ ಹೂಳೆತ್ತುವ ಕಾರ್ಯ

ಬೆಂಗಳೂರು: ನಗರದ ಐತಿಹಾಸಿಕ 108 ಎಕರೆಯ ಹಲಸೂರು ಕೆರೆಯಲ್ಲಿ 20 ವರ್ಷಗಳ ನಂತರ ಹೂಳೆತ್ತುವ ಕಾರ್ಯ ಆರಂಭವಾಗಲಿದೆ. ಸುಮಾರು ಎರಡು ದಶಕಗಳ ನಂತರ ಕೆರೆಯ ಸಂಪೂರ್ಣ ಹೂಳು ತೆಗೆಯುವ ಕಾರ್ಯವನ್ನು ರಾಷ್ಟ್ರೀಯ ವಿಪತ್ತು ಶಮನ ನಿಧಿ(ಎನ್‌ಡಿಎಂಎಫ್)ಅಡಿಯಲ್ಲಿ 4 ಕೋಟಿ ರೂ. ಅನುದಾನದಿಂದ ಕಾಮಗಾರಿ ಕೈಗೊಳ್ಳಲಾಗಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ ಇಂಜಿನಿಯರ್‌ಗಳ ನೇತೃತ್ವದಲ್ಲಿ ಕೆರೆಯ ಸಂಪೂರ್ಣ ಹೂಳು ತೆಗೆಯುವ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಆರಂಭಿಸಲಾಗಿದ್ದು, ಸಂಪೂರ್ಣ ನೀರನ್ನು ಹೊರಹಾಕಲಾಗುತ್ತಿದೆ.ಪ್ರಸ್ತುತ ಕೆರೆಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ದಿನಕ್ಕೆ 1.5 ಎಂಎಲ್‌ಡಿ ಶುದ್ಧೀಕೃತ ನೀರು ಬರುತ್ತಿದೆ. ಹೂಳು ತೆಗೆಯುವ ಕಾರ್ಯ ಪೂರ್ಣಗೊಳ್ಳುವವರೆಗೆ ಈ ನೀರನ್ನು ಪ್ರಮುಖ ಕಾಲುವೆಗೆ ವರ್ಗಾಯಿಸುವ ಬಗ್ಗೆ ಅಧ್ಯಯನ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಮುಂದಿನ ಎರಡು ವಾರಗಳಲ್ಲಿ ಹೂಳು ತೆಗೆಯುವಿಕೆ ಕಾರ್ಯ ಆರಂಭವಾಗು ಸಾಧ್ಯತೆ ಇದೆ. ಕಳೆದ 14 ವರ್ಷಗಳಿಂದ ಬೆಂಗಳೂರು ಮೀನು ಉತ್ಪನ್ನ ಮತ್ತು ಮಾರಾಟಗಾರ ಸಂಘದ ಅಡಿಯಲ್ಲಿ ಸುಮಾರು 120 ಮೀನುಗಾರರು ಕೆರೆಯಲ್ಲಿ



ಮೀನುಗಾರಿಕೆ ಮತ್ತು ನಿರ್ವಹಣೆಯಲ್ಲಿ ತೊಡಗಿದ್ದಾರೆ. ಜನವರಿ 31ರೊಳಗೆ ಮೀನು ಸಂಗ್ರಹ ತೆರವುಗೊಳಿಸಲು ಸೂಚನೆ ನೀಡಲಾಗಿದ್ದು, ಅದರಂತೆ ಚಟುವಟಿಕೆ ನಿಲ್ಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೂಳು ಎತ್ತುವ ಕೆಲಸ ಪೂರ್ಣಗೊಂಡು, ಸುಮಾರು 3–4 ತಿಂಗಳಲ್ಲಿ ಮತ್ತೆ ನೀರು ತುಂಬಿದ ನಂತರ ಮೀನುಗಾರಿಕೆ ಪುನರಾರಂಭಿಸಲಾಗುತ್ತದೆ. ಪ್ರಸ್ತುತ ಕಾಮಗಾರಿ ನಡೆಯುತ್ತಿರುವುದರಿಂದ ಸಾರ್ವಜನಿಕರಿಗೆ ಒಂದು ಭಾಗದಲ್ಲಿ ನಡಿಗೆ ನಿರ್ಬಂಧಿಸಲಾಗಿದೆ. ಕಾಮಗಾರಿ ಪೂರ್ಣಗೊಂಡ ಬಳಿಕ ವಾಕಿಂಗ್ ಅವಕಾಶ ನೀಡಲಾಗುವುದು ಎಂದು ಪಾಲಿಕೆ ಅಧಿಕಾರಿಗಳು ಹೇಳಿದ್ದಾರೆ.

ಇಂದು ನಗರದಲ್ಲಿ...

- ಡಾ. ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ: ಹೊಲೆಮಾದಿಗರ ಹಾಡು –50 ವಿಷಯ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ
- ಸ್ಥಳ: ಬಾಪೂಜಿ ಸಭಾಂಗಣ, ಸರಕಾರಿ ಕಲಾ ಕಾಲೇಜು
- ಬೆಳಗ್ಗೆ 11.30

- ಪ್ರೆಸ್‌ಕ್ಲಬ್ ವರ್ಷದ ವ್ಯಕ್ತಿ ಪ್ರಶಸ್ತಿ ಪ್ರದಾನ ಸಮಾರಂಭ
- ಸ್ಥಳ: ಪ್ರೆಸ್‌ಕ್ಲಬ್ ಸಭಾಂಗಣ
- ಬೆಳಗ್ಗೆ 11.30

- ಕನ್ನಡ ಮೊದಲು ಸ್ನೇಹಿತರು ಮತ್ತು ಸಂಘಗಳ ಬಳಗದ 7ನೇ ವರ್ಷದ ಪ್ರಾದೇಶಿಕ ದಿನಾಚರಣೆ
- ಸ್ಥಳ: ಕೃಷ್ಣರಾಜ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು
- ಸಂಜೆ 4

ಇಂದಿನ ಪಂದ್ಯಗಳು

ವಿಂಡೀಸ್ VS ಇಟಲಿ
ಬೆಳಗ್ಗೆ 11 (ಕೋಲ್ಕತ್ತಾ)

ಶ್ರೀಲಂಕಾ VS ಜಿಂಬಾಬ್ವೆ
ಮಧ್ಯಾಹ್ನ 3 (ಕೊಲಂಬೋ)

ಅಫ್ಘಾನಿಸ್ತಾನ VS ಕೆನಡಾ
ಸಂಜೆ 7 (ಚೆನ್ನೈ)


ಕಿರುಸುದ್ದಿ

ಟಾಪ್ 10ರಲ್ಲಿ ಕಿಶನ್

• **ದುಬೈ:** ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವ ಕ್ರಿಕೆಟ್‌ನಲ್ಲಿ ಹೊಸ ಛಾಪು ಮೂಡಿಸುತ್ತಿರುವ ಇಶಾನ್ ಕಿಶನ್ ಐಸಿಸಿ ಶ್ರೇಯಾಂಕದಲ್ಲಿ ಟಾಪ್ ಹತ್ತಕ್ಕೆ ಲಗ್ಗೆ ಹಾಕಿದ್ದಾರೆ. ಜನವರಿವರೆಗೂ ಅಂತಾರಾಷ್ಟ್ರೀಯ ಕ್ರಿಕೆಟ್ ಅಂಗಳದಲ್ಲಿ ಹೆಸರೇ ಇರದ ಕಿಶನ್ ದೇಶಿ ಕ್ರಿಕೆಟ್‌ನಲ್ಲಿ ಅಬ್ಬರಿಸಿ ವಿಶ್ವಕಪ್‌ನಲ್ಲಿ ಅವಕಾಶ ಪಡೆದರು. ಇದಕ್ಕೂ ಮುನ್ನ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ತಮ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಭಾರತೀಯರ ಮನೆ ಮಾತಾದರು. ಈಗ ವಿಶ್ವಕಪ್‌ನಲ್ಲಿ ಎದುರಾದ ತಂಡಗಳನ್ನು ದಂಡಿಸಿ ಮೆರೆದಾಡುತ್ತಿರುವ ಅವರು ಬುಧವಾರ ಪ್ರಕಟಗೊಂಡ ಶ್ರೇಯಾಂಕ ಪಟ್ಟಿಯಲ್ಲಿ ಎಂಟನೇ ಸ್ಥಾನಕ್ಕೇರಿದ್ದಾರೆ. 732 ರೇಟಿಂಗ್ ಅಂಕಗಳನ್ನು ಹೊಂದಿದ್ದಾರೆ. ಆರಂಭಿಕ ಅಭಿಷೇಕ್ ಶರ್ಮ ಮೊದಲನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ. ತಿಲಕ್ ವರ್ಮಾ ಮತ್ತು ಸೂರ್ಯಕುಮಾರ್ ಯಾದವ್ ಟಾಪ್ ಹತ್ತರಲ್ಲೇ ಕಾಣಿಸಿಕೊಂಡಿದ್ದಾರೆ. ಖುಷಿ ಪಡುವ ವಿಚಾರದಲ್ಲಿ ಹಾರ್ದಿಕ್ ಪಾಂಡ್ಯ ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ 3ನೇ ಸ್ಥಾನಕ್ಕೇರಿದ್ದಾರೆ.

ಬೆಂಗಳೂರು ಓಪನ್: ಶ್ರೀವಲ್ಲಿಗೆ ಮುನ್ನಡೆ

• **ಬೆಂಗಳೂರು:** ಮಹಿಳೆಯರ ಬೆಂಗಳೂರು ಓಪನ್ ಪಂದ್ಯಾವಳಿಯ ಮೊದಲ ಸುತ್ತಿನ ಪಂದ್ಯದಲ್ಲಿ, ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಪ್ರೀಕ್ವಾರ್ಟರ್ ಪ್ರವೇಶಿಸಿದ್ದಾರೆ. ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನ ರೋಚಕ ಪೈಪೋಟಿಯಲ್ಲಿ ಅವರು ಮಾಲ್ಟಾದ ಫ್ರಾನ್ಸೆಸ್ಕಾ ಕುರ್ಮಿ ವಿರುದ್ಧ 7-6(6), 6-4 ಅಂತರದಲ್ಲಿ ಗೆಲುವು ಸಾಧಿಸಿದರು. ಪಂದ್ಯದ ಆರಂಭದಲ್ಲೇ ಇಬ್ಬರೂ ಆಟಗಾರ್ತಿಯರು ಕಠಿಣ ಪೈಪೋಟಿ ನೀಡಿದರು. ಭಮಿಡಿಪಾಟಿ ಮೊದಲ ಗೇಮ್‌ನಲ್ಲಿ ಏಸ್‌ಗಳನ್ನು ಸಿಡಿಸಿ ಸರ್ವ್ ಉಳಿಸಿಕೊಂಡರು. ಮೂರನೇ ಗೇಮ್‌ನಲ್ಲಿ ಕುರ್ಮಿ ಬ್ರೇಕ್ ಪಡೆದು ದೀರ್ಘ ಬೇಸ್‌ಲೈನ್ ರ್‍ಯಾಲಿಗಳ ಮೂಲಕ ಮುನ್ನಡೆ ಸಾಧಿಸಿದರು.



ಆದರೆ ಭಮಿಡಿಪಾಟಿ ತಕ್ಷಣ ಪ್ರತಿಬ್ರೇಕ್ ಮಾಡಿ ಸೆಟ್ ಸಮಬಲಕ್ಕೆ ತಂದರು. ಇಬ್ಬರೂ ಆಟಗಾರ್ತಿಯರು ದೀರ್ಘ ರ್‍ಯಾಲಿಗಳಲ್ಲಿ ತೊಡಗಿದ ಕಾರಣ ಸೆಟ್ ಟೈಬ್ರೇಕ್‌ಗೆ ತಲುಪಿತು. ಒಂದು ಸೆಟ್ ಪಾಯಿಂಟ್ ತಪ್ಪಿಸಿದರೂ ಭಮಿಡಿಪಾಟಿ ತಾಳ್ಮೆ ಕಾಪಾಡಿಕೊಂಡು ಬಲಿಷ್ಠ ಏಸ್‌ನೊಂದಿಗೆ ಮೊದಲ ಸೆಟ್ ತಮ್ಮದಾಗಿಸಿಕೊಂಡರು. ಎರಡನೇ ಸೆಟ್‌ನಲ್ಲಿ ಭಮಿಡಿಪಾಟಿ ಆರಂಭದಲ್ಲೇ ಬ್ರೇಕ್ ಪಡೆದು ಮುನ್ನಡೆ ಸಾಧಿಸಿದರು. ಪಂದ್ಯ ಮುಂದುವರಿದಂತೆ ಕುರ್ಮಿ ಆಯಾಸಗೊಂಡಂತೆ ಕಾಣಿಸಿಕೊಂಡರು. ಏಳನೇ ಗೇಮ್‌ನಲ್ಲಿ ಮತ್ತೊಮ್ಮೆ ಬ್ರೇಕ್ ಪಡೆದ ಭಮಿಡಿಪಾಟಿ 6-4ರಿಂದ ಸೆಟ್ ಮುಕ್ತಾಯಗೊಳಿಸಿ ಜಯ ಖಚಿತಪಡಿಸಿಕೊಂಡರು. ಇದಕ್ಕೂ ಮೊದಲು ಮಾಯಾ ರಾಜೇಶ್ವರನ್ ರೇವತಿ ಐದನೇ ಶ್ರೇಯಾಂಕಿತ ಪೋಲಿನಾ ಇಯಾತ್ಸೆಂಕೊ ವಿರುದ್ಧ 1-6, 6-1, 0-6 ಅಂತರದಲ್ಲಿ ಸೋತರು. ಮೊದಲ ಶ್ರೇಯಾಂಕಿತ ತಾಲಿಯಾ ಗಿಬ್ಸನ್ ವೈದೇಹಿ ಚೌಧರಿ ವಿರುದ್ಧ 6-4, 6-0 ಜಯ ಸಾಧಿಸಿದರು. ಮೂರನೇ ಶ್ರೇಯಾಂಕಿತ ಹ್ಯಾನ್ನೆ ವಾಂಡೆವಿಂಕಲ್ ಯಾ-ಹ್ಸುಯಾನ್ ಲೀ ಅವರನ್ನು 6-1, 6-2 ಅಂತರದಲ್ಲಿ ಸೋಲಿಸಿದರು. ಎರಡನೇ ಶ್ರೇಯಾಂಕಿತ ಲನ್ಲಾನಾ ತರರೂಡೆ ವಿಕ್ಟೋರಿಯಾ ಮಿಲೋವಾನೋವಾ ವಿರುದ್ಧ 6-1, 6-4 ಜಯಿಸಿದರು. ಏಳನೇ ಶ್ರೇಯಾಂಕಿತ ಎಲೆನಾ ಪ್ರಿಡಾಂಕಿನಾ ಎರಿ ಶಿಮಿಜು ವಿರುದ್ಧ 7-6(5), 6-4 ಅಂತರದಲ್ಲಿ ಗೆಲುವು ದಾಖಲಿಸಿದರು.

ಭಾರತ ಮಹಿಳೆಯರಿಗೆ ಆಸೀಸ್ ಎದುರಾಳಿ

• **ಕ್ಯಾನ್‌ಬೆರಾ:** ಮೊದಲ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿರುವ ಭಾರತೀಯ ಮಹಿಳೆಯರ ತಂಡವು ತನ್ನ ಎರಡನೇ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಗುರುವಾರದಂದು ಎದುರಿಸಲಿದೆ. ಎರಡು ಪಂದ್ಯಗಳ ಈ ಸರಣಿಯಲ್ಲಿ ಮುನ್ನಡೆ ಸಾಧಿಸಿರುವ ಭಾರತೀಯರು ಪಂದ್ಯದೊಂದಿಗೆ ಸರಣಿ ಗೆಲ್ಲುವುದಕ್ಕೆ ಸಜ್ಜಾಗಿದ್ದಾರೆ. ಈ ಹಿಂದೆ ನಡೆದಿರುವ ಮೊದಲ ಪಂದ್ಯದಲ್ಲಿ ಗೆದ್ದ ನಂತರ ಎರಡನೇ ಪಂದ್ಯ ಕ್ಯಾನ್‌ಬೆರಾದಲ್ಲಿ ನಡೆಯಲಿದೆ. ಭಾರತ ಗೆದ್ದರೆ ಸರಣಿ ಟ್ರೋಫಿ ತೆಗೆದುಕೊಂಡು ಬರಲಿದೆ. ಆಸೀಸ್ ಗೆದ್ದರೆ ಸರಣಿ ಟೈಗೊಳ್ಳಲಿದೆ.

ಭಾರತಕ್ಕೆ ಕಾಲಿಡಲಿದೆಯೇ ಬಿಗ್ ಬ್ಯಾಷ್ ಲೀಗ್?

• **ಚೆನ್ನೈ:** ಭಾರತ ಕ್ರಿಕೆಟ್ ಅಭಿಮಾನಿಗಳನ್ನು ಮತ್ತು ಅವರಲ್ಲಿರುವ ಅಭಿಮಾನವನ್ನು ಮೆಚ್ಚಿರುವ ಆಸ್ಟ್ರೇಲಿಯಾ ಕ್ರಿಕೆಟ್ ಸಂಸ್ಥೆ ತನ್ನದೂ ಪಂದ್ಯಾವಳಿಯನ್ನು ಭಾರತದಲ್ಲಿ ಆಯೋಜಿಸಿ ಪ್ರಚಾರ ಪಡೆಯುವ ಪ್ಲಾನ್ ಒಂದನ್ನು ಮಾಡಿಕೊಂಡಿದೆ. ಆಸ್ಟ್ರೇಲಿಯಾ ಸೇರಿದಂತೆ ವಿವಿಧ ದೇಶಗಳಲ್ಲಿ ನಡೆಯುವ ಬಿಗ್ ಬ್ಯಾಷ್ ಲೀಗ್ ಪಂದ್ಯಾವಳಿಯ ಇದೇ ಮೊಟ್ಟ ಮೊದಲ ಬಾರಿಗೆ ಭಾರತದಲ್ಲಿ ಆಯೋಜಿಸುವ ಆಸೆ ವ್ಯಕ್ತಪಡಿಸಿದ್ದು, ಚೆನ್ನೈನಲ್ಲಿ ಬಿಬಿಎಲ್ ಪಂದ್ಯಗಳನ್ನು ಆಯೋಜಿಸುವುದಕ್ಕೆ ಕ್ರಿಕೆಟ್ ಆಸ್ಟ್ರೇಲಿಯಾ ಮನವಿ ಸಲ್ಲಿಸಿದೆ. ಫ್ರಾಂಚೈಸಿ ಮಟ್ಟದ ಕೂಟದಲ್ಲಿ ಐಪಿಎಲ್ ಬಿಟ್ಟರೆ ಆಸ್ಟ್ರೇಲಿಯಾದ ಬಿಗ್ ಬ್ಯಾಷ್ ಲೀಗ್ ದೊಡ್ಡ ಮಟ್ಟದಲ್ಲಿ ನಡೆಯುತ್ತದೆ. ಅದಕ್ಕೆ ಐಪಿಎಲ್‌ನಷ್ಟು ಕ್ರೇಜ್ ಇಲ್ಲದಿದ್ದರೂ ದೊಡ್ಡ ಕೂಟ ಎನಿಸಬಲ್ಲ ಪ್ರಚಾರ ಹೊಂದಿದೆ. ಚೆನ್ನೈನಲ್ಲಿ ನಡೆಯುವ ಕ್ರಿಕೆಟ್ ಪಂದ್ಯಗಳಿಗೆ ವಿಶ್ವ ಕ್ರಿಕೆಟ್‌ನಲ್ಲಿ ವಿಶೇಷ ಹೆಸರಿದೆ. ಅಲ್ಲಿಯ ವಾತಾವರಣ, ಅಲ್ಲಿಯ ವಿಶೇಷ ಪಿಚ್ ಕ್ರೀಡಾಂಗಣದ ಹವಮಾನ ಮತ್ತು ವಿಶೇಷವಾಗಿ ಚೆನ್ನೈ ತುಂಬಾ ಇರುವ ಕ್ರಿಕೆಟ್ ಅಭಿಮಾನಿಗಳು. ಯಾವುದೇ ಪಂದ್ಯವನ್ನು ಇನ್ನಷ್ಟು ಚೆಂದವಾಗಿ ನಡೆಸಿಕೊಡುತ್ತದೆ ಚೆನ್ನೈ. ಅಭಿಮಾನಿಗಳು ಮನರಂಜನೆ ಪಡೆಯುತ್ತಾ ಆಟಗಾರರಿಗೆ ಎಲ್ಲಿಲ್ಲದ ಹುರುಪು ತುಂಬುತ್ತಾರೆ. ಈ ವಿಚಾರ ಗಮನಿಸಿರುವ ಬಿಬಿಎಲ್ ಆಯೋಜಿಸುವ ಮನವಿ ಸಲ್ಲಿಸಿದೆ.

ಸೋಲಿಲ್ಲದ ತಂಡವಾಗೇ ಸೂಪರ್-8ಕ್ಕೆ ಭಾರತ | ವರುಣ್ ಆರ್ಭಟ, ಮಿಂಚಿದ ಪಾಂಡ್ಯ

ಶಿವಂ ಸಿಕ್ಸರ್‌ಗಳಿಗೆ ನಲುಗಿದ ನೆದರ್ಲೆಂಡ್ಸ್

• **ಅಹಮದಾಬಾದ್:** ಶಿವಂ ದುಬೆ ಅವರ ಸಿಕ್ಸರ್‌ಗಳ ಅಬ್ಬರಕ್ಕೆ ತತ್ತರಿಸಿದ ನಂತರ ವರುಣ್ ಚಕ್ರವ್ಯೂಹದಲ್ಲಿ ಸಿಲುಕೊಂಡ ನೆದರ್ಲೆಂಡ್ಸ್ ತಂಡವು ಸೋಲಿನೊಂದಿಗೆ ವಿಶ್ವಕಪ್ ಅಭಿಯಾನ ಮುಗಿಸಿತು. ಔಪಚಾರಿಕ ಪಂದ್ಯದಲ್ಲಿ 52 ರನ್‌ಗಳ ಗೆಲುವು ಸಾಧಿಸಿದ ಭಾರತ ಎಂದಿನಂತೆ ಟಾಪ್ ತಂಡವಾಗೇ ಸೂಪರ್-8ಕ್ಕೆ ಲಗ್ಗೆ ಹಾಕಿತು. ಮುಂದಿನ ಸುತ್ತಿಗೆ ವಿಶ್ವಾಸ ಹೆಚ್ಚಿಸಿಕೊಂಡಿತು.

ಅಹಮದಾಬಾದ್ ಅಂಗಳದಲ್ಲಿ ಟಾಸ್ ಗೆಲುವಿನೊಂದಿಗೆ ಬ್ಯಾಟಿಂಗ್‌ಗಿಳಿದ ಭಾರತ ಆರಂಭಿಕ ಆಘಾತ ಎದುರಿಸಿದರೂ ಶಿವಂ ದುಬೆ ಆಸರೆ ಪಡೆಯಿತು. ಸೆಟ್ ಆಗುವ ಔಪಚಾರಿಕತೆ ಮುಗಿಸುವ ತನಕ ನಿಧಾನವಾಗೇ ಆಡಿದ ದುಬೆ ನಂತರ ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸತೊಡಗಿದರು. ಅವರ ಆಟಕ್ಕೆ ಪಾಂಡ್ಯ, ಸೂರ್ಯ ಮತ್ತು ತಿಲಕ್ ರನ್‌ಗಳು ಕೂಡಿದ ಮೇಲೆ ಭಾರತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿತು. ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ ವರುಣ್ ದಾಳಿಗೆ ತತ್ತರಿಸಿತು. 176 ರನ್‌ಗಳಿಗೆ ಸುಸ್ತಾಯಿತು.

ಸಾಮಾನ್ಯವಾಗಿ ಚಿಕ್ಕ ಇನ್ನಿಂಗ್ಸ್‌ಗಳ ಮೂಲಕ ದೊಡ್ಡ ಇಂಪ್ಯಾಕ್ಟ್ ನೀಡುವ ದುಬೆ ಈ ಬಾರಿ ದೊಡ್ಡ ಇನ್ನಿಂಗ್ಸ್‌ನೊಂದಿಗೆ ಗೆಲುವಿನ ರೂವಾರಿ ಎನಿಸಿದರು. ಒತ್ತಡದ ಸಮಯದಲ್ಲಿ ಜವಾಬ್ದಾರಿ ಮೈಗೆತ್ತಿಕೊಂಡ ಅವರು, ಪಂದ್ಯಶ್ರೇಷ್ಠ ಆಟಗಾರ ಎನಿಸಿದರು. ಇತ್ತ ವರುಣ್ ಚಕ್ರವರ್ತಿ ಕೂಡ ಮಾರಕ ಬೌಲಿಂಗ್‌ಗೊಂದಿಗೆ ನೆದರ್ಲೆಂಡ್ಸ್ ಬೌಲರ್‌ಗಳನ್ನು ಬಲೆಗೆ ಕೆಡವಿಕೊಂಡರು. ಬೆಸ್ಟ್ ಬೌಲರ್ ಎನಿಸಿಕೊಂಡರು.

ಗಮನ ಸೆಳೆದ ದತ್ತ: ಮೊದಲ ಓವರ್‌ನಿಂದಲೂ ಭಾರತೀಯ ಬ್ಯಾಟಿಗರನ್ನು ಕಾಡಿದ ನೆದರ್ಲೆಂಡ್ಸ್ ತಂಡದ ರ್‍ಯಾನ್ ದತ್ತ ಉತ್ತಮ ತಮ್ಮ ಸ್ಪಿನ್‌ನೊಂದಿಗೆ ಮೋಡಿ ಮಾಡಿದರು. ಭಾರತದ ಡೇಂಜರಸ್ ಬ್ಯಾಟರ್‌ಗಳೆಂದೇ ಖ್ಯಾತರಾದ ಅಭಿಷೇಕ್ ಶರ್ಮ, ಇಶಾನ್ ಕಿಶನ್ ವಿಕೆಟ್ ಕಿತ್ತಿ ಮಿಂಚಿದರು. ವಿಕೆಟ್ ಕಮ್ಮಿ ಪಡೆದರೂ ಅವರ ಮನಮೋಹಕ ಕಡಿಮೆ ಎಕಾನಮಿಯ ಬೌಲಿಂಗ್ ಗಮನ ಸೆಳೆಯಿತು.



ಸಂಕ್ಷಿಪ್ತ ಸ್ಕೋರ್
ಭಾರತ 20 ಓವರ್‌ಗಳಲ್ಲಿ 193/6: ದುಬೆ 66, ಸೂರ್ಯ 34; ದತ್ತ 19/2
ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 176/7: ಲೀಡೆ 33, ಲೆವಿಟ್ 24; ವರುಣ್ 14/3

ಶಿವಂ ದುಬೆ ಅಬ್ಬರ

ಸಾಮಾನ್ಯವಾಗಿ 25-35 ರನ್‌ಗಳೊಂದಿಗೆ ತಂಡಕ್ಕೆ ಆಸರೆಯಾಗಿ ಪಂದ್ಯದ ಮೇಲೆ ಪರಿಣಾಮ ಬೀರಿಸುವ ಶಿವಂ ದುಬೆ ಈ ಬಾರಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 35ರ ಗಡಿ ದಾಟಿದರು. ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸುತ್ತಾ ಪಂದ್ಯ ನೋಡಲು ಬಂದವರಿಗೆ ಕ್ಯಾಚ್ ಅಭ್ಯಾಸ ಮಾಡಿಸಿದರು. ಒಂದು ಹಂತದಲ್ಲಿ 11 ಬಾಲ್‌ಗಳಲ್ಲಿ 6 ರನ್ ಮಾತ್ರವೇ ಗಳಿಸಿದರು. ಅಲ್ಲಿಂದ ಬೇರೆ ಆಟವೇ ಆಡಿದರು. ಸ್ಪಿನ್ನರ್‌ಗಳಿಗೆ ಮಾತ್ರ ಬೀಸುತ್ತಾರೆ ಎಂಬ ಅಭಿಪ್ರಾಯಗಳನ್ನು ಸುಟ್ಟುಹಾಕಿದರು, ಬಂದ ಬೌಲರ್‌ಗಳನ್ನೆಲ್ಲ ದಂಡಿಸಿದರು. ಮುಂದಿನ 20 ಬಾಲ್‌ಗಳಲ್ಲಿ ಬರೋಬ್ಬರಿ 60 ರನ್ ಚಚ್ಚಿದರು. ಇದರ ಪೈಕಿ 52 ರನ್‌ಗಳು ಬೌಂಡರಿ ಮೂಲಕ ಬಂದವು. ಅದರಲ್ಲಿ 4 ಫೋರ್ ಹಾಗೂ 6 ಸಿಕ್ಸರ್ ಸೇರಿವೆ.


ಅಭಿಷೇಕ್ ಮೂರನೇ ಶೂನ್ಯ

ಟಿ20ಯ ನಂಬರ್ 1 ಬ್ಯಾಟರ್, ವಿಶ್ವಕಪ್‌ನಲ್ಲಿ ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದ ಅಭಿಷೇಕ್ ಶರ್ಮ ಮೂರನೇ ಶೂನ್ಯ ಸುತ್ತಿದರು. ಮೊದಲ ಪಂದ್ಯದಲ್ಲಿ ಒಂದಿಷ್ಟು ರನ್ ಜೋಡಿಸಿದ ಅವರು, ಎರಡನೇ ಮೂರನೇ ಹಾಗೂ ನಾಲ್ಕನೇ ಪಂದ್ಯದಲ್ಲಿ ಶೂನ್ಯ ಸುತ್ತಿದ್ದು, ಬೇಡವಾದ ದಾಖಲೆಯೊಂದನ್ನು ಮಾಡಿದ್ದಾರೆ.

ಭಾರತ ನಿಧಾನ ಆರಂಭ: ನೆದರ್ಲೆಂಡ್ಸ್ ವಿರುದ್ಧದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ಮೂರನೇ ಬಾಲ್‌ನಲ್ಲೇ ಅಭಿ ವಿಕೆಟ್ ಕಳೆದುಕೊಂಡಿತು. ತಿಲಕ್ ವರ್ಮಾ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆ ಮುಗಿಸುವಷ್ಟರಲ್ಲಿ 31 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇಶಾನ್ ಕಿಶನ್ 18 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಸೂರ್ಯ ಆಸರೆಯಾದರೂ ಸ್ಫೋಟಕ ಬ್ಯಾಟಿಂಗ್ ಮಾಡಲಾಗಲಿಲ್ಲ, 34 ರನ್‌ಗಳಿಸಿದ ಅವರು, 28 ಬಾಲ್ ತೆಗೆದುಕೊಂಡರು. ಅಲ್ಲಿಂದ ಶಿವಂ ದುಬೆ ತಮ್ಮ ಆರ್ಭಟ ಆರಂಭಿಸಿದರು. ಇತ್ತ ಒತ್ತಡವನ್ನೆಲ್ಲಾ ಮೈಗೆತ್ತಿಕೊಂಡು ಅಬ್ಬರಿಸಿದರು. ಅವರಿಗೆ ಹಾರ್ದಿಕ್ ಪಾಂಡ್ಯ ಅವರ 30 ರನ್‌ಗಳ ಸಾಥ್ ಕೂಡ ಸಿಕ್ಕಿತು.

ವರುಣ್ ದಾಳಿಗೆ ತತ್ತರಿಸಿದ ನೆದರ್ಲೆಂಡ್ಸ್

ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ ಎಲ್ಲ ವಿಕೆಟ್‌ಗಳನ್ನು ಬೇಗನೇ ಕಳೆದುಕೊಳ್ಳದೇ ಇದ್ದರೂ ಮೊದಲ ಮೂವರು 24, 20, 33 ರನ್ ಗಳಿಸಿ ಪಂದ್ಯಕ್ಕೆ ಜೀವ ತುಂಬಿದರು. ಆದರೆ ಮುಂದಿನ ಬ್ಯಾಟರ್‌ಗಳು ವರುಣ್ ದಾಳಿಗೆ ನಲುಗಿ ಹೋದರು. ಮಧ್ಯಮ ಕ್ರಮಾಂಕದ ಬ್ಯಾಟಿಗರು ಕೈಕೊಟ್ಟರೂ ಕೊನೆಯಲ್ಲಿ ನೋಹ್, ಜ್ಯಾಕ್ ಉತ್ತಮ ಬ್ಯಾಟಿಂಗ್‌ನೊಂದಿಗೆ ಸರ್ವಪತನವಾಗದಂತೆ ಕಾಯ್ದರು. ಭಾರತ ಪರ ವರುಣ್ 3, ದುಬೆ 2 ವಿಕೆಟ್ ಪಡೆದುಕೊಂಡರೆ, ಬೂಮ್ರಾ ಮತ್ತು ಪಾಂಡ್ಯ ತಲಾ ಒಂದು ವಿಕೆಟ್ ಕಿತ್ತರು.



ಐತಿಹಾಸಿಕ ಫೈನಲ್‌ಗೆ ಜಮ್ಮು-ಕಾಶ್ಮೀರ



• **ಲಖನೌ:** ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ನೆನಪಿಡಬೇಕಾದ ಸಾಧನೆ ಜಮ್ಮು-ಕಾಶ್ಮೀರದವರು ಮಾಡಿದ್ದಾರೆ. ಶಮಿ, ಈಶ್ವರನ್ ಅಂತಹ ಪ್ರತಿಭಾನ್ವಿತ ಅಂತಾರಾಷ್ಟ್ರೀಯ ಆಟಗಾರರಿದ್ದ ಬಂಗಾಳ ತಂಡವನ್ನು ರೋಮಾಂಚನಕಾರಿ ಸೆಮಿಫೈನಲ್ ಪಂದ್ಯದಲ್ಲಿ ಸೋಲಿಸಿ ಫೈನಲ್‌ಗೇರಿದ್ದಾರೆ. ಮೊದಲು ಬ್ಯಾಟಿಂಗ್ ಮಾಡಿದ್ದ ಬಂಗಾಳ ಮೊದಲಿಗೆ 328 ರನ್ ಗಳಿಸಿ ಸವಾಲಿಗೆ ಆಹ್ವಾನಿಸಿತು. ಬೆನ್ನತ್ತಿದ ಜಮ್ಮು ಕರಾರುವಾಕ್ಕಾಗಿ 302 ರನ್ ಗಳಿಸಿ ಸವಾಲಿಗೆ ಸೈ ಎಂದಿತು. ಎರಡನೇ ಇನ್ನಿಂಗ್ಸ್‌ನಲ್ಲಿ ಮುನ್ನಡೆಯಂಬ ವಿಶ್ವಾಸದೊಂದಿಗೆ ಬ್ಯಾಟಿಂಗ್ ಗಿಳಿದಿದ್ದ ಬಂಗಾಳ ಗಳಿಸಿದ್ದು 99 ರನ್ ಮಾತ್ರ. ದೊಡ್ಡ ದೊಡ್ಡ ಬ್ಯಾಟಿಗರನ್ನು ಆರಾಮಾಗೇ ಆಡಿಸಿಕೊಂಡ ಜಮ್ಮು ಅಲ್ಲೇ ಶೇ.70 ರಷ್ಟು ಪಂದ್ಯವನ್ನು ಗೆದ್ದಿತು. ಬೇಕಾಗಿದ್ದ 126 ರನ್‌ಗಳಲ್ಲಿ 4ನೇ ದಿನವೇ 41 ರನ್ ಗಳಿಸಿದ್ದ ಜಮ್ಮು-ಕಾಶ್ಮೀರ ಕೊನೆಯ ದಿನ ಮಿಕ್ಕಿದ ರನ್‌ಗಳನ್ನು ಯಾವುದೇ ಸಮಸ್ಯೆ ಎದುರಿಸದೆ ಬಾರಿಸಿತು. ಸಂಜೆ ಹೊತ್ತಿಗಾಗಲೇ ವಿಜಯ ಹೊರಬಿದ್ದಂತೆ ಕ್ರಿಕೆಟ್ ಅಭಿಮಾನಿಗಳಿಗೆ ರೋಮಾಂಚನಗೊಳಿಸಿತು. ಜಮ್ಮು-ಕಾಶ್ಮೀರ ದೊಡ್ಡ ಇತಿಹಾಸ ನಿರ್ಮಿಸಿತು.

ಎರಡನೇ ಇನ್ನಿಂಗ್ಸ್‌ನಲ್ಲಿ 4 ವಿಕೆಟ್ ಕಿತ್ತ ನಬಿ, ಮೊದಲ ಇನ್ನಿಂಗ್ಸ್‌ನಲ್ಲಿ 5 ವಿಕೆಟ್ ಕಿತ್ತಿದ್ದರು. ಪಂದ್ಯಶ್ರೇಷ್ಠ ಗೆದ್ದರು. ಪಂದ್ಯದ ಹೀರೋ ಎನಿಸಿದರು. ಮೊದಲನೇ ಇನ್ನಿಂಗ್ಸ್‌ನಲ್ಲಿ 8 ವಿಕೆಟ್ ಕಿತ್ತ ಶಮಿ ಬಂಗಾಳ ಪರ ಪ್ರತಿರೋಧ ತೋರಿದವ ರಾದರು. **ಇತಿಹಾಸ ನಿರ್ಮಿಸಿದ ಜಮ್ಮು:** ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಜಮ್ಮು-ಕಾಶ್ಮೀರ ತಂಡ ಫೈನಲ್‌ಗೆ ಪ್ರವೇಶಿಸಿದೆ. ಕಳೆದ 67 ವರ್ಷಗಳಿಂದ ರಣಜಿ ಪಂದ್ಯವಾಡುತ್ತಿರುವ ಜಮ್ಮು-ಕಾಶ್ಮೀರ ತಂಡವು ಈ ಹಿಂದೆ ಹಲವು ಬಾರಿ ಕ್ವಾರ್ಟರ್-ಫೈನಲ್‌ಗೆ ಪ್ರವೇಶಿಸಿದ್ದರೂ ಸೆಮಿಫೈನಲ್ ಎಂಬುದು ಮರೀಚಿಕೆಯಾಗಿತ್ತು. ಆದರೆ ಈ ಬಾರಿ ಆಖಿಬ್ ನಬಿಯ ಮಾರಕ ದಾಳಿ ನೆರವಿನೊಂದಿಗೆ ಕಾಶ್ಮೀರಿ ಪಡೆ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತ್ತು.

ಹುಬ್ಬಳ್ಳಿಯಲ್ಲಿ ಫೈನಲ್: ರಣಜಿ ಫೈನಲ್ ಪಂದ್ಯ ಹುಬ್ಬಳ್ಳಿಯಲ್ಲಿ ನಡೆಯುವುದಾಗಿ ಕೆಎಸ್‌ಸಿಎ ತಿಳಿಸಿದೆ. ಈ ಬಗ್ಗೆ ಪಿಟಿಐನೊಂದಿಗೆ ಕರ್ನಾಟಕ ಕ್ರಿಕೆಟ್ ಸಂಸ್ಥೆ ಅಧಿಕಾರಿಗಳು ಮಾತನಾಡಿ, ಫೆಬ್ರವರಿ 24 ರಂದು ಫೈನಲ್ ಪಂದ್ಯ ನಡೆಯಲಿದ್ದು, ಹುಬ್ಬಳ್ಳಿ ಆತಿಥ್ಯ ವಹಿಸಲಿದೆ ಎಂದಿದ್ದಾರೆ.

ಸಂಕ್ಷಿಪ್ತ ಸ್ಕೋರ್
ಜಮ್ಮು-ಕಾಶ್ಮೀರ - ಬಂಗಾಳ(2ನೇ ಇನ್ನಿಂಗ್ಸ್)
ಬಂಗಾಳ 25.1 ಓವರ್‌ಗಳಲ್ಲಿ 99/10
ಜಮ್ಮು: 34.4 ಓವರ್‌ಗಳಲ್ಲಿ 126/4
ವಂಶರಾಜ್ 43★, ಸಮದ್ 30★
ಕರ್ನಾಟಕ-ಉತ್ತರಾಖಂಡ(2 ನೇ ಇನ್ನಿಂಗ್ಸ್)
ಉತ್ತರಾಖಂಡ 88.5 ಓವರ್‌ಗಳಲ್ಲಿ 233/10
ಆದಿತ್ಯ 45★, ವಿದ್ಯಾಧರ್ 43/3
ಕರ್ನಾಟಕ 63.5 ಓವರ್‌ಗಳಲ್ಲಿ 299/6
ಸ್ಮರಣ್ 127, ರಾಹುಲ್ 70★, ನಾಗಿ 53/2

ಫೈನಲ್ ಹೊಸ್ತಿಲಲ್ಲಿ ಕರ್ನಾಟಕ

ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ ರಣಜಿ ಇತಿಹಾಸದ ದೊಡ್ಡ ಗುರಿ ನಿರ್ಮಿಸುವತ್ತ ಸಾಗಿದೆ. ಮೊದಲನೇ ಇನ್ನಿಂಗ್ಸ್‌ನಲ್ಲಿ ಒಬ್ಬರು ಶತಕ, ಇಬ್ಬರು ಶತಕ ಬಾರಿಸಿದ್ದರು. ಕರ್ನಾಟಕ 736 ರನ್ ಗಳಿಸಿತ್ತು. ಉತ್ತರಾಖಂಡವನ್ನು 233 ರನ್‌ಗಳಿಗೆ ಆಲೌಟ್ ಮಾಡಿದ ಕರ್ನಾಟಕ ಎರಡನೇ ಇನ್ನಿಂಗ್ಸ್‌ನಲ್ಲೂ ತನ್ನ ಅತ್ಯುತ್ತಮ ಬ್ಯಾಟಿಂಗ್ ವಿಸ್ತರಿಸಿದೆ. 63.5 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡಿರುವ ಕರ್ನಾಟಕ 299 ರನ್ ಗಳಿಸಿದೆ. ಐದನೇ ದಿನವೂ ಬ್ಯಾಟಿಂಗ್ ಮಾಡಲಿದೆ. ಇದರೊಂದಿಗೆ ಈಗಾಗಲೇ 802 ರನ್ ಮುನ್ನಡೆಯಲ್ಲಿರುವ ಕರ್ನಾಟಕ ಗೆಲುವು ಸಾಧಿಸಿದಂತಿದೆ. ಫೈನಲ್‌ಗೇರಿದಂತಿದೆ. ಒಂದು ವೇಳೆ ಡಿಕ್ಲೇರ್ ನೀಡಿ ಆಲೌಟ್ ಮಾಡಿದರೆ ಗೆಲುವಿನ ಫೈನಲ್. ಪಂದ್ಯ ಮುಗಿಯದೇ ಹೋದರೆ ಮೊದಲ ಇನ್ನಿಂಗ್ಸ್ ಮುನ್ನಡೆಯ ಫೈನಲ್.

ಸ್ಮರಣ್ ಶತಕ: ಎರಡನೇ ಇನ್ನಿಂಗ್ಸ್‌ನಲ್ಲಿ ಸ್ಮರಣ್ ರವಿಚಂದ್ರನ್ ಶತಕ ಬಾರಿಸಿದರು. ಕೃತಿಕ್ 52 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಮಧ್ಯಮ ಕ್ರಮಾಂಕದಲ್ಲಿ ಮಿಂಚಿದ ಅವರು, 149 ಬಾಲ್‌ಗಳಲಲಿ 127 ರನ್‌ಗಳ ದೊಡ್ಡ ಇನ್ನಿಂಗ್ಸ್ ಆಡಿದರು. ರಾಹುಲ್ ಕೂಡ ಅಷ್ಟೇ ಆಟಚುಕಟ್ಟಾದ ಬ್ಯಾಟಿಂಗ್ ಮಾಡಿದ್ದು, 5 ಸಿಕ್ಸರ್ ಹಾಗೂ 3 ಬೌಂಡರಿಗಳೊಂದಿಗೆ 70 ರನ್ ಗಳಿಸಿದ್ದಾರೆ. ಇನ್ನೂ ಬ್ಯಾಟಿಂಗ್ ಉಳಿಸಿಕೊಂಡಿದ್ದಾರೆ.

ನಮೀಬಿಯಾ ಸೋಲಿಸಿ ಸೂಪರ್-8ಕ್ಕೆ ಪಾಕ್

• **ಕೊಲಂಬೋ:** ನೂರು ರನ್ ಕೂಡ ಬಾರಿಸಲಾಗದೆ ಪರದಾಟ ನಡೆಸಿರುವ ನಮೀಬಿಯಾ ತಂಡವು ನಾಲ್ಕಕ್ಕೆ ನಾಲ್ಕೂ ಪಂದ್ಯವನ್ನು ಸೋತು ವಿಶ್ವಕಪ್‌ನಿಂದ ಹೊರಬಿದ್ದಿದೆ. ಸೂಪರ್-8 ಪ್ರವೇಶಕ್ಕೆ ಗೆಲ್ಲಲೇಬೇಕಿದ್ದ ಪಂದ್ಯವನ್ನು ಪಾಕಿಸ್ತಾನ 102 ರನ್‌ಗಳ ಪ್ರಾಬಲ್ಯ ಸಾಧಿಸಿತು. ಸೂಪರ್-8ಕ್ಕೆ ಲಗ್ಗೆ ಹಾಕಿತು.

ದಿನದ ಮತ್ತೊಂದು ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಯುಎಇ ಮೇಲೆ 6 ವಿಕೆಟ್‌ಗಳ ಗೆಲುವು ಸಾಧಿಸಿದ ನಂತರ ಸೂಪರ್-8ಕ್ಕೆ ಬಂದ ಎಲ್ಲ ತಂಡಗಳ ಪಟ್ಟಿ ಸಿಕ್ಕಿದೆ. ನಿರೀಕ್ಷೆಗಳು ಹೆಚ್ಚಾಗಿವೆ. ಜಿಂಬಾಬ್ವೆ ತಂಡ ಈ ಬಾರಿ ಸೂಪರ್-8 ಪಂದ್ಯಗಳನ್ನಾಡಲಿರುವುದು ವಿಶೇಷ. ಆಸ್ಟ್ರೇಲಿಯಾ ಹೊರಬಿದ್ದಿರುವುದು ಆಶ್ಚರ್ಯ. ಮಿಕ್ಕಿರುವ ಲೀಗ್ ಹಂತದ ಪಂದ್ಯಗಳು ಶುಕ್ರವಾರ ಮುಗಿಯಲಿವೆ. ಶನಿವಾರದಿಂದ ಮುಂದಿನ ಹಂತದ ಪಂದ್ಯಗಳು ಶುರುವಾಗಲಿವೆ. ಬುಧವಾರದ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಪ್ರಾಬಲ್ಯ ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿ 199 ರನ್ ಗಳಿಸಿತು. ಫರ್ಹಾನ್ ಶತಕ ಬಾರಿಸಿ ದಾಖಲೆ ಮಾಡಿದರು. ನೆದರ್ಲೆಂಡ್ಸ್ 17.3 ಓವರ್‌ಗಳಲ್ಲಿ 97 ರನ್‌ಗಳಿಗೆ ಆಲೌಟ್ ಆಯಿತು. ಉಸ್ಮಾನ್ ತಾರಿಕ್ ಗೆಲುವಿನ ದಡ ಸೇರಿಸಿದರು. ಎರಡನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಯುಎಇ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 122 ರನ್ ಗಳಿಸಿತು. ಗುರಿ ಬೆನ್ನತ್ತಿದ 13.2 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 123 ರನ್ ಬಾರಿಸಿ ಗೆದ್ದಿತು. ಯಾರೊಬ್ಬರೂ 50 ರನ್‌ಗಡಿ ದಾಟದ ಪಂದ್ಯದಲ್ಲಿ 45 ರನ್ ಬ್ಯಾಟರ್ ಒಬ್ಬ ಗಳಿಸಿದ ಹೆಚ್ಚಿನ ಸ್ಕೋರ್ ಆಗಿತ್ತು. ಒಟ್ಟು 10 ವಿಕೆಟ್ ಬಿದ್ದವು. ಕಾರ್ಬಿನ್ ಬಾಷ್ ಇದರಲ್ಲಿ 3 ವಿಕೆಟ್ ಪಡೆದುಕೊಂಡರು.



ಪಾಕ್‌ಗೆ ಸೂಪರ್ ಗೆಲುವು: ಸೂಪರ್-8ಕ್ಕೆ ಪ್ರವೇಶ ಪಡೆಯಬೇಕಾದಲ್ಲಿ ನಮೀಬಿಯಾ ಪಂದ್ಯವನ್ನು ಗೆಲ್ಲಲೇಬೇಕಿತ್ತು ಪಾಕ್. ಎರಡನೇ ಸ್ಥಾನದಲ್ಲಿ ಯುಎಸ್‌ಎ ಇತ್ತು. ಗೆಲ್ಲದೇ ಹೋದರೆ ಪಾಕ್ ಮೂರನೇ ಸ್ಥಾನದಲ್ಲೇ ಉಳಿಯುತ್ತಿತ್ತು. ಆದರೆ ಹಾಗಾಗಲಿಲ್ಲ, ಫರ್ಹಾನ್ ಅವರ ಆಸರೆಯೊಂದಿಗೆ 199 ರನ್ ಗಳಿಸಿತು. ಮಧ್ಯಮ ಕ್ರಮಾಂಕದಲ್ಲಿ ಅವರಿಗೆ ಆಘಾ ಮತ್ತು ಶಾದಬ್ ಖಾನ್ ಸಾಥ್ ಸಿಕ್ಕಿತು. ಔಟಾಗದೆ ಉಳಿದ ಫರ್ಹಾನ್ ಒಟ್ಟು 58 ಎಸೆತದಲ್ಲಿ 100 ರನ್ ಗಳಿಸಿದರು. ನಮೀಬಿಯಾ ಪರ ಸ್ಟೀಕಾಂಪ್ ಗಳಿಸಿದ್ದ 22 ರನ್ ತಂಡದಲ್ಲಿ ಬ್ಯಾಟರ್ ಗಳಿಸಿದ ಹೆಚ್ಚಿನ ಸ್ಕೋರ್ ಆಗಿತ್ತು.

ಯಾರ್‍ಯಾರಿಗೆ 8ರ ಟಿಕೆಟ್?: ಗುಂಪು 1: ಭಾರತ, ಜಿಂಬಾಬ್ವೆ, ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ.

ಗುಂಪು 2: ಪಾಕಿಸ್ತಾನ, ಶ್ರೀಲಂಕಾ, ಇಂಗ್ಲೆಂಡ್, ನ್ಯೂಜಿಲೆಂಡ್.

ಸಂಕ್ಷಿಪ್ತ ಸ್ಕೋರ್
ಪಾಕಿಸ್ತಾನ-ನಮೀಬಿಯಾ
ಪಾಕಿಸ್ತಾನ 20 ಓವರ್‌ಗಳಲ್ಲಿ 199/3: ಫರ್ಹಾನ್ 100★, ಶಾದಬ್ 36★, ಜ್ಯಾಕ್ 48/2
ನಮೀಬಿಯಾ 17.3 ಓವರ್‌ಗಳಲ್ಲಿ 97/10: ಸ್ಟೀಕಾಂಪ್ 23, ತಾರಿಕ್ 16/4, ಶಾದಬ್ 19/3
ದ.ಆಫ್ರಿಕಾ-ಯುಎಇ
ಯುಎಇ 20 ಓವರ್‌ಗಳಲ್ಲಿ 122/6: ಅಲಿಶಾನ್ 45, ಬಾಷ್ 12/3
ದ.ಆಫ್ರಿಕಾ 13.2 ಓವರ್‌ಗಳಲ್ಲಿ 124/4: ಬ್ರೇವಿಸ್, ರ್‍ಯಾನ್ 30. ಅರ್ಫಾನ್ 16/1

» ನಮೀಬಿಯಾಗೆ ಸೋಲಿನ ವಿದಾಯ
» ದ.ಆಫ್ರಿಕಾಗೆ ಗೆಲುವು

ಕೆಎಸ್‌ಎಲ್‌ಟಿಎಗೆ ಐಟಿಎಫ್ ಅಧಿಕಾರಿ ಭೇಟಿ

• **ಬೆಂಗಳೂರು:** ಐಟಿಎಫ್ ಮಹಿಳಾ ಓಪನ್ 100 ಬೆಂಗಳೂರು 2026 ಟೂರ್ನಿಯ ನಿಮಿತ್ತ ಬೆಂಗಳೂರಿಗೆ ಆಗಮಿಸಿದ್ದ (ಐಟಿಎಫ್) ವಿಶ್ವ ಟೆನ್ನಿಸ್ ಸಂಸ್ಥೆಯ ಟೂರ್ ಮತ್ತು ಡೇಟಾ ರೈಟ್ಸ್ ಕಾರ್ಯನಿರ್ವಾಹಕ ನಿರ್ದೇಶಕ ಆ್ಯಂಡ್ರಿವ್ ಮಾಸ್, ಭಾರತದಲ್ಲಿ ಟೆನ್ನಿಸ್ ಭವಿಷ್ಯದ ಬಗ್ಗೆ ಭರವಸೆ ವ್ಯಕ್ತಪಡಿಸಿದರು.

ಭಾರತ ದೊಡ್ಡ ದೇಶ. ಇಲ್ಲಿ ಟೆನ್ನಿಸ್‌ಗೆ ಶ್ರೀಮಂತ ಇತಿಹಾಸವಿದೆ. ಆಟಗಾರರಲ್ಲಿ ಅಪಾರ ಪ್ರತಿಭೆಯಿದೆ. ಆಲ್ ಇಂಡಿಯಾ ಟೆನ್ನಿಸ್ ಅಸೋಸಿಯೇಶನ್ ಮತ್ತು ರಾಜ್ಯ ಸಂಘಟನೆಗಳೊಂದಿಗೆ ಕೈಜೋಡಿಸಿ ಆಟವನ್ನು ಇನ್ನಷ್ಟು ವಿಸ್ತರಿಸುವ ಯೋಜನೆಗಳಿವೆ. ಈ ಸಾಮರ್ಥ್ಯವನ್ನು ವಾಸ್ತವಕ್ಕೆ ತರುವುದೇ ನಮ್ಮ ಉದ್ದೇಶ, ಎಂದು ಮಾಸ್ ಹೇಳಿದರು.

ಈ ವೇಳೆ ಅವರು ಕೆಎಸ್‌ಎಲ್‌ಟಿಎ ಅಧಿಕಾರಿಗಳನ್ನು ಭೇಟಿಯಾಗಿ, ಬೆಂಗಳೂರಿನಲ್ಲಿ ಇನ್ನಷ್ಟು ಐಟಿಎಫ್ ವರ್ಲ್ಡ್ ಟೆನ್ನಿಸ್ ಟೂರ್ ಟೂರ್ನಿಗಳನ್ನು ಆಯೋಜಿಸುವ ಬಗ್ಗೆ ಚರ್ಚಿಸಿದರು. ಭಾರತೀಯ ಆಟಗಾರರಿಗೆ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸುವುದು ಮತ್ತು ರಾಜ್ಯದ ಟೆನ್ನಿಸ್ ಮೂಲಸೌಕರ್ಯವನ್ನು ಬಲಪಡಿಸುವುದೇ ಮುಖ್ಯ ಉದ್ದೇಶ ಎಂದು ತಿಳಿಸಿದರು.



ಬೆಂಗಳೂರಿನ ಎಸ್.ಎಂ ಕೃಷ್ಣ ಕ್ರೀಡಾಂಗಣ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಇದು ನನ್ನ ಎರಡನೇ ಭೇಟಿ. ಇಲ್ಲಿ ಸೌಲಭ್ಯಗಳು ಅತ್ಯುತ್ತಮ. ಆಟಗಾರರಿಂದಲೂ ಉತ್ತಮ ಪ್ರತಿಕ್ರಿಯೆ ಬಂದಿದೆ. ಈ ವಾರದ ಟೂರ್ನಿಯನ್ನು ಕಾತರದಿಂದ ಎದುರು ನೋಡುತ್ತಿದ್ದೇನೆ, ಎಂದರು. ವಿಶ್ವ ಟೆನ್ನಿಸ್ ಟೂರ್‌ನ ಮಹತ್ವವನ್ನು ವಿವರಿಸಿದ ಮಾಸ್, ಪ್ರತಿ ವರ್ಷ 75 ದೇಶಗಳಲ್ಲಿ ಸುಮಾರು 1,200 ಟೂರ್ನಿಗಳು ನಡೆಯುತ್ತಿವೆ. ಜೂನಿಯರ್ ಹಾಗೂ ಎಂಟ್ರಿ-ಲೆವೆಲ್ ಸ್ಪರ್ಧೆಗಳಿಂದ ವೃತ್ತಿಪರ ಹಂತದವರೆಗೆ ಸಾಗುವ ವ್ಯವಸ್ಥಿತ ಮಾರ್ಗವನ್ನು ಇದು ಒದಗಿಸುತ್ತದೆ. ಹೆಚ್ಚಿನ ದೇಶಗಳಲ್ಲಿ ಟೂರ್ನಿಗಳನ್ನು ಆಯೋಜಿಸುವುದು ಅತ್ಯಂತ ಮುಖ್ಯ, ಎಂದು ಹೇಳಿದರು.

ಹೊಸ ಸೈಲಿಂಗ್ ಲೀಗ್ ಮಾ.27ಕ್ಕೆ


• **ಹೊಸದಿಲ್ಲಿ:** ಪ್ರವಾಸಿಗಳ ಮನಸೆಳೆಯುವ ಸಮುದ್ರ ತೀರಗಳು ವಿಶೇಷ ಕ್ರೀಡೆಯ ಪಟುಗಳಿಗೆ ಮೈದಾನವಾಗಲಿವೆ. ಸುಮುದ್ರದ ಎತ್ತರದ ಅಲೆಗಳು ಇತಿಹಾಸಕ್ಕೆ ಸಾಕ್ಷಿಯಾಗಲಿವೆ.

ಸೈಲಿಂಗ್ ಎಂಬ ಕ್ರೀಡೆಯಲ್ಲಿ ಅತಿ ಎತ್ತರಕ್ಕೆ ಹೋಗಿ ದಾಖಲೆಗಳನ್ನು ಮಾಡಿರುವ ಭಾರತೀಯ ಆಸಕ್ತ ಸೈಲಿಂಗ್ ಪಟುಗಳಿಗೆ ಹೊಸದೊಂದು ಹುರುಪು ನೀಡುವುದಕ್ಕಾಗಿ. ಹೊಸ ಲೀಗ್ ಬರುವುದಕ್ಕೆ ಸಜ್ಜಾಗಿದೆ. ಭಾರತೀಯ ಸೈಲಿಂಗ್ ಸಂಸ್ಥೆ ಹೊಸ ಮೈಲಿಗಲ್ಲಿನಲ್ಲಿ ಇದೇ ಮೊದಲ ಬಾರಿಗೆ ಇಂಡಿಯನ್ ಸೈಲಿಂಗ್ ಲೀಗ್ ಎಂಬ ಕೂಟವನ್ನು ಆಯೋಜಿಸುವುದಕ್ಕೆ ಸಜ್ಜಾಗಿದೆ. ಮಾರ್ಚ್ 27ರಿಂದ 30ರವರೆಗೆ ಈ ಕೂಟ ನಡೆಯಲಿದೆ. ಸಮುದ್ರದ ತೀರದಲ್ಲಿ ಒಂದು ಸ್ಕೇಟ್ ಆಕಾರದ ಉಪಕರಣದೊಂದಿಗೆ ಅಲೆ ಜತೆ ಆಟವಾಡುವ ವಿಶೇಷ ಕ್ರೀಡೆಯ ಹೆಸರೇ ಸೈಲಿಂಗ್. ಶಿಲ್ಲಾಂಗ್‌ನ ಉಮ್ಯಮ್ ಸೈಲಿಂಗ್ ಕ್ಲಬ್ ಈ ಹೊಸ ಕೂಟವನ್ನು ಆಯೋಜಿಸಲಿದೆ ಎಂದು ಘೋಷಣೆಯಾಗಿದೆ.

ಕೂಟ ಫ್ರಾಂಚೈಸಿ ಮಾದರಿಯಲ್ಲಿ ನಡೆಯಲಿದೆ. 13 ತಂಡಗಳು ಪೈಪೋಟಿ ನಡೆಸಲಿದ್ದು, 200 ಸೈಲರ್‌ಗಳು ಭಾಗವಹಿಸುವ ನಿರೀಕ್ಷೆಯಿದೆ. ನೀರಿನೊಂದಿಗಿನ ಈ ಆಟಕ್ಕೆ ಕಣ ಸಿದ್ಧವಾಗಿದೆ. ಕೂಟ ಭಾರತಕ್ಕಷ್ಟೇ ಸೀಮಿತವಾಗಿರದೆ ರಷ್ಯಾ, ಕೊರಿಯಾ, ತೈವಾನ್, ಹಾಂಗ್‌ಕಾಂಗ್, ಮಲೇಷ್ಯಾ ಮತ್ತು ಶ್ರೀಲಂಕಾವರೆಗೂ ವಿಸ್ತರಿಸುವುದು ಕೂಟಕ್ಕೆ ಕುತೂಹಲ ತುಂಬಿದೆ. ಕಳೆದ ವರ್ಷ ತಮಿಳುನಾಡು ಸೈಲಿಂಗ್ ಸಂಸ್ಥೆ ಅಧೀನದಲ್ಲಿ ನಡೆದಿದ್ದ ಯುತ್ ಚಾಂಪಿಯನ್‌ಶಿಪ್ ಪಂದ್ಯಾವಳಿಯ ಯಶಸ್ಸಿನ ಪ್ರತಿಫಲ ಈ ಕ್ರೀಡಾಕೂಟ. ಸ್ಪರ್ಧೆಯು ಐಎಲ್‌ಸಿಎ 4 ಬಾಲಕರು ಮತ್ತು ಹುಡುಗಿಯರು, ಐಎಲ್‌ಸಿಎ 6 ಮತ್ತು 7, 420, ಆಪ್ಟಿಮಿಸ್ಟ್, ಟೆಕ್ನೋ 293 ಮತ್ತು ಒಲಿಂಪಿಕ್ ತರಗತಿಗಳನ್ನು ಒಳಗೊಂಡಿರುತ್ತದೆ. ಚೀನಾ, ಹಾಂಗ್‌ಕಾಂಗ್‌ನ ಸೇಲಿಂಗ್ ಫೆಡರೇಶನ್‌ನ ಅರವತ್ತು ವರ್ಷದ ಡೇವಿಡ್ ಫ್ಯಾನ್, ಗೋವಾ ಮ್ಯಾರಿನರ್ಸ್‌ಗಾಗಿ ಐಎಲ್‌ಸಿಎ 7 ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ಫ್ಲೀಟ್‌ನಲ್ಲಿರುವ ಅತ್ಯಂತ ಹಿರಿಯ ಸೈಲರ್‌ಗಳಲ್ಲಿ ಒಬ್ಬರಾಗಲಿದ್ದಾರೆ. ಅವರೊಂದಿಗೆ ಆಪ್ಟಿಮಿಸ್ಟ್ ಬಾಲಕರ ವಿಭಾಗದಲ್ಲಿ ನಿರುಡು ಬದ್ರಿನಾಥ್ ಮತ್ತು 6 ಮಹಿಳಾ ವಿಭಾಗದಲ್ಲಿ ಮಿಲಾನಾ ಡೆಡೆರಿಚ್ ಭಾಗವಹಿಸಲಿದ್ದಾರೆ.

ಪದಬಂಧ 5900

» ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಮೃಗಗಳನ್ನು ಒಂದೆಡೆ ಇಡುವ ಸ್ಥಳ (7)
3.ಹೋಮ-ಹವನಾದಿಗಳಿಗೆ ಬಳಸುವ ಹುಲ್ಲು (2)
4.ಕತ್ತೆಗೆ ಬಿದ್ದ ಹೊಡೆತ (2)
5.ಆಕಾಶದಲ್ಲಿ ಉಲ್ಕಾ ಕಾಣುತ್ತಿದೆ (3)
7.ಇದು ಶಿವನಿಗೆ ಸಂಬಂಧಿಸಿದ್ದು (3)
10.ಗೀತ-ನೃತ್ಯ-ನಾಟಕ ಈ ಮೂರರ ಮೇಳ (4)
11.ಅಭ್ಯಾಸ ಮಾಡು-ಅನುಭವದಿಂದ ತಿಳಿದುಕೊ (4)
12.ಕಲೆಯ ನಡುವಿನ ಚಳಕ (3)
13.ಅಪಹಾಸ್ಯವನ್ನು ತಿರುಗಿ ಮಾಡುತ್ತಿದ್ದಾರೆ (3)
15.ಒಂಬತ್ತು ಎಂಬ ಹೊಸತಾದುದು (2)
16.ಅಬ್ಬರದಿಂದ ಕೂಡಿದ ಆಡಂಬರ (2)
17.ಗಣೇಶ-ಅಮೂಲ್ಯ ಅಭಿನಯದ ಚಲನಚಿತ್ರ (7)

ಮೇಲಿನಿಂದ ಕೆಳಕ್ಕೆ
1.ವಿಷವನ್ನು ಹೀಗೆ ತಿನ್ನಿಸುವುದು (3)
2.ವರ್ತುಲವಾದುದು ತಲೆಕೆಳಗಾಗಿದೆ (3)
6.ಕಾವ್ಯಗಾಯನ ಮಾಡುವ ವಿದ್ಯೆ (5)
7.ನೆಮ್ಮದಿಯನ್ನು ಕಾಪಾಡಲು ನಿಯುಕ್ತನಾದವನು (5)
8.ವಾಸ ಮೊದಲಿರುವ ಮಲ್ಲಿಗೆಯ ಬಗೆ (3)
9.ನೋವಿನ ನಂತರ ಬರಬಹುದಾದ ಸಂತಸ (3)
12.ಕೇಳುವವನು ತಲೆಕೆಳಗಾಗಿದ್ದಾನೆ (3)
14.ಅಡವಿ ಇದು (3)

5899 ಉತ್ತರ


ಎಡದಿಂದ ಬಲಕ್ಕೆ:
2.ವಿಚಾರವಂತ 4.ಪದಬಂಧ
6.ವಂದ್ಯ 7.ಅನುಪಾನ
8.ಮಾಸ 11.ಸಂಕ
13.ಪಾಠದೋಷ 14.ಮಂದ
15.ಸಹಕಾರ 17.ಕನಕಾಚಲ

ಮೇಲಿನಿಂದ ಕೆಳಕ್ಕೆ :
1.ಅಂದ 2.ವಿಧ
3.ಮಾನವಂತ 4.ಪರಿವ್ರಾಜಕ
5.ಬಂಡುಕೋರ
10.ಲತಾಗೃಹ
9.ಸಮಾಕರ
12.ಸಂಪಾದಕ 15.ಸಲ
16.ಕಾಳಿ

ಹೊಸದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಮಾರ್ನಿಂಗ್ ಶೋ


ಗುರುವಾರ 19 ಫೆಬ್ರವರಿ 2026
ಬೆಂಗಳೂರು



ಹಯಗ್ರೀವ ಚಿತ್ರದ ಆ್ಯಕ್ಷನ್ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಈ ಟೀಸರ್‌ನಲ್ಲಿ ನನಗೆ ತಾಳ್ಮೆ ಸ್ವಲ್ಪ ಕಮ್ಮಿ... ಯಾಕಂದ್ರೆ ಚಾಮುಂಡೇಶ್ವರಿ ತಾಯಿ ನಮ್ಮ ಮಮ್ಮಿ... ಎಂಬ ಡೈಲಾಗ್ ಗಮನ ಸೆಳೆಯುತ್ತದೆ. ಬಿಗ್‌ಬಾಸ್ ಖ್ಯಾತಿಯ ಗಿಲ್ಲಿ ನಟನ ಡೈಲಾಗ್ ಕೂಡ ಈ ಟೀಸರ್‌ನ ಹೈಲೈಟ್‌ಗಳಲ್ಲಿ ಒಂದಾಗಿದೆ. ಸದ್ಯ ನಟ ದರ್ಶನ್ ಜೈಲಿನಲ್ಲಿದ್ದರೂ, ಅವರ ಆಪ್ತ ಧನ್ವೀರ್ ಹಾಗೂ ಚಿತ್ರತಂಡವು ಈ ವಿಶೇಷ ಟೀಸರ್ ಮೂಲಕ ದರ್ಶನ್ ಮೇಲಿನ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದೆ. ದರ್ಶನ್ ಅವರ ಹುಟ್ಟುಹಬ್ಬದ ಕೊಡುಗೆಯಾಗಿ ಮೂಡಿಬಂದಿರುವ ಈ ಟೀಸರ್ ಅಭಿಮಾನಿಗಳಿಗೆ ಭಾವನಾತ್ಮಕ ಅನುಭವವನ್ನು ನೀಡುತ್ತಿದೆ.

»» ನಟ ದರ್ಶನ್ ಅವರ ಹುಟ್ಟುಹಬ್ಬದ ಪ್ರಯುಕ್ತ, ಹಯಗ್ರೀವ ಚಿತ್ರತಂಡ ಸಿನಿಮಾದ ವಿಶೇಷ ಆಕ್ಷನ್ ಟೀಸರ್‌ನ್ನು ಬಿಡುಗಡೆ ಮಾಡಿದೆ.

ಧನ್ವೀರ್‌ಗೌಡ ಹಯಗ್ರೀವನ ಆ್ಯಕ್ಷನ್ ಟೀಸರ್



ಬಜಾರ್ ಖ್ಯಾತಿಯ ನಟ ಧನ್ವೀರ್‌ಗೌಡ ನಾಯಕನಾಗಿ ನಟಿಸಿರುವ ಚಿತ್ರ ಹಯಗ್ರೀವ. ಈ ಚಿತ್ರದ ಆ್ಯಕ್ಷನ್ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಈ ಟೀಸರ್‌ನಲ್ಲಿ ನನಗೆ ತಾಳ್ಮೆ ಸ್ವಲ್ಪ ಕಮ್ಮಿ... ಯಾಕಂದ್ರೆ ಚಾಮುಂಡೇಶ್ವರಿ ತಾಯಿ ನಮ್ಮ ಮಮ್ಮಿ... ಎಂಬ ಡೈಲಾಗ್ ಗಮನ ಸೆಳೆಯುತ್ತದೆ. ಬಿಗ್‌ಬಾಸ್ ಖ್ಯಾತಿಯ ಗಿಲ್ಲಿ ನಟನ ಡೈಲಾಗ್ ಕೂಡ ಈ ಟೀಸರ್‌ನ ಹೈಲೈಟ್‌ಗಳಲ್ಲಿ ಒಂದಾಗಿದೆ. ಸದ್ಯ ನಟ ದರ್ಶನ್ ಜೈಲಿನಲ್ಲಿದ್ದರೂ, ಅವರ ಆಪ್ತ ಧನ್ವೀರ್ ಹಾಗೂ ಚಿತ್ರತಂಡವು ಈ ವಿಶೇಷ ಟೀಸರ್ ಮೂಲಕ ದರ್ಶನ್ ಮೇಲಿನ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದೆ. ದರ್ಶನ್ ಅವರ ಹುಟ್ಟುಹಬ್ಬದ ಕೊಡುಗೆಯಾಗಿ ಮೂಡಿಬಂದಿರುವ 'ಹಯಗ್ರೀವ' ಚಿತ್ರದ ಟೀಸರ್ ಅಭಿಮಾನಿಗಳಿಗೆ ಭಾವನಾತ್ಮಕ ಅನುಭವವನ್ನು ನೀಡುತ್ತಿದೆ. ನಟ ಧನ್‌ವೀರ್ ದರ್ಶನ್ ಅವರ ಅಪ್ಪಟ ಅಭಿಮಾನಿಯೂ ಹೌದು. ರಘುಕುಮಾರ್ ಅವರ ಕಥೆ, ಚಿತ್ರಕಥೆ ಹಾಗೂ ನಿರ್ದೇಶನದಲ್ಲಿ ಮೂಡಿಬಂದಿರುವ, ಧನ್ವೀರ್‌ಗೌಡ ನಟನೆಯ ಬಹುನಿರೀಕ್ಷಿತ ಚಿತ್ರ, ಹಯಗ್ರೀವ ತೆರೆಗೆ ಬರಲು ಸಿದ್ಧವಾಗಿದೆ. ಈ ಚಿತ್ರದ ಟೈಟಲ್ ಕೇಳಿದರೆ ಇದೊಂದು ಮಾಸ್ ಎಲಿಮೆಂಟ್ ಒಳಗೊಂಡ ಚಿತ್ರ ಎಂದು ಊಹಿಸಬಹುದಾಗಿದೆ,



ಇನ್ನು 'ಹಯಗ್ರೀವ' ಚಿತ್ರವು ಫೆಬ್ರವರಿ 27ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಇತ್ತೀಚೆಗೆ ಈ ಚಿತ್ರದ ಎರಡನೇ ಸಾಂಗ್ ಸೇನಾ ಮುಖ್ಯಸ್ಥ ಎಂಬ ಹಾಡನ್ನು ಚಿತ್ರತಂಡ ಬಿಡುಗಡೆಗೊಳಿಸಿತ್ತು. ಡಾ. ವಿ.ನಾಗೇಂದ್ರಪ್ರಸಾದ್ ಅವರುವ ಬರೆದಿರುವ ಈ ಹಾಡಿಗೆ ಜೂಡಾ ಸ್ಯಾಂಡಿ ಅವರು ಸಂಗೀತ ಸಂಯೋಜಿಸಿದ್ದಾರೆ. 'ಸೇನಾ ಮುಖ್ಯಸ್ಥ ಎಂಬ ಹಾಡು ಆನಂದ್ ಆಡಿಯೋ ಯೂ ಟ್ಯೂಬ್ ಚಾನಲ್‌ನಲ್ಲಿ ರಿಲೀಸ್ ಆಗಿದೆ. ಈ ಹಾಡಿಗೆ ಚಂದನ್ ಶೆಟ್ಟಿ ಅವರು ದನಿಗೂಡಿಸಿದ್ದಾರೆ. ಅಲ್ಲದೆ ಈ ಹಾಡಿಗೆ ಭೂಷಣ್ ಅವರ ನೃತ್ಯನಿರ್ದೇಶನವಿದೆ. ಈ ಸಿನಿಮಾಕ್ಕೆ ಯುವ ನಿರ್ದೇಶಕ ರಘುಕುಮಾರ್ ಅವರು ಆಕ್ಷನ್ ಕಟ್ ಹೇಳಿದ್ದಾರೆ. ಕೆವಿಸಿ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗಿರುವ 'ಹಯಗ್ರೀವ' ಚಿತ್ರಕ್ಕೆ ಪದ್ಮಾ ಸಮೃದ್ಧಿ ಮಂಜುನಾಥ್ ಅವರು ಬಂಡವಾಳ ಹೂಡಿದ್ದಾರೆ. ವಿರಾಟ್ ಸಾಯಿ ಕ್ರಿಯೇಷನ್ಸ್ ಅರ್ಪಿಸುವ ಈ ಚಿತ್ರಕ್ಕೆ ಮಹೇಶ್ ಗೌಡ ಕಾರ್ಯಕಾರಿ ನಿರ್ಮಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಈ ಚಿತ್ರದ ಮೂಲಕ ರಘುಕುಮಾರ್ ಅವರು ಸ್ಯಾಂಡಲ್‌ವುಡ್‌ನಲ್ಲಿ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದಲ್ಲಿ ಧನ್ವೀರ್‌ಗೌಡ ಅವರ ಜತೆ ನಾಯಕಿಯಾಗಿ ಸಂಜನಾ ಆನಂದ್ ಅವರು ಬಣ್ಣಹಚ್ಚಿದ್ದಾರೆ. ಹಿರಿಯನಟ ಸಾಧು ಕೋಕಿಲ, ಶರತ್ ಲೋಹಿತಾಶ್ವ, ರಮೇಶ್ ಭಟ್, ಅಶ್ವಿನಿಗೌಡ, ಶೋಭರಾಜ್, ಸಂಗೀತಾ, ಕೃಷ್ಣ ಹೆಬ್ಬಾಳೆ, ಅಶ್ವಿನ್‌ಹಾಸನ್, ಗಿಲ್ಲಿನಟ ರಂಗಾಯಣ ರಘು, ರವಿಶಂಕರ್, ಹಿರಿಯನಟಿ ಶ್ರುತಿ ಅವರು ಹಯಗ್ರೀವ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರಕ್ಕೆ ಗಿರೀಶ್ ಆರ್.ಗೌಡ ಅವರ ಛಾಯಾಗ್ರಹಣ, ಶೈಲೇಶ್‌ಕುಮಾರ್ ಹಾಗೂ ಚೇತನ್‌ಸಿದ್ ಅವರ ಸಂಭಾಷಣೆ ಹಾಗೂ ಕೆ.ಎಂ.ಪ್ರಕಾಶ್ ಅವರ ಸಂಕಲನವಿದೆ, ಈ ಚಿತ್ರದ ಸಾಹಸ ದೃಶ್ಯಗಳಿಗೆ ಡಾ.ಕೆ. ರವಿವರ್ಮ, ಡಿಫರೆಂಟ್ ಡ್ಯಾನಿ ಮತ್ತು ಅರ್ಜುನ್‌ರಾಜ್ ಅವರು ಸಾಹಸ ಸಂಯೋಜನೆ ಮಾಡಿದ್ದಾರೆ.

ಪಬ್ಬಾರ್ ಚಿತ್ರದಲ್ಲಿ ಅಯ್ಯಪ್ಪ ಪಿ. ಶರ್ಮ

ಅಡ್ವೆಂಚರಸ್ ಕ್ರೈಮ್, ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಿತ್ರ ಪಬ್ಬಾರ್ ತನ್ನ ಹಲವಾರು ವಿಶೇಷತೆಗಳ ಕಾರಣದಿಂದಲೇ ಸದ್ದು ಮಾಡುತ್ತಿದೆ, ಪಬ್ಬಾರ್ ಒಂದು ಕಾಲ್ಪನಿಕ ಹಾಗೂ ಗಟ್ಟಿ ಕಥಾಹಂದರ ಒಲಗೊಂಡ ಚಿತ್ರವಾಗಿದ್ದು, ಈ ಚಿತ್ರದಲ್ಲಿ ನಿರ್ದೇಶಕ ಸಂದೀಪ್ ಸುಂಕದ್ ಅವರು ಎರಡು ರೀತಿಯ ಪಯಣಯನ್ನು ಹೇಳಹೊರಟಿದ್ದಾರೆ, ಒಂದು ಕೇಸ್ ಜರ್ನಿಯಾದರೆ, ಇನ್ನೊಂದು ಪರ್ಸನಲ್ ಜರ್ನಿ ಕಥೆಯಾಗಿದೆ.ಇದೀಗ ಈ ಚಿತ್ರತಂಡಕ್ಕೆ ನಟ ಅಯ್ಯಪ್ಪ ಪಿ.ಶರ್ಮ ಅವರು ಸೇರ್ಪಡೆಯಾಗಿದ್ದಾರೆ.





ಪಬ್ಬಾರ್ ಒಂದು ಕ್ರೈಂ, ಅಡ್ವೆಂಚರಸ್ ಥ್ರಿಲ್ಲರ್ ಕಾನ್ಸೆಪ್ಟ್ ಒಳಗೊಂಡ ಚಿತ್ರವಾಗಿದೆ. ಹಿಮಾಚಲ ಪ್ರದೇಶದ ಶಿಮ್ಲಾ ಬಳಿಯ ಪಬ್ಬಾರ್ ನದಿ ಈ ಚಿತ್ರಕಥೆಗೆ ಕೇಂದ್ರಬಿಂದು. ಹಾಗಾಗಿ ಈ ಚಿತ್ರಕ್ಕೆ 'ಪಬ್ಬಾರ್' ಎಂಬ ಟೈಟಲ್ ಇಡಲಾಗಿದೆ. ಈ ಹಿಂದೆ ಭೈರತಿ ರಣಗಲ್, ವೇದ ಸೇರಿದಂತೆ ಮೂರು ಅದ್ಭುತ ಚಲನಚಿತ್ರಗಳನ್ನು ಕನ್ನಡಿಗರಿಗೆ ನೀಡಿರುವ ಶ್ರೀಮತಿ ಗೀತಾ ಶಿವರಾಜ್‌ಕುಮಾರ್ ಅವರ ನೇತೃತ್ವದ ಗೀತಾ ಪಿಕ್ಚರ್ಸ್ ಈ ಒಂದು ವಿಭಿನ್ನ ಶೈಲಿಯ ಚಿತ್ರವನ್ನು ಕನ್ನಡ ಚಿತ್ರರಸಿಕರಿಗೆ ನೀಡುವ ಸಿದ್ಧತೆ ನಡೆಸಿದೆ, ಈಗಾಗಲೇ ಮೂರು ಸದಭಿರುಚಿಯ ಚಿತ್ರಗಳನ್ನು ಕನ್ನಡ ಚಿತ್ರರಸಿಕರಿಗೆ ನೀಡಿರುವ ಈ ಸಂಸ್ಥೆಯಿಂದ ಹೊರಬರುತ್ತಿರುವ ನಾಲ್ಕನೇ ಚಿತ್ರ ಪಬ್ಬಾರ್. ಇನ್ನು ಪಬ್ಬಾರ್ ಚಿತ್ರಕ್ಕೆ ಶಾಖಾಹಾರಿ ನಿರ್ದೇಶಕ ಸಂದೀಪ್ ಸುಂಕದ್ ಅವರು ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಕಳೆದ ತಿಂಗಳು ಈ ಚಿತ್ರದ ಕ್ಯಾರೆಕ್ಟರ್ ಇಂಟ್ರೋ ಟೀಸರ್ ಬಿಡುಗಡೆಯಾಗಿತ್ತು, ಪಬ್ಬಾರ್ ಚಿತ್ರದ ಪ್ರಮುಖ ಪಾತ್ರಗಳನ್ನು ಪರಿಚಯಿಸಿದ ಕ್ಯಾರೆಕ್ಟರ್ ಇಂಟ್ರೋ ಟೀಸರ್‌ನಲ್ಲಿರುವ ಅಂಶಗಳು, ಪಾತ್ರಗಳು ಚಿತ್ರದ ಬಗ್ಗೆ ಸಾಕಷ್ಟು ಕುತೂಹಲಗಳನ್ನು ಹುಟ್ಟು ಹಾಕಿತ್ತು. ಈ ಚಿತ್ರದಲ್ಲಿ ಹಿರಿಯ ನಟ ರಾಮ್‌ಕುಮಾರ್ ಅವರ ಪುತ್ರ ಧೀರೇನ್ ರಾಮ್‌ಕುಮಾರ್ ಅವರು ನಾಯಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರದಲ್ಲಿ ನಾಯಕಿಯಾಗಿ ನೆನಪಿರಲಿ ಪ್ರೇಮ್ ಹಾಗೂ ಜ್ಯೋತಿ ದಂಪತಿಯ ಪುತ್ರಿ, ಅಮೃತಾ ಪ್ರೇಮ್ ಅವರು ಅಭಿನಯಿಸುತ್ತಿದ್ದಾರೆ. ಅಮೃತಾ ಈಗಾಗಲೇ ಟಗರು ಪಲ್ಯ ಚಿತ್ರದಲ್ಲಿ ನಾಯಕಿಯಾಗಿ ನಟಿಸುವ ಮೂಲಕ ಕನ್ನಡ ಚಿತ್ರರಂಗಕ್ಕೆ ಚಿರಪರಿಚಿತರಾಗಿದ್ದಾರೆ, ಇದೀಗ ಈ ಚಿತ್ರದ



14 ವರ್ಷಗಳ ನಂತರ ಪೋಲೀಸ್ ಪಾತ್ರದಲ್ಲಿ ಅಯ್ಯಪ್ಪ ಪಿ.ಶರ್ಮ

ಮತ್ತೊಂದು ಪ್ರಮುಖ ಪಾತ್ರವನ್ನು ಚಿತ್ರತಂಡ ಪರಿಚಯಿಸುತ್ತಿದೆ, ಅದು ಅಯ್ಯಪ್ಪ ಪಿ.ಶರ್ಮ. ಶಾಖಾಹಾರಿ ನಿರ್ದೇಶಕ ಸಂದೀಪ್ ಸುಂಕದ್ ಅವರ ಸಾರಥ್ಯದಲ್ಲಿ ಮೂಡಿ ಬರ್ತಿರುವ ಪಬ್ಬಾರ್ ಚಿತ್ರತಂಡಕ್ಕೆ ದಕ್ಷಿಣ ಭಾರತದ ಹೆಸರಾಂತ ಕಲಾವಿದ ಅಯ್ಯಪ್ಪ ಪಿ.ಶರ್ಮ ಅವರು ಎಂಟ್ರಿ ಕೊಟ್ಟಿದ್ದಾರೆ.

ಅಯ್ಯಪ್ಪ ಪಿ. ಶರ್ಮ ಪಬ್ಬಾರ್ ಸಿನಿಮಾದಲ್ಲಿ ಖಡಕ್ ಪೊಲೀಸ್ ಆಫೀಸರ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ಅವರು ಹೊಸ ಅವತಾರ ತಾಳಿದ್ದಾರೆ. ಅಯ್ಯಪ್ಪ ಶರ್ಮ 14 ವರ್ಷದ ಬಳಿಕ ಹೇರ್‌ಕಟ್ ಮತ್ತು ಕ್ಲೀನ್ ಶೇವ್ ಮಾಡಿಸಿಕೊಂಡು ಸ್ಮಾರ್ಟ್ ಲುಕ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸದಾ ಉದ್ದ ಗಡ್ಡ ಬಿಟ್ಟಿರುವ ಪಾತ್ರಗಳಲ್ಲಿಯೇ ಕಾಣಿಸಿಕೊಳ್ಳುತ್ತಿದ್ದ ಅವರೀಗ ಪಬ್ಬಾರ್ ಸಿನಿಮಾದ ಪೊಲೀಸ್ ಪಾತ್ರಕ್ಕಾಗಿ ತಮ್ಮ ಗಡ್ಡಕ್ಕೆ ಕತ್ತರಿ ಹಾಕಿಸಿಕೊಂಡಿದ್ದಾರೆ.

ನಿರ್ದೇಶಕ ಸಂದೀಪ್ ಸುಂಕದ್ ಮಾತನಾಡುತ್ತ ಇದೊಂದು ಕಾಲ್ಪನಿಕ ಕಥೆ, ಆದರೆ ಗಟ್ಟಿ ಕಥೆ. ಅಲ್ಲದೆ ಇದು ಅಡ್ವೆಂಚರಸ್ ಕ್ರೈಮ್, ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಲನಚಿತ್ರವಾಗಿದ್ದು, ನಾವು ಪಬ್ಬಾರ್ ಚಿತ್ರದ ಮೂಲಕ ಎರಡು ರೀತಿಯ ಜರ್ನಿಯನ್ನು ಹೇಳಲು ಹೊರಟಿದ್ದೇವೆ, ಒಂದು ಕೇಸ್ ಜರ್ನಿಯಾದರೆ, ಇನ್ನೊಂದು ಪರ್ಸನಲ್ ಜರ್ನಿ. ಪಬ್ಬಾರ್ ಎಂದರೆ ಒಂದು ಜಾಗದ ಹೆಸರು. ಈ ಚಿತ್ರಕಥೆಯಲ್ಲಿ ಆ ಜಾಗವು ತುಂಬಾ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ, ಇಡೀ ಕಥೆಯ ಕೇಂದ್ರ ಬಿಂದುವೇ ಪಬ್ಬಾರ್ ಆಗಿದೆ ಎಂದು ಹೇಳಿದರು.

ಶಾಖಾಹಾರಿ ಸಿನಿಮಾದಲ್ಲಿ ಕೆಲಸ ಮಾಡಿದ್ದ ಬಹುತೇಕ ತಾಂತ್ರಿಕರ ತಂಡವೇ ಪಬ್ಬಾರ್ ಚಿತ್ರತಂಡದಲ್ಲೂ ಕೂಡ ಕೆಲಸ ಮಾಡುತ್ತಿದೆ. ಪಬ್ಬಾರ್ ಸಿನಿಮಾಗೆ ವಿಶ್ವಜಿತ್‌ರಾವ್ ಅವರ ಕ್ಯಾಮೆರಾ ವರ್ಕ ಇದೆ, ಇನ್ನು ಈ ಚಿತ್ರದ ಹಾಡುಗಳಿಗೆ ಮಯೂರ್ ಅಂಬೇಕಲ್ಲು ಅವರ ಸಂಗೀತ ಸಂಯೋಜನೆ ಇದೆ, ಜತೆಗೆ ನಿರ್ದೇಶಕ ಸಂದೀಪ್ ಸುಂಕದ್ ಅವರೇ ಚಿತ್ರದ ಸಂಕಲನ ಕಾರ್ಯವನ್ನೂ ಸಹ ನಿಭಾಯಿಸಲಿದ್ದಾರೆ. ಅಚ್ಯುತ್ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ಹಿರಿಯನಟ ರಾಮಕೃಷ್ಣ, ಸಕುಟುಂಬ ಸಮೇತ ಖ್ಯಾತಿಯ ಭರತ್ ಜಿಬಿ, ಶ್ರೀಹರ್ಷ ಗೋಭಟ್ ಹಾಗೂ ಇತರರು ಪ್ರಮುಖ ತಾರಾಬಳಗದಲ್ಲಿದ್ದಾರೆ.

ಓರಿಯೋ ಚಿತ್ರದಲ್ಲಿ ಎಚ್ಚರಿಕೆ ಸಂದೇಶ



ಬಿಎಂಟಿಸಿ ಕಂಡಕ್ಟರ್ ಆಗಿದ್ದ ನಂದನ್ ಪ್ರಭು ಅವರು ಈ ಹಿಂದೆ ಪ್ರೀತಿಯ ಲೋಕ ಹಾಗೂ ಲವ್ ಈಸ್ ಪಾಯಿಸನ್ ಎಂಬ ಎರಡು ಚಿತ್ರಗಳನ್ನು ನಿರ್ದೇಶಿಸಿದ್ದರು. ಅವರ ನಿರ್ದೇಶನದ ಮತ್ತೊಂದು ಚಿತ್ರ ರಿಲೀಸಿಗೆ ರೆಡಿಯಾಗಿದೆ. ಆ ಚಿತ್ರದ ಹೆಸರು ಓರಿಯೋ. ತುಂಬಾ ಹಿಂದೆಯೇ ನಿರ್ಮಾಣವಾಗಿದ್ದ ಈ ಚಿತ್ರವೀಗ ಬಿಡುಗಡೆಯ ಹಂತ ತಲುಪಿದ್ದು ಸದ್ಯದಲ್ಲೇ ರಿಲೀಸಾಗಲಿದೆ,

ತಮ್ಮ ಚಿತ್ರದ ಕುರಿತಂತೆ ಮಾತನಾಡಿದ ನಿರ್ದೇಶಕ ನಂದನಪ್ರಭು, ಓರಿಯೋ ಎಂಬ ಪದಕ್ಕೆ ಒಂದೊಂದು ದೇಶದಲ್ಲಿ ಒಂದೊಂದು ಅರ್ಥವಿದೆ. ನಮ್ಮ ಚಿತ್ರಕ್ಕೆ ಇದೇ ಶೀರ್ಷಿಕೆ ಇಟ್ಟಿರುವ ಕಾರಣ ಚಿತ್ರ ನೋಡಿದಾಗ ಖಂಡಿತ ಗೊತ್ತಾಗುತ್ತದೆ. ನಮ್ಮ ಚಿತ್ರಕ್ಕೆ ಸಕಲೇಶಪುರ, ಮಡಿಕೇರಿ ಹಾಗೂ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ, ತುಂಬಾ ಹಿಂದೆ ನಾನು ಎಪಿಜೆ ಅಬ್ದುಲ್ ಕಲಾಂ(ರಾಷ್ಟ್ರಪತಿ ಆಗುವುದಕ್ಕಿಂತ ಮುಂಚೆ) ಅವರ ಕಾರು ಚಾಲಕನಾಗಿದ್ದೆ, ಅವರು ನನ್ನೊಂದಿಗೆ ಮಾತಾಡುವಾಗ ಒಂದಷ್ಟು ಗಹನವಾದ ವಿಷಯಗಳನ್ನು ಹೇಳುತ್ತಿದ್ದರು, ಆ ಮಾತುಗಳೇ ನನ್ನ ಈ ಚಿತ್ರದ ಕಥೆಗೆ ಸ್ಫೂರ್ತಿ ಎನ್ನಬಹುದು. ನಾವು ಎಚ್ಚರ ತಪ್ಪಿದರೆ, ಮುಂದೊಂದು ದಿನ ಹೀಗೂ ಆಗಬಹುದು ಎಂಬ ಎಚ್ಚರಿಕೆಯ ಸಂದೇಶವನ್ನು ಇಡೀ ವಿಶ್ವಕ್ಕೆ ನೀಡುವಂಥ ವಿಭಿನ್ನ ಕಥಾಹಂದರ ಓರಿಯೋ ಚಿತ್ರದಲ್ಲಿದೆ. ಹಾರರ್ ಕಂಟೆಂಟ್ ಜೊತೆಗೆ ಪರಿಸರ ಕಾಳಜಿಯನ್ನು ಮೂಡಿಸುವ ಅಂಶವೂ ನಮ್ಮ ಸಿನಿಮಾದಲ್ಲಿದೆ. ಪೋಸ್ಟರಿನಲ್ಲಿ ತೋರಿಸಿರುವ 5 ಹೆಡೆಯ ಹಾವಿಗೂ ಚಿತ್ರಕಥೆಗೂ ಲಿಂಕ್ ಇದೆ ಎಂದು ಹೇಳಿದರು. ಓರಿಯೋ ಚಿತ್ರದಲ್ಲಿ ನಾಯಕನಾಗಿ ನಿತಿನ್‌ಗೌಡ ಕಾಣಿಸಿಕೊಂಡಿದ್ದು, ನಾಯಕಿಯ ಪಾತ್ರತದಲ್ಲಿ ನಟಿ ಶುಭ ಅವರು ನಟಿಸಿದ್ದಾರೆ.

ಓರಿಯೋ ಚಿತ್ರದ ಮತ್ತೊಬ್ಬ ನಾಯಕನಾಗಿ ಸುಚಿತ್ ಮಂಜುನಾಥ್ ನಟಿಸಿದ್ದಾರೆ, ರಥಾವರ, ವೈರ ಹಾಗೂ ಪುಟಾಣಿ ಪಂಟ್ರು ಚಿತ್ರಗಳ ನಂತರ ಅಭಿನಯಿಸುತ್ತಿರುವ ಚಿತ್ರವಿದು. ಇದರಲ್ಲಿ ಒಬ್ಬ ನಾರ್ಮಲ್ ಕ್ಯಾಬ್ ಡ್ರೈವರ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ, ಒಂದು ಸಂದರ್ಭದಲ್ಲಿ ಕಾಡಿಗೆ ಹೋದಾಗ ಕಥೆ ಪ್ರಾರಂಭವಾಗುತ್ತದೆ, ಯುಕ್ತ ನನ್ನ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ ಎಂದು ಸುಚಿತ್ ಹೇಳಿದರು. ಚಕ್ರವರ್ತಿ ಅವರು ಈ ಚಿತ್ರದಲ್ಲಿ ಕಾಮಿಡಿ ಪಾತ್ರ ನಿರ್ವಹಿಸಿದ್ದಾರೆ. ಸಂಗೀತ ನಿರ್ದೇಶಕ ಸಾಯಿಕಿರಣ್ ಚಿತ್ರದ ಬಗ್ಗೆ ಮಾತನಾಡುತ್ತ ಇದು ನನ್ನ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಆರನೇ ಚಿತ್ರ. ಚಿತ್ರದ ಎಲ್ಲಾ ಹಾಡುಗಳು ತುಂಬಾ ಚೆನ್ನಾಗಿ ಮೂಡಿಬಂದಿವೆ ಪಾರ್ಟಿ ಸಾಂಗ್ ಕೂಡ ಅದ್ಭುತವಾಗಿದೆ ಎಂದು ಹೇಳಿದರು. ಓರಿಯೋ ಚಿತ್ರಕ್ಕೆ ಕಥೆ, ಚಿತ್ರಕಥೆ. ಸಂಭಾಷಣೆಗಳನ್ನು ನಿರ್ದೇಶಕ ನಂದನ ಪ್ರಭು ಅವರೇ ಬರೆದಿದ್ದಾರೆ. ವಿಜಯಶ್ರೀ ಆರ್. ಎಂ. ಹಾಗೂ ವೈಶಾಲಿ ವೈ.ಜೆ. ಚಿತ್ರದ ನಿರ್ಮಾಪಕರು. ಬ್ಯಾಟಪ್ಪ ಗೌಡ, ಪ್ರಭಾಕರ್ ಅವರ ಛಾಯಾಗ್ರಹಣ ಓರಿಯೋ ಚಿತ್ರಕ್ಕಿದೆ.

2 ಚಿತ್ರದಿಂದ ನೂರು ವರ್ಷದ ಅನುಭವ ಸಿಕ್ತು: ಮೆಜೆಸ್ಟಿಕ್ 2 ನಿರ್ಮಾಪಕ ಆನಂದಪ್ಪ

ಮೆಜೆಸ್ಟಿಕ್-2 ಟ್ರೈಲರ್ ರಿಲೀಸ್



ಮೆಜೆಸ್ಟಿಕ್ 25 ವರ್ಷಗಳ ಹಿಂದೆ ಬಿಡುಗಡೆಯಾಗಿ ಯಶಸ್ವೀ ಪ್ರದರ್ಶನ ಕಂಡ ಚಿತ್ರ. ಇದೀಗ ಅದೇ ಹೆಸರಿನ ಮತ್ತೊಂದು ಚಿತ್ರ ನಿರ್ಮಾಣವಾಗಿದ್ದು, ಆ ಚಿತ್ರದಲ್ಲೂ ಈಗಿನ ಮೆಜೆಸ್ಟಿಕ್ ಏರಿಯಾದಲ್ಲಿ ಏನೇನೆಲ್ಲ ವ್ಯವಹಾರಗಳು, ದಂದೆಗಳು ನಡೆಯುತ್ತವೆ ಎಂಬುದನ್ನು ರಿಯಲ್ಲಾಗಿ ತೆರೆಯ ಮೇಲೆ ಮೂಡಿಸಲಾಗಿದೆ. ಚಿತ್ರಕ್ಕೆ ಮೆಜೆಸ್ಟಿಕ್-2 ಎಂದು ಟೈಟಲ್ ಇಡಲಾಗಿದ್ದು ಈ ಚಿತ್ರದ ಟ್ರೈಲರ್ ಬಿಡುಗಡೆ ಅದ್ದೂರಿಯಾಗಿ ನೆರವೇರಿದೆ.

ಅಮ್ಮಾ ಎಂಟರ್‌ಪ್ರೈಸಸ್ ಮೂಲಕ ಕೋಟೆನಾಡು ಚಿತ್ರದುರ್ಗದ ಹೆಚ್. ಆನಂದಪ್ಪ ಅವರು ಅದ್ದೂರಿಯಾಗಿ ನಿರ್ಮಿಸಿರುವ ಆ ಚಿತ್ರದಲ್ಲಿ ಹಿರಿಯ ನಿರ್ಮಾಪಕ ಶಿಲ್ಪಾ ಶ್ರೀನಿವಾಸ್ ಅವರ ಪುತ್ರ, ಭರತ್ ಕುಮಾರ್ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಹಿರಿಯನಟಿ ಶೃತಿ ಅವರು ನಾಯಕನ ತಾಯಿಯ ಪಾತ್ರವನ್ನು ನಿರ್ವಹಿಸಿದ್ದಾರೆ. ಚಿತ್ರದ ನಾಯಕಿಯಾಗಿ ನಟಿ ಸಂಹಿತಾ ವಿನ್ಯಾ ಅವರು ಕಾಣಿಸಿಕೊಂಡಿದ್ದಾರೆ, ಈಗಿನ ಮೆಜೆಸ್ಟಿಕ್ ಏರಿಯಾ ಹೇಗಿದೆ, ಅಲ್ಲಿ ನಡೆಯುವ ದಂಧೆಗಳು, ಅಕ್ರಮ ಚಟುವಟಿಕೆಗಳು ಅಲ್ಲದೆ ಈಗಲೂ ಅಲ್ಲಿ ರೌಡಿಸಂ ಹೇಗೆ ನಡೆಯುತ್ತೆ ಎಂಬುದನ್ನು ಅಲ್ಲಿಯೇ ಹುಟ್ಟಿ ಬೆಳೆದ ಹುಡುಗನೊಬ್ಬನ ಕಥೆಯ ಮೂಲಕ ಮೆಜೆಸ್ಟಿಕ್-2 ಚಿತ್ರದಲ್ಲಿ ಹೇಳಲಾಗಿದೆ. ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದ ಟ್ರೈಲರ್‌ನ್ನು ನಿರ್ಮಾಪಕರ ಪತ್ನಿ ಶ್ರೀಮತಿ ನಿರ್ಮಲಮ್ಮ ಅವರು ಬಿಡುಗಡೆ ಮಾಡಿದರು. ಮಾರ್ಚ್ ತಿಂಗಳಲ್ಲಿ ಚಿತ್ರವನ್ನು ರಿಲೀಸ್ ಮಾಡಲು ನಿರ್ಮಾಪಕ ಹೆಚ್.ಆನಂದಪ್ಪ ಅವರು ಸಿದ್ಧತೆ ಮಾಡಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ನಾಯಕ ಭರತ್‌ಕುಮಾರ ನನ್ನನ್ನು ನಾಯಕನನ್ನಾಗಿ ಚಿತ್ರರಂಗಕ್ಕೆ ಪರಿಚಯಿಸಿದ ನಿರ್ಮಾಪಕರಿಗೆ ನಾನು ಜೀವನ ಪೂರ್ತಿ ಆಭಾರಿ, ಇಷ್ಟು ದೊಡ್ಡ ಟೈಟಲ್ ಚಿತ್ರದಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಜತೆಗೆ ನಮ್ಮ ತಂದೆಯ ಸಪೋರ್ಟ್ ಕೂಡ ದೊಡ್ಡದು. ಚಿತ್ರದ ಶೂಟಿಂಗ್ ತುಂಬಾ ಚೆನ್ನಾಗಿ ನಡೆಯಿತು, ಶೂಟಿಂಗ್ ನಂತರ ತುಂಬಾ ತೊಂದ್ರೆ, ಅನುಭವಿಸಬೇಕಾಯ್ತು, ಯಾರೂ ನಮ್ಮನ್ನು ಹೀರೋ ಆಗು ಅಂತ ಚೇರ್ ಹಾಕಿ ಕೂರಿಸಲ್ಲ, ತುಳಿಯುವವರೇ ಜಾಸ್ತಿ. ಅವರನ್ನೆಲ್ಲ ಎದುರಿಸಿ ನಿಂತು ಗೆಲ್ಲಬೇಕು, ನಮ್ಮ ಸಿನಿಮಾದಿಂದ ಹೆಸರು ಮಾಡಬೇಕು, ಕೆಲಸದಿಂದ ಗುರುತಿಸಿಕೊಳ್ಳಬೇಕು, ಇದನ್ನು ನಮ್ಮ ನಿರ್ಮಾಪಕರೇ ಹೇಳಿಕೊಟ್ಟಿದ್ದು, ನಾಯಕಿ ಸಂಹಿತಾ ವಿನ್ಯಾ ಅವರು ತುಂಬಾ ಹಾರ್ಡ್ ವರ್ಕರ್. ಶೃತಿ, ಮಾಲಾಶ್ರೀ ಅವರಂಥ ಹಿರಿಯ ಕಲಾವಿದೆಯರೊಂದಿಗೆ ನಟಿಸಿದ್ದು ನನ್ನ ಅದೃಷ್ಟ, ಮೆಜೆಸ್ಟಿಕ್ ಸುತ್ತಮುತ್ತಲಿನ ಜಗತ್ತನ್ನು 10ದಿನ ನೋಡಿದೆ, ಹಿಡನ್ ಕ್ಯಾಮೆರಾ ಇಟ್ಕೊಂಡು ಅಲ್ಲೆಲ್ಲ ನಡೆದಾಡಿದ್ದೇನೆ. ಬೆಳಗಿನ ಜಾವ, ರಾತ್ರಿ ವೇಳೆ ಓಡಾಡಿ ಅಲ್ಲಿ ಹೇಗೆಲ್ಲ ಏನೆಲ್ಲ ನಡೆಯುತ್ತೆ ಎಂದು ಅರಿತಿದ್ದೇನೆ, ಎಲ್ಲಾ ರೀತಿಯ ಜನರನ್ನು ಅಲ್ಲಿ ಕಾಣಬಹುದು ಎಂದು ಹೇಳಿದರು,



ನಿರ್ಮಾಪಕ ಆನಂದಪ್ಪ ಅವರು ಮಾತನಾಡುತ್ತ ನನಗೆ ಸಿನಿಮಾ ಅಂದ್ರೇನು ಅಂತ ಗೊತ್ತಿರಲಿಲ್ಲ, ಚಿತ್ರರಂಗಕ್ಕೆ ಕಾಲಿಟ್ಟಮೇಲೆ ಎಲ್ಲ ಗೊತ್ತಾಯ್ತು, ನಾನು 4 ಬಾರಿ ಎಂಎಲ್‌ಎ ಎಲೆಕ್ಷನ್‌ಗೆ ನಿಂತು ಸೋತೆ. ಆದರೆ ಈ 2 ಸಿನಿಮಾದಿಂದ ನೂರು ವರ್ಷಗಳಿಗಾಗುವಷ್ಟು ಅನುಭವ ಆಯ್ತು. ಪ್ರೊಡ್ಯೂಸರ್ ಆಗಬೇಕು ಅನ್ನೋದು ನನ್ನ ಕನಸು. ಚಿತ್ರವೀಗ ಬಿಡುಗಡೆಗೆ ಸಿದ್ಧವಾಗಿದೆ, ಹೀರೋ ತುಂಬಾ ಕಷ್ಟಪಟ್ಟು ಸಿನಿಮಾ ಮಾಡಿದ್ದಾರೆ ಎಂದರು. ನಾಯಕಿ ಸಂಹಿತಾ ವಿನ್ಯಾ ಮಾತನಾಡಿ ಒಂದು ಸ್ಟ್ರಾಂಗ್ ಲೈನ್ ಈ ಚಿತ್ರದಲ್ಲಿದೆ, ಶೃತಿ, ಮಾಲಾಶ್ರೀ ಅಂಥವರ ಜತೆ ಆಕ್ಟ್ ಮಾಡಿದ್ದು ತುಂಬಾ ಖುಷಿಯಾಯ್ತು, ಸಾಕಷ್ಟು ಏಳು ಬೀಳುಗಳನ್ನು ಕಂಡಂಥ ಚಿತ್ರವಿದು, ಬಿಡುಗಡೆಗೆ ನಾನೂ ಸಹ ಕಾಯುತ್ತಿದ್ದೇನೆ ಎಂದು ಹೇಳಿದರು, ಈ ಚಿತ್ರದಲ್ಲಿ ಒಟ್ಟು 05 ಹಾಡುಗಳಿದ್ದು, ವಿನು ಮನಸು ಸಂಗೀತ ನಿರ್ದೇಶನ ಮಾಡಿದ್ದಾರೆ. ಛಾಯಾಗ್ರಾಹಕರಾಗಿ ವೀನಸ್ ಮೂರ್ತಿ, ಅಸೋಸಿಯೇಟ್ ಡೈರೆಕ್ಟರ ಆಗಿ ವಿಜಯಕುಮಾರ್, ಸಾಹಸ ನಿರ್ದೇಶಕರಾಗಿ ಚಿನ್ನಯ್ಯ ಕೆಲಸ ಮಾಡಿದ್ದಾರೆ.

ಸರ್ವಾಂತರ್ಯಾಮಿಯಲ್ಲಿ ಶಿವತಾಂಡವದ ಹಾಡು..



ರಂಗಭೂಮಿಯ ಹಿನ್ನೆಲೆ ಇರುವ ರಂಗಸ್ವಾಮಿ ಕಪನಿಪಾಳ್ಯ ಅವರ ನಟನೆ ಹಾಗೂ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಚಿತ್ರ, ಸರ್ವಾಂತರ್ಯಾಮಿ, ಎಲ್ಲರ ಕೈಯಲ್ಲೂ ನಾನೇ ಸ್ವಾಮಿ ಎಂಬ ಟ್ಯಾಗ್‌ಲೈನ್ ಇರುವ ಈ ಚಿತ್ರದ ಚಿತ್ರೀಕರಣ ಈಗಾಗಲೇ ಪೂರ್ಣಗೊಂಡಿದ್ದು, ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳು ನಡೆಯುತ್ತಿದೆ, ಈ ಚಿತ್ರಕ್ಕೆ ನಿರ್ದೇಶಕ ಹಾಗು ಗೀತರಚನೆಕಾರ ಕೆ.ರಾಮ್ ನಾರಾಯಣ್ ಅವರು ಬೆನ್ನೆಲುಬಾಗಿ ನಿಂತಿದ್ದಾರೆ. ಹಿತ ಆರ್. ಗೌಡ ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಶಿವರಾತ್ರಿಯ ಹಿನ್ನೆಲೆಯಲ್ಲಿ ಶಿವನ ಬಗ್ಗೆ ನಿರ್ದೇಶಕ ರಂಗಸ್ವಾಮಿ ಅವರೇ ಬರೆದಿರುವ ಶಿವನ ಕುರಿತಾದ ಒಂದು ಹಾಡನ್ನು ಚಿತ್ರತಂಡ ಇತ್ತೀಚೆಗೆ ಬಿಡುಗಡೆ ಮಾಡಿದೆ, ಶಿವತಾಂಡವದ ಈ ಗೀತೆಗೆ ರಮೇಶ್ ಕೃಷ್ಣ ಅವರು ಸಂಗೀತ ಸಂಯೋಜನೆ ಮಾಡಿದ್ದು, ರಂಗಸ್ವಾಮಿ ಕಪನಿಪಾಳ್ಯ ಹಾಗೂ ಸಂಜನಾ ಅವರುಗಳು ಈ ಹಾಡಲ್ಲಿ ಅಭಿನಯಿಸಿದ್ದಾರೆ. ವೇದಸ್ಯ ಆಡಿಯೋ ಮೂಲಕ ಈ ಹಾಡು ಬಿಡುಗಡೆಯಾಗಿದೆ.

ನಿರ್ದೇಶಕ ಹಾಗೂ ನಟ ರಂಗಸ್ವಾಮಿ ಕಪನಿಪಾಳ್ಯ ಕಪನಿಪಾಳ್ಯ ಅವರು ಮಾತನಾಡಿ, ನಾನು ಕಳೆದ 35 ವರ್ಷಗಳ ಹಿಂದೆ ಚಿತ್ರರಂಗದಲ್ಲಿದ್ದೆ, ಅನಂತರ ಗ್ಯಾಪ್ ಆಯ್ತು, ಅಂದಿನಿಂದಲೂ ನನಗೆ ಚಿತ್ರರಂಗದಲ್ಲಿ ಗುರುತಿಸಿಕೊಳ್ಳುವ ಆಸೆ ಇತ್ತು. ಹೀಗಾಗಿ ಈ ಚಿತ್ರವನ್ನು ನಿರ್ದೇಶನ ಮಾಡಿದ್ದೇನೆ. ಈ ಚಿತ್ರದ ನಿರ್ದೇಶನದ ಜೊತೆಗೆ ಶಿಕ್ಷಕನ ಪಾತ್ರದಲ್ಲೂ ಸಹ ಅಭಿನಯಿಸಿದ್ದೇನೆ. ರಾಮ್‌ನಾರಾಯಣ್ ಅವರು ನಮ್ಮ ಚಿತ್ರಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಚಿತ್ರದಲ್ಲಿ ನಾನೇ ಬರೆದಿರುವ ನಾಲ್ಕು ಹಾಡುಗಳಿದ್ದು, ಶಿವರಾತ್ರಿ, ಹಬ್ಬದ ಸಂದರ್ಭದಲ್ಲಿ ಮೊದಲ ಹಾಡನ್ನು ಬಿಡುಗಡೆ ಮಾಡುತ್ತಿದ್ದೇವೆ. ಸರ್ವಾಂತರ್ಯಾಮಿ ಅಂದರೆ ಮೊಬೈಲ್. ಅದರಿಂದ ಆಗುವ ಅನುಕೂಲ, ಅನಾನುಕೂಲಗಳನ್ನು ನಮ್ಮ ಚಿತ್ರದ ಮೂಲಕ ಹೇಳಲು ಹೊರಟಿದ್ದೇವೆ. ಸರ್ವಾಂತರ್ಯಾಮಿ, ಒಂದು ಮಕ್ಕಳ ಚಿತ್ರವಾಗಿದ್ದು, ಮಕ್ಕಳಿಗಾಗಿಯೇ ಚಿತ್ರವನ್ನು ಮಾಡಿದ್ದೇನೆ. ಈಗಾಗಲೇ ಚಿತ್ರೀಕರಣ ಮುಗಿದಿದ್ದು ಡಬ್ಬಿಂಗ್ ಸಹ ಪೂರ್ಣಗೊಂಡಿದೆ. ಸದ್ಯದಲ್ಲಿಯೇ ಚಿತ್ರವನ್ನು ಬಿಡುಗಡೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಸರ್ವಾಂತರ್ಯಾಮಿ ಚಿತ್ರದ ನಿರ್ಮಾಪಕಿ ಹಿತಾ ಆರ್. ಗೌಡ ಮಾತನಾಡಿ ರಂಗಭೂಮಿಯ ಒಲವು ಅಪ್ಪನ ಮೇಲೆ ಇತ್ತು, ಅಪ್ಪ ಚಿತ್ರದ ಪಾತ್ರವನ್ನು ಜೀವಿಸಿದ್ದಾರೆ. ಚಿತ್ರ ಚೆನ್ನಾಗಿ ಮೂಡಿಬಂದಿದೆ ಎಂದರು. ಚಿತ್ರಕ್ಕೆ ಬೆನ್ನೆಲುಬಾಗಿ ನಿಂತಿರುವ ಕೆ. ರಾಮ್ ನಾರಾಯಣ್ ಮಾತನಾಡಿ ನಿರ್ದೇಶಕ ರಂಗಸ್ವಾಮಿ ಅವರು ನನಗೆ ಹದಿನೈದು ವರ್ಷಗಳ ಪರಿಚಯ. ಅವರ ಸಿನಿಮಾ ಮಾಡುವ ಕನಸು ಈಗ ನನಸಾಗಿದೆ. ಒಳ್ಳೆಯ ತಂಡ ಕಟ್ಟಿಕೊಂಡು ಸಿನಿಮಾ ಮಾಡಿದ್ದಾರೆ ತಂಡಕ್ಕೆ ಹಾಗೂ ಚಿತ್ರಕ್ಕೆ ಒಳ್ಳೆಯದಾಗಲಿ ಎಂದರು,



ಮೊದಲ ಬಾರಿಗೆ ನಟಿಸಿದ್ದೇನೆ. ನಟಿ ಸಂಜನಾ ಮಾತನಾಡುತ್ತ ಆರಂಭದ ಚಿತ್ರದಲ್ಲಿ ಪಾರ್ವತಿ ದೇವಿಯ ಪಾತ್ರದ ಮೂಲಕ ಚಿತ್ರರಂಗಕ್ಕೆ ಪ್ರವೇಶ ಮಾಡಿರುವುದಕ್ಕೆ ಖುಷಿಯಾಗಿದೆ ಎಂದು ಹೇಳಿದರು. ಕಲಾವಿದ ಸೂರ್ಯ ಪ್ರವೀಣ್ ಮಾತನಾಡಿ ಹಾಡು ಚೆನ್ನಾಗಿ ಬಂದಿದೆ. ಇದರಲ್ಲಿ ನನ್ನದು ವಿಭಿನ್ನ ಪಾತ್ರ, ಎಂದರು.

ಕಲಾವಿದ ನಾಗರಾಜ್ ಮಾತನಾಡಿ 20 ವರ್ಷದಿಂದ ಚಿತ್ರರಂಗದಲ್ಲಿದ್ದೇನೆ. ಮೊದಲಬಾರಿಗೆ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಮಗಳಿಗಾಗಿ ಒಬ್ಬ ಅಪ್ಪ ಏನೆಲ್ಲಾ ಮಾಡುತ್ತಾರೆ ಎನ್ನುವುದೇ ಸರ್ವಾಂತರ್ಯಾಮಿ ಚಿತ್ರದ ಕಥಾಹಂದರ ಎಂದು ಹೇಳಿದರು.

ಛಾಯಾಗ್ರಾಹಕ ರಾಜು ಹೆಮ್ಮಿಗೆಪುರ, ಕಲಾವಿದರಾದ ವಿಕ್ಟರಿ ವಾಸು, ಮೈರಾ, ಅಮೂಲ್ಯ ನಾರಾಯಣ್, ಉಮೇಶ್ ಸಕ್ಕರೆನಾಡು, ಉಮೇಶ್ ಪುಂಗ ಮತ್ತಿತರರು ಚಿತ್ರದ ಕುರಿತಂತೆ ಮಾಹಿತಿ ಹಂಚಿಕೊಂಡರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26